ಶನಿವಾರ, ಮಾರ್ಚ್ 21, 2026| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಭರತನಾಟ್ಯ

ಮೈಸೂರು ಅರಮನೆ ಆವರಣದಲ್ಲಿ ಆಯೋಜಿಸಿದ್ದ ಯುಗಾದಿ ಸಂಗೀತೋತ್ಸವ 'ಶ್ರೀ ಪರಾಭವ ಸಂವತ್ಸರ 2026' ಕಾರ್ಯಕ್ರಮದಲ್ಲಿ ಕಲಾವಿದೆಯೊಬ್ಬರು ಭರತನಾಟ್ಯ ನಡೆಸಿಕೊಟ್ಟರು

ಹಬ್ಬದ ತಯಾರಿ

ಈದ್ ಉಲ್ ಫಿತ್ರ್ ಹಬ್ಬದ ಮುನ್ನಾದಿನವಾದ ಶುಕ್ರವಾರ ಮುಸ್ಲಿಂ ಮಹಿಳೆಯರು ಬೆಂಗಳೂರಿನ ಫ್ರೇಜರ್ ಟೌನ್‌ನಲ್ಲಿ ಮೆಹಂದಿ ಹಚ್ಚಿಸಿಕೊಂಡು ಸಂಭ್ರಮಿಸಿದರು

THE ACHIEVERS GLOBAL BUSINESS AWARDS — Premium Apartments House of commons London, UK. 2026

GLOBAL STAR AWARDS — Premium Apartments Dubai 2025

ZEE BUSINESS — Most innovative Project 2024

TIMES BUSINESS AWARDS — Smart & Sustainable Project 2024

ಇವಿ ರೆಡಿ ಪಾರ್ಕಿಂಗ್ | ಅಲೆಕ್ಸಾ ಸಕ್ರಿಯತೆಯ ಸ್ಮಾರ್ಟ್ ಹೋಮ್ | 18 ಅಡಿ ಎತ್ತರದ ಸೀಲಿಂಗ್ಸ್ | ಹೈಡ್ರೋಪೋನಿಕ್ ಗ್ರೀನ್ಸ್

ಸ್ಟುಡಿಯೋಸ್	ಫ್ಲಾಟ್ಸ್	ಡೂಪ್ಲೆಕ್ಸಸ್	ಪೆಂಟ್‌ಹೌಸಸ್
ರೂ.29.99 ಲಕ್ಷದಿಂದ ಆರಂಭ	ರೂ.59.99 ಲಕ್ಷದಿಂದ ಆರಂಭ	ರೂ.84.99 ಲಕ್ಷದಿಂದ ಆರಂಭ	WITH PRIVATE TERRACE 2-5 ಬಿಹೆಚ್‌ಕೆ
394-400 SQ.FT.	788 SQ.FT.	1174-1234 SQ.FT.	1088-2250 SQ.FT.

Watch video shot at site
Scan to chat

AIIKYA FORESTSCAPE
JIGANI.E CITY EXTN.
741526 1234

AIIKYA
VILLAGE
SARJAPUR
7415131234

INTERIORS INCLUDED

2.5 ಬಿಹೆಚ್‌ಕೆ ಡೂಪ್ಲೆಕ್ಸ್	3.5 ಬಿಹೆಚ್‌ಕೆ ಡೂಪ್ಲೆಕ್ಸ್	4.5 & 5.5 ಬಿಹೆಚ್‌ಕೆ ಡೂಪ್ಲೆಕ್ಸ್	2&3 ಬಿಹೆಚ್‌ಕೆ ಪೆಂಟ್‌ಹೌಸಸ್
ರೂ.1.33 ಕೋಟಿಯಿಂದ ಆರಂಭ	ರೂ.1.52 ಕೋಟಿಯಿಂದ ಆರಂಭ	ರೂ.2.34 ಕೋಟಿಯಿಂದ ಆರಂಭ	ರೂ.1.63 ಕೋಟಿಯಿಂದ ಆರಂಭ
1586 SQ.FT	1692-1907 SQ.FT	2471-2807 SQ.FT	With Private Terrace

Watch video shot at site
Scan to chat

RERA No.: PRM/KA/RERA/1251/308/PR/031025/008136

Central RO Water to every Kitchen • Central Solar powered heatpump for hot showers • Machineless Eco-STP • Central water treatment plant • Rainwater storage sumps for a sustainable eco-village

prajavani.net prajavani
ಶನಿವಾರ, ಮಾರ್ಚ್ 21, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 79 | ಪುಟ 24
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಈದ್ ಉಲ್ ಫಿತ್ರ್ ಶುಭಾಶಯಗಳು

ಸೆನ್ಸೆಕ್ಸ್ 74,532 | ನಿಫ್ಟಿ 23,114 | $/₹ 93.53

ರಾಣಾ ಅಲಭ್ಯ
ಶಸ್ತ್ರಚಿಕಿತ್ಸೆಗೆ ಒಳಗಾಗಿರುವ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ವೇಗದ ಬೌಲರ್ ಹರ್ಷಿತ್ ರಾಣಾ ಅವರು ಮುಂಬರುವ ಐಪಿಎಲ್ ಟೂರ್ನಿಯಿಂದಲೇ ಹೊರಗುಳಿದಿದ್ದಾರೆ

ಟಿಎಂಸಿ ಪ್ರಣಾಳಿಕೆ: ಹತ್ತು ಭರವಸೆ
ಕೋಲ್ಕತ್ತ (ಪಿಟಿಐ): ತೃಣಮೂಲ ಕಾಂಗ್ರೆಸ್‌ನ ಅಧ್ಯಕ್ಷೆ, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಪಕ್ಷದ ಚುನಾವಣಾ ಪ್ರಣಾಳಿಕೆಯನ್ನು ಶುಕ್ರವಾರ ಬಿಡುಗಡೆ ಮಾಡಿದ್ದು, 10 ಪ್ರಮುಖ ಭರವಸೆಗಳನ್ನು ಘೋಷಿಸಿದ್ದಾರೆ. 8

ಪ್ರೀಮಿಯಂ ಪೆಟ್ರೋಲ್ ದುಬಾರಿ

ಕೈಗಾರಿಕಾ ಡೀಸೆಲ್ ಲೀಟರ್‌ಗೆ ₹22 ಹೆಚ್ಚಳ, ಸಾಮಾನ್ಯ ಪೆಟ್ರೋಲ್ ದರ ಯಥಾಸ್ಥಿತಿ

ನವದೆಹಲಿ (ಪಿಟಿಐ): ಎಲ್‌ಪಿಜಿ ಸಿಲಿಂಡರ್ ದರ ಏರಿಕೆ ಬೆನ್ನಲ್ಲೇ, ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಪ್ರೀಮಿಯಂ ಪೆಟ್ರೋಲ್ ಮತ್ತು ಕೈಗಾರಿಕಾ ಬಳಕೆಯ ಡೀಸೆಲ್ ದರವನ್ನು ಹೆಚ್ಚಿಸಿವೆ. ಸಾಮಾನ್ಯ ದರ್ಜೆಯ ಪೆಟ್ರೋಲ್ ಮತ್ತು ಡೀಸೆಲ್ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿವೆ.

ಪ್ರೀಮಿಯಂ ಪೆಟ್ರೋಲ್ ದರ ಲೀಟರ್‌ಗೆ ₹2 ಹಾಗೂ ಕೈಗಾರಿಕಾ ಬಳಕೆಯ ಡೀಸೆಲ್ ದರ ₹22ರಷ್ಟು ಹೆಚ್ಚಳವಾಗಿದೆ. ಪರಿಷ್ಕೃತ ದರ ಶುಕ್ರವಾರದಿಂದಲೇ ಜಾರಿಗೆ ಬಂದಿದೆ.

ಪಶ್ಚಿಮ ಏಷ್ಯಾ ಸಂಘರ್ಷ ಮುಂದುವರಿದಿರುವುದರಿಂದ, ಕಚ್ಚಾತೈಲದ. ಪೂರೈಕೆ ಕಡಿಮೆಯಾಗಿದೆ. ಹೀಗಾಗಿ ಸಾಮಾನ್ಯ ದರ್ಜೆಯ ಪೆಟ್ರೋಲ್, ಡೀಸೆಲ್ ದರದಲ್ಲೂ ಪರಿಷ್ಕರಣೆ ಆಗಬಹುದುಎಂದುತಜ್ಞರುವಿಶ್ಲೇಷಿಸಿದ್ದಾರೆ.

ಟರ್ಬೊಚಾರ್ಜ್ ಎಂಜಿನ್‌ಗಳಲ್ಲಿ ಬಳಸುವ ಪ್ರೀಮಿಯಂ 95 – ಆಕ್ಟೇನ್ ಪೆಟ್ರೋಲ್ ದರ ದೆಹಲಿಯಲ್ಲಿ ₹99.89ರಿಂದ ₹101.89ಕ್ಕೆ ಏರಿಕೆಯಾಗಿದೆ. ಭಾರಿ ಯಂತ್ರೋಪಕರಣಗಳು,

> ಶೀಘ್ರದಲ್ಲೇ, ಸಾಮಾನ್ಯ ದರ್ಜೆಯ ಪೆಟ್ರೋಲ್–ಡೀಸೆಲ್ ದರವೂ ಹೆಚ್ಚಲಿದೆ. ಜನ ಏನು ಮಾಡಬೇಕು, ಬಿಜೆಪಿಗೆ ಮತ ಕೇಳಲು ಯಾವ ಹಕ್ಕಿದೆ?
> **ರಣದೀಪ್ ಸಿಂಗ್ ಸುರ್ಜೇವಾಲಾ,** ಕಾಂಗ್ರೆಸ್ ಪ್ರಧಾನಕಾರ್ಯದರ್ಶಿ

ಜನರೇಟರ್‌ಗಳಲ್ಲಿ ಬಳಸುವ ಕೈಗಾರಿಕಾ ಡೀಸೆಲ್ ದರವು ಪ್ರತಿ ಲೀಟರ್‌ಗೆ ₹87.67ರಿಂದ ₹109.59ಕ್ಕೆ ಹೆಚ್ಚಳ ಆಗಿದೆ. 2022ರ ಏಪ್ರಿಲ್‌ನಿಂದ ಪೆಟ್ರೋಲ್, ಡೀಸೆಲ್‌ನ ಚಿಲ್ಲರೆ ಮಾರಾಟ ದರ ಯಥಾಸ್ಥಿತಿಯಲ್ಲಿದೆ. ಸದ್ಯ ಸಾಮಾನ್ಯ ಪೆಟ್ರೋಲ್ ಪ್ರತಿ ಲೀಟರ್‌ಗೆ ದೆಹಲಿಯಲ್ಲಿ ₹94.77, ಡೀಸೆಲ್‌ಗೆ ₹87.67 ಇದೆ.

‘ಜನಸಾಮಾನ್ಯರಿಗೆ ಹೊರೆ ಇಲ್ಲ’

‘ದೇಶದಲ್ಲಿ ಮಾರಾಟವಾಗುವ ಒಟ್ಟು ಪೆಟ್ರೋಲ್‌ನಲ್ಲಿ ಪ್ರೀಮಿಯಂ ಪೆಟ್ರೋಲ್‌ನ ಪ್ರಮಾಣ ಶೇ 2ರಿಂದ 4ರಷ್ಟಿದೆ. ಹಾಗಾಗಿ ಪ್ರೀಮಿಯಂ ಪೆಟ್ರೋಲ್ ದರ ಏರಿಕೆಯು ಜನಸಾಮಾನ್ಯರ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ’ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಹೇಳಿದೆ.

ಅಕ್ಟೋಬರ್– ಡಿಸೆಂಬರ್ ತ್ರೈಮಾಸಿಕದಲ್ಲಿ ದೇಶದ ಮೂರು ತೈಲ ಮಾರಾಟ ಕಂಪನಿಗಳು ಒಟ್ಟು ₹23,743 ಕೋಟಿ ಲಾಭ ಗಳಿಸಿವೆ.

ಭಾರತವು ಒಟ್ಟು ಬೇಡಿಕೆಯ ಶೇ 88ರಷ್ಟು ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತದೆ. ಪಶ್ಚಿಮ ಏಷ್ಯಾ ಸಂಘರ್ಷದ ನಂತರ, ಹೊರ್ಮುಜ್ ಜಲಸಂಧಿಯ ಮೂಲಕ ತೈಲ ನೌಕೆಗಳ ಸಾಗಾಟಕ್ಕೆ ಅಡ್ಡಿಯಾಗಿದ್ದು, ದೇಶಕ್ಕೆ ಕಚ್ಚಾತೈಲ ಪೂರೈಕೆಯಲ್ಲಿ ವ್ಯತ್ಯಯವಾಗಿದೆ.

ತೈಲ ಘಟಕಗಳ ಮೇಲೆ ಇರಾನ್ ದಾಳಿ

ದುಬೈ (ಎಪಿ): ಕುವೈತ್ ಹಾಗೂ ಕತಾರ್‌ನಲ್ಲಿರುವ ತೈಲ ಸಂಸ್ಕರಣಾ ಘಟಕಗಳನ್ನು ಗುರಿಯಾಗಿಸಿ ಇರಾನ್ ಕ್ಷಿಪಣಿ ದಾಳಿ ನಡೆಸಿದೆ.

ಕುವೈತ್‌ನ ‘ಮಿನಾ ಅಲ್– ಅಹ್ಮದಿ’ ತೈಲ ಸಂಸ್ಕರಣಾ ಘಟಕದ ಮೇಲೆ ಶುಕ್ರವಾರ ಮುಂಜಾನೆ ಎರಡು ಹಂತಗಳಲ್ಲಿ ಡ್ರೋನ್ ದಾಳಿ ನಡೆಸಿದೆ.

ದಾಳಿಯಿಂದ ಹಾನಿಗೊಳಗಾದ ಘಟಕಗಳನ್ನು ಮುಚ್ಚಿರುವುದಾಗಿ ಕುವೈತ್ ಪೆಟ್ರೋಲಿಯಂ ಕಾರ್ಪೊರೇಷನ್ ತಿಳಿಸಿದೆ. ಯುದ್ಧದಿಂದಾಗಿ ತೈಲ ರಫ್ತು ಮಾಡಲು ಸಾಧ್ಯವಾಗುತ್ತಿಲ್ಲ. ವಿದೇಶಗಳಿಗೆ ಪರ್ಷಿಯನ್ ಕೊಲ್ಲಿ ಮತ್ತು ಹೊರ್ಮುಜ್ ಜಲಸಂಧಿಯ ಮೂಲಕವೇ ತೈಲ ಸಾಗಣೆ ಮಾಡಬೇಕಿರುವುದರಿಂದ ಈ ಸಮಸ್ಯೆ ಎದುರಾಗಿದೆ ಎಂದು ಹೇಳಿದೆ.

‘ದಾಳಿಯಿಂದ ಹಾನಿಗೊಳಗಾದ ಇಂಧನ ಮೂಲಸೌಕರ್ಯಗಳನ್ನು ದುರಸ್ತಿಪಡಿಸಲು ಐದು ವರ್ಷ ಬೇಕಾಗಬಹುದು’ ಎಂದು ಸರ್ಕಾರಿ ಸ್ವಾಮ್ಯದ ‘ಕತಾರ್ ಎನರ್ಜಿ’ ತಿಳಿಸಿದೆ. ಕತಾರ್‌ನ ಪ್ರಮುಖ ತೈಲ ಸಂಸ್ಕರಣಾ ಘಟಕ ‘ರಾಸ್ ಲಫ್ಫಾನ್’, ಇಸ್ರೇಲ್‌ನ ಹೈಫಾದಲ್ಲಿರುವ ತೈಲ ಸಂಸ್ಕರಣಾ ಸಂಕೀರ್ಣದ ಮೇಲೂ ಇರಾನ್ ಗುರುವಾರ ದಾಳಿ ನಡೆಸಿತ್ತು.

‘6 ತಿಂಗಳ ಬೇಕು’: ‘ಕೊಲ್ಲಿ ರಾಷ್ಟ್ರಗಳಿಂದ ಕಚ್ಚಾತೈಲ ಹಾಗೂ ನೈಸರ್ಗಿಕ ಅನಿಲ ಸಾಗಣೆ ಮರುಸ್ಥಾಪನೆಯಾಗಲು ಆರು ತಿಂಗಳು ಬೇಕಾಗಬಹುದು’ ಎಂದು ಅಂತರರಾಷ್ಟ್ರೀಯ ಇಂಧನ ಸಂಸ್ಥೆ(ಐಇಎ) ಮುಖ್ಯಸ್ಥ ಫತೀಹ್ ಬಿರೋಲ್ ಶುಕ್ರವಾರ ಹೇಳಿದ್ದಾರೆ.

‘ಫೈನಾನ್ಸಿಯಲ್ ಟೈಮ್ಸ್’ಗೆ ಸಂದರ್ಶನ ನೀಡಿರುವ ಅವರು, ‘ಇತಿಹಾಸದಲ್ಲಿಯೇ ಇಡೀ ಜಗತ್ತು ಎದುರಿಸುತ್ತಿರುವ ಅತ್ಯಂತ ಭೀಕರ ಇಂಧನ ಬಿಕ್ಕಟ್ಟು ಇದಾಗಿದೆ’ ಎಂದಿದ್ದಾರೆ.

‘ರಾಜಕೀಯ ನಾಯಕರು ಹಾಗೂ ಮಾರುಕಟ್ಟೆ ತಜ್ಞರು ಈ ಅಡಚಣೆಯನ್ನು ಸರಿಯಾಗಿ ಅಂದಾಜು ಮಾಡಿರಲಿಲ್ಲ. ಜಾಗತಿಕವಾಗಿ, ಐದನೇ ಒಂದರಷ್ಟು ಕಚ್ಚಾತೈಲ ಹಾಗೂ ಅನಿಲ ಸಾಗಣೆ ಇದೇ ಮಾರ್ಗವನ್ನು ಅವಲಂಬಿಸಿದೆ’ ಎಂದು ತಿಳಿಸಿದ್ದಾರೆ.

ಇನ್ನಷ್ಟು ಸುದ್ದಿಗಳು 12

ಚಿನಕುರುಳಿ — ಪ್ರಕಾಶ್ ಶೆಟ್ಟಿ

ವರ್ಗ: ಸಿ.ಎಂ ಹಸ್ತಕ್ಷೇಪ ಏಕೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸರ್ಕಾರಿ ಅಧಿಕಾರಿಗಳ ವರ್ಗಾವಣೆ ಮತ್ತು ಸ್ಥಳ ನಿಯುಕ್ತಿ ವಿಚಾರದಲ್ಲಿ ಹಸ್ತ ಕ್ಷೇಪ ಮಾಡುವುದಕ್ಕಿಂತಲೂ ಇತರೆ ಮಹತ್ವದ ಕೆಲಸಗಳ ಕಡೆಗೆ ಗಮನ ಹರಿಸುವ ಜರೂರಿದೆ’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

‘ಪರಸ್ಪರ ವರ್ಗಾವಣೆ ಕೋರಲಾದ ವಿಚಾರಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಕಚೇರಿ ನನಗೆ ನೀಡಿರುವ ಶಿಫಾರಸು ನಿರ್ಲಕ್ಷಿಸಿ ನನ್ನನ್ನು ವರ್ಗಾವಣೆ ಮಾಡಲಾಗಿದೆ’ ಎಂದು ಅಂಗವಿಕಲರೂ ಆಗಿರುವ, ಬೆಂಗಳೂರು ವಿದ್ಯುತ್ ಸರಬರಾಜು ಕಂಪೆನಿ (ಬೆಸ್ಕಾಂ) ವೈಟ್‌ಫೀಲ್ಡ್ ವಿಭಾಗದ ಸಹಾಯಕ ಎಂಜಿನಿಯರ್ ಎಸ್.ಚೇತನ್ ಅವರು ರಿಟ್ ಮೇಲ್ಮನವಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ನ್ಯಾಯಮೂರ್ತಿ ಡಿ.ಕೆ. ಸಿಂಗ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಮೇಲ್ಮನವಿ ವಿಲೇವಾರಿ ಮಾಡುವ ಮೂಲಕ, ‘ಈ ಕುರಿತಂತೆ ನೀಡಲಾಗಿರುವ ಈ ಆದೇಶವನ್ನು ಮುಖ್ಯಮಂತ್ರಿಯವರ ಅವಗಾಹನೆಗೆ ತರತಕ್ಕದ್ದು’ ಎಂದು ತಾಕೀತು ಮಾಡಿದೆ. 12

ಜೊಮಾಟೊ ಶುಲ್ಕ ಏರಿಕೆ

ನವದೆಹಲಿ (ಪಿಟಿಐ): ಆಹಾರ ವಿತರಣಾ ಸಂಸ್ಥೆಯಾದ ‘ಜೊಮಾಟೊ’ ಬಳಕೆದಾರರಿಗೆ ವಿಧಿಸುವ ‘ಪ್ಲಾಟ್‌ಫಾರ್ಮ್’ ಶುಲ್ಕವನ್ನು ಪ್ರತಿ ಆರ್ಡರ್‌ಗೆ ₹2.40ರಷ್ಟು ಹೆಚ್ಚಿಸಿದೆ. ಈ ಮೂಲಕ ಶುಲ್ಕ ₹14.90ಕ್ಕೆ ಏರಿದೆ.

ಈ ಮೊದಲು ಪ್ಲಾಟ್‌ಫಾರ್ಮ್ ಶುಲ್ಕವಾಗಿ ಜೊಮಾಟೊ ₹12.50ರಷ್ಟು ಪಡೆಯುತ್ತಿತ್ತು. ಶುಲ್ಕ ಹೆಚ್ಚಳದ ಕ್ರಮದಿಂದ ದೇಶದಾದ್ಯಂತ ಲಕ್ಷಾಂತರ ಬಳಕೆದಾರರಿಗೆ ಆಹಾರವನ್ನು ಆರ್ಡರ್ ಮಾಡುವುದು ದುಬಾರಿಯಾಲಿದೆ.

ಸಂಸ್ಥೆಯು ಕೊನೆಯದಾಗಿ ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಪ್ಲಾಟ್‌ಫಾರ್ಮ್ ಶುಲ್ಕವನ್ನು ಹೆಚ್ಚಿಸಿತ್ತು.

ಪ್ರತಿಸ್ಪರ್ಧಿ ‘ಸ್ವಿಗ್ಗಿ’ ತನ್ನ ಬಳಕೆದಾರರಿಗೆ ಪ್ಲಾಟ್‌ಫಾರ್ಮ್ ಶುಲ್ಕ ₹14.99 ವಿಧಿಸುತ್ತಿದೆ. 3ನೇ ಅತಿದೊಡ್ಡ ಆಹಾರ ವಿತರಣಾ ಸಂಸ್ಥೆಯಾದ ‘ಮ್ಯಾಜಿಕ್‌ಪಿನ್’ನ ಪ್ಲಾಟ್‌ಫಾರ್ಮ್ ಶುಲ್ಕ ₹14.20 ಅನ್ನೇ ಉಳಿಸಿಕೊಂಡಿದ್ದು, ಸದ್ಯಕ್ಕೆ ಹೆಚ್ಚಳ ಮಾಡುವುದಿಲ್ಲ ಎಂದು ಅದರ ಸಿಇಒ ಹೇಳಿದ್ದಾರೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಮಳೆ ಸಾಧ್ಯತೆ ಇದೆ

ಮಹಿಳೆ ಕೊಂದ ಆರೋಪಿ ಬಂಧನ

ಚಂದ್ರಾಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಂಗೊಂಡನ ಹಳ್ಳಿಯ ಮಹಿಳೆಯನ್ನು ಡ್ರಾಗರ್‌ನಿಂದ ಇರಿದು ಕೊಲೆ ಮಾಡಿ ಪರಾರಿಯಾಗಿದ್ದ ಆರೋಪಿಯನ್ನು ಚಂದ್ರಾಲೇಔಟ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಗಂಗೊಂಡನಹಳ್ಳಿ ನಿವಾಸಿ ಫಿರ್ದೋಸ್ ಬಾನು (34) ಕೊಲೆಯಾದ ಮಹಿಳೆ. ಆರೋಪಿ ಹಫೀಜ್‌ನನ್ನು ಬಂಧಿಸಲಾಗಿದೆ.

ಅವಿವಾಹಿತನಾದ ಹಫೀಜ್, ಆಟೊ ಗ್ಯಾರೇಜ್‌ನಲ್ಲಿ ಕೆಲಸ ಮಾಡುತ್ತಿದ್ದ ಎಂದು ಪೊಲೀಸರು ಹೇಳಿದರು.

ಫಿರ್ದೋಸ್ ಬಾನು ಅವರು ಗುರುವಾರ ಸಂಜೆ ಕೆಲಸ ಮುಗಿಸಿಕೊಂಡು ಮನೆಗೆ ವಾಪಸ್ ಆಗುತ್ತಿದ್ದರು. ಆ ಸಂದರ್ಭದಲ್ಲಿ ಗಂಗೊಂಡನಹಳ್ಳಿಯ ಸಮೀಪ ಅವರನ್ನು ಅಡ್ಡಗಟ್ಟಿದ್ದ. ನಂತರ, ಡ್ರಾಗರ್‌ನಿಂದ ಏಳು ಬಾರಿ ದೇಹದ ವಿವಿಧ ಭಾಗಗಳಿಗೆ ಇರಿದು ಪರಾರಿಯಾಗಿದ್ದ. ಗಂಭೀರವಾಗಿ ಗಾಯಗೊಂಡಿದ್ದ ಮಹಿಳೆಯನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಅಲ್ಲಿ ಮೃತಪಟ್ಟಿದ್ದಾರೆ. ಆರೋಪಿ ಪತ್ತೆಗೆ ವಿಶೇಷ ತಂಡ ರಚಿಸಲಾಗಿತ್ತು ಎಂದು ಪೊಲೀಸರು ಹೇಳಿದರು.

ಅಲ್ತಾಫ್ ಪಾಷಾ ಎಂಬುವವರನ್ನು ಮದುವೆಯಾಗಿದ್ದ ಫಿರ್ದೋಸ್ ಬಾನು ಅವರಿಗೆ ಮೂವರು ಮಕ್ಕಳಿದ್ದು ಅವರು ಪತಿ ಹಾಗೂ ಮಕ್ಕಳೊಂದಿಗೆ ವಾಸವಾಗಿದ್ದರು. ಗಂಗೊಂಡನಹಳ್ಳಿಯ ಸುತ್ತಮುತ್ತಲ ಮನೆಗಳಲ್ಲಿ ಮನೆಗೆಲಸ ಮಾಡುತ್ತಿದ್ದ ಫಿರ್ದೋಸ್ ಬಾನು ಅವರಿಗೆ ಆರೋಪಿ ಹಫೀಜ್ ಪರಿಚಯವಾಗಿತ್ತು. ಹಫೀಜ್ ಜತೆಗೆ ಫಿರ್ದೋಸ್ ಬಾನು ಅವರು ಓಡಾಟ ನಡೆಸುತ್ತಿದ್ದರು. ಈ ವಿಚಾರವು ಕುಟುಂಬದ ಸದಸ್ಯರಿಗೆ ಗೊತ್ತಾಗಿ ಫಿರ್ದೋಸ್ ಬಾನುಗೆ ಬುದ್ಧಿಮಾತು ಹೇಳಿದ್ದರು. ನಂತರ, ಅವರು ಹಫೀಜ್‌ನಿಂದ ದೂರವಾಗಿದ್ದರು ಎಂದು ಪೊಲೀಸರು ಹೇಳಿದರು.

ಕೆಲ ದಿನಗಳಿಂದ ಫಿರ್ದೋಸ್ ಬಾನು ಅವರನ್ನು ಆರೋಪಿ ಹಿಂಬಾಲಿಸಿ ಕಿರುಕುಳ ಕೊಡುತ್ತಿದ್ದ. ಇದೇ ವಿಚಾರವಾಗಿ ಇಬ್ಬರ ಮಧ್ಯೆ ಫೆ.28ರಂದು ಜಗಳವಾಗಿತ್ತು. ಬಳಿಕ ಫಿರ್ದೋಸ್ ಬಾನು ಮತ್ತು ಕುಟುಂಬ ಸದಸ್ಯರು ಹಫೀಜ್ ವಿರುದ್ಧ ಠಾಣೆಗೆ ದೂರು ಕೊಟ್ಟಿದ್ದರು. ನಂತರ, ಹಫೀಜ್‌ನನ್ನು ಠಾಣೆಗೆ ಕರೆಸಿ ಎಚ್ಚರಿಕೆ ಕೊಟ್ಟು, ಪೊಲೀಸರು ಬಿಟ್ಟು ಕಳುಹಿಸಿದ್ದರು.

ಈ ಬೆಳವಣಿಗೆಯ ನಂತರ ಫಿರ್ದೋಸ್ ಬಾನು ಮೇಲೆ ಮತ್ತಷ್ಟು ಕೋಪಗೊಂಡಿದ್ದ ಹಫೀಜ್, ಸಂಚು ರೂಪಿಸಿ ಕೊಲೆ ಮಾಡಿದ್ದಾನೆ ಎಂದು ಮೂಲಗಳು ಹೇಳಿವೆ.

ಅಪರಾಧ ಸುದ್ದಿ

ಚಿಟಿಕೆ ಸುದ್ದಿ

ಯುಗಾದಿ, ಹೊಸ ತೊಡಕು ಸಂಭ್ರಮ

ಯುಗಾದಿ ಹೊಸತೊಡಕು ನಿಮಿತ್ತ ನಗರದ ಪಾಪಣ್ಣ ಅಂಗಡಿಯಲ್ಲಿ ಮಾಂಸ ಖರೀದಿಗಾಗಿ ನಿಂತಿದ್ದ ಜನ

ಬೆಂಗಳೂರು: ನಗರದಲ್ಲಿ ಯುಗಾದಿ ಹಬ್ಬವನ್ನು ಗುರುವಾರ ಸಡಗರದಿಂದ ಆಚರಿಸಲಾಯಿತು. ಶುಕ್ರವಾರ ಹೊಸತೊಡಕಿನ ಸಂಭ್ರಮವಿತ್ತು.

ಗುರುವಾರ ಹೆಣ್ಣುಮಕ್ಕಳು ಮನೆಯನ್ನೆಲ್ಲ ಸ್ವಚ್ಛಗೊಳಿಸಿ, ಆಕರ್ಷಕ ರಂಗೋಲಿ ಬಿಡಿಸಿ ಹಬ್ಬಕ್ಕೆ ರಂಗು ತುಂಬಿದರು. ಮನೆ ಬಾಗಿಲಿಗೆ ಮಾವಿನ ತೋರಣ ಕಟ್ಟಿ, ಬೇವಿನ ಚಿಗುರನ್ನು ಸಿಕ್ಕಿಸಿ ಮನೆ ಅಲಂಕಾರ ಮಾಡಿದರು. ಎಣ್ಣೆ ಹಚ್ಚಿ ಸ್ನಾನ ಮಾಡಿದ ಬಳಿಕ ಹೊಸ ಬಟ್ಟೆಗಳನ್ನು ತೊಟ್ಟು ಸಂಭ್ರಮಿಸಿದರು. ಬೇವಿನ ಹೂವು, ಬೆಲ್ಲದೊಂದಿಗೆ ಬೆರೆಸಿ, ಮನೆಯವರಿಗೆ ಬಂಧುಮಿತ್ರರಿಗೆ ಹಂಚಿ, ಶುಭಾಶಯ ಕೋರಿದರು. ಮನೆದೇವರ ಪೂಜೆ ನೆರವೇರಿಸಿದರು. ಹೋಳಿಗೆ, ಪಾಯಸ ಸಹಿತ ಹಬ್ಬದೂಟ ಸವಿದರು.

ಸಂಜೆ ವಿವಿಧ ದೇವಾಲಯಗಳಲ್ಲಿ ವಿಶೇಷ ಪೂಜೆಗಳು ನೆರವೇರಿದವು. ಜನರು ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದರು. ಕೆಲವು ದೇಗುಲಗಳಲ್ಲಿ 'ಪಂಚಾಂಗ ಶ್ರವಣ'ವೂ ನಡೆಯಿತು. ಸಂಜೆಯಾಗುತ್ತಿದ್ದಂತೆ ಸ್ನೇಹಿತರ, ಬಂಧು ಬಳಗದವರ ಮನೆಗೆ ತೆರಳಿ ಬೇವು–ಬೆಲ್ಲ ಕೊಟ್ಟು ಹೊಸ ವರ್ಷದ ಶುಭಾಶಯ ವಿನಿಮಯ ಮಾಡಿಕೊಂಡರು.

ಯುಗಾದಿಯ ಮರುದಿನವಾದ ಶುಕ್ರವಾರ ಹೊಸತೊಡಕು ಆಚರಿಸಲಾಯಿತು. ಮಾಂಸಾಹಾರಿಗಳ ಮನೆಗಳಲ್ಲಿ ವಿಶೇಷ ಮಾಂಸದಡುಗೆ ಮಾಡಿ, ಎಡೆ ಇಟ್ಟು ಪ್ರಾರ್ಥನೆ ಸಲ್ಲಿಸಿ, ಊಟ ಮಾಡಿ ಖುಷಿಪಟ್ಟರು.

ಪೂಜೆ ಹೆಸರಿನಲ್ಲಿ ಚಿನ್ನ ದೋಚುತ್ತಿದ್ದ ಆರೋಪಿ ಸೆರೆ

ಬೆಂಗಳೂರು: ಅಂಗಡಿಯ ಉದ್ಘಾಟನೆಗೆ ಮಹಿಳೆಯರನ್ನು ಕರೆದೊಯ್ಯುವ ನೆಪದಲ್ಲಿ ಚಿನ್ನಾಭರಣ ದೋಚುತ್ತಿದ್ದ ಆರೋಪಿಯನ್ನು ರಾಜಾಜಿನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಪ್ರವೀಣ್ ಭಟ್ ಬಂಧಿತ. ಆರೋಪಿಯಿಂದ ₹15 ಲಕ್ಷ ಮೌಲ್ಯದ 116 ಗ್ರಾಂ ಚಿನ್ನಾಭರಣ, 409 ಗ್ರಾಂ ಬೆಳ್ಳಿ ವಸ್ತು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ದೇವಾಲಯದ ಅರ್ಚಕರನ್ನೇ ಗುರಿಯಾಗಿಸಿ ಪ್ರವೀಣ್ ಭಟ್ ಕೃತ್ಯ ಎಸಗುತ್ತಿದ್ದ. ಶ್ರೀಮಂತ ಉದ್ಯಮಿಯ ಸೋಗಿನಲ್ಲಿ ಪ್ರಸಿದ್ಧ ದೇಗುಲಗಳ ಅರ್ಚಕರನ್ನು ಪರಿಚಯ ಮಾಡಿಕೊಳ್ಳುತ್ತಿದ್ದ. ಆಗಾಗ ಪೂಜೆ ಮಾಡಿಸಿ, ದೇವಸ್ಥಾನಕ್ಕೆ ದೇಣಿಗೆ ನೀಡುವ ಮೂಲಕ ಅರ್ಚಕರ ವಿಶ್ವಾಸ ಗಳಿಸುತ್ತಿದ್ದ. ಹೊಸ ಅಂಗಡಿ ಉದ್ಘಾಟನೆಗೆ ವಿಶೇಷ ಪೂಜೆ ಮಾಡಿಸಲಾಗುತ್ತಿದೆ. ಇದಕ್ಕೆ ಮುತ್ತೈದೆಯರು ಬೇಕೆಂದು ಆರೋಪಿ ಹೇಳುತ್ತಿದ್ದ. ಇದಕ್ಕಾಗಿ ಅರ್ಚಕರ ಪತ್ನಿಯರು ಅಥವಾ ಅವರ ಮನೆಯ ಮಹಿಳೆಯರನ್ನು ಕಳುಹಿಸುವಂತೆ ಮನವಿ ಮಾಡುತ್ತಿದ್ದ.

ಪ್ರವೀಣ್ ಭಟ್

ಆರೋಪಿ ಮಾತು ನಿಜವೆಂದು ನಂಬಿದ್ದ ಕೆಲವು ಅರ್ಚಕರು, ಪತ್ನಿಯರನ್ನು ಪೂಜೆಗೆ ಕಳುಹಿಸಿದ್ದರು.

ಪೂಜೆಗೆ ಕರೆದುಕೊಂಡು ಹೋಗುವ ನೆಪದಲ್ಲಿ ಮಹಿಳೆಯರನ್ನು ಆಟೊದಲ್ಲಿ ಆರೋಪಿ ಪ್ರವೀಣ್ ಕರೆದೊಯ್ಯುತ್ತಿದ್ದ. ಮಾರ್ಗ ಮಧ್ಯದಲ್ಲಿಯೇ 'ನೀವು ಹೋಗುವ ಜಾಗದಲ್ಲಿ ಒಡವೆಗಳನ್ನು ಹಾಕಿಕೊಳ್ಳಬಾರದು, ನನ್ನ ಬಳಿ ಕೊಡಿ. ನಂತರ ನಾನೇ ಕೊಡುತ್ತೇನೆ' ಎಂದು ಹೇಳುತ್ತಿದ್ದ. ಆರೋಪಿಯ ಮಾತು ನಂಬುತ್ತಿದ್ದ ಮಹಿಳೆಯರು, ಧರಿಸಿದ್ದ ಆಭರಣಗಳನ್ನು ಆತನ ಕೈಗೆ ಕೊಡುತ್ತಿದ್ದರು. ಬಳಿಕ ಮಾರ್ಗಮಧ್ಯೆ ಮಹಿಳೆಯರನ್ನು ಬಿಟ್ಟು ಚಿನ್ನಾಭರಣಗಳ ಜತೆಗೆ ಪರಾರಿಯಾಗುತ್ತಿದ್ದ' ಎಂದು ಪೊಲೀಸರು ಹೇಳಿದರು.

ಆರೋಪಿ ಇದೇ ಮಾದರಿಯಲ್ಲಿ ಹಲವು ಕಡೆ ವಂಚಿಸಿದ್ದಾನೆ. ಆರೋಪಿಯ ವಿರುದ್ಧ ಹೆಬ್ಬಾಳ, ರಾಮಮೂರ್ತಿನಗರ, ಸಿಟಿ ಮಾರ್ಕೆಟ್, ರಾಜಾಜಿನಗರ ಹಾಗೂ ಸಿಕೆ ಅಚ್ಚುಕಟ್ಟು ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದವು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆತ್ಮಹತ್ಯೆ

ಪಾವಗಡ (ತುಮಕೂರು): ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನಯ್ಯ (60) ಶುಕ್ರವಾರ ರಾತ್ರಿ ಕಚೇರಿಯ ಕೊಠಡಿಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಪಾವಗಡ ತಲ್ಲೂಕು ಗುಂಡಾರ್ಲಹಳ್ಳಿ ಗ್ರಾಮದ ಮಲ್ಲಿಕಾರ್ಜುನ್ಯ ಇದೇ ಮಾರ್ಚ್ 31ರಂದು ನಿವೃತ್ತರಾಗಲಿದ್ದರು. ಆತ್ಮಹತ್ಯೆಗೆ ಮುನ್ನ ಅವರು ವಿಡಿಯೊ ಮಾಡಿ ಸಿಬ್ಬಂದಿಗೆ ಕಳುಹಿಸಿದ್ದಾರೆ ಎಂದು ತಿಳಿದು ಬಂದಿದೆ.

₹1.73 ಕೋಟಿ ದುರುಪಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಲಹಳ್ಳಿಯ (ಪಶ್ಚಿಮ) ಪ್ರಿನ್ಸ್‌ಟೌನ್ ಅಪಾರ್ಟ್‌ಮೆಂಟ್ ಮಾಲೀಕರ ಸಂಘದ ಬ್ಯಾಂಕ್ ಖಾತೆಯಲ್ಲಿದ್ದ ₹1.73 ಕೋಟಿ ದುರುಪಯೋಗ ಮಾಡಿಕೊಂಡಿರುವ ಆರೋಪದಡಿ 18 ಮಂದಿಯ ವಿರುದ್ಧ ಬಾಗಲಗುಂಟೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಅಪಾರ್ಟ್‌ಮೆಂಟ್ ನಿವಾಸಿ ನಿಶಾ ಜಂಗ್ರಾ ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಅಪಾರ್ಟ್‌ಮೆಂಟ್ ಮಾಲೀಕರ ಸಂಘದ ಅಧ್ಯಕ್ಷ ಅರುಣ್ ಕುಲಕರ್ಣಿ, ಕಾರ್ಯದರ್ಶಿ ಅಲೆಕ್ಸ್ ಪುನ್ನೆನ್, ಖಜಾಂಚಿ ಪ್ರವೀಣ್ ನಾಯಕರ್, ಜಂಟಿ ಕಾರ್ಯದರ್ಶಿ ಸಂದೀಪ್ ಶ್ರೀವಾಸ್ತವ್ ಹಾಗೂ ಬಿ.ಶರಣಪ್ಪ, ಸದಸ್ಯರಾದ ನಂದಿನಿ ಕುಳ್ಳೊಳ್ಳಿ, ವಿನಾಯಕ ಬೈಹಟ್ಟಿ, ದುಂಡಪ್ಪ ಎಸ್. ಕುಮಾನಿ, ರಾಘವೇಂದ್ರ ರಾವ್, ಟೀನಾ ವನ್ನಾರ, ಹೇಮಾಮಾಲಿನಿ ರವಿಶಂಕರ್, ಪಲ್ಲವಿ ಕಟ್ಟಿಮನಿ, ಕವಿತಾ ಶಿವ್ಹಾರೆ, ಬುಷ್ರಾ ವಲಪ್ಪಿರ್, ರೇಷ್ಮಾ, ವಿವೇಕಾನಂದ ಹಿರೇಮಠ, ಸಂಗಮೇಶ್ ದೊಡ್ಡಮನಿ, ಕಿರಣ್ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ಹೇಳಿದರು.

ಎಫ್‌ಐಆರ್‌ನಲ್ಲಿ ಏನಿದೆ?: 'ಅಪಾರ್ಟ್‌ಮೆಂಟ್ ಮಾಲೀಕರ ಸಂಘಕ್ಕೆ ನಿರ್ವಹಣೆ ಮತ್ತು ಇತರೆ ಶುಲ್ಕಗಳನ್ನು ಪಾವತಿಸಲಾಗುತ್ತಿದೆ. ಸಂಘವು ಖಾತೆಗಳನ್ನು ನಿರ್ವಹಿಸುವ ಹಾಗೂ ಸಂಗ್ರಹಿಸಿದ ಹಣವನ್ನು ಕಾನೂನು ಬದ್ಧವಾಗಿ ವೆಚ್ಚಗಳಿಗೆ ಬಳಸುವ ಜವಾಬ್ದಾರಿ ಹೊಂದಿದೆ. 2023–24 ಹಾಗೂ 2024–25ನೇ ಸಾಲಿನಲ್ಲಿ ಮಾಲೀಕರ ಸಂಘದ ಅಧ್ಯಕ್ಷ ಹಾಗೂ ಸದಸ್ಯರು, ಸಂಘದ ಹಣವನ್ನು ದುರುಪಯೋಗ ಮಾಡಿಕೊಂಡಿದ್ದಾರೆ' ಎಂದು ನಿಶಾ ಜಂಗ್ರಾ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಸುದ್ದಿ 2 ನಿಮಿಷ

ಬ್ಯಾಟರಿ ಕಳ್ಳತನ: ಆರೋಪಿ ವಶ

ಬೆಂಗಳೂರು: ಯುಪಿಎಸ್ ಬ್ಯಾಟರಿಗಳನ್ನು ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಪರಪ್ಪನ ಅಗ್ರಹಾರ ಠಾಣೆಯ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಆರೋಪಿಯಿಂದ ₹4 ಲಕ್ಷ ಮೌಲ್ಯದ 51 ವಿವಿಧ ಕಂಪನಿಯ ಬ್ಯಾಟರಿಗಳು ಹಾಗೂ ಒಂದು ಆಟೊರಿಕ್ಷಾ ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಎಲೆಕ್ಟ್ರಾನಿಕ್ ಸಿಟಿಯ ಖಾಸಗಿ ಕಂಪನಿಯ ವ್ಯವಸ್ಥಾಪಕರೊಬ್ಬರು ನೀಡಿದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಶಾಂತಿಪುರ ಮುಖ್ಯರಸ್ತೆ ಸೇರಿದಂತೆ ವಿವಿಧೆಡೆ ಬ್ಯಾಟರಿಗಳನ್ನು ಆರೋಪಿ ಕಳ್ಳತನ ಮಾಡಿದ್ದ. ಕೊಪ್ಪ-ಬೇಗೂರು ಮುಖ್ಯರಸ್ತೆಯ ವಡ್ಡರಪಾಳ್ಯದಲ್ಲಿ ಇರುವ ಗುಜರಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಆರೋಪಿಯನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಬಿಎಂಟಿಸಿ ಕಚೇರಿಗೆ ಬಸ್ ಡಿಕ್ಕಿ

ಬೆಂಗಳೂರು: ಹ್ಯಾಂಡ್ ಬ್ರೇಕ್ ಹಾಕದೇ ನಿಲ್ಲಿಸಿದ್ದ ಬಸ್ ಮುಂದಕ್ಕೆ ಚಲಿಸಿ, ಬಿಎಂಟಿಸಿ ಸಂಚಾರ ನಿಯಂತ್ರಕರ ಕಚೇರಿಗೆ ಡಿಕ್ಕಿ ಹೊಡೆದಿದೆ. ಕಚೇರಿ ಮತ್ತು ಬಸ್ ಪಕ್ಕದಲ್ಲಿ ನಿಲ್ಲಿಸಲಾಗಿದ್ದ ನಾಲ್ಕು ದ್ವಿಚಕ್ರ ವಾಹನಗಳಿಗೆ ಹಾನಿಯಾಗಿದೆ.

ಪೀಣ್ಯ ಕೈಗಾರಿಕಾ ಪ್ರದೇಶದ 3ನೇ ಹಂತದ, 3ನೇ ಮುಖ್ಯ ರಸ್ತೆಯಲ್ಲಿರುವ ಬಿಎಂಟಿಸಿ ಘಟಕ– 22ರಲ್ಲಿ ಶುಕ್ರವಾರ ಬೆಳಿಗ್ಗೆ ಈ ಅಪಘಾತ ನಡೆದಿದೆ. ಖಾಸಗಿ ಒಡಂಬಡಿಕೆಯ ಪ್ರಾವೀಸ್ ಕಂಪನಿಯ ಎಲೆಕ್ಟ್ರಿಕ್ ಬಸ್‌ನ ಚಾಲಕ ಹ್ಯಾಂಡ್‌ಬ್ರೇಕ್ ಹಾಕದೇ ಬಸ್ ನಿಲ್ಲಿಸಿ ಕೆಳಗೆ ಇಳಿದಿದ್ದರು. ಗೇಟ್‌ನಲ್ಲಿ ಸಹಿ ಹಾಕಿ ವಾಪಸ್ ಬಂದು ಬಸ್ ಒಯ್ಯಬೇಕಿತ್ತು. ಅಷ್ಟರ ಒಳಗೆ ಬಸ್ ಮುಂದಕ್ಕೆ ಚಲಿಸಿತ್ತು. ಸಂಚಾರ ನಿಯಂತ್ರಕರ ಕಚೇರಿ ಬಳಿ ನಿಲ್ಲಿಸಿದ್ದ ಬಿಎಂಟಿಸಿ ಸಿಬ್ಬಂದಿಯ ದ್ವಿಚಕ್ರ ವಾಹನಗಳಿಗೆ ಡಿಕ್ಕಿಯಾಗಿ ಮುಂದಕ್ಕೆ ನುಗ್ಗಿ ಕಚೇರಿಗೆ ಡಿಕ್ಕಿ ಹೊಡೆಯಿತು. ಕಚೇರಿಯ ಗೋಡೆ ಬಿರುಕು ಬಿಟ್ಟಿದ್ದು, ಕಿಟಕಿಗಳು ಒಡೆದು ಹೋಗಿವೆ. ದ್ವಿಚಕ್ರ ವಾಹನಗಳು ಜಖಂಗೊಂಡಿವೆ ಎಂದು ಬಿಎಂಟಿಸಿ ಸಿಬ್ಬಂದಿ ತಿಳಿಸಿದರು.

ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘ ನಿಯಮಿತ

ನೋಂದಣಿ 37/ಸೌಕಾ/ನೋಂದಣಿ 2297/2010–11
"ಪುಣ್ಯಕೋಟಿ", ನಂ.1587, 3ನೇ ಮುಖ್ಯರಸ್ತೆ, ಚಂದ್ರ ಬಡಾವಣೆ, ಬೆಂಗಳೂರು–560 040.
ದೂರವಾಣಿ ಸಂಖ್ಯೆ: 080-23185584, 9538475454, 9980147199.

ಸ್ಥಿರಾಸ್ಥಿ ಹರಾಜು ಪ್ರಕಟಣೆ

ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘ ನಿಯಮಿತ, ಬೆಂಗಳೂರು. ಈ ಸಹಕಾರಿಯ ಸುಸ್ತಿದಾರರಾದ ಲೇಟ್ **ಶ್ರೀಮತಿ ಅಮೃತ ಕುಮಾರಿ W/o ಶ್ರೀ ಎಂ. ಆನಂದ ಕುಮಾರ್** ಇವರಿಂದ ಬಾಕಿಯಿರುವ ಈ ಕೆಳಕಂಡ ಮೊತ್ತಗಳ ವಸೂಲಿ ಬಗ್ಗೆ ಸದರಿಯವರಿಗೆ ಸೇರಿದ ಈ ಕೆಳಗೆ ನಮೂದಿಸಿರುವ ಸ್ಥಿರ ಸ್ವತ್ತುಗಳನ್ನು ವಸೂಲಾತಿ ಅಧಿಕಾರಿಗಳು (ನಿ–441) ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರ ಸಂಘ ನಿಯಮಿತ, ಬೆಂಗಳೂರು ಇವರ ಆದೇಶ **ಇಪಿ.ನಂ:ಕ.ರಾ.ಸೌ.ಸಂ.ಸ.ನಿ/ಸ.ಸಂ.ಸ.ನಿ/ವಅ/271/2025–26,** ದಿನಾಂಕ 06.03.2026 ರ ಮೇರೆಗೆ ದಿನಾಂಕ 09.04.2026 ರ ಗುರುವಾರದಂದು ಹಗಲು 11.30 ಘಂಟೆಗೆ ಸ್ಥಿರಾಸ್ಥಿ ಇರುವ ವಿಳಾಸದಲ್ಲಿ ಮೇಲ್ಕಂಡ ಆದೇಶಗಳಲ್ಲಿ ವಿಧಿಸಿರುವ ಷರತ್ತುಗಳಿಗೊಳಪಟ್ಟು ಬಹಿರಂಗ ಹರಾಜು ಮಾಡಲಾಗುವುದೆಂದು ಈ ಮೂಲಕ ತಿಳಿಸಿದೆ.

ಶ್ರೀಮತಿ ಅಮೃತ ಕುಮಾರಿ

ಹರಾಜಿನ ಷರತ್ತುಗಳನ್ನು ಸಹಕಾರಿಯ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸುಸ್ತಿದಾರರ ಹೆಸರು ಮತ್ತು ವಿಳಾಸ	ಸ್ಥಿರಾಸ್ಥಿಯ ವಿವರಗಳು	ತೀರ್ಪು ಮೊಬಲಗು (ರೂ.ಗಳಲ್ಲಿ)	ಷರಾ
ಶ್ರೀಮತಿ ಅಮೃತ ಕುಮಾರಿ #16, 2ನೇ ಮುಖ್ಯರಸ್ತೆ, ಗೌಡರ ಕಾಲೋನಿ, ನಾಗಶೆಟ್ಟಿ ಹಳ್ಳಿ, ಬೆಂಗಳೂರು	All that piece and parcel of SOUTHERN PORTION of Property bearing site No.7, Panchayath ID No.150200100500400229, Present Panchayath Property No.245/18/2/7, V P Katha No.245, Assessment No.18/2, situated at Hommadevanahalli Village, Beguru Hobli, Bengaluru South Taluk, now comes under the limits of Doddathoguru Village Panchayat, Bangalore South Taluk, Bangalore, measuring East to West:32-0 Feet, North to South:26-0 Feet, in all measuring 832 Square Feet and bounded on: EAST BY:: Property bearing No.20/2 belongs to Sri.Premkumar, WEST BY:: Property belongs to Japamalarani, NORTH BY:: Remaining Northern Portion of the same Property, SOUTH BY:: 20 Feet Road.	20,52,124 ಒಟ್ಟು=20,52,124	ಆದೇಶ ಇಪಿ.ನಂ:ಕ. ರಾ.ಸೌ. ಸಂ.ಸ.ನಿ/ಸ. ಸಂ.ಸ.ನಿ/ ವ.ಅ/ 271/2025–26

ವಿಶೇಷ ಸೂಚನೆ: ಮೇಲೆ ಹೇಳಿರುವ ತೀರ್ಪು ಮೊಬಲಗು ಹಾಗೂ **ದಿನಾಂಕ: 03.08.2024** ರಿಂದ ಬಾಕಿಯಿರುವ ಬಡ್ಡಿ ಹಾಗೂ ನ್ಯಾಯಾಲಯದ ವೆಚ್ಚಗಳನ್ನು ಸಹ ಪಾವತಿಸಬೇಕಾಗಿರುತ್ತದೆ. ಆಸಕ್ತಿಯುಳ್ಳವರು ಈ ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ.

ಸ್ಥಳ: ಬೆಂಗಳೂರು
ದಿನಾಂಕ:21.03.2026

ಸಹಿ/– ದೀಪು.ಎಸ್., ಮಾರಾಟಾಧಿಕಾರಿ
ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘ ನಿಯಮಿತ

ಮೆಟ್ರೊದಲ್ಲಿ ಗಲಾಟೆ: ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವಕರ ಗುಂಪೊಂದು ನಮ್ಮ ಮೆಟ್ರೊದಲ್ಲಿ ಹಾಡಿ, ಕುಣಿದು, ಗಲಾಟೆ ಮಾಡಿದ್ದಾರೆ. ಇದರಿಂದ ಮೆಟ್ರೊ ಸಂಚಾರಕ್ಕೆ ಅಡ್ಡಿಯಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ದೂರು ನೀಡಿದ್ದಾರೆ.

ಮಾರ್ಚ್ 15ರಂದು ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ 11 ಯುವಕರ ಗುಂಪೊಂದು ರಾತ್ರಿ 10.57ಕ್ಕೆ ಮಾದಾವರ ನಿಲ್ದಾಣದಲ್ಲಿ ಮೆಟ್ರೊ ರೈಲಿಗೆ ಹತ್ತಿ ಗಲಾಟೆ ಸೃಷ್ಟಿಸಿದರು. ಇದರಿಂದ ಸುಮಾರು ಐದು ನಿಮಿಷ ರೈಲು ಸಂಚಾರ ವಿಳಂಬ ಮಾಡಬೇಕಾಯಿತು. ಇತರ ಪ್ರಯಾಣಿಕರಿಗೆ ಅನನುಕೂಲವಾಯಿತು ಎಂದು ಮೆಟ್ರೊ ಅಧಿಕಾರಿಗಳು ತಿಳಿಸಿದ್ದಾರೆ.

ಬಿಎಂಆರ್‌ಸಿಎಲ್ ಭದ್ರತಾ ಸಿಬ್ಬಂದಿ ತಕ್ಷಣ ಕಾರ್ಯಪ್ರವೃತ್ತರಾಗಿ, ಸಂಬಂಧಿತ ವ್ಯಕ್ತಿಗಳನ್ನು ಮೆಟ್ರೊ ರೈಲಿನಿಂದ ಇಳಿಸಿದರು. ಅವರನ್ನು ಪೊಲೀಸರಿಗೆ ಒಪ್ಪಿಸಿದರು ಎಂದು ಮಾಹಿತಿ ನೀಡಿದ್ದಾರೆ.

ಸರಗಳ್ಳ ಬಂಧನ

ವಿಜಯಪುರ (ದೇವನಹಳ್ಳಿ): ಮಹಿಳೆಯ ಚಿನ್ನದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾದ ಆರೋಪಿಯನ್ನು ವಿಜಯಪುರ ಟೌನ್ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬೆಂಗಳೂರಿನ ಡಿ.ಜೆ ಹಳ್ಳಿಯ ಆರೀಫ್ ಖಾನ್ (25) ಬಂಧಿತ. ಮಾರ್ಚ್ 17ರಂದು ಪದ್ಮಾವತಿ ಎಂಬುವರ ₹5 ಲಕ್ಷ ಬೆಲೆಬಾಳುವ 55 ಗ್ರಾಂ ಚಿನ್ನದ ಮಾಂಗಲ್ಯ ಸರವನ್ನು ಬೈಕ್‌ನಲ್ಲಿ ಬಂದ ಆರೋಪಿ ಕದ್ದು ಪರಾರಿಯಾಗಿದ್ದ.

ಚಿಕ್ಕಬಳ್ಳಾಪುರ-ದೇವನಹಳ್ಳಿಯ ರಾಷ್ಟ್ರೀಯ ಹೆದ್ದಾರಿ ಸಮೀಪದ ಮುನೇಶ್ವರಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಲು ಹೆದ್ದಾರಿ ಸಂಪರ್ಕಿಸುವ ಸರ್ವಿಸ್ ರಸ್ತೆಯಲ್ಲಿ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದ ಪದ್ಮಾವತಿ ಅವರನ್ನು ಆರೋಪಿ ಹಿಂದಿನಿಂದ ಬೈಕ್‌ನಲ್ಲಿ ಬೆನ್ನತ್ತಿದ್ದ. ಕುತ್ತಿಗೆಗೆ ಕೈ ಹಾಕಿ ಕತ್ತಿನಲ್ಲಿದ್ದ ಮಾಂಗಲ್ಯ ಸರ ಕಸಿದು ಪರಾರಿಯಾಗಿದ್ದ.

ಕೆ.ಜಿ ಹಳ್ಳಿ, ಪುಲಕೇಶಿನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿ

ಈದ್: ವಾಹನ ಸಂಚಾರ ಮಾರ್ಪಾಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈದ್ ಉಲ್ ಫಿತ್ರ್ ಅಂಗವಾಗಿ ಮುಸ್ಲಿಮರು ನಗರದಲ್ಲಿ ವಿವಿಧೆಡೆ ಶನಿವಾರ ವಿಶೇಷ ಪ್ರಾರ್ಥನೆ ನಡೆಸಲಿದ್ದು, ಕೆ.ಜಿ ಹಳ್ಳಿ ಹಾಗೂ ಪುಲಕೇಶಿನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವಾಹನ ಸಂಚಾರ ಮಾರ್ಪಾಡು ಮಾಡಲಾಗಿದೆ.

ಕೆ.ಜಿ. ಹಳ್ಳಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ನಾಗವಾರ ಜಂಕ್ಷನ್‌ನಿಂದ ಪಾಟರಿ ವೃತ್ತದವರೆಗೆ ಶನಿವಾರ ಬೆಳಿಗ್ಗೆ 5ರಿಂದ ಮಧ್ಯಾಹ್ನ 2ರ ವರೆಗೆ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಪರ್ಯಾಯ ಮಾರ್ಗ

- ನಾಗವಾರ ಜಂಕ್ಷನ್‌ನಿಂದ ಶಿವಾಜಿನಗರಕ್ಕೆ ತೆರಳುವ ವಾಹನ ಸವಾರರು, ನಾಗವಾರ ಜಂಕ್ಷನ್‌ನಲ್ಲಿ ಎಡಕ್ಕೆ ತಿರುವು ಪಡೆದು ಹೆಣ್ಣೂರು ಜಂಕ್ಷನ್ ರಸ್ತೆಯಲ್ಲಿ ಬಲಕ್ಕೆ ತಿರುವು ಪಡೆದುಕೊಳ್ಳಬೇಕು. ಎಚ್.ಬಿ.ಆರ್ 80 ಅಡಿ ರಸ್ತೆ, ಚಂದ್ರಿಕಾ ಜಂಕ್ಷನ್ ಮೂಲಕ ಲಿಂಗರಾಜಪುರ ಮೇಲ್ಸೇತುವೆ, ಪುಲಕೇಶಿನಗರ ಸಂಚಾರ ಪೊಲೀಸ್ ಠಾಣೆ, ರಾಬರ್ಟ್‌ಸನ್ ರಸ್ತೆ ಜಂಕ್ಷನ್‌ನಲ್ಲಿ ಬಲಕ್ಕೆ ತಿರುವು ಪಡೆದುಕೊಂಡು, ಹೇನ್ಸ್ ರಸ್ತೆ ಮೂಲಕ ಶಿವಾಜಿನಗರ ತಲುಪಬಹುದಾಗಿದೆ.
- ಶಿವಾಜಿನಗರ ಕಡೆಯಿಂದ ನಾಗವಾರ ಜಂಕ್ಷನ್ ಕಡೆಗೆ ಬರುವ ವಾಹನ ಸವಾರರು ಸ್ಪೆನ್ಸರ್ ರಸ್ತೆಯಲ್ಲಿ ಕಡ್ಡಾಯವಾಗಿ ಬಲಕ್ಕೆ ತಿರುವು ಪಡೆದುಕೊಂಡು ಸ್ಪೆನ್ಸರ್ ರಸ್ತೆ ಮೂಲಕ ಕೋಲ್ಸ್ ರಸ್ತೆ ತಲುಪಿ, ಅಲ್ಲಿಂದ ವೀಲರ್ಸ್ ರಸ್ತೆಯ ಮೂಲಕ ಹೆಣ್ಣೂರು, ಬಾಣಸವಾಡಿ, ನಾಗವಾರ ಜಂಕ್ಷನ್ ಕಡೆಗೆ ಸಂಚರಿಸಬಹುದು.
- ಆರ್.ಟಿ.ನಗರದಿಂದ ಕಾವಲ್ ಬೈರಸಂದ್ರದ ಮೂಲಕ ನಾಗವಾರ ಜಂಕ್ಷನ್ ಕಡೆಗೆ ಬರುವ ವಾಹನಗಳು ಪುಷ್ಪಾಂಜಲಿ ಚಿತ್ರಮಂದಿರದ ಬಳಿ ಎಡಕ್ಕೆ ತಿರುವು ಪಡೆದುಕೊಂಡು ವೀರಣ್ಣ ಪಾಳ್ಯ ಜಂಕ್ಷನ್ ಕಡೆಗೆ ಬಲಕ್ಕೆ ತಿರುವು ಪಡೆದು ನಾಗವಾರ ಜಂಕ್ಷನ್ ಕಡೆಗೆ ಸಂಚರಿಸಬಹುದು.

ನಿರ್ಬಂಧ ರಸ್ತೆಗಳು

- ಓಲ್ಡ್ ಉದಯ ಟಿ.ವಿ ಜಂಕ್ಷನ್‌ನಿಂದ ಮಿಲ್ಲರ್ಸ್ ರಸ್ತೆ ಮತ್ತು ಸೇಂಟ್ ಜಾನ್ಸ್ ಚರ್ಚ್ ರಸ್ತೆಯ ಕಡೆಗೆ ಸಂಚರಿಸುವ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.
- ಹೇನ್ಸ್ ರಸ್ತೆ ಮತ್ತು ಸೇಂಟ್‌ಜಾನ್ಸ್ ಚರ್ಚ್ ರಸ್ತೆಯ ಕಡೆಯಿಂದ ಮಿಲ್ಲರ್ಸ್ ರಸ್ತೆ ಮತ್ತು ನಂದಿದುರ್ಗ ರಸ್ತೆಯ ಕಡೆಗೆ ಸಂಚರಿಸುವ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧ ಮಾಡಲಾಗಿದೆ.
- ನಂದಿದುರ್ಗ ರಸ್ತೆಯಿಂದ ಮಿಲ್ಲರ್ಸ್ ರಸ್ತೆ ಮತ್ತು ಸೇಂಟ್ ಜಾನ್ಸ್ ಚರ್ಚ್ ರಸ್ತೆಯ ಕಡೆಗೆ ಸಂಚರಿಸುವ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

ಸಂಚಾರಕ್ಕೆ ಪರ್ಯಾಯ ಮಾರ್ಗ

- ಓಲ್ಡ್ ಉದಯ ಟಿ.ವಿ ಜಂಕ್ಷನ್‌ನಿಂದ ಮಿಲ್ಲರ್ಸ್ ರಸ್ತೆ ಮತ್ತು ಸೇಂಟ್ ಜಾನ್ಸ್ ಚರ್ಚ್ ರಸ್ತೆಯ ಕಡೆಗೆ ಸಂಚರಿಸುವ ವಾಹನ ಚಾಲಕರು, ಸವಾರರು ಓಲ್ಡ್ ಉದಯ ಟಿ.ವಿ ಜಂಕ್ಷನ್ ಬಳಿ ಬಲಕ್ಕೆ ತಿರುವು ಪಡೆದು ಬಂಬೂ ಬಜಾರ್ ಜಂಕ್ಷನ್ ತಲುಪಿ ನೇತಾಜಿ ರಸ್ತೆ ಮೂಲಕ ಸಂಚರಿಸಿ ಪ್ರಾಮಿನೆಡ್ ರಸ್ತೆಯ ಬಳಿ ಬಲ ತಿರುವು ಪಡೆದುಕೊಳ್ಳಬೇಕು. ಹೇನ್ಸ್ ರಸ್ತೆಯಲ್ಲಿ ಸಂಚರಿಸಿ, ಬಲತಿರುವು ಪಡೆದು ಸೇಂಟ್ ಜಾನ್ಸ್ ಚರ್ಚ್ ರಸ್ತೆ ಕಡೆಗೆ ಸಂಚರಿಸಹುದು.
- ಹೇನ್ಸ್ ರಸ್ತೆ ಮತ್ತು ಸೇಂಟ್‌ಜಾನ್ಸ್ ಚರ್ಚ್ ರಸ್ತೆಯ ಕಡೆಯಿಂದ ಮಿಲ್ಲರ್ಸ್ ರಸ್ತೆ ಮತ್ತು ನಂದಿದುರ್ಗ ರಸ್ತೆ ಕಡೆಗೆ ಸಂಚರಿಸುವ ವಾಹನ ಚಾಲಕರು, ಸವಾರರು ಬಂಬೂ ಬಜಾರ್ ಸರ್ವೀಸ್ ರಸ್ತೆಯ ಮೂಲಕ ಕಂಟೋನ್ಮೆಂಟ್ ರಸ್ತೆಯಲ್ಲಿ ಸಂಚರಿಸಿ ಎಡಕ್ಕೆ ತಿರುವು ಪಡೆದುಕೊಳ್ಳಬೇಕು. ನಂತರ, ಕ್ವೀನ್ಸ್ ರಸ್ತೆಯಲ್ಲಿ ಬಲಕ್ಕೆ ತಿರುವು ಪಡೆದು ಓಲ್ಡ್ ಉದಯ ಟಿ.ವಿ ಜಂಕ್ಷನ್ ತಲುಪಿ ಬಲಕ್ಕೆ ತಿರುವು ಪಡೆದು ಜಯಮಹಲ್ ರಸ್ತೆಯ ಮೂಲಕ ಮಿಲ್ಲರ್ಸ್ ರಸ್ತೆ ಮತ್ತು ನಂದಿದುರ್ಗ ರಸ್ತೆ ಕಡೆಗೆ ಸಂಚರಿಸಹುದು.
- ನಂದಿದುರ್ಗ ರಸ್ತೆ ಕಡೆಯಿಂದ ಮಿಲ್ಲರ್ಸ್ ರಸ್ತೆ ಮತ್ತು ಸೇಂಟ್ ಜಾನ್ಸ್ ಚರ್ಚ್ ರಸ್ತೆಯ ಕಡೆಗೆ ಸಂಚರಿಸುವ ವಾಹನ ಚಾಲಕರು, ಸವಾರರು ನಂದಿದುರ್ಗ ರಸ್ತೆಯಲ್ಲಿ ಎಡಕ್ಕೆ ತಿರುವು ಪಡೆದು ಬೆನ್ಸನ್ ಕ್ರಾಸ್ ರಸ್ತೆಯಲ್ಲಿ ಎಡಕ್ಕೆ ತಿರುವು ಪಡೆದುಕೊಳ್ಳಬೇಕು. ಬೋರ್ ಬಂಕ್ ರಸ್ತೆಯ ಜಿ.ಕೆ.ವೇಲ್ ಜಂಕ್ಷನ್ ಬಳಿ ಬಲಕ್ಕೆ ತಿರುವು ಪಡೆದು ಹೇನ್ಸ್ ರಸ್ತೆಯ ಮೂಲಕ ವಾಹನ ಚಾಲಕರು, ಸವಾರರು ಮಿಲ್ಲರ್ಸ್ ರಸ್ತೆ ಮತ್ತು ಸೇಂಟ್ ಜಾನ್ಸ್ ಚರ್ಚ್ ರಸ್ತೆ ಕಡೆಗೆ ಸಂಚರಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.
- ವಿಶೇಷ ಪ್ರಾರ್ಥನೆ ಸಲ್ಲಿಸುವ ಸುತ್ತಮುತ್ತ ಪ್ರದೇಶಗಳಲ್ಲಿ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಿವಿಧೆಡೆ ಪಾರ್ಕಿಂಗ್ ವ್ಯವಸ್ಥೆ

- ಈದ್ಗಾ ಮೈದಾನ ಹಾಗೂ ಬಿಲಾಲ್ ಮಾಸ್ಕ್ ಹತ್ತಿರ ಪ್ರಾರ್ಥನೆ ಸಲ್ಲಿಸುವವರು ಅಲ್ಫನ್ಸ್ ಸ್ಕೂಲ್ ಕ್ರಾಸ್ ರಸ್ತೆಯಲ್ಲಿ ಹಾಗೂ ಪಿಲ್ಲಣ್ಣ ಗಾರ್ಡನ್ ರಸ್ತೆಯಲ್ಲಿ ಪಾರ್ಕಿಂಗ್ ಮಾಡಬಹುದು.
- ಉಮರ್ ಮಸೀದಿ ಹಾಗೂ ಅರೇಬಿಕ್ ಕಾಲೇಜ್ ಹತ್ತಿರ ಪ್ರಾರ್ಥನೆ ಮಾಡುವವರು ಉಮರ್ ಮಸೀದಿ ನಾಲ್ಕನೇ ರಸ್ತೆಯಲ್ಲಿ ಹಾಗೂ ಎಚ್‌ಬಿಆರ್ 9ನೇ ಕ್ರಾಸ್ ರಸ್ತೆಯಲ್ಲಿ ವಾಹನ ಪಾರ್ಕಿಂಗ್ ಮಾಡಬಹುದು.
- ಮುನಾವರ್ ಮಸೀದಿ ಬಳಿ ಪ್ರಾರ್ಥನೆ ಸಲ್ಲಿಸುವವರು ಎಚ್‌ಬಿಆರ್ 80 ಅಡಿ ರಸ್ತೆ ಒಂದನೇ ಕ್ರಾಸ್ ರಸ್ತೆಯಲ್ಲಿ ವಾಹನಗಳನ್ನು ನಿಲುಗಡೆ ಮಾಡಬಹುದು ಎಂದು ಸಂಚಾರ ಪೂರ್ವ ವಿಭಾಗದ ಡಿಸಿಪಿ ಸಾಹಿಲ್ ಬಾಗ್ಲಾ ಅವರು ತಿಳಿಸಿದ್ದಾರೆ.
- ಪುಲಕೇಶಿನಗರ ಸಂಚಾರ ಠಾಣೆ ವ್ಯಾಪ್ತಿಯ ಮಿಲ್ಲರ್ಸ್ ರಸ್ತೆಯಲ್ಲಿ ಇರುವ ಖುದ್ದುಸಾಬ್ ಈದ್ಗಾ ಮೈದಾನದಲ್ಲಿ (ಓಲ್ಡ್ ಹಜ್ ಕ್ಯಾಂಪ್) ವಿಶೇಷ ಪ್ರಾರ್ಥನೆ ನಡೆಯಲಿದ್ದು, ಸುತ್ತಮುತ್ತಲ ರಸ್ತೆಗಳಲ್ಲಿ ವಾಹನ ಸಂಚಾರ ಮಾರ್ಪಾಡು ಮಾಡಲಾಗಿದೆ.

ಶೀತಲ ಸರಪಳಿ ಘಟಕ ಸ್ವಾಧೀನಕ್ಕೆ ಅಧಿಕಾರಿ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೂಜೇನಹಳ್ಳಿ ಸಮಗ್ರ ಶೀತಲ ಸರಪಳಿ ಘಟಕವನ್ನು ಕೆಪೆಕ್ ಸಂಸ್ಥೆಯ ಸ್ವಾಧೀನಕ್ಕೆ ಪಡೆಯಲು ಕೃಷಿ ಇಲಾಖೆಯು ಸ್ವಾಧೀನ ಅಧಿಕಾರಿಯನ್ನು ನೇಮಿಸಿದೆ. ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ (ಕೆಪೆಕ್) ಬೆಂಗಳೂರು ಇವರನ್ನು ತೆರವು ಅಧಿಕಾರಿಯನ್ನಾಗಿ ನೇಮಿಸಲಾಗಿದೆ ಎಂದು ಕೃಷಿ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಕೆಪೆಕ್ ಸಂಸ್ಥೆಯು ತನ್ನ ಆಂತರಿಕ ಸಂಪನ್ಮೂಲ ಹಾಗೂ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ತೋಟಗಾರಿಕೆ ಇಲಾಖೆಯ, ದೇವನಹಳ್ಳಿ ಸಮೀಪದ ಪೂಜೇನಹಳ್ಳಿ ತೋಟಗಾರಿಕಾ ಕ್ಷೇತ್ರದಲ್ಲಿ ಸಮಗ್ರ ಶೀತಲ ಸರಪಳಿ ಘಟಕವನ್ನು ನಿರ್ಮಿಸಿತ್ತು. 2024ರಲ್ಲಿ ಮೆ. ಫಿಜಾ ಗ್ಲೋಬಲ್ ಆಗ್ರೋವೆಂಚರ್ಸ್ ಸಂಸ್ಥೆಗೆ ಒಡಂಬಡಿಕೆ ಮೂಲಕ ವಹಿಸಲಾಗಿತ್ತು.

ಈ ಸಂಸ್ಥೆಯು ಕಾಲಕಾಲಕ್ಕೆ ಬಾಡಿಗೆ ಪಾವತಿ ಮಾಡಿರಲಿಲ್ಲ. ಘಟಕವನ್ನು ಒಪ್ಪಂದದ ಹೊರತಾಗಿ ಬೇರೆ ಉದ್ದೇಶಗಳಿಗೆ ಬಳಸಿಕೊಂಡಿತ್ತು. ಈ ಬಗ್ಗೆ ನೋಟಿಸ್ ನೀಡಲಾಗಿತ್ತು. ಈ ಘಟಕವನ್ನು ಕೆಪೆಕ್‌ಗೆ ಹಿಂದಿರುಗಿಸಲು ಕೆಪೆಕ್ ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದ್ದರು.

ಈ ಘಟಕವನ್ನು ಮೆ. ಫಿಜಾ ಗ್ಲೋಬಲ್ ಆಗ್ರೋವೆಂಚರ್ಸ್‌ನಿಂದ ಮುಕ್ತಗೊಳಿಸಲು ಅಧಿಕಾರಿಗಳನ್ನು ನೇಮಿಸಲು ಕೆಪೆಕ್ ಸಂಸ್ಥೆ ಕೋರಿಕೊಂಡಿತ್ತು.

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ

ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562123
ದೂರವಾಣಿ ಸಂಖ್ಯೆ: 080–23718487
ಇ–ಮೇಲ್: itstaff_ulb_mnhalli@yahoo.com

ಸಂಖ್ಯೆ: ಮಾ.ನ.ಕಾ/ತಾ.ಶಾ/56/2025–26 ದಿನಾಂಕ: 20/03/2026

ಟೆಂಡರ್ ಪ್ರಕಟಣೆ

(Through GOK e-Procurement Portal www.kppp.karnataka.gov.in only)

ಮಾದನಾಯಕನಹಳ್ಳಿ ನಗರಸಭಾ ವ್ಯಾಪ್ತಿಯಲ್ಲಿ ನಗರಸಭಾ ನಿಧಿ ಅಡಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಡಿಯಲ್ಲಿ ಅರ್ಹ ಹಾಗೂ ಅನುಭವವುಳ್ಳ ಸಿವಿಲ್ ಗುತ್ತಿಗೆದಾರರು (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನಂತೆ) ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಇಂಡೆಂಟ್ ಸಂಖ್ಯೆ: DMA/2025-26/OW/WORK_INDENT56600.

ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಲು, ನಮೂನೆಗಳನ್ನು ಆನ್‌ಲೈನ್‌ನಲ್ಲಿ ಪಡೆಯಲು, ಹಾಗೂ ಆನ್‌ಲೈನ್ ಮೂಲಕ ಭರ್ತಿಮಾಡಿದ ನಮೂನೆ ಮತ್ತು ಇ.ಎಂ.ಡಿ ಠೇವಣಿಯನ್ನು ಸ್ವೀಕರಿಸುವ ಅವಧಿ ದಿನಾಂಕ: 06/04/2026 ಸಂಜೆ 5.30 ಗಂಟೆಯವರೆಗೆ ಹಾಗೂ ಸಲ್ಲಿಸಿರುವ ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 08/04/2026 ಬೆಳಿಗ್ಗೆ 10.30 ಗಂಟೆಗೆ. ಹೆಚ್ಚಿನ ವಿವರಗಳನ್ನು ಕಛೇರಿಯ ವೇಳೆಯಲ್ಲಿ ತಾಂತ್ರಿಕ ಶಾಖೆಯಿಂದ ಪಡೆಯ ಬಹುದಾಗಿರುತ್ತದೆ. ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ಯಾವುದಾದರು ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಪೌರಾಯುಕ್ತರು,
ನಗರಸಭೆ, ಮಾದನಾಯಕನಹಳ್ಳಿ

DIPR/CP/SMCL/6381/2025-26

ಸುರಕ್ಷಾ ಕ್ರಮಕ್ಕೆ ಬೆಸ್ಕಾಂ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವೆಡೆ ಮಳೆಯಾಗುತ್ತಿರುವುದರಿಂದ, ಎರಡು ದಿನದಿಂದ ಕೆಲವು ಭಾಗಗಳಲ್ಲಿ ಸಣ್ಣಪುಟ್ಟ ಅನಾಹುತಗಳಾಗಿವೆ. ಗ್ರಾಹಕರು ವಿದ್ಯುತ್ ಸುರಕ್ಷಕಾ ಕ್ರಮ ಅನುಸರಿಸಬೇಕು ಎಂದು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ಮನವಿ ಮಾಡಿದೆ.

ಗಾಳಿ-ಮಳೆಗೆ ವಿದ್ಯುತ್ ಕಂಬ ತುಂಡಾಗಿರುವುದು, ವಾಲಿರುವುದು ಇಲ್ಲವೇ ಮರಗಳ ಕೊಂಬೆ ವಿದ್ಯುತ್ ಕಂಬಗಳ ಮೇಲೆ ಬಿದ್ದಿದ್ದರೆ ಅವುಗಳ ಸಮೀಪ ಹೋಗಬಾರದು. ಕೂಡಲೇ ಹತ್ತಿರದ ಬೆಸ್ಕಾಂ ಉಪವಿಭಾಗ ಕಚೇರಿಗೆ ಮಾಹಿತಿ ನೀಡಬೇಕು. ಬೆಸ್ಕಾಂ 1912 ಸಹಾಯವಾಣಿಗೆ ಕರೆ ಮಾಡಬೇಕು ಎಂದು ತಿಳಿಸಲಾಗಿದೆ.

ಗಾಳಿ-ಮಳೆ ಸಂದರ್ಭದಲ್ಲಿ ವಿದ್ಯುತ್ ಕಂಬಗಳು ಹಾದು ಹೋಗಿರುವ ಮರಗಳ ಕೆಳಗೆ ನಿಲ್ಲಬಾರದು. ವಿದ್ಯುತ್ ಪರಿವರ್ತಕಗಳ (ಟಿಸಿ) ಬಳಿಯೂ ನಿಲ್ಲುವುದು ಒಳ್ಳೆಯದಲ್ಲ ಎಂದು ಸೂಚನೆ ನೀಡಲಾಗಿದೆ.

ಕರೆಗಳ ಒತ್ತಡದಿಂದ ಸಹಾಯವಾಣಿ ಸಂಖ್ಯೆ 1912 ಕೆಲವೊಮ್ಮೆ ಲಭ್ಯವಾಗದಿರಬಹುದು. ಆಗ ಬೆಸ್ಕಾಂ ವಾಟ್ಸ್ ಆ್ಯಪ್ ಸಂಖ್ಯೆಗಳಿಗೆ ವಿದ್ಯುತ್ ಸಮಸ್ಯೆ ಕುರಿತ ಸಂದೇಶ, ದೂರು, ಚಿತ್ರ, ವಿಡಿಯೊ ಕಳುಹಿಸಬಹುದು. ದೂರು ನೀಡಿದರೆ ತ್ವರಿತವಾಗಿ ಪರಿಹರಿಸಲಾಗುವುದು ಎಂದು ಬೆಸ್ಕಾಂ ತಿಳಿಸಿದೆ.

ಬೆಸ್ಕಾಂ ವ್ಯಾಪ್ತಿಯ 8 ಜಿಲ್ಲೆಗಳ ವಾಟ್ಸ್‌ಆ್ಯಪ್ ಸಂಖ್ಯೆ

ಬೆಂಗಳೂರು ನಗರ ಜಿಲ್ಲೆ	
ದಕ್ಷಿಣ ವೃತ್ತ	8277884011
ಪಶ್ಚಿಮ ವೃತ್ತ	8277884012
ಪೂರ್ವ ವೃತ್ತ	8277884013
ಉತ್ತರ ವೃತ್ತ	8277884014,
ಕೋಲಾರ ಜಿಲ್ಲೆ	8277884015
ಚಿಕ್ಕಬಳ್ಳಾಪುರ ಜಿಲ್ಲೆ	8277884016
ಬೆಂಗಳೂರು ಗ್ರಾಮಾಂತರ ಜಿಲ್ಲೆ	8277884017
ರಾಮನಗರ ಜಿಲ್ಲೆ	8277884018
ತುಮಕೂರು ಜಿಲ್ಲೆ	8277884019
ಚಿತ್ರದುರ್ಗ ಜಿಲ್ಲೆ	8277884020
ದಾವಣಗೆರೆ ಜಿಲ್ಲೆ	8277884021

ಕೌಶಲ ತರಬೇತಿ

ಬೆಂಗಳೂರು: ಸಮಾಜ ಕಲ್ಯಾಣ ಇಲಾಖೆ ವತಿಯಿಂದ ರಾಜ್ಯ, ಕೇಂದ್ರ ಸರ್ಕಾರದ ಅತಿಥ್ಯ ಕ್ಷೇತ್ರದ ಫುಡ್ ಕ್ರಾಫ್ಟ್ ಇನ್‌ಸ್ಟಿಟ್ಯೂಟ್ ಹಾಗೂ ಇನ್‌ಸ್ಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್ ಸಹಯೋಗದಲ್ಲಿ ಪ್ರವಾಸೋದ್ಯಮ ಆತಿಥ್ಯ ಕ್ಷೇತ್ರದಲ್ಲಿ ವಿಷಯವಾರು ಕೌಶಲ ತರಬೇತಿಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಗೆ ಪ್ರವಾಸೋದ್ಯಮ ಆಯುಕ್ತರ ಕಚೇರಿ, ನಂ.54, 6ನೇ ಮಹಡಿ, ಇಂಧನ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-09 ಅಥವಾ ದೂರವಾಣಿ: 080-22352828 ಇಲ್ಲವೇ ಇಮೇಲ್ director@karnatakatourism.org ಅನ್ನು ಸಂಪರ್ಕಿಸಬಹುದು ಎಂದು ಉತ್ತರ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ನಾಮಪತ್ರ: 2 ದಿನ ವಿಸ್ತರಣೆಗೆ ಮನವಿ

ಬೆಂಗಳೂರು: ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಗಳಿಗೆ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವ ಅವಧಿಯನ್ನು ಇನ್ನೂ ಎರಡು ದಿನ ವಿಸ್ತರಿಸುವಂತೆ ಚುನಾವಣಾ ಆಯೋಗಕ್ಕೆ ಬಿಜೆಪಿ ಮನವಿ ಮಾಡಿದೆ. ಇದೇ 19 ರಂದು ಯುಗಾದಿ, 21 ರಂದು ರಂಜಾನ್, 22 ಭಾನುವಾರ ರಜಾ ದಿನಗಳು ಆಗಿರುವುದರಿಂದ ನಾಮಪತ್ರ ಸಲ್ಲಿಸಲು ಆಗುವುದಿಲ್ಲ. 23 ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾಗಿದೆ. ಆದ್ದರಿಂದ, ಅವಧಿ ವಿಸ್ತರಿಸಬೇಕೆಂದು ಒತ್ತಾಯಿಸಿದೆ.

ಉದ್ಯೋಗ ಮೇಳ

ಬೆಂಗಳೂರು: ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ ಯೋಜನೆಯಡಿ ಕನಕಪುರ ಮುಖ್ಯ ರಸ್ತೆಯ ಕಗ್ಗಲೀಪುರದ ಸಾಲುಹುಣಸೆ ಇಂಪೀರಿಯಲ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್‌ನಲ್ಲಿ ಮಾರ್ಚ್ 25ರಂದು ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿದೆ.

ನಗರ ಜಿಲ್ಲಾ ಪಂಚಾಯಿತಿ ಹಾಗೂ ದಕ್ಷಿಣ ತಾಲ್ಲೂಕಿನ ಕಗ್ಗಲೀಪುರ ಗ್ರಾಮ ಪಂಚಾಯಿತಿ ಸಹಯೋಗದಲ್ಲಿ ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ನಡೆಯುವ ಮೇಳದಲ್ಲಿ 18 ವರ್ಷ ಮೇಲ್ಪಟ್ಟ ಯುವಕ/ಯುವತಿಯರು ಭಾಗವಹಿಸಬಹುದು ಎಂದು ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಎನ್.ಯತೀಶ್ ತಿಳಿಸಿದ್ದಾರೆ. ಉದ್ಯೋಗಾಕಾಂಕ್ಷಿಗಳು https://forms.gle/js5VxBQnmtmpH6176 ಲಿಂಕ್‌ನಲ್ಲಿ ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ 9964901444,9964902444 ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

ಫಾರ್ಮ್ ಸಂಖ್ಯೆ. INC-26

[ಕಂಪನಿಗಳ (ಸಂಯೋಜನೆ) ನಿಯಮಗಳು, 2014 ರ ನಿಯಮ 30 ರ ಪ್ರಕಾರ]

ಕಂಪನಿಯ ನೋಂದಾಯಿತ ಕಚೇರಿಯನ್ನು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಬದಲಾಯಿಸಲು ಪತ್ರಿಕೆಯಲ್ಲಿ ಪ್ರಕಟಿಸಬೇಕಾದ ಜಾಹೀರಾತು.

ಕೇಂದ್ರ ಸರ್ಕಾರದ ಪ್ರಾದೇಶಿಕ ನಿರ್ದೇಶಕರ ಮುಂದೆ ನೈಋತ್ಯ ಪ್ರದೇಶ, ಬೆಂಗಳೂರು

ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 13 ರ ಉಪ-ವಿಭಾಗ (4) ಮತ್ತು ಕಂಪನಿಗಳ (ಸಂಯೋಜನೆ) ನಿಯಮಗಳು, 2014 ರ ನಿಯಮ 30 ರ ಉಪ-ನಿಬಂಧನೆ (5) ರ ಷರತ್ತು (ಎ) ವಿಷಯದಲ್ಲಿ

ಮತ್ತು

ಸ್ಕೈಲೈನ್ ಫೌಂಡೇಶನ್ಸ್ ಅಂಡ್ ಸ್ಟ್ರಕ್ಚರ್ಸ್ ಪ್ರೈವೇಟ್ ಲಿಮಿಟೆಡ್ ನ ನೋಂದಾಯಿತ ಕಚೇರಿ 350/2, ಹಂಸ ಐಒಸಿ ಸರ್ವೀಸ್ ಸ್ಟೇಶನ್ ಹತ್ತಿರ, ಧರ್ಮರಾಮ್ ಕಾಲೇಜು ಪೋಸ್ಟ್, ಹೊಸೂರು ರಸ್ತೆ, ಬೆಂಗಳೂರು, ಕರ್ನಾಟಕ, ಭಾರತ, 560029. ವಿಷಯದಲ್ಲಿ

... ಅರ್ಜಿದಾರರು

ಕಂಪನಿಯು ತನ್ನ ನೋಂದಾಯಿತ ಕಚೇರಿಯನ್ನು "ಕರ್ನಾಟಕ ರಾಜ್ಯ" ದಿಂದ "ಕೇರಳ ರಾಜ್ಯ" ಕ್ಕೆ ಸ್ಥಳಾಂತರಿಸಲು ಅನುವು ಮಾಡಿಕೊಡಲು 25.02.2026 **ರಂದು ನಡೆದ ವಿಶೇಷ ಸಾಮಾನ್ಯ ಸಭೆಯಲ್ಲಿ** ಅಂಗೀಕರಿಸಲಾದ ವಿಶೇಷ ನಿರ್ಣಯದ ಪ್ರಕಾರ ಕಂಪನಿಯ ಸಂಘದ ಜ್ಞಾಪಕ ಪತ್ರವನ್ನು ಬದಲಾಯಿಸಲು ದೃಢೀಕರಣವನ್ನು ಕೋರಿ ಕಂಪನಿ ಕಾಯ್ದೆ, 2013 ರ ಸೆಕ್ಷನ್ 13 ರ ಅಡಿಯಲ್ಲಿ ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಲು ಉದ್ದೇಶಿಸಿದೆ ಎಂದು ಸಾರ್ವಜನಿಕರಿಗೆ ಈ ಮೂಲಕ ಪ್ರಕಟಣೆ ನೀಡಲಾಗಿದೆ.

ಕಂಪನಿಯ ನೋಂದಾಯಿತ ಕಚೇರಿಯ ಪ್ರಸ್ತಾವಿತ ಬದಲಾವಣೆಯಿಂದ ತಮ್ಮ ಹಿತಾಸಕ್ತಿಯ ಮೇಲೆ ಪರಿಣಾಮ ಬೀರುವ ಯಾವುದೇ ವ್ಯಕ್ತಿಯು **MCA-21 ಪೋರ್ಟಲ್** ನಲ್ಲಿ (www.mca.gov.in) ಹೂಡಿಕೆದಾರರ ದೂರು ನಮೂನೆಯನ್ನು ಸಲ್ಲಿಸುವ ಮೂಲಕ ಅಥವಾ ದೂರನ್ನು ತಲುಪಿಸಲು ಕಾರಣ ನೀಡುವ ಮೂಲಕ ಅಥವಾ ಅವನ/ಅವಳ ಹಿತಾಸಕ್ತಿಯ ಸ್ವರೂಪ ಮತ್ತು ವಿರೋಧದ ಆಧಾರಗಳನ್ನು ತಿಳಿಸುವ ಅಫಿಡವಿಟ್ ನಿಂದ ಬೆಂಬಲಿತವಾದ ತನ್ನ ಆಕ್ಷೇಪಣೆಗಳನ್ನು ರಿಜಿಸ್ಟರ್ಡ್ ಪೋಸ್ಟ್ ಮೂಲಕ, ಈ ಸೂಚನೆ ಪ್ರಕಟವಾದ ದಿನಾಂಕದಿಂದ ಹದಿನಾಲ್ಕು (14) ದಿನಗಳ ಒಳಗೆ ಕೆಳಗೆ ನೀಡಲಾದ **'ಇ' ವಿಂಗ್, 2 ನೇ ಮಹಡಿ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು-560034, ಕರ್ನಾಟಕ, ಭಾರತ** ವಿಳಾಸದಲ್ಲಿರುವ ಪ್ರಾದೇಶಿಕ ನಿರ್ದೇಶಕರಿಗೆ, ಕೆಳಗೆ ಉಲ್ಲೇಖಿಸಿರುವಂತೆ ಅರ್ಜಿದಾರರ ಕಂಪನಿಗೆ ಅದರ ನೋಂದಾಯಿತ ಕಚೇರಿ ವಿಳಾಸಕ್ಕೆ ಪ್ರತಿಯೊಂದಿಗೆ ಕಳುಹಿಸಬಹುದು:

ಅರ್ಜಿದಾರರ ಕಂಪನಿಯ ನೋಂದಾಯಿತ ಕಚೇರಿ: 350/2, **ಹಂಸ ಐಒಸಿ ಸರ್ವೀಸ್ ಸ್ಟೇಶನ್ ಹತ್ತಿರ, ಧರ್ಮರಾಮ್ ಕಾಲೇಜು ಪೋಸ್ಟ್, ಹೊಸೂರು ರಸ್ತೆ, ಬೆಂಗಳೂರು, ಕರ್ನಾಟಕ, ಭಾರತ,** 560029

ಅರ್ಜಿದಾರರಿಗಾಗಿ ಮತ್ತು ಅರ್ಜಿದಾರರ ಪರವಾಗಿ **ಸ್ಕೈಲೈನ್ ಫೌಂಡೇಶನ್ಸ್ ಅಂಡ್ ಸ್ಟ್ರಕ್ಚರ್ಸ್ ಪ್ರವೇಟ್ ಲಿಮಿಟೆಡ್**

ಶ್ರೀಕಾಂತ್ ಕೃಷ್ಣನ್
ನಿರ್ದೇಶಕ
ಡಿಐಎನ್: 01714450

ದಿನಾಂಕ: 18ನೇ ಮಾರ್ಚ್, 2026
ಸ್ಥಳ: ಕರ್ನಾಟಕ

'ಕೆ.ಡಿ– ದಿ ಡೆವಿಲ್' ಸಿನಿಮಾದ, ತೀವ್ರ ವಿವಾದಕ್ಕೆ ಕಾರಣವಾಗಿರುವ 'ಸರ್ಸೆ ಸರ್ಸೆ...' ಹಾಡಿನ ಬಗ್ಗೆ, ಆ ಸಾಹಿತ್ಯವನ್ನು ರಚಿಸಿರುವ ಪ್ರೇಮ್ ಸೇರಿದಂತೆ ವಿವಿಧ ಕ್ಷೇತ್ರಗಳಿಗೆ ಸೇರಿದವರು ವ್ಯಕ್ತಪಡಿಸಿರುವ ಅಭಿಪ್ರಾಯ ಇಲ್ಲಿದೆ.

ಸರ್ಸೆ ಸರ್ಸೆ... ಏನಿದು ವರಸೆ?

ಶೃಂಗಾರಕ್ಕೂ ಅಸಭ್ಯಕ್ಕೂ ಅಂತರವಿದೆ

ಸರ್ಸೆ... ಹಾಡಿನ ಸಾಹಿತ್ಯವನ್ನು ಯಾರು ಬರೆದಿದ್ದಾರೆ ಎಂಬುದಕ್ಕಿಂತಲೂ ಸಾಹಿತ್ಯದ ಹೆಸರಿನಲ್ಲಿ ಮಹಿಳೆಯನ್ನು ಹೇಗೆ ಭೋಗದ ವಸ್ತುವನ್ನಾಗಿ ಅತ್ಯಂತ ಕೆಳಮಟ್ಟದಲ್ಲಿ ಚಿತ್ರಿಸಲಾಗುತ್ತಿದೆ ಎಂಬುದೇ ಆತಂಕಕಾರಿ ವಿಚಾರ. ಪುರುಷರನ್ನು ಉಲ್ಲೇಖಿಸಿ ಇಂಥದ್ದೇ ಹಾಡುಗಳನ್ನು ಬರೆಯುತ್ತಾರೆಯೇ?

ಸ್ತ್ರೀಯರ ವಿಚಾರದಲ್ಲಿ ದಿನದಿಂದ ದಿನಕ್ಕೆ ಹದ್ದು ಮೀರುತ್ತಲೇ ಇರುವುದು ವಿಷಾದನೀಯ. ಅಸಭ್ಯದ ಪರಮಾವಧಿಯಂತಿರುವ ಇಂತಹ ಸಾಹಿತ್ಯವನ್ನು ಬರೆಯುವ ಅವಶ್ಯಕತೆಯಾದರೂ ಏನಿದೆ? ಪ್ರೇಮ್ ಅವರ ವಿಚಾರದಲ್ಲಂತೂ ಇದು ಮೊದಲೇನಲ್ಲ. ಈ ಹಿಂದೆಯೂ ರಂಡೆ-ಮುಂಡೆ ಅನ್ನುವಂಥ ಪದಬಳಕೆ ಮಾಡಿ, ಅದು ಜಾನಪದ ಸೊಗಡು ಎನ್ನುವ ತೇಪೆ ಹಚ್ಚಿದ್ದರು. ಒಂದೆಡೆ, ಹೆಣ್ಣುಮಕ್ಕಳನ್ನು ಇಂತಿಷ್ಟೇ ಎಂದು ಸೀಮಿತಗೊಳಿಸಿ ನೋಡುವ ಪೂರ್ವಗ್ರಹಪೀಡಿತ ಮನಃಸ್ಥಿತಿಯನ್ನು ತೊಡೆದುಹಾಕುವ ಪ್ರಯತ್ನಗಳು ನಡೆಯುತ್ತಿದ್ದರೆ, ಇನ್ನೊಂದೆಡೆ, ಇತ್ತ ಮಕ್ಕಳ ಬಾಯಲ್ಲೂ ಇಂಥ ಅಸಭ್ಯದ ಮಾತುಗಳು ಹಾಡಿನ ರೂಪದಲ್ಲಿ ಬರುವಂತೆ ಮಾಡುವ ಪ್ರಯತ್ನ ನಡೆಯುತ್ತಿರುವುದು ನಿಜಕ್ಕೂ ಕಳವಳಕಾರಿ.

ಇನ್ನು, ಈ ಹಾಡಿಗೆ ನೃತ್ಯ ಮಾಡಿದ ನೋರಾ ಫತೇಹಿ ಅವರನ್ನಷ್ಟೇ ಕೆಲವರು ದೂಷಿಸುತ್ತಿದ್ದಾರೆ. ಆದರೆ, ಸಾಹಿತ್ಯ ಬರೆದವರು, ಹಾಡಿದವರು ಎಲ್ಲರೂ ಇದಕ್ಕೆ ಹೊಣೆಗಾರರೇ ಅಲ್ಲವೇ? ಕನ್ನಡದಲ್ಲಿ ಒಳ್ಳೆಯ ಸಿನಿಮಾಗಳಿಲ್ಲ, ಅಭಿರುಚಿ ಇಲ್ಲ, ಒಳ್ಳೆಯ ಗುಣಮಟ್ಟ ಇಲ್ಲ ಎನ್ನುವಂಥ ಅಭಿಪ್ರಾಯಗಳು ಕೇಳಿಬರುತ್ತಿರುವುದರ ನಡುವೆಯೇ ಚಿತ್ರರಂಗವನ್ನು ಮತ್ತಷ್ಟು ಕೀಳುಮಟ್ಟಕ್ಕೆ ಇಳಿಸುವ ಪ್ರಯತ್ನ ಸಹ್ಯವಲ್ಲ. ಹೊರರಾಜ್ಯದವರು ಕೂಡ ಈ ಬಗ್ಗೆ ಟ್ವೀಟ್ ಮಾಡುತ್ತಿದ್ದಾರೆ, ಲೇವಡಿ ಮಾಡುತ್ತಿದ್ದಾರೆ. ಇದು ನಿಜಕ್ಕೂ ಕನ್ನಡ ಚಿತ್ರರಂಗವನ್ನು ಎಲ್ಲರ ಮುಂದೆ ಮುಜುಗರಕ್ಕೀಡು ಮಾಡುವ ಬೆಳವಣಿಗೆಯಾಗಿದೆ.

ಶೃಂಗಾರಕ್ಕೂ ಅಸಭ್ಯತೆಗೂ ನಡುವೆ ಒಂದು ಅಂತರವಿದೆ. ಈ ಹಿಂದೆ ಹಲವರು ಬರೆದ ಸಾಹಿತ್ಯದಲ್ಲಿ ಇಂಥ ವಿಚಾರ ಇರಲಿಲ್ಲವೇ ಎಂದರೆ, ಖಂಡಿತ ಇತ್ತು, ಆದರೆ ಅಸಭ್ಯತೆ ಇರಲಿಲ್ಲ; ಅದನ್ನು ಗ್ರಹಿಸುವುದು ಬಹಳ ಮುಖ್ಯ. ತಮ್ಮ ತಪ್ಪನ್ನು ಅರಿತುಕೊಳ್ಳುವ ಬದಲು ತಾವು ಬಾಟಲಿ ಮತ್ತು ಉಪ್ಪಿನಕಾಯಿ ಬಗ್ಗೆ ಮಾತ್ರ ಮಾತನಾಡಿದ್ದು ಎಂದು ಪ್ರೇಮ್ ಮಾಧ್ಯಮಗೋಷ್ಠಿಯಲ್ಲಿ ಹೇಳಿರುವುದು, ಅವರು ತಮ್ಮ ಬಗ್ಗೆ ಇರುವ ಗೌರವವನ್ನೂ ಕಳೆದುಕೊಳ್ಳುವಂತಹ ಮಾತು. ಇಂಥ ವಿಚಾರಗಳನ್ನೂ ಸಮರ್ಥಿಸಿಕೊಳ್ಳುತ್ತೇವೆ ಎಂದಾದರೆ, ಸಮಾಜ ಯಾವ ಹಂತಕ್ಕೆ ತಲುಪುತ್ತಿದೆ ಎಂಬುದು ಯೋಚಿಸಲೇಬೇಕಾದ ಸಂಗತಿ.

ಸಮುದ್ಯತಾ ಕಂಜರ್ಪಣೆ, ಕವಯಿತ್ರಿ

ಹಿರಿಯ ನಟರ ಮೌನ ಸರಿಯಲ್ಲ

'ಸೆರಗು ಸರ್ಸೆ' ಹಾಡಿಗೆ ನೃತ್ಯ ಮಾಡಿರುವ ನೋರಾ ಫತೇಹಿ ಅವರಂತಹ ನಟಿಯರ ವಿರುದ್ಧ ಟೀಕೆಗಳು ಕೇಳಿಬರುತ್ತವೆಯೇ ವಿನಾ ಸಂಜಯ್ ದತ್ ಅವರಂತಹ ಹಿರಿಯ ನಟರು ಇಂತಹ ಹಾಡುಗಳಲ್ಲಿ ಕಾಣಿಸಿಕೊಳ್ಳುವಾಗ ಸಮಾಜ ಏಕೆ ಮೌನ ತಾಳುತ್ತದೆ ಎಂಬುದು ಮುಖ್ಯ ಪ್ರಶ್ನೆಯಾಗಿದೆ. ಒಬ್ಬ ಹಿರಿಯ ನಟರಾಗಿ ಅವರಿಗೆ ಇಂತಹ ದೃಶ್ಯಗಳನ್ನು ನಿರಾಕರಿಸುವ ಅವಕಾಶವಿದ್ದರೂ, ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿರುವುದು ಸರಿಯಲ್ಲ.

ರಶ್ಮಿಕಾ ಮಂದಣ್ಣ ಅವರ ಉದಾಹರಣೆಯನ್ನೇ ತೆಗೆದುಕೊಳ್ಳುವುದಾದರೆ, ದೊಡ್ಡ ನಿರ್ದೇಶಕರ ಸಿನಿಮಾಗಳಲ್ಲಿ ನಟಿಸುವಾಗ ನಟಿಯರಿಗೆ ಕೆಲವು ಹಾಡುಗಳಲ್ಲಿ ನಟಿಸಲು ಇಷ್ಟವಿಲ್ಲದಿದ್ದರೂ ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾದ ಪರಿಸ್ಥಿತಿ ಇರುತ್ತದೆ. ಇದು ಚಿತ್ರರಂಗದಲ್ಲಿ ನಟಿಯರಿಗಿರುವ ಸೃಜನಶೀಲ ಸ್ವಾತಂತ್ರ್ಯದ ಕೊರತೆಯನ್ನು ಎತ್ತಿ ತೋರಿಸುತ್ತದೆ. ಪ್ರತಿರೋಧ ಇಲ್ಲದಿದ್ದರೆ ಅಶ್ಲೀಲತೆಯು ಮಿತಿ ಮೀರುತ್ತದೆ ಎಂಬುದನ್ನೂ ನಾವು ಇಂತಹ ಸನ್ನಿವೇಶಗಳಲ್ಲಿ ಗಮನಿಸಬಹುದು.

ಹಿಂದೆ ಹಾಡುಗಳಲ್ಲಿ ಸಾಹಿತ್ಯ ಮತ್ತು ಕಲೆಯ ಮಿಶ್ರಣ ಇರುತ್ತಿತ್ತು, ಆದರೆ ಈಗ ಅದು ಬರೀ ಅಶ್ಲೀಲತೆಗೆ ಸೀಮಿತವಾಗುತ್ತಿದೆ. ಸಾರ್ವಜನಿಕ ವಲಯದಿಂದ ತೀವ್ರ ಪ್ರತಿರೋಧ ವ್ಯಕ್ತವಾದ ಕಾರಣದಿಂದಲೇ ಅಂತಹ ಹಾಡುಗಳನ್ನು ಯೂಟ್ಯೂಬ್‌ನಿಂದ ತೆಗೆದುಹಾಕಲು ಸಾಧ್ಯವಾಯಿತು ಮತ್ತು ಸಂಬಂಧಪಟ್ಟವರು ತಮ್ಮ ತಪ್ಪನ್ನು ಒಪ್ಪಿಕೊಳ್ಳುವಂತಾಯಿತು. ಡಿಜಿಟಲ್ ಯುಗದಲ್ಲಿ ಮಕ್ಕಳಿಗೆ ಮೊಬೈಲ್ ಅನಿವಾರ್ಯ ಆಗಿರುವುದರಿಂದ, ಅವರು ಏನು ವೀಕ್ಷಿಸುತ್ತಿದ್ದಾರೆ ಎಂಬುದನ್ನು ನಿಯಂತ್ರಿಸುವುದು ಕಷ್ಟ. ಸಾರ್ವಜನಿಕವಾಗಿ ಇಂತಹ ಅಶ್ಲೀಲ ಹಾಡುಗಳು ಪ್ರಸಾರವಾದಾಗ ಮಕ್ಕಳ ಮೇಲೆ ಆಗುವ ಪರಿಣಾಮವನ್ನು ತಡೆಯಲು ಸಾಧ್ಯವಿಲ್ಲ. ಆದ್ದರಿಂದ, ಚಿತ್ರರಂಗವು ಕೇವಲ ವ್ಯಾವಹಾರಿಕ ದೃಷ್ಟಿಕೋನವನ್ನು ಬಿಟ್ಟು ಸಾಮಾಜಿಕ ಹೊಣೆಗಾರಿಕೆಯನ್ನು ಮೆರೆಯಬೇಕಿದೆ.

ಸಂಧ್ಯಾರಾಣಿ, ಕಾದಂಬರಿಗಾರ್ತಿ, ಸಿನಿಮಾ ವಿಮರ್ಶಕಿ

ನಿರೂಪಣೆ: ಅಶ್ವಿನಿ ಸಿ., ವಿನಾಯಕ ಕೆ.ಎಸ್., ಕೀರ್ತಿಕುಮಾರಿ ಎಂ., ವೈದೇಹಿ ಬಾಟಿ

ಮರು ಬಿಡುಗಡೆ ಮಾಡಲಿದ್ದೇವೆ

ಬಹಳಷ್ಟು ವಿಷಯಗಳ ಬಗ್ಗೆ ಸಿನಿಮಾ ಹಾಡು ಬರೆದಿರುವೆ. ತಾಯಿ, ಭೂಮಿಯಿಂದ ಹಿಡಿದು ಸಾಕಷ್ಟು ವಿಚಾರಗಳು ನನ್ನ ಸಾಹಿತ್ಯದಲ್ಲಿ ಬಳಕೆಯಾಗಿವೆ. ಹೆಣ್ಣನ್ನು ಗೌರವಿಸುವ ಸಾಲುಗಳನ್ನು ಬರೆದಿರುವೆ. ಜನರು ಪ್ರೀತಿ ಕೊಟ್ಟು ಆ ಹಾಡುಗಳನ್ನು ಗೆಲ್ಲಿಸಿದ್ದಾರೆ. ಅವರಿಗೆ ನಾನು ಎಂದಿಗೂ ಋಣಿ. 'ಸೆರಗ ಸರ್ಸೆ' ಹಾಡನ್ನು ನನ್ನ ದೃಷ್ಟಿಕೋನದಲ್ಲಿ ಬರೆದೆ. ಬಾಟಲಿ, ಉಪ್ಪಿನಕಾಯಿಯನ್ನು ರೂಪಕಗಳಾಗಿ ಇಟ್ಟುಕೊಂಡು ಬರೆದ ಸಾಹಿತ್ಯವಿದು. ಬೇರೆಯವರನ್ನು ನೋಯಿಸಲು ಅಥವಾ ಅಶ್ಲೀಲ ಎಂಬಂತೆ ಬರೆದಿಲ್ಲ. ಆದಾಗ್ಯೂ ಬಹಳಷ್ಟು ಜನ ಈ ಹಾಡಿನಿಂದ ನೊಂದುಕೊಂಡಿದ್ದಾರೆ. ಸಾಕಷ್ಟು ಜನ ಇದನ್ನು ಯಾವ ದಿಕ್ಕಿನಲ್ಲಿ ಅರ್ಥ ಮಾಡಿಕೊಂಡಿದ್ದಾರೋ ಗೊತ್ತಿಲ್ಲ. ನನ್ನ ಹೃದಯಕ್ಕೆ ಹತ್ತಿರವಾದವರಿಗೂ ನೋವಾಗಿರಬಹುದು. ಹೀಗಾಗಿ, ಹಾಡಿನ ಸಾಹಿತ್ಯವನ್ನು ಪರಿಷ್ಕರಿಸಿ ಹಾಡನ್ನು ಮರು ಬಿಡುಗಡೆ ಮಾಡಲು ನಿರ್ಧರಿಸಿದ್ದೇವೆ.

ಸಾಹಿತ್ಯ ರಚಿಸುವವರು ಸನ್ನಿವೇಶಗಳಿಗೆ ತಕ್ಕಂತೆ ಎಲ್ಲ ರೀತಿಯಲ್ಲಿಯೂ ಬರೆಯಬೇಕು. ಹಾಗಂತ ಕೀಳು ದೃಷ್ಟಿಕೋನದಲ್ಲಿ, ಇನ್ನೊಬ್ಬರನ್ನು ಗೇಲಿ ಮಾಡಿ ಬರೆಯಬಾರದು. ಬಾಟಲಿಯನ್ನು ಮೇಲೆತ್ತಿ, ತೊಟ್ಟಿಕ್ಕದಂತೆ ಕೆಳಗಿಳಿಸಿ ಎಂಬ ಅರ್ಥದಲ್ಲಿ ಬರೆದಿದ್ದೆ. ಆದರೆ ಸಾಮಾಜಿಕ ಮಾಧ್ಯಮಗಳಲ್ಲಿ ಇದನ್ನು ತಪ್ಪಾಗಿ ಬಿಂಬಿಸಲಾಯಿತು. ನನ್ನ ಈ ಸಾಲುಗಳಿಂದ ಯಾರಿಗಾದರೂ ನೋವಾಗಿದ್ದರೆ ಕ್ಷಮೆ ಕೇಳುತ್ತೇನೆ. ಬೇರೆಯವರನ್ನು ನೋಯಿಸಿ, ಅದರ ಮೇಲೆ ಕೋಟೆ ಕಟ್ಟುವ, ಅದರಿಂದ ಜೀವನ ಮಾಡುವ ಅವಶ್ಯಕತೆ ನನಗಿಲ್ಲ.



ನಾವು ಲಿರಿಕಲ್ ಸಾಂಗ್ ಅನ್ನು ಬಿಡುಗಡೆ ಮಾಡಿದ್ದೆವು. ಇದರ ದೃಶ್ಯರೂಪ ನೋಡಿದಾಗ ಹಾಡಿನ ಅರ್ಥ ತಿಳಿಯುತ್ತಿತ್ತು. ಅದಕ್ಕೂ ಮುಂಚೆಯೇ ವಿವಾದ ಎಬ್ಬಿಸಿದ್ದು ಅವರವರ ನೋಡುವ, ಕೇಳುವ ದೃಷ್ಟಿಕೋನವನ್ನು ಅವಲಂಬಿಸಿತ್ತು ಎಂದಷ್ಟೇ ಹೇಳಬಲ್ಲೆ. ಇದು ಮದ್ಯ ಮತ್ತು ಉಪ್ಪಿನಕಾಯಿ ಸಂಬಂಧಿತ ಹಾಡು. ಸಿನಿಮಾದಲ್ಲಿ ನೋರಾ ಫತೇಹಿ ತಲೆಯ ಮೇಲೆ ಮದ್ಯದ ಬಾಟಲಿ ಇಟ್ಟುಕೊಂಡು ನೃತ್ಯ ಮಾಡುತ್ತಾರೆ. ಅದಕ್ಕೆ ತಕ್ಕಂತೆ ಸಾಹಿತ್ಯದ ಸಾಲುಗಳಿವೆ. ಆ ಸನ್ನಿವೇಶ ನೋಡಿದಾಗ, ಈ ಸಾಲುಗಳಲ್ಲಿ ಯಾವುದೇ ದ್ವಂದ್ವ ಅರ್ಥಗಳಿಲ್ಲ ಎಂಬುದು ಗೊತ್ತಾಗುತ್ತದೆ. ಹಾಡಿನ ಸಾಹಿತ್ಯ ಗೊತ್ತಿಲ್ಲದೆ ನೋರಾ ನೃತ್ಯ ಮಾಡಿದ್ದರಾ? ತಂಡದ ಸದಸ್ಯೆಯಾದ ಅವರು, ವಿವಾದದ ಬಳಿಕ ಮಾತನಾಡಿದ್ದು ಬೇಸರ ಮೂಡಿಸಿತು. ಅವರು ಆ ರೀತಿ ಮಾತನಾಡಬಾರದಿತ್ತು. ಅದೇನೇ ಆಗಿರಲಿ ನಾವೀಗ ಸಾಹಿತ್ಯವನ್ನು ಬದಲಿಸಿ ಈ ಹಾಡು ಮರುಬಿಡುಗಡೆ ಮಾಡುತ್ತೇವೆ.

ಪ್ರೇಮ್, 'ಕೆ.ಡಿ' ಚಿತ್ರದ ನಿರ್ದೇಶಕ

ಪ್ರತಿರೋಧ ಒಳ್ಳೆಯ ಬೆಳವಣಿಗೆ

ಡಾ.ರಾಜ್‌ಕುಮಾರ್ ಅವರ 'ಬಂಗಾರದ ಮನುಷ್ಯ' ಸಿನಿಮಾವನ್ನು ನೋಡಿ ಎಷ್ಟೋ ಜನ ಕೃಷಿಯತ್ತ ಮುಖ ಮಾಡಿದ್ದರು, 'ಒಡಹುಟ್ಟಿದವರು' ಸಿನಿಮಾವನ್ನು ನೋಡಿ ಹಲವರು ಅವಿಭಕ್ತ ಕುಟುಂಬಕ್ಕೆ ಮರಳಿದ್ದರು. ಪುನೀತ್ ರಾಜ್‌ಕುಮಾರ್ ಅವರ 'ಪೃಥ್ವಿ' ಸಿನಿಮಾ ಸಹ ಬಹಳಷ್ಟು ಜನರಿಗೆ ಸ್ಫೂರ್ತಿಯಾಗಿತ್ತು. ಹೀಗೆ ಕನ್ನಡ ಅಥವಾ ಯಾವುದೇ ಚಿತ್ರರಂಗವು ಸಮಾಜದ ಮೇಲೆ ಬೀರುವ ಪ್ರಭಾವ ಅಗಾಧ.

ನಿರ್ದೇಶಕ ಪ್ರೇಮ್ ಕೂಡ ಈ ಹಿಂದೆ ಒಳ್ಳೆಒಳ್ಳೆಯ ಸಾಹಿತ್ಯವಿರುವ ಹಾಡುಗಳನ್ನು ಬರೆದಿದ್ದಾರೆ. ಆದರೆ 'ಸರ್ಸೆ ಸರ್ಸೆ' ಹಾಡು ಸಭ್ಯತೆಯ ಎಲ್ಲೆಯನ್ನು ಮೀರಿದೆ. ಇಂತಹ ಸಾಹಿತ್ಯವನ್ನು ಬರೆಯುವ ಮುನ್ನ ಅವರು ಸಮಾಜದ ಬಗ್ಗೆ ಚಿಂತನೆ ಮಾಡಬೇಕಿತ್ತು. ಇದೊಂದು ಮಾಸ್ ಸಿನಿಮಾ, ಜನ ಕೇಳಿ ಮರೆತು ಬಿಡುತ್ತಾರೆ ಎಂದು ಪ್ರೇಮ್ ಹೇಳಿದ್ದಾರೆ. ಆದರೆ ಜನ ಕೆಲವು ಹಾಡುಗಳನ್ನು ಮರೆತುಬಿಡುತ್ತಾರೆ ಅನ್ನುವುದು ಎಷ್ಟು ಸರಿಯೋ ಇನ್ನು ಕೆಲವು ಹಾಡುಗಳು ಜನರ ಮೇಲೆ ಅಷ್ಟೊಂದು ಪ್ರಭಾವ ಬೀರುತ್ತವೆ, ಜನ ಅವುಗಳನ್ನು ಅನುಕರಿಸುತ್ತಾ ಇರುತ್ತಾರೆ ಅನ್ನುವುದೂ ಅಷ್ಟೇ ಸತ್ಯ. ಇದೊಂದು ಎಚ್ಚರಿಕೆಯ ಗಂಟೆ. ಸಿನಿಮಾಗಳು ಸಮಾಜದ ಮನೋಭಾವವನ್ನು ರೂಪಿಸುತ್ತವೆ. ಇಂತಹ ಸಾಹಿತ್ಯವನ್ನು ಮಹಿಳೆಯರು ಮತ್ತು ಸಮಾಜದ ಗೌರವವನ್ನು ಕಳೆಯುವ ಪ್ರಯತ್ನ ಎಂದೇ ಪರಿಭಾವಿಸಬೇಕಾಗುತ್ತದೆ.

ಕಲೆಗೆ ಸ್ವಾತಂತ್ರ್ಯ ಬೇಕು ಎನ್ನುವುದನ್ನು ಒಪ್ಪುತ್ತೇನೆ. ಆದರೆ ಸಾಹಿತ್ಯ ರಚನಾಕಾರರಿಗೆ ಸಾಮಾಜಿಕ ಕಳಕಳಿಯೂ ಇರಬೇಕಾಗುತ್ತದೆ. ಸಾಹಿತ್ಯಿಕವಾಗಿ ಶ್ರೀಮಂತವಾಗಿರುವ ಭಾರತದಲ್ಲಿ ಮುಂದಿನ ಪೀಳಿಗೆಗೆ ಏನನ್ನು ದಾಟಿಸುತ್ತೇವೆ ಎಂಬ ಅರಿವಿರಬೇಕಾಗುತ್ತದೆ.

ಜನರು 'ಸರ್ಸೆ ಸರ್ಸೆ' ಹಾಡಿಗೆ ಸಾಮಾಜಿಕ ಮಾಧ್ಯಮಗಳ ಮೂಲಕ ತೀವ್ರ ಪ್ರತಿರೋಧ ವ್ಯಕ್ತಪಡಿಸಿದ್ದಾರೆ. ಈ ಮೂಲಕ ಮತ್ತೆ ಇಂತಹ ಅಶ್ಲೀಲ ಸಾಹಿತ್ಯ ಬರೆಯದಂತೆ ಎಚ್ಚರಿಸಿದ್ದಾರೆ. ಇದು ಬಹಳ ಒಳ್ಳೆಯ ಸಂಗತಿ.

ಮಂಜುಳಾ ಜಿ.ಎಚ್., ವಿಮರ್ಶಕಿ, ಕಥೆಗಾರ್ತಿ

ಕಾನೂನಿನ ಅಡಿಯಲ್ಲಿ ಅಪರಾಧ!

ಮಹಿಳೆಯರ ಘನತೆಗೆ ಕುಂದು ತರುವ ಮತ್ತು ಅಶ್ಲೀಲ ಸಾಹಿತ್ಯವಿರುವ ಹಾಡುಗಳು ಐಪಿಸಿ ಸೆಕ್ಷನ್ 354ರ ಅಡಿಯಲ್ಲಿ ಅಪರಾಧದ ವ್ಯಾಪ್ತಿಗೆ ಬರುತ್ತವೆ. ಹಿಂದಿನ 25-30 ವರ್ಷಗಳಲ್ಲಿ ಕನ್ನಡ ಚಿತ್ರರಂಗದ ಹಾಡುಗಳಲ್ಲಿದ್ದ ಕಲಾತ್ಮಕತೆ ಇಂದು 'ಪೋರ್ನ್' ಮಟ್ಟಕ್ಕೆ ಕುಸಿದಿರುವುದು ಆತಂಕಕಾರಿ ವಿಷಯ. ಬರೀ ಹಣ ಮತ್ತು ಪ್ರಚಾರಕ್ಕಾಗಿ ನಕಾರಾತ್ಮಕ ಅಂಶಗಳನ್ನು ವೈಭವೀಕರಿಸುವುದು ಸರಿಯಲ್ಲ. ಇಂತಹ ಹಾಡುಗಳು ಸಮಾಜದಲ್ಲಿ ಮುಕ್ತವಾಗಿ ಲಭ್ಯವಿರುವುದರಿಂದ ಮಕ್ಕಳ ಮನಸ್ಸಿನ ಮೇಲೆ ಗಂಭೀರ ಪರಿಣಾಮ ಬೀರುತ್ತಿವೆ. ಸಿನಿಮಾ ಸಾಹಿತ್ಯದ ಈ ಬದಲಾವಣೆಯ ಕುರಿತು ಸಾರ್ವಜನಿಕ ಚರ್ಚೆಯ ಅಗತ್ಯವಿದೆ.

ಸ್ಯಾಟಲೈಟ್ ಟಿ.ವಿ, ಇಂಟರ್‌ನೆಟ್ ಮತ್ತು ಸ್ಮಾರ್ಟ್‌ಫೋನ್‌ಗಳ ಬಳಕೆಯಿಂದ ಅಶ್ಲೀಲ ಕಂಟೆಂಟ್‌ಗಳು ಸುಲಭವಾಗಿ ಲಭ್ಯವಾಗುತ್ತಿವೆ. ಇದು ಸಮಾಜದ ಸ್ವಾಸ್ಥ್ಯವನ್ನು ಕೆಡಿಸುತ್ತಿದೆ. ಶಿಕ್ಷಣಕ್ಕಾಗಿ ಮಕ್ಕಳಿಗೆ ಮೊಬೈಲ್ ನೀಡಲಾಗುತ್ತಿದೆಯಾದರೂ, ಅವರು ಅದರಲ್ಲಿ ಏನನ್ನು ವೀಕ್ಷಿಸುತ್ತಿದ್ದಾರೆ ಎಂಬ ಬಗ್ಗೆ ಕಟ್ಟುನಿಟ್ಟಿನ ನಿಗಾ ಇಡುವುದು ಪೋಷಕರಿಗೆ ಸವಾಲಾಗಿದೆ. ಚೈಲ್ಡ್ ಲಾಕ್ ವ್ಯವಸ್ಥೆಯಿದ್ದರೂ ಅದನ್ನು ಮೀರಿ ಮಕ್ಕಳು ಅಶ್ಲೀಲ ವಿಷಯಗಳಿಗೆ ತೆರೆದುಕೊಳ್ಳುತ್ತಿದ್ದಾರೆ.

ಸಿನಿಮಾ ಹಾಡುಗಳು ಸಾರ್ವಜನಿಕವಾಗಿ ಪ್ರಸಾರವಾಗುವುದರಿಂದ, ಅವುಗಳನ್ನು ತಡೆಯುವುದು ಅಸಾಧ್ಯವಾಗಿದೆ. ಇದು ಮಕ್ಕಳ ಮನಸ್ಸಿನ ಮೇಲೆ ಅಳಿಸಲಾಗದ ಪ್ರಭಾವ ಬೀರುತ್ತಿದೆ. ಅಲ್ಲದೆ, ಒಟಿಟಿ ವೇದಿಕೆಗಳಿಗೆ ಸೆನ್ಸಾರ್ ಮಂಡಳಿಯ ನಿಯಂತ್ರಣ ಇಲ್ಲದಿರುವುದು ಅಶ್ಲೀಲ ಸರಕು ಹೆಚ್ಚಲು ಕಾರಣವಾಗಿದೆ. ಜನಪ್ರಿಯ ನಟರು ಇಂತಹ ದೃಶ್ಯಗಳಲ್ಲಿ ಕಾಣಿಸಿಕೊಳ್ಳುತ್ತಿರುವುದು ಕೂಡ ಆತಂಕಕಾರಿ ಬೆಳವಣಿಗೆ. ಈ ರೀತಿಯ ಬದಲಾವಣೆಗಳು ಮಹಿಳೆಯರ ಮೇಲಿನ ದೌರ್ಜನ್ಯ, ಅತ್ಯಾಚಾರ ಮತ್ತು ಚೇಷ್ಟೆಯಂತಹ ಸಮಾಜವಿರೋಧಿ ಕೃತ್ಯಗಳಿಗೆ ಪ್ರೇರಣೆ ನೀಡುತ್ತಿವೆ.

ಪ್ರತಿಭಾ ನಂದಕುಮಾರ್
ಕವಯಿತ್ರಿ, ಪತ್ರಕರ್ತೆ

ರಸಾಸ್ವಾದ

ವರ್ಷತೊಡಕು ಮಾಡ್ತೀರ ತಾನೆ?

• ಎಂ.ಎಸ್.ಧರ್ಮೇಂದ್ರ ದೊಡ್ಡಮಗ್ಗೆ

ಯುಗಾದಿಯು ಹೊಸ ವರುಷದ ಹೊಸ ಹರುಷದೊಂದಿಗೆ ಬರುವ ಮೊದಲ ಹಬ್ಬ. ಊರು ಬಿಟ್ಟು ಕೆಲಸಕ್ಕೆ ಬೇರೆಡೆ ಹೋಗಿರುವವರೆಲ್ಲಾ ಹಬ್ಬಕ್ಕೆ ಊರಿಗೆ ಬರುತ್ತಾರೆ. ಮಾರನೆಯ ದಿನ ವರ್ಷತೊಡಕಿನ ನೆಪದಲ್ಲಿ ಗುಂಡು–ತುಂಡಿನೊಂದಿಗೆ, ಜೂಜು, ಮೋಜು–ಮಸ್ತಿಯಲ್ಲಿ ತೇಲುತ್ತಾರೆ. ವರ್ಷದ ಮೊದಲ ದಿನ ಸಂತೋಷವಾಗಿ ಇದ್ದರೆ ವರ್ಷಪೂರ್ತಿ ಸಂತೋಷದಿಂದ ಇರುತ್ತೇವೆ ಎಂಬುದು ಹಳ್ಳಿಗರ ನಂಬಿಕೆ. ವರ್ಷತೊಡಕನ್ನು ವರ್ಷತೊಡಗು, ಹೊಸತೊಡಕು, ವರ್ಷತುಡುಕು ಎಂದೆಲ್ಲ ಒಂದೊಂದು ಪ್ರಾಂತ್ಯದಲ್ಲಿ ಒಂದೊಂದು ರೀತಿಯಲ್ಲಿ ಕರೆಯುತ್ತಾರೆ.

ನಾನು ಚಿಕ್ಕವನಾಗಿದ್ದಾಗ ಗುಡ್ಡೆ ಬಾಡಿಗಾಗಿ ಬಕೆಟ್/ಟಿಫಿನ್ ಕ್ಯಾರಿಯರ್ ಹಿಡಿದುಕೊಂಡು ತಂದೆಯೊಡನೆ ಹೋಗುತ್ತಿದ್ದದ್ದು ನೆನಪಿದೆ. ಹಳ್ಳಿಗಳಲ್ಲಿ ಆಗ ಮಾಂಸದ ಅಂಗಡಿಗಳು ಇರುತ್ತಿರಲಿಲ್ಲ. ಹಳ್ಳಿಗರು ಒಟ್ಟಿಗೆ ಸೇರಿ ದುಡ್ಡು ಹಾಕಿ ಕುರಿ, ಮೇಕೆ ಅಥವಾ ಹಂದಿಯನ್ನು ಸಂತೆಯಿಂದ ಖರೀದಿಸಿ ತಂದು, ಬೆಳಗಿನ ಜಾವ ಕತ್ತರಿಸಿ, ಕಣ್ಣಿನ ಅಂದಾಜಿನಲ್ಲಿ, ಪ್ರಾಣಿಯ ತೂಕದ ಅನುಸಾರ ಪಾಲು ಹಾಕುತ್ತಿದ್ದರು. ಈಗಲೂ ಕೆಲವೆಡೆ ಗುಡ್ಡೆ ಮಾಂಸ ಖರೀದಿಯ ಪದ್ಧತಿ ಇದೆ. ಇಂತಲ್ಲಿ ಪ್ರತಿ ಗುಡ್ಡೆಗೂ ಮಾಂಸದ ಎಲ್ಲಾ ಭಾಗಗಳು, ಅಂದರೆ ತಲೆಭಾಗ, ಕೀಲುಮೂಳೆ, ಯಕೃತ್ತು, ಹೃದಯ, ತೊಡೆಮಾಂಸ, ಪಕ್ಕೆಲುಬು ಇತ್ಯಾದಿಗಳನ್ನು ತುಂಡುಗಳಾಗಿ ಕತ್ತರಿಸಿ ಸೇರಿಸುತ್ತಾರೆ. ಆದ್ದರಿಂದಲೇ ಗುಡ್ಡೆಮಾಂಸದ ಖಾದ್ಯಗಳು ಬಲು ರುಚಿ. ಅಂತಹ ಮಾಂಸದಿಂದ ತಯಾರಿಸಬಹುದಾದ ಕೆಲವು ಖಾದ್ಯಗಳ ರೆಸಿಪಿ ಇಲ್ಲಿದೆ:

ಕೋಳಿ ಬೆರಕೆ ಮಾಂಸದ ಗೊಜ್ಜು

ಬೇಕಾಗುವ ಸಾಮಗ್ರಿ: ಕೋಳಿ ಬೆರಕೆ ಮಾಂಸ (ಜಠರ/ಗಿಝರ್ಡ್, ಲಿವರ್, ಎಳೆ ಮೊಟ್ಟೆ, ಮೊಟ್ಟೆ ಚೀಲ) 1 ಕೆ.ಜಿ, ಕಡಲೆಕಾಳು 100 ಗ್ರಾಂ, ಆಲೂಗಡ್ಡೆ 100 ಗ್ರಾಂ, ಶುಂಠಿ 2 ಇಂಚು, ಬೆಳ್ಳುಳ್ಳಿ 1 ಉಂಡೆ, ಕೊತ್ತಂಬರಿ ಸೊಪ್ಪು, ಪುದೀನಾ ಸೊಪ್ಪು ಸ್ವಲ್ಪ, ಈರುಳ್ಳಿ 2, ಟೊಮೆಟೊ 1, ಗರಂ ಮಸಾಲೆ 1 ಚಮಚ, ದನಿಯಾ ಪುಡಿ 2 ಚಮಚ, ಮೆಣಸಿನಕಾಯಿ ಪುಡಿ 2 ಚಮಚ, ಅರಸಿನ ಸ್ವಲ್ಪ, ತೆಂಗಿನಕಾಯಿ 1/2 ಹೋಳು, ಎಣ್ಣೆ, ಸಾಸಿವೆ, ಉಪ್ಪು.

ತಯಾರಿಸುವ ವಿಧಾನ–ಈರುಳ್ಳಿ ಖಾರಕ್ಕೆ: ಈರುಳ್ಳಿ, ಕೊತ್ತಂಬರಿ, ಪುದೀನ, ಅರಸಿನ ಪುಡಿ, ಶುಂಠಿ-ಬೆಳ್ಳುಳ್ಳಿ ಹಾಕಿ ರುಬ್ಬಿಕೊಳ್ಳಿ.

ಕಾಯಿ ಮಸಾಲೆಗೆ: ಕಾಯಿ, ಗರಂ ಮಸಾಲೆ, ಟೊಮೆಟೊ, ದನಿಯಾ, ಮೆಣಸಿನಕಾಯಿ ಪುಡಿ ಹಾಕಿ ರುಬ್ಬಿಕೊಳ್ಳಿ.

ಕುಕ್ಕರ್‌ಗೆ ಎಣ್ಣೆ ಹಾಕಿ, ಕಾದ ನಂತರ ಸಾಸಿವೆ ಸಿಡಿಸಿ, ಚೆನ್ನಾಗಿ ತೊಳೆದ ಬೆರಕೆ ಮಾಂಸ, ಈರುಳ್ಳಿ ಖಾರ ಮತ್ತು ಉಪ್ಪನ್ನು ಹಾಕಿ ಸ್ವಲ್ಪ ಫ್ರೈ ಮಾಡಿ, 2 ವಿಷಲ್ ಕೂಗಿಸಿ. ಆರಿದ ನಂತರ ಮುಚ್ಚಳ ತೆಗೆದು, ನೆನೆಸಿದ ಕಡಲೆಕಾಳು, ಕತ್ತರಿಸಿದ ಆಲೂಗಡ್ಡೆ, ಕಾಯಿಮಸಾಲೆ ಹಾಕಿ ಚೆನ್ನಾಗಿ ಬೇಯಿಸಿ.

ಚಿಕನ್ ಗಿಝರ್ಡ್ ಡ್ರೈ

ಬೇಕಾಗುವ ಸಾಮಗ್ರಿ: ಚಿಕನ್ ಗಿಝರ್ಡ್ 1 ಕೆ.ಜಿ, ಈರುಳ್ಳಿ 3, ಟೊಮೆಟೊ 2, ಹಸಿಮೆಣಸಿನಕಾಯಿ 8, ಕರಿಬೇವು 1 ಕಡ್ಡಿ, ಕೊತ್ತಂಬರಿ ಸೊಪ್ಪು, ಪುದೀನ ಸೊಪ್ಪು ಸ್ವಲ್ಪ, ಶುಂಠಿ ಪೇಸ್ಟ್ 1 ಚಮಚ, ಬೆಳ್ಳುಳ್ಳಿ 3 ಉಂಡೆ, ದನಿಯಾ ಪುಡಿ 6 ಚಮಚ, ಮೆಣಸಿನಕಾಯಿ ಪುಡಿ 1 ಚಮಚ, ಅರಸಿನ ಸ್ವಲ್ಪ, ಪೆಪ್ಪರ್ ಪುಡಿ 1 ಚಮಚ, ಗರಂ ಮಸಾಲೆ ಸ್ವಲ್ಪ, ಎಣ್ಣೆ, ಸಾಸಿವೆ, ಉಪ್ಪು.

ಮಾಡುವುದು ಹೇಗೆ?: ಚೆನ್ನಾಗಿ ತೊಳೆದ ಚಿಕನ್ ಗಿಝರ್ಡ್, ಸ್ವಲ್ಪ ಅರಸಿನ, ಮೆಣಸಿನಕಾಯಿ ಪುಡಿ ಮತ್ತು ಉಪ್ಪನ್ನು ಬೆರೆಸಿ ಕುಕ್ಕರ್‌ನಲ್ಲಿ ಬೇಯಿಸಿಕೊಳ್ಳಿ. ದನಿಯಾ ಪುಡಿಯನ್ನು ಕಾವಲಿ ಮೇಲೆ ಸಣ್ಣ ಉರಿಯಲ್ಲಿ ಕಂದು ಬಣ್ಣ ಬರುವವರೆಗೂ ಹುರಿದಿಟ್ಟುಕೊಳ್ಳಿ. ತೆರೆದ ಪಾತ್ರೆಗೆ ಎಣ್ಣೆ ಹಾಕಿ, ಕಾದ ನಂತರ ಸಾಸಿವೆ ಸಿಡಿಸಿ ಕರಿಬೇವು, ಜಜ್ಜಿದ ಬೆಳ್ಳುಳ್ಳಿ, ಹಸಿಮೆಣಸಿನಕಾಯಿ ಮತ್ತು ಈರುಳ್ಳಿ ಹಾಕಿ ಫ್ರೈ ಮಾಡಿದ ಮೇಲೆ ಶುಂಠಿ ಪೇಸ್ಟ್, ಕತ್ತರಿಸಿದ ಟೊಮೆಟೊ, ಕೊತ್ತಂಬರಿ ಮತ್ತು ಪುದೀನ ಸೊಪ್ಪನ್ನು ಹಾಕಿ, ಸ್ವಲ್ಪ ಬೆಂದ ನಂತರ, ಬೇಯಿಸಿರುವ ಚಿಕನ್ ಗಿಝರ್ಡ್ ಮಾತ್ರ ಹಾಕಿದ ಮೇಲೆ (ಬೆಂದ ನೀರನ್ನು ಹಾಕಬೇಡಿ) ಉಪ್ಪು, ಪೆಪ್ಪರ್ ಪುಡಿ, ಗರಂ ಮಸಾಲೆ ಹಾಕಿ ಬೇಯಲು ಬಿಡಿ. ನಂತರ ಸಣ್ಣ ಉರಿ ಮಾಡಿ, ಹುರಿದ ದನಿಯಾ ಪುಡಿ ಹಾಕಿ ಚೆನ್ನಾಗಿ ತಿರುಗಿಸಿ ಸ್ವಲ್ಪ ಬೇಯಿಸಿ.

ಚಿಕನ್ ತವಾ ಫ್ರೈ

ಬೇಕಾಗುವ ಪದಾರ್ಥ: ಬೋನ್‌ಲೆಸ್ ಚಿಕನ್ 1/2 ಕೆ.ಜಿ, ಮೆಣಸಿನಕಾಯಿ ಪುಡಿ 2 ಚಮಚ, ಶುಂಠಿ-ಬೆಳ್ಳುಳ್ಳಿ ಪೇಸ್ಟ್ 1 ಚಮಚ, ಉಪ್ಪು, ಎಣ್ಣೆ, ಗರಂ ಮಸಾಲೆ ಸ್ವಲ್ಪ, ಅರಸಿನಪುಡಿ ಸ್ವಲ್ಪ, ನಿಂಬೆಹಣ್ಣು 1/2 ಹೋಳು.

ಮಾಡುವ ವಿಧಾನ: ಚೆನ್ನಾಗಿ ತೊಳೆದ ಚಿಕನ್‌ಗೆ ಮೆಣಸಿನಕಾಯಿ ಪುಡಿ, ನಿಂಬೆರಸ, ಗರಂ ಮಸಾಲೆ, ಅರಸಿನ, ಉಪ್ಪನ್ನು ಹಾಕಿ ಕಲಸಿ ಒಂದು ಗಂಟೆ ಫ್ರಿಜ್‌ನಲ್ಲಿಡಿ. ತವಾಗೆ ಎಣ್ಣೆ ಹಾಕಿ, ಕಲಸಿದ ಚಿಕನ್ ಹಾಕಿ ಸಣ್ಣ ಉರಿಯಲ್ಲಿ ಕರಿಯಿರಿ.

ಎಳೆಮೊಟ್ಟೆ ಗೊಂಚಲು ಫ್ರೈ

ಬೇಕಾಗುವ ಸಾಮಗ್ರಿ: ಬೇಬಿ/ಎಳೆ ಮೊಟ್ಟೆ ಗೊಂಚಲು ಐದು, ಶುಂಠಿ ಮೂರು ಇಂಚು, ಬೆಳ್ಳುಳ್ಳಿ ಒಂದು ಉಂಡೆ, ಕರಿಬೇವು ಎರಡು ಕಡ್ಡಿ, ಕೊತ್ತಂಬರಿ ಸೊಪ್ಪು, ಪುದೀನಾ ಸ್ವಲ್ಪ, ಗರಂ ಮಸಾಲೆ ಒಂದು ಚಮಚ, ದನಿಯಾ ಪುಡಿ ಒಂದು ಚಮಚ, ಮೆಣಸಿನಕಾಯಿ ಪುಡಿ ಎರಡು ಚಮಚ, ಅರಸಿನ ಸ್ವಲ್ಪ, ಈರುಳ್ಳಿ ಮೂರು, ಟೊಮೆಟೊ ಎರಡು, ತೆಂಗಿನಕಾಯಿ ಕಾಲು ಹೋಳು, ಎಣ್ಣೆ, ಉಪ್ಪು.

ತಯಾರಿಸುವ ವಿಧಾನ: ಬಾಣಲಿಗೆ ಸ್ವಲ್ಪ ಎಣ್ಣೆ ಹಾಕಿ, ಕತ್ತರಿಸಿದ ಒಂದು ಈರುಳ್ಳಿ, ಒಂದು ಟೊಮೆಟೊ, ಶುಂಠಿ, ಬೆಳ್ಳುಳ್ಳಿ, ಪುದೀನಾ, ತೆಂಗಿನತುರಿ ಹಾಕಿ ಫ್ರೈ ಮಾಡಿ, ನಂತರ ದನಿಯಾ ಪುಡಿ, ಮೆಣಸಿನಕಾಯಿ ಪುಡಿ ಮತ್ತು ಗರಂ ಮಸಾಲೆ ಹಾಕಿ ಸ್ವಲ್ಪ ಫ್ರೈ ಮಾಡಿ, ಆರಿದ ನಂತರ ಸ್ವಲ್ಪ ನೀರು ಹಾಕಿ ರುಬ್ಬಿಟ್ಟುಕೊಳ್ಳಿ. ತೆರೆದ ಪಾತ್ರೆಗೆ ಎಣ್ಣೆ ಹಾಕಿ, ಕಾದ ನಂತರ ಈರುಳ್ಳಿಯನ್ನು ಕಂದು ಬಣ್ಣ ಬರುವ ತನಕ ಫ್ರೈ ಮಾಡಿದ ಮೇಲೆ ಟೊಮೆಟೊ, ಅರಸಿನ, ಉಪ್ಪು, ರುಬ್ಬಿದ ಮಸಾಲೆ ಹಾಕಿ, ಎಣ್ಣೆ ಬಿಡುವ ತನಕ ಫ್ರೈ ಮಾಡಿ. ಆಮೇಲೆ ತೊಳೆದ ಬೇಬಿ ಮೊಟ್ಟೆ ಗೊಂಚಲು ಹಾಕಿ ಮಿಕ್ಸ್ ಮಾಡಿ, ಮುಚ್ಚಳ ಮುಚ್ಚಿ ಚೆನ್ನಾಗಿ ಬೇಯಿಸಿ. ಕೊನೆಗೆ ಕೊತ್ತಂಬರಿ ಸೊಪ್ಪು ಮತ್ತು ಕರಿಬೇವನ್ನು ಹಾಕಿ.

ಭಾವಯಾನ

ಅಡಗಿಸಿಟ್ಟ ಪುಸ್ತಕ ಕಲಿಸಿದ ಪಾಠ

• ರಮ್ಯಾ ಕವೀಶ್

ನಮ್ಮದು ಅಪ್ಪ, ಅಮ್ಮ, ಅಕ್ಕ ಹಾಗೂ ನಾವಿಬ್ಬರು ಅವಳಿಗಳಿದ್ದ (ಅಣ್ಣ) ವಿಭಕ್ತ ಕುಟುಂಬ. ಎಳವೆಯಿಂದಲೂ ಅಣ್ಣ ತೀರಾ ಕೀಟಲೆಯ, ಹಟ ಸ್ವಭಾವದ ಕೋಪಿಷ್ಟ. ಗಂಡುಮಗನೆಂಬ ಕಾರಣಕ್ಕೆ ಅಮ್ಮನ ಮುದ್ದು ತುಸು ಹೆಚ್ಚಾಗಿದ್ದರಿಂದಲೂ ಇರಬಹುದು. ಅವನಿಗೆ ಇಷ್ಟವಾಗದ ಕೆಲಸ ಮಾಡಿದೆವೆಂದರೆ ನನಗೆ, ಅಕ್ಕನಿಗೆ ಸರಿಯಾಗಿ ಗುದ್ದುತ್ತಿದ್ದ. ನಾವಿಬ್ಬರು ಸೇರಿದರೂ ಅವನನ್ನು ಬಗ್ಗಿಸಿ ಏಟು ಹಾಕಲು ನಮ್ಮಿಂದ ಆಗುತ್ತಿರಲಿಲ್ಲ. ನೋಡಲೂ ಅಷ್ಟೇ ದಷ್ಟಪುಷ್ಟವಾಗಿದ್ದ (ಅಮ್ಮ ಮಮತೆಯಲ್ಲಿ ಕಡುಬಿನ ಜೊತೆ ಕಡುಬಿನಷ್ಟೇ ದೊಡ್ಡ ಆಕಾರದ ಬೆಣ್ಣೆಯುಂಡೆ ಹಾಕಿ ಬೆಳೆಸಿದ್ದ ಮೈಕಟ್ಟದು).

ಒಮ್ಮೆ ತೀರ್ಥಹಳ್ಳಿ ಜಾತ್ರೆಯಿಂದ ಅವನು ಬಹಳ ಇಷ್ಟಪಟ್ಟು ತಂದಿದ್ದ ಆಟಿಕೆ ವಿಮಾನವನ್ನು, ಅವನಿಲ್ಲದಾಗ ನಾವಿಬ್ಬರೂ ಹಾರಿಸಲು ಯತ್ನಿಸಿ ವಿಫಲರಾಗಿ, ಅದು ಜೋರಾಗಿ ನೆಲಕ್ಕಪ್ಪಳಿಸಿದ್ದರಿಂದ ತಂದ ದಿನವೇ ತುಂಡಾಗಿಹೋಯಿತು. ಅಮ್ಮ 'ಇಬ್ಬರೂ ಬೆನ್ನಿಗೆ ಹಾಳೆ ಕಟ್ಟಿಕೊಳ್ಳಿ. ನಾನಂತೂ ಅವನನ್ನು ತಡೆಯುವುದಿಲ್ಲ' ಎಂದುಬಿಟ್ಟರು. ಅವನ ಹೊಡೆತದ ರುಚಿಯನ್ನು ನೆನೆದು ನಮ್ಮಿಬ್ಬರಿಗೂ ನಡುಕ ಆರಂಭವಾಗಿತ್ತು. ಮನೆಗೆ ಬಂದು ತನ್ನ ವಿಮಾನದ ಅವಸ್ಥೆಯನ್ನು ಕಂಡವನೇ ಕಣ್ಣು ಕೆಂಪಾಗಿಸಿದ. ಕಾಳಗ ಪ್ರಾರಂಭವಾಗಿಯೇ ಹೋಯಿತು. ಮೂವರ ನಡುವೆ ದೊಡ್ಡ ಹೊಡೆದಾಟವಾಗಿ, ನಂತರ ಅಪ್ಪನ ಮಧ್ಯಸ್ಥಿಕೆಯಲ್ಲಿ, ನಾವಿಬ್ಬರೂ ಅವನಿಗೆ ಅದರ ಹಣ ಕೊಡಬೇಕೆಂದು ಇತ್ಯರ್ಥವಾಯಿತು.

ತೀರ್ಥಹಳ್ಳಿಯಲ್ಲಿ ಡಿಸೆಂಬರ್ ಕೊನೆಯಲ್ಲಿ ನಡೆಯುವ ಎಳ್ಳಮಾವಾಸ್ಯೆ ಜಾತ್ರೆ ತುಂಬಾ ಪ್ರಸಿದ್ಧಿ. ಆ ಸಮಯದಲ್ಲಿ ಎಲ್ಲರ ಮನೆಯಲ್ಲೂ ಅಡಿಕೆ ಕೊಯ್ಲಿನ ಸಮಯ. ಅಡಿಕೆ ಸಿಪ್ಪೆ ಬಿಡಿಸಿ, ತಿರುಳನ್ನು ತೆಗೆದುಕೊಟ್ಟರೆ, ಅದನ್ನು ಕೊಳಗದ ಪ್ರಮಾಣದಲ್ಲಿ ಅಳೆದು, ಒಂದು ಕೊಳಗಕ್ಕೆ ಒಂದು ರೂಪಾಯಿ ಕೊಡುತ್ತಿದ್ದರು. ವಾರಗಳ ಕಾಲ ಮನೆಯಲ್ಲಿ ನಾವಿಬ್ಬರೂ ಅಡಿಕೆ ಸುಲಿದು, ಅಪ್ಪನಿಂದ ಹಣ ಪಡೆದು, ಅವನ ವಿಮಾನದ ನಷ್ಟವನ್ನು ತುಂಬಿಕೊಟ್ಟೆವು. ಆದರೂ ಜಾತ್ರೆ ಮುಗಿದಿದೆ, ಇನ್ನೆಲ್ಲಿ ವಿಮಾನ ತರುವುದೆಂದು ಗಲಾಟೆ ಮಾಡುವುದು, ಹೊಡೆಯುವುದು ನಡೆದೇ ಇತ್ತು.

ಇವನನ್ನು ನಾವಿಬ್ಬರೂ ಶಕ್ತಿಯಿಂದ ಗೆಲ್ಲಲು ಸಾಧ್ಯವಾಗದೆಂದು ತಿಳಿದ ಅಕ್ಕ, ಹೇಗಾದರೂ ಇವನಿಗೂ ನಾಲ್ಕೇಟು ತಿನ್ನಿಸಲೇಬೇಕೆಂದು ಯೋಚಿಸಿದಳು. ನನ್ನದು, ಅಣ್ಣನದು ಒಂದೇ ತರಗತಿಯಾಗಿತ್ತು. ನಮ್ಮ ಇಂಗ್ಲಿಷ್ ಭಾಷೆಯ ಶಿಕ್ಷಕಿ ಲೀಲಾಬಾಯಿ ಅವರು ಬಹಳ ಕಟ್ಟುನಿಟ್ಟು. ಮನೆಕೆಲಸ ಬರೆದಿಲ್ಲವೆಂದರೆ ತುಸು ಹೆಚ್ಚೆನಿಸುವಷ್ಟೇ ಹೊಡೆಯುತ್ತಿದ್ದರು. ಉಪಾಯ ಮಾಡಿದ ಅಕ್ಕ, ಲೀಲಾಬಾಯಿ ಮೇಡಂ ಯಾವಾಗ ಮನೆಕೆಲಸ ಕೊಟ್ಟಿರುತ್ತಾರೆ ಆಗ ಹೇಳು ಎಂದಿದ್ದಳು. ಮರುದಿನವೇ ತುಂಬಾ ಬರೆಯಲು ಕೊಟ್ಟಿದ್ದನ್ನು ತಿಳಿಸಿದೆ.

ಅಣ್ಣ ಸ್ನಾನಕ್ಕೆ ಹೋಗುವುದನ್ನೇ ಕಾದಿದ್ದ ನಾವು, ಇಂಗ್ಲಿಷ್ ಭಾಷೆಯ ಮನೆಕೆಲಸದ ಪುಸ್ತಕವನ್ನು ಅಡಗಿಸಿಟ್ಟೆವು. ಅವನು ಎಂದಿನಂತೆ ಶಾಲೆಗೆ ಹೊರಟ. ನಾವಿಬ್ಬರೂ ಮುಖ ನೋಡಿಕೊಂಡು ನಸುನಕ್ಕೆವು. ಶಾಲೆಯ ಗಂಟೆ ಬಾರಿಸಿದಾಕ್ಷಣವೇ ಅಣ್ಣ ನನ್ನ ಬಳಿ ಓಡಿ ಬಂದ. ಗದ್ಗದ ಸ್ವರದಲ್ಲಿ 'ನನ್ನ ಮನೆಕೆಲಸದ ಪುಸ್ತಕ ನಿನ್ನ ಪಾಟೀಚೀಲದಲ್ಲಿ ಬಂದಿದೆಯಾ ನೋಡು' ಎಂದ. ಅವನ ಕೈ, ಕಾಲು ನಡುಗುತ್ತಿದ್ದವು. ಇಲ್ಲವೆಂದೆ. ಪೇಚಾಡಿಕೊಂಡು ಪುನಃ ಪುನಃ ಹುಡುಕಲಾರಂಭಿಸಿದ. ಶಿಕ್ಷಕಿ ಬಂದರು. ಬಾಕಿಯವರೆಲ್ಲ ಮನೆಕೆಲಸ ತೋರಿಸಿದೆವು. ಅಣ್ಣನಿಗೆ ಮೇಡಂ ಉದ್ದನೆಯ ಕೋಲಿನಲ್ಲಿ ಥಳಿಸತೊಡಗಿದರು.

ಓದಿನಲ್ಲಿ ಸದಾ ಮುಂದಿದ್ದ, ಎಂದೂ ಶಿಕ್ಷೆ ಅನುಭವಿಸದವ, 'ಅಮ್ಮಾ, ಅಮ್ಮಾ' ಎಂದು ನೋವಿನಿಂದ ಕೂಗುತ್ತಿದ್ದದ್ದು ನೋಡಿ ನನ್ನ ಕಣ್ಣಾಲಿಗಳು ತೇವಗೊಂಡವು. ಅವನಿಗೆ ಹೇಳಿದ ಸುಳ್ಳು ಅವನ ದೇಹದ ಮೇಲಾದ ನೋವಿಗಿಂತ ನನ್ನ ಮನವನ್ನು ಹೆಚ್ಚು ಘಾಸಿಗೊಳಿಸಿತ್ತು.

ಎಷ್ಟೇ ಸಿಟ್ಟಿದ್ದರೂ ಅದನ್ನು ಕಳ್ಳಹಾದಿಯಲ್ಲಿ ತೀರಿಸಿಕೊಳ್ಳುವುದು ತಪ್ಪೆಂದು ಅಂದೇ ನಮ್ಮಿಬ್ಬರಿಗೂ ಅರಿವಾಗಿತ್ತು. ಮಾಡಿದ ತಪ್ಪನ್ನು ಅವನಿಗೆ ತಿಳಿಸಿ, ಪುಸ್ತಕ ಕೈಗಿತ್ತು ಇಬ್ಬರೂ ತಲೆತಗ್ಗಿಸಿ ನಿಂತಿದ್ದೆವು.

ಅಣ್ಣನಿಗೂ ನಾವಿಬ್ಬರೂ ಮಾಡಿದ್ದು ತಪ್ಪೆಂದು ತಿಳಿದಿದ್ದರೂ ಆ ಪರಿ ಸೇಡು ತೀರಿಸಿಕೊಳ್ಳಲು ಕಾರಣವೇನೆಂಬುದು ಅರಿವಾಗಿ, ನಂತರದ ದಿನಗಳಲ್ಲಿ ಜಗಳವಾದರೂ ಅವನು ನಮ್ಮಿಬ್ಬರ ಮೇಲೆ ಕೈ ಎತ್ತುವುದನ್ನು ನಿಲ್ಲಿಸಿದ್ದ. ಅಡಗಿಸಿಟ್ಟ ಪುಸ್ತಕ ಮೂವರಿಗೂ ಪಾಠ ಕಲಿಸಿತ್ತು.

ಏನಿವರ ಬ್ಯೂಟಿ ಸೀಕ್ರೆಟ್?

ಮಹಾಲಕ್ಷ್ಮಿ ಪಿ.ಆರ್., ನಟಿ

ಸೌಂದರ್ಯ ಎಂಬುದು ನಾವು ಅಳವಡಿಸಿಕೊಂಡ ಜೀವನಶೈಲಿಯಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಖುಷಿ ಖುಷಿಯಾಗಿದ್ದರೆ, ಅದುವೇ ನಿಜವಾದ ಸೌಂದರ್ಯ. ಆದರೆ, ನಟಿಯಾದ ಮೇಲೆ ತೆರೆಯ ಮೇಲೆ ಚೆನ್ನಾಗಿ ಕಾಣಿಸಿಕೊಳ್ಳುವುದು ಬಹಳ ಮುಖ್ಯ. ಹಾಗಾಗಿ, ತುಸುಮಟ್ಟಿಗೆ ಚರ್ಮ ಮತ್ತು ಕೂದಲಿನ ಆರೈಕೆಯನ್ನು ಮಾಡುತ್ತೇನೆ.

ನಿತ್ಯ ಬೆಳಿಗ್ಗೆ ಖಾಲಿ ಹೊಟ್ಟೆಗೆ ಜೀರಿಗೆ ನೀರನ್ನು ಕುಡಿಯುತ್ತೇನೆ. ಅದಿಲ್ಲದಿದ್ದರೆ ಬಿಸಿನೀರಿಗೆ ಒಂದು ಚಮಚ ತುಪ್ಪ ಹಾಕಿಕೊಂಡು ಕುಡಿಯುತ್ತೇನೆ. ಇದು ಚರ್ಮದ ಹೊಳಪಿಗೆ ನೆರವಾಗಿದೆ. ಅಲ್ಲದೆ ದೇಹದಲ್ಲಿರುವ ವಿಷಕಾರಿ ಅಂಶಗಳನ್ನು ಹೊರತೆಗೆಯಲು ಸಹಾಯ ಮಾಡುತ್ತದೆ. ಬ್ಲ್ಯಾಕ್ ಕಾಫಿ ಕುಡಿದೂ ಕೆಲವೊಮ್ಮೆ ದಿನವನ್ನು ಆರಂಭಿಸುತ್ತೇನೆ. ಏನೂ ಇಲ್ಲವೆಂದರೆ ಬಿಸಿನೀರಿನಿಂದಲೇ ದಿನ ಆರಂಭಗೊಳ್ಳುತ್ತದೆ.

ಊಟದಲ್ಲಿ ಹೆಚ್ಚು ಹಸಿರು ತರಕಾರಿ ಹಾಗೂ ತಾಜಾ ಹಣ್ಣುಗಳು ಇರುವಂತೆ ನೋಡಿಕೊಳ್ಳುತ್ತೇನೆ. ಚರ್ಮತಜ್ಞರು ನನ್ನ ಚರ್ಮಕ್ಕೆ ಸೂಕ್ತವಿರುವ ಫೇಸ್‌ವಾಷ್, ಕ್ಲೆನ್ಸರ್, ಮಾಯಿಶ್ಚರೈಸರ್ ಹಾಗೂ ಸನ್‌ಸ್ಕ್ರೀನ್ ನೀಡಿದ್ದಾರೆ. ಅವುಗಳನ್ನೇ ಹಚ್ಚುತ್ತೇನೆ. ಅದು ಬಿಟ್ಟರೆ, ಸಮಯ ಸಿಕ್ಕಾಗ ಅರಸಿನ, ನಿಂಬೆಹಣ್ಣಿನ ರಸ, ಕಡಲೆಹಿಟ್ಟು ಹಾಕಿ ಆಗಾಗ ಫೇಸ್‌ಪ್ಯಾಕ್ ಮಾಡಿಕೊಳ್ಳುತ್ತೇನೆ. ಜೊತೆಗೆ ಫೇಸ್‌ಪ್ಯಾಕ್‌ಗೆಂದು ಬೀಟ್‌ರೂಟ್, ಚಂದನ, ಅರಸಿನ, ಮುಲ್ತಾನಿ ಮಿಟ್ಟಿ, ಬೇವಿನಸೊಪ್ಪಿನ ಪುಡಿಯಿರುವ ಮಿಶ್ರಣವನ್ನು ಒಂದು ಡಬ್ಬದಲ್ಲಿ ಹಾಕಿಟ್ಟುಕೊಂಡಿದ್ದೇನೆ. ಇದನ್ನು ಕಡಲೆಹಿಟ್ಟು ಹಾಗೂ ರೋಸ್‌ವಾಟರ್‌ನೊಂದಿಗೆ ಬೆರೆಸಿ ಮುಖ ಹಾಗೂ ಕುತ್ತಿಗೆ ಭಾಗಕ್ಕೆ ಹಚ್ಚುತ್ತೇನೆ. ಇದು ಚರ್ಮವು ಹೊಳೆಯುವಂತೆ ಮಾಡಲು ಸಹಕರಿಸಿದೆ. ಕೂದಲ ಆರೈಕೆಗೆ ಆಗಾಗ್ಗೆ ವಿಟಮಿನ್ 'ಇ' ಮಾತ್ರೆಗಳನ್ನು ಒಡೆದು ಹಚ್ಚುತ್ತೇನೆ. ಇದು ಬಿಟ್ಟರೆ ಎರಡು ದಿನಗಳಿಗೊಮ್ಮೆ ಶುದ್ಧ ತೆಂಗಿನೆಣ್ಣೆಯನ್ನು ಹಚ್ಚುತ್ತೇನೆ. ಇದಕ್ಕೆ ಚೆನ್ನಾಗಿ ಕುದಿಸಿಕೊಂಡ ದಾಸವಾಳದ ಎಲೆ, ಹೂವು, ಕರಿಬೇವಿನ ಮಿಶ್ರಣ ಹಾಕುತ್ತೇನೆ. ಇದು ಬಿಟ್ಟರೆ ಆಗಾಗ್ಗೆ ಮೊಸರು ಹಚ್ಚಿ ತಲೆ ತೊಳೆದುಕೊಳ್ಳುತ್ತೇನೆ. ಇದು ತಲೆಹೊಟ್ಟಿನ ನಿವಾರಣೆಗೆ ನೆರವಾಗಿದೆ. ದೇಹದಲ್ಲಿ ಉಷ್ಣ ಹೆಚ್ಚಾದಾಗ ಮಾತ್ರ ಹರಳೆಣ್ಣೆಯನ್ನು ಹಚ್ಚಿ ಸ್ನಾನ ಮಾಡುತ್ತೇನೆ.

ಆಲಿಕಲ್ಲು ಮಳೆ: ಬಳ್ಳಾರಿ, ಬೆಳಗಾವಿ ಜಿಲ್ಲೆಯಲ್ಲಿ ವ್ಯಾಪಕ ಹಾನಿ

602 ಹೆಕ್ಟೇರ್ ಭತ್ತ ಬೆಳೆ ಹಾನಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಬಳ್ಳಾರಿ ಮತ್ತು ಬೆಳಗಾವಿ ಜಿಲ್ಲೆಯಲ್ಲಿ ಸುರಿದ ಆಲಿಕಲ್ಲು ಮಳೆಯಿಂದ ವ್ಯಾಪಕ ಹಾನಿಯಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಬಿರುಗಾಳಿ ಸಹಿತ ಆಲಿಕಲ್ಲು ಮಳೆಗೆ 804 ರೈತರ ಒಟ್ಟು 1,487.57 (602 ಹೆಕ್ಟೇರ್) ಎಕರೆ ಭತ್ತದ ಬೆಳೆ ಹಾನಿಯಾಗಿದೆ.

ಕುರುಗೋಡು ತಾಲ್ಲೂಕಿನಲ್ಲಿ 604 ರೈತರ 1,067.5 ಎಕರೆ (432 ಹೆ.), ಸಿರುಗುಪ್ಪ ತಾಲ್ಲೂಕಿನ 200 ರೈತರ 420.07 ಎಕರೆ (170 ಹೆ.) ಭತ್ತದ ಬೆಳೆ ಹಾನಿಗೀಡಾಗಿದೆ.

'ಆಲಿಕಲ್ಲು ಮಳೆಗೆ ಕುರುಗೋಡು ತಾಲ್ಲೂಕಿನಲ್ಲಿ ಹೆಚ್ಚು ಹಾನಿಯಾಗಿದೆ. ಸರ್ಕಾರಕ್ಕೆ ಬೆಳೆ ನಷ್ಟದ ವರದಿ ಸಲ್ಲಿಸಿ ಪರಿಹಾರ ದೊರಕಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಬಳ್ಳಾರಿ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್ ತಿಳಿಸಿದರು.

'ಹಾನಿ ಪ್ರಮಾಣ ಜಿಲ್ಲಾಡಳಿತದ ಲೆಕ್ಕಕ್ಕಿಂತ ಹೆಚ್ಚಿದೆ. 2,500 ರಿಂದ 3,000 ಹೆ. ಬೆಳೆ ನಷ್ಟವಾಗಿದೆ' ಎಂದು ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಅಧ್ಯಕ್ಷ ಮಾಧವ ರೆಡ್ಡಿ ಹೇಳಿದರು.

ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಐಗಳಿ ಮತ್ತು ಸುತ್ತಮುತ್ತಲ ಗ್ರಾಮಗಳಲ್ಲಿ ದ್ರಾಕ್ಷಿ ಬೆಳೆಗೆ ಭಾರಿ ಹಾನಿಯಾಗಿದೆ. ಇತ್ತೀಚೆಗೆ ಹಸಿದ್ರಾಕ್ಷಿ ಬೆಳೆ ಕಟಾವು ಮಾಡಿದ್ದ ರೈತರು, ಶೆಡ್‌ಗಳಲ್ಲಿ ಒಣದ್ರಾಕ್ಷಿ ಮಾಡುತ್ತಿದ್ದರು. ಕೆಲವರು ಹೊರ ಆವರಣದಲ್ಲೇ ಒಣಗಿಸಿದ್ದರು. ಕೆಲ ರೈತರು ಕಟಾವಿಗೆ ಬಂದಿದ್ದ ದ್ರಾಕ್ಷಿ ಬೆಳೆ ಇನ್ನೂ ಕತ್ತರಿಸಿರಲಿಲ್ಲ. ಆಲಿಕಲ್ಲು ಮಳೆಯಿಂದಾಗಿ ಗಿಡದಲ್ಲಿನ ಹಸಿದ್ರಾಕ್ಷಿ ಉದುರಿಬಿದ್ದಿವೆ.

'ಅಕಾಲಿಕ ಮಳೆಯಿಂದ ದ್ರಾಕ್ಷಿ ಬೆಳೆಗಾರರಿಗೆ ಹಾನಿಯಾಗಿದೆ. ಸರ್ಕಾರ ತಕ್ಷಣವೇ ರೈತರ ನೆರವಿಗೆ ಧಾವಿಸಬೇಕು' ಎಂದು ಒಣದ್ರಾಕ್ಷಿ ಸಂಸ್ಕರಣ ಘಟಕದ ಅಧ್ಯಕ್ಷ ಷಹಜಹಾನ್ ಡೊಂಗರಗಾಂವ ತಿಳಿಸಿದರು.

'ಅಥಣಿಯಲ್ಲಿ 100 ಹೆಕ್ಟೇರ್‌ನಲ್ಲಿ ಬೆಳೆದಿದ್ದ ದ್ರಾಕ್ಷಿ ಹಾನಿಯಾಗಿದೆ. ಬೆಳೆ ಹಾನಿ ಸಮೀಕ್ಷೆ ನಡೆದಿದೆ' ಎಂದು ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಮಹಾಂತೇಶ ಮುರಗೋಡ 'ಪ್ರಜಾವಾಣಿ'ಗೆ ತಿಳಿಸಿದರು.

ಆನೇಕಲ್ ತಾಲ್ಲೂಕಿನ ಕೂನಮಡಿವಾಳದಲ್ಲಿ ಗುರುವಾರ ತೋಟಗಳಲ್ಲಿಯ ಹಸಿರು ಮನೆ ತಾರಸಿ ಮೇಲೆ ಸಂಗ್ರಹವಾಗಿರುವ ಆಲಿಕಲ್ಲು

ಸಿಡಿಲು ಬಡಿದು ಸಾವು

ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕಿನ ಕಂದಗಲ್ಲು ಗ್ರಾಮದಲ್ಲಿ ಬುಧವಾರ ರಾತ್ರಿ ಸಿಡಿಲು ಬಡಿದು ಪ್ರಶಾಂತ (21) ಮೃತಪಟ್ಟಿದ್ದಾರೆ. ಇನ್ನಿಬ್ಬರು ಗಾಯಗೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ಯುಗಾದಿ ಪಾಡ್ಯದಂದು ನಡೆಸಬೇಕಿದ್ದ ರಣದಮ್ಮದೇವಿ ಜಾತ್ರೆ ರದ್ದುಪಡಿಸಿದರು.

ಬಾಗಲಕೋಟೆ ಜಿಲ್ಲೆಯ ಕೆರೂರ ಪಟ್ಟಣ ಮತ್ತು ಸುತ್ತಮುತ್ತಲ ಗ್ರಾಮಗಳಲ್ಲಿ ಸುರಿದ ಮಳೆಯಿಂದ ಯಂಡಿಗೇರಿ ಗ್ರಾಮದಲ್ಲಿ 29 ಕುರಿ, ಆಡು ಮೃತಪಟ್ಟಿವೆ. ಯಂಡಿಗೇರಿ, ನೀರಬೂದಿಹಾಳ, ಕರಡಿಗುಡ್ಡ ಎಸ್‌ಎ, ಕೈನಕಟ್ಟಿಯಲ್ಲಿ ಟೊಮೆಟೊ, ಉಳ್ಳಾಗಡ್ಡಿ, ದಾಳಿಂಬೆ, ಕಬ್ಬು ಬೆಳೆಗೆ ಹಾನಿಯಾಗಿದೆ.

'ರೈತರಿಗೆ ಶೀಘ್ರ ಪರಿಹಾರ ಕೊಡಿ'

ಬೆಂಗಳೂರು: ರಾಜ್ಯದಲ್ಲಿ ಕಳೆದ ಎರಡು ದಿನಗಳಿಂದ ಅಕಾಲಿಕವಾಗಿ ಸುರಿದ ಆಲಿಕಲ್ಲು ಮಳೆಯಿಂದ ರೈತರೊಬ್ಬರು ಮೃತಪಟ್ಟಿದ್ದು, ಅಪಾರ ಪ್ರಮಾಣದಲ್ಲಿ ಬೆಳೆ ನಷ್ಟವಾಗಿದೆ. ಸರ್ಕಾರ ಕೂಡಲೇ ಮೃತ ರೈತ ಕುಟುಂಬಕ್ಕೆ ಸೂಕ್ತ ಪರಿಹಾರ ಘೋಷಿಸಬೇಕು ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ 'ಎಕ್ಸ್'ನಲ್ಲಿ ಒತ್ತಾಯಿಸಿದ್ದಾರೆ.

'ಉತ್ತರ ಕರ್ನಾಟಕ, ಹಳೇ ಮೈಸೂರು ಭಾಗದ 10 ಜಿಲ್ಲೆಗಳಲ್ಲಿ ಬೆಳೆ ಹಾನಿಯಾಗಿದೆ. ಕೂಡಲೇ ಮಳೆ ಹಾನಿ ಜಂಟಿ ಸಮೀಕ್ಷೆ ನಡೆಸಿ, ರೈತರಿಗೆ ಎಕರೆವಾರು ವೈಜ್ಞಾನಿಕ ಪರಿಹಾರ ವಿತರಿಸಬೇಕು' ಎಂದು ಆಗ್ರಹಿಸಿದ್ದಾರೆ.

'ರಾಜ್ಯಕ್ಕೆ ಎಲ್‌ಪಿಜಿ ಪೂರೈಕೆ ಹೆಚ್ಚಿಸಿ'

ಕೇಂದ್ರ ಸರ್ಕಾರಕ್ಕೆ ಮತ್ತೆ ಪತ್ರ ಬರೆದ ಸಿ.ಎಂ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆಯಲ್ಲಿ ವ್ಯತ್ಯಯ ಮುಂದುವರಿದಿರುವ ಕಾರಣ ಹೋಟೆಲ್ ಮತ್ತು ಉದ್ಯಮಗಳು ಮುಚ್ಚಬೇಕಾದ ಸ್ಥಿತಿ ಎದುರಾಗಿದೆ. ಕೇಂದ್ರ ಸರ್ಕಾರವು ಕೂಡಲೇ ಮಧ್ಯಪ್ರವೇಶಿಸಿ, ರಾಜ್ಯಕ್ಕೆ ಪೂರೈಕೆ ಹೆಚ್ಚಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಪೆಟ್ರೋಲಿಯಂ ಸಚಿವ ಹರದೀಪ್ ಸಿಂಗ್ ಪುರಿ ಅವರನ್ನು ಒತ್ತಾಯಿಸಿದ್ದಾರೆ.

ಕೇಂದ್ರ ಸಚಿವ ಪುರಿ ಅವರಿಗೆ ಮತ್ತೆ ಪತ್ರ ಬರೆದಿರುವ ಸಿದ್ದರಾಮಯ್ಯ ಅವರು, 'ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ನು ನಮ್ಮ ಸರ್ಕಾರವು ಪಾಲಿಸುತ್ತಿದ್ದು, ಅತ್ಯಗತ್ಯದ ವಲಯಗಳಿಗಷ್ಟೇ ಸಿಲಿಂಡರ್ ಪೂರೈಕೆ ಮಾಡಲಾಗುತ್ತಿದೆ' ಎಂದಿದ್ದಾರೆ.

'ರಾಜ್ಯದಲ್ಲಿ ಪ್ರತಿದಿನ ವಾಣಿಜ್ಯ ಬಳಕೆ ಎಲ್‌ಪಿಜಿಯ 50,000 ಸಿಲಿಂಡರ್‌ಗಳ ಅಗತ್ಯವಿದೆ. ಆದರೆ 1,000 ಸಿಲಿಂಡರ್‌ಗಳನ್ನು ಮಾತ್ರ ಪೂರೈಕೆ ಮಾಡಲಾಗುತ್ತಿದೆ. ಇದರಿಂದಾಗಿ ಹೋಟೆಲ್ ಮತ್ತು ಇತರ ಉದ್ಯಮಗಳು ಎಲ್‌ಪಿಜಿ ಸಿಲಿಂಡರ್ ಕೊರತೆ ಎದುರಿಸುತ್ತಿದ್ದು, ಮುಚ್ಚಬೇಕಾದ ಸ್ಥಿತಿಯಲ್ಲಿವೆ' ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

'ರಾಜ್ಯದ ಲಕ್ಷಾಂತರ ಜನರು ಊಟೋಪಚಾರಕ್ಕಾಗಿ ಹೋಟೆಲ್ ಮತ್ತು ಕ್ಯಾಟರಿಂಗ್ ವಲಯವನ್ನೇ ಅವಲಂಬಿಸಿದ್ದಾರೆ. ಇವು ಬಂದ್ ಆಗಿರುವ ಕಾರಣ ಭಾರಿ ತೊಂದರೆಯಾಗಿದೆ' ಎಂದು ಸಮಸ್ಯೆಯನ್ನು ವಿವರಿಸಿದ್ದಾರೆ.

'ಗೃಹಬಳಕೆ ಎಲ್‌ಪಿಜಿ ಸಿಲಿಂಡರ್‌ಗಳ ಸಾಗಾಟ ಮತ್ತು ಪೂರೈಕೆ ಮೇಲೆ ನಿಗಾ ಇರಿಸುವ ವ್ಯವಸ್ಥೆ ಜಾರಿಯಲ್ಲಿದೆ. ಆದರೆ, ಈ ವ್ಯವಸ್ಥೆ ವಾಣಿಜ್ಯ ಬಳಕೆ ಸಿಲಿಂಡರ್‌ಗಳ ಪೂರೈಕೆಗಿಲ್ಲ. ಇದರಿಂದ ದೊಡ್ಡ ಸಮಸ್ಯೆಯಾಗಿದೆ. ಪಶ್ಚಿಮ ಏಷ್ಯಾ ರಾಷ್ಟ್ರಗಳಿಂದ ಭಾರತಕ್ಕೆ ಎರಡು ಎಲ್‌ಪಿಜಿ ಟ್ಯಾಂಕರ್‌ಗಳು ಬರಲಿವೆ. ಅದರಲ್ಲಿ ಕರ್ನಾಟಕಕ್ಕೆ ಹೆಚ್ಚಿನ ಪ್ರಮಾಣವನ್ನು ಪೂರೈಕೆ ಮಾಡಬೇಕು' ಎಂದು ಅವರು ಪತ್ರದಲ್ಲಿ ಒತ್ತಾಯಿಸಿದ್ದಾರೆ.

'ಆಟೊ ಎಲ್‌ಪಿಜಿ ಪೂರೈಸಿ'

ರಾಜ್ಯದಲ್ಲಿ ಆಟೊರಿಕ್ಷಾಗಳು, ಖಾಸಗಿ ವಾಹನಗಳು ಎಲ್‌ಪಿಜಿ ಕಿಟ್ ಅಳವಡಿಸಿಕೊಂಡಿವೆ. ಆಟೊ ಎಲ್‌ಪಿಜಿ ಪೂರೈಕೆ ಆಗದಿರುವುದರಿಂದ ಅವು ಕಾರ್ಯಾಚರಣೆ ನಡೆಸಲು ಸಾಧ್ಯವಾಗುತ್ತಿಲ್ಲ. ಇದರಿಂದ ಸಾರಿಗೆ ವ್ಯವಸ್ಥೆಗೆ ತೊಡಕಾಗಿದೆ. ಆಟೊ ಎಲ್‌ಪಿಜಿ ಪೂರೈಕೆ ಎಷ್ಟು ಪ್ರಮಾಣದಲ್ಲಿ ಆಗುತ್ತಿದೆ, ಎಷ್ಟು ಕೊರತೆ ಇದೆ ಎಂಬುದರ ಲೆಕ್ಕಾಚಾರವಿಲ್ಲ. ಈ ಬಗ್ಗೆ ಗಮನಹರಿಸುವಂತೆ ಸಿ.ಎಂ ಸಿದ್ದರಾಮಯ್ಯ ಅವರು ಹರದೀಪ್ ಸಿಂಗ್ ಪುರಿ ಅವರನ್ನು ಒತ್ತಾಯಿಸಿದ್ದಾರೆ.

ದೇಶದಲ್ಲಿ ಅತಿಹೆಚ್ಚು ಆಟೊ ಎಲ್‌ಪಿಜಿ ಬಳಸುವ ರಾಜ್ಯ ಕರ್ನಾಟಕ. ದೇಶದಲ್ಲಿ ವಾರ್ಷಿಕ 85,000 ಟನ್‌ಗಳಷ್ಟು ಆಟೊ ಎಲ್‌ಪಿಜಿ ಬಳಸಿದರೆ, ಕರ್ನಾಟದಲ್ಲಿ ಅದರ ಪಾಲು ಶೇ 37ರಷ್ಟು. ಆದರೆ ಈಗ ಎಷ್ಟು ಟನ್ ಆಟೊ ಎಲ್‌ಪಿಜಿ ಪೂರೈಕೆಯಾಗುತ್ತಿದೆ ಎಂಬುದರ ಮಾಹಿತಿ ಲಭ್ಯವಿಲ್ಲ ಎಂದು ಹೇಳಿದ್ದಾರೆ.

ರಾಮಚಂದ್ರರಾವ್ ವಿಡಿಯೊ ಅಸಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ (ಡಿಸಿಆರ್‌ಇ) ಡಿಜಿಪಿ ಆಗಿದ್ದ ಕೆ.ರಾಮಚಂದ್ರ ರಾವ್ ಅವರು ತಮ್ಮ ಕಚೇರಿಯಲ್ಲಿ ಮಹಿಳೆಯೊಂದಿಗೆ ಅಸಭ್ಯವಾಗಿ ವರ್ತಿಸಿದ್ದರು' ಎನ್ನಲಾದ ವಿಡಿಯೊ ಅಸಲಿ ಎಂದು ಪ್ರಕರಣದ ತನಿಖೆ ನಡೆಸಿದ ಐಪಿಎಸ್ ಅಧಿಕಾರಿಗಳ ಸಮಿತಿ ಹೇಳಿದೆ.

ರಾಮಚಂದ್ರರಾವ್ ಅವರಿಗೆ ಸಂಬಂಧಿಸಿದ ವಿಡಿಯೊವೊಂದು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿ, ಭಾರಿ ವಿವಾದ ಎಬ್ಬಿಸಿತ್ತು. ಈ ಬಗ್ಗೆ ತನಿಖೆ ನಡೆಸಲು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಆರ್.ಹಿತೇಂದ್ರ ನೇತೃತ್ವದಲ್ಲಿ ನಾಲ್ವರು ಐಪಿಎಸ್ ಅಧಿಕಾರಿಗಳನ್ನು ಒಳಗೊಂಡ ಸಮಿತಿಯನ್ನು ಸರ್ಕಾರ ರಚಿಸಿತ್ತು. ಸಮಿತಿಯು 100 ಪುಟಗಳ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, 'ವಿಡಿಯೊ ಅಸಲಿ' ಎಂದು ವರದಿಯಲ್ಲಿ ಉಲ್ಲೇಖಿಸಿದೆ.

ವಿಡಿಯೊ ಬಹಿರಂಗವಾದ ವೇಳೆ ರಾಮಚಂದ್ರ ರಾವ್ ಅವರು 'ಅದು ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಸಿ ವಿಡಿಯೊ ಸೃಷ್ಟಿಸಲಾಗಿದೆ. ತಮ್ಮ ವಿರುದ್ಧ ಷಡ್ಯಂತ್ರ ಮಾಡಲಾಗಿದೆ' ಎಂದು ಹೇಳಿದ್ದರು.

'ಡೀಪ್‌ಫೇಕ್, ಕೃತಕ ಬುದ್ಧಿಮತ್ತೆ (ಎ.ಐ) ನಿರ್ಮಿತ ಅಥವಾ ಯಾವುದೇ ರೀತಿಯಲ್ಲಿ ಎಡಿಟ್ ಆಗಿರುವ ದೃಶ್ಯಗಳು ಅಲ್ಲ ಎಂಬುದು ದೃಢಪಟ್ಟಿದೆ' ಎಂದು ತನಿಖಾ ಸಮಿತಿ ವರದಿಯಲ್ಲಿ ಉಲ್ಲೇಖಿಸಿದೆ.

ರಾಮಚಂದ್ರರಾವ್ ಅವರು ಪೊಲೀಸ್ ಸಮವಸ್ತ್ರದಲ್ಲಿ ಕಚೇರಿಯ ಕುರ್ಚಿಯಲ್ಲಿ ಕುಳಿತು ಮಹಿಳೆಯನ್ನು ಅಪ್ಪಿಕೊಳ್ಳುತ್ತಿರುವ ಹಾಗೂ ಮುತ್ತಿಡುತ್ತಿರುವ ದೃಶ್ಯವು ವಿಡಿಯೊದಲ್ಲಿ ದಾಖಲಾಗಿತ್ತು. ಚೇಂಬರ್‌ನಲ್ಲಿ ಇರುವ ರಾಷ್ಟ್ರಧ್ವಜ ಹಾಗೂ ರಾಜ್ಯ ಪೊಲೀಸ್ ಧ್ವಜ ಸಹ ವಿಡಿಯೊದಲ್ಲಿ ಸೆರೆಯಾಗಿತ್ತು.

'ವಿಡಿಯೊದಲ್ಲಿ ಯಾವುದೇ ಮಾರ್ಪಾಟು ಆಗಿಲ್ಲ' ಎಂದು ಎಫ್‌ಎಸ್‌ಎಲ್ ವರದಿಯಿಂದ ದೃಢಪಟ್ಟಿದೆ. 2016-17ರ ಅವಧಿಯಲ್ಲಿ ಬೆಳಗಾವಿ ವಲಯದ ಐಜಿಪಿ ಕಚೇರಿಯಲ್ಲಿ ಈ ವಿಡಿಯೊ ಚಿತ್ರೀಕರಿಸಲಾಗಿದೆ ಎಂದು ತಿಳಿದುಬಂದಿದೆ. ಮಹಿಳೆಯೊಬ್ಬರು ತಮ್ಮ ಮೊಬೈಲ್‌ನಲ್ಲಿ ಉದ್ದೇಶಪೂರ್ವಕವಾಗಿ ಈ ವಿಡಿಯೊ ಚಿತ್ರೀಕರಿಸಿದ್ದಾರೆ ಎಂದು ವರದಿ ಉಲ್ಲೇಖಿಸಿದೆ' ಎಂದು ಮೂಲಗಳು ಹೇಳಿವೆ. ವಿಡಿಯೊ ಬಹಿರಂಗವಾದ ಬಳಿಕ ಇಬ್ಬರು ಮಹಿಳೆಯರು ಸಂಪರ್ಕಕ್ಕೆ ಸಿಗದೇ ನಾಪತ್ತೆ ಆಗಿದ್ದಾರೆ ಎಂದು ಮೂಲಗಳು ಹೇಳಿವೆ.

ನೋಟಿಸ್ ಜಾರಿ

ವಿಡಿಯೊ ಅಸಲಿಯೆಂದು ದೃಢಪಟ್ಟಿರುವ ಬೆನ್ನಲ್ಲೇ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು (ಡಿಪಿಎಆರ್) ರಾಮಚಂದ್ರರಾವ್ ಅವರಿಗೆ ನೋಟಿಸ್ ಜಾರಿ ಮಾಡಿ ಇಲಾಖಾ ತನಿಖೆ ಆರಂಭಿಸಿದೆ. ರಾಮಚಂದ್ರರಾವ್ ಅವರು ಮೇ 31ರಂದು ಸೇವೆಯಿಂದ ನಿವೃತ್ತಿಯಾಗಲಿದ್ದಾರೆ.



ಕೆ.ರಾಮಚಂದ್ರ ರಾವ್

ಸಿಲಿಂಡರ್ ಬಿಸಿ

ಜತೆಗೆ ನಿಗದಿತ ಸಿಲಿಂಡರ್ ಸರಬರಾಜು ಆಗಿದ್ದರಿಂದ ಸಮಸ್ಯೆಯಾಗಿರಲಿಲ್ಲ. ಈಗ ಸಮಸ್ಯೆ ಶುರುವಾಗಿ ಉತ್ಪಾದನೆ ಕಡಿಮೆ ಮಾಡುವ ಸನ್ನಿವೇಶ ಎದುರಾಗಿದೆ' ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ತಿಳಿಸಿದರು.

'ಒಕ್ಕೂಟಗಳಲ್ಲೂ ಮೈಸೂರು ಪಾಕ್, ಪೇಡ ಉತ್ಪಾದಿಸಲಾಗುತ್ತಿದೆ. ಆದರೆ ಇಲ್ಲಿಯ ಉತ್ಪಾದನೆಯ ಪ್ರಮಾಣವೇ ಅಧಿಕ. ಮದರ್ ಡೇರಿಯಲ್ಲಿ ಸಿಲಿಂಡರ್ ಜತೆಗೆ ಫರ್ನೇಸ್ ತೈಲವನ್ನು ಬಳಕೆ ಮಾಡಲಾಗುತ್ತಿದೆ. ಸದ್ಯ ಐಒಸಿಯಿಂದ ನೇರವಾಗಿ ಸಿಲಿಂಡರ್ ಸರಬರಾಜು ಆಗುತ್ತಿದ್ದು, ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸುವಂತಾದರೆ ಉತ್ಪನ್ನಗಳ ದರ ಏರಿಸಬೇಕಾಗಬಹುದು' ಎಂದರು.

THE KARNATAKA STATE CRICKET ASSOCIATION

M. Chinnaswamy Stadium, Cubbon Road, Bangalore – 560 001

EXPRESSION OF INTEREST

Applications are invited from technically qualified and experienced consultants for appointment as Consultant for LED Sports Lighting with DMX Control System at M. Chinnaswamy Stadium, Bengaluru and shifting, installation, aiming, testing and commissioning of existing metal halide sports lighting systems at KSCA grounds, Hubballi and Mysuru.

Applicants shall have proven experience in sports lighting consultancy for international cricket stadiums / sports infrastructure, including design review, illumination standards, photometric assessment, control systems and commissioning.

Scope includes: verification of lighting designs, review of lux levels / uniformity / glare control, preparation of estimate, BOQ, technical specifications, tender assistance, technical and financial scrutiny of bids, recommendation of suitable bidders, supervision during installation / commissioning and scrutiny of bills and certification of quality of work.

Consultants with prior experience in stadium sports lighting projects of similar scale will be preferred.

Interested applicants may submit profile, credentials, relevant experience and consultancy charges in sealed cover addressed to Hon. Secretary, KSCA, M. Chinnaswamy Stadium, Bengaluru – 560001.

Last date for receipt of EOI: 30th March 2026.

For details contact: Syamjith, Deputy Manager – Mob: 9844441684

KSCA reserves the right to accept / reject any application without assigning reasons.

For KSCA
Hon. Secretary

ಚುಟುಕೆ ಸುದ್ದಿ

ಸಾಂಬ್ರಾ: 'ಸೌಲಭ್ಯ ಒದಗಿಸಿದರೆ ಮೇಲ್ದರ್ಜೆಗೆ'

ಬೆಳಗಾವಿಯ ಸಾಂಬ್ರಾ ವಿಮಾನ ನಿಲ್ದಾಣ

ಬೆಳಗಾವಿ: 'ಅಗತ್ಯ ಸೌಲಭ್ಯ ಒದಗಿಸಿದರೆ, ತಾಲ್ಲೂಕಿನ ಸಾಂಬ್ರಾ ವಿಮಾನ ನಿಲ್ದಾಣವನ್ನು ಅಂತರ-ರಾಷ್ಟ್ರೀಯ ವಿಮಾನ ನಿಲ್ದಾಣವಾಗಿ ಮೇಲ್ದರ್ಜೆಗೆ ಏರಿಸಲು ಸಾಧ್ಯ' ಎಂದು ಕೇಂದ್ರ ವಿಮಾನಯಾನ ಸಚಿವ ರಾಮಮೋಹನ ನಾಯ್ಡು ತಿಳಿಸಿದ್ದಾರೆ.

ಈ ಸಂಬಂಧ ಸಂಸದ ಜಗದೀಶ ಶೆಟ್ಟರ್ ಅವರಿಗೆ ಪತ್ರ ಬರೆದಿದ್ದಾರೆ. 'ವಿಮಾನ ನಿಲ್ದಾಣ ಮೇಲ್ದರ್ಜೆಗೇರಿಸಲು ರನ್‌ವೇ ಉದ್ದಳತೆ, ಇನ್‌ಸ್ಟ್ರುಮೆಂಟ್ ಲ್ಯಾಂಡಿಂಗ್ ಸಿಸ್ಟಮ್, ಲೈಟಿಂಗ್ ವ್ಯವಸ್ಥೆ ಮತ್ತಿತರ ವಿಷಯ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ' ಎಂದು ತಿಳಿಸಿದ್ದಾರೆ.

ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಬರೆದ ಪತ್ರಕ್ಕೆ ಪೂರಕವಾಗಿ ಸಂಸದ ಜಗದೀಶ ಶೆಟ್ಟರ್ ಅವರೂ ಪತ್ರ ಬರೆದು ಮೇಲ್ದರ್ಜೆಗೇರಿಸುವ ಬಗ್ಗೆ ಪ್ರಸ್ತಾಪಿಸಿದ್ದರು.

ಆ್ಯಕ್ಷನ್ ಬ್ರೇಕ್ ರೀಲ್ಸ್; ಬಾಲಕ ಸಾವು

ಹುಬ್ಬಳ್ಳಿ: ಕಾರು ಮತ್ತು ದ್ವಿಚಕ್ರ ವಾಹನದ ಮಧ್ಯೆ 'ಆ್ಯಕ್ಷನ್ ಬ್ರೇಕ್' ರೀಲ್ಸ್ ಮಾಡುವಾಗ, ದ್ವಿಚಕ್ರ ವಾಹನ ಸವಾರ, ಬಾಲಕ ನಮಿಷ್ ಸಂಗಳದ (15) ಗುರುವಾರ ಮೃತಪಟ್ಟಿದ್ದಾನೆ.

ನಮಿಷ್ ಸಂಗಳದ

ಇಲ್ಲಿನ ಶೇಜವಾಡ್ಕರ್ ಬಡಾವಣೆಯಲ್ಲಿ ಘಟನೆ ನಡೆದಿದೆ. ಮೃತ ಬಾಲಕನು ರವಿನಗರದ ನಿವಾಸಿ, ಬಿಜೆಪಿ ಮುಖಂಡ ವೀರೇಶ ಸಂಗಳದ ಅವರ ಪುತ್ರ. ಮೈಸೂರಿನಲ್ಲಿ ಓದುತ್ತಿದ್ದ.

ಒಂಬತ್ತನೇ ತರಗತಿ ಪರೀಕ್ಷೆ ಮುಗಿಸಿ ಯುಗಾದಿ ಹಬ್ಬಕ್ಕೆ ಮನೆಗೆ ಬಂದಿದ್ದ. ಸ್ನೇಹಿತರ ಜೊತೆಗೂಡಿ ಕಾರು ಮತ್ತು ದ್ವಿಚಕ್ರ ವಾಹನ ಮುಖಾಮುಖಿ ವೇಗವಾಗಿ ಬಂದು, ತಕ್ಷಣವೇ ಬ್ರೇಕ್ ಹಾಕುವ (ಆ್ಯಕ್ಷನ್ ಬ್ರೇಕ್) ರೀಲ್ಸ್ ಮಾಡುವಾಗ ಅಪಘಾತ ಸಂಭವಿಸಿದೆ.

'ಚಾಲಕನ ನಿಯಂತ್ರಣ ತಪ್ಪಿದ ಕಾರು, ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆಯಿತು' ಎಂದು ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ತಿಳಿಸಿದರು.

ವಿಚ್ಛೇದಿತ ಪತ್ನಿ, ಪುತ್ರಿ ಮೇಲೆ ಆ್ಯಸಿಡ್ ದಾಳಿ

ಚಿತ್ರದುರ್ಗ: ಹಬ್ಬಕ್ಕೆಂದು ಸಂಬಂಧಿಗಳ ಮನೆಗೆ ಬಂದಿದ್ದ ಮಾಜಿ ಪತ್ನಿ ಹಾಗೂ ಪುತ್ರಿ ಸೇರಿ ನಾಲ್ವರ ಮೇಲೆ ವ್ಯಕ್ತಿಯೊಬ್ಬ ಗುರುವಾರ ರಾತ್ರಿ ಇಲ್ಲಿನ ಮಾಳಪ್ಪನಹಟ್ಟಿಯಲ್ಲಿ ಆ್ಯಸಿಡ್ ದಾಳಿ ನಡೆಸಿ ಪರಾರಿಯಾಗಿದ್ದಾನೆ.

ನೆಹರೂ ನಗರದ ನಿವಾಸಿ ಸೊಹೇಲ್ ಬಾಷಾ ತನ್ನ ಮಾಜಿ ಪತ್ನಿ ತಾಸಿನಾ ಬಾನು, ಪುತ್ರಿ ಮತ್ತು ಮಾಜಿ ಪತ್ನಿಯ ಸಂಬಂಧಿಗಳ ಮೇಲೆ ದಾಳಿ ನಡೆಸಿದ್ದಾನೆ.

ಸೊಹೇಲ್ –ತಾಸಿನಾ ಬಾನು ಪ್ರೀತಿಸಿ ಮದುವೆಯಾಗಿದ್ದರು. ತೀವ್ರ ಕಿರುಕುಳದ ಕಾರಣ ನೀಡಿ ತಾಸಿನಾ ಬಾನು ವಿಚ್ಛೇದನ ಪಡೆದು, ಮಕ್ಕಳೊಂದಿಗೆ ಬೆಂಗಳೂರಿನಲ್ಲಿ ನೆಲಸಿದ್ದರು. ಹಬ್ಬಕ್ಕೆಂದು ಸಹೋದರಿ ಮನೆಗೆ ಬಂದಿದ್ದರು.

ಏಕಾಏಕಿ ಮನೆಗೆ ನುಗ್ಗಿದ ಆರೋಪಿ ಆ್ಯಸಿಡ್ ದಾಳಿ ನಡೆಸಿ, ಮಚ್ಚಿನಿಂದ ಹಲ್ಲೆ ನಡೆಸಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

'ಗಾಯಾಳುಗಳನ್ನು ದಾವಣಗೆರೆ ಆಸ್ಪತ್ರೆಗೆ ದಾಖಲಿಸಲಾಗಿದೆ. ಆರೋಪಿ ಬಂಧನಕ್ಕೆ ಕಾರ್ಯಾಚರಣೆ ನಡೆದಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ತಿಳಿಸಿದರು. ಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಚೋದನಕಾರಿ ಪೋಸ್ಟ್; ಯುವತಿ ಬಂಧನ

ಮಂಗಳೂರು: ಸಾಮಾಜಿಕ ಜಾಲತಾಣಗಳಲ್ಲಿ ಕೋಮು ಪ್ರಚೋದನಕಾರಿ ಪೋಸ್ಟ್‌ಗಳನ್ನು ಹಾಕಿದ ಆರೋಪದ ಮೇರೆಗೆ ಬೆಳ್ತಂಗಡಿ ತಾಲ್ಲೂಕಿನ ಯುವತಿಯೊಬ್ಬಳನ್ನು ಬಂಧಿಸಲಾಗಿದೆ ಎಂದು ಮಂಗಳೂರು ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ.

ಬಜಪೆ ಠಾಣೆ ವ್ಯಾಪ್ತಿಯಲ್ಲಿ 2025ನೇ ಸಾಲಿನಲ್ಲಿ ಕೋಮು ಪ್ರಚೋದನೆ ಪೋಸ್ಟ್‌ಗಳ ಹಂಚಿಕೆ ಕುರಿತು ಕಂಕನಾಡಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಯುವತಿಯನ್ನು ಬಂಧಿಸಿ, ಮೊಬೈಲ್ ಫೋನ್ ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ನೀರಾನೆ ದಾಳಿ: ಪಶುವೈದ್ಯೆ ಸಾವು

ತ್ಯಾವರೆಕೊಪ್ಪ ಸಿಂಹ ಧಾಮದಲ್ಲಿ ಅವಘಡ– ಚಿಕಿತ್ಸೆ ನೀಡಲು ತೆರಳಿದ್ದ ಟ್ರೇನಿ ವೈದ್ಯೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಇಲ್ಲಿನ ತ್ಯಾವರೆಕೊಪ್ಪ ಹುಲಿ ಸಿಂಹ ಧಾಮದಲ್ಲಿ ಗುರುವಾರ ತಡರಾತ್ರಿ ಚಿಕಿತ್ಸೆ ನೀಡಲು ತೆರಳಿದ್ದ ಪಶುವೈದ್ಯೆ ಡಾ.ಸಮೀಕ್ಷಾ ರೆಡ್ಡಿ ಅವರ ಮೇಲೆ ನೀರಾನೆ 'ಹಂಸಿಣಿ' ತೀವ್ರ ದಾಳಿ ನಡೆಸಿದೆ. ಚಿಕಿತ್ಸೆಗೆ ಸ್ಪಂದಿಸದೇ ವೈದ್ಯೆ ಶುಕ್ರವಾರ ಬೆಳಿಗ್ಗೆ ನಿಧನರಾಗಿದ್ದಾರೆ.


ಡಾ. ಸಮೀಕ್ಷಾ ರೆಡ್ಡಿ

ಸಮೀಕ್ಷಾ ರೆಡ್ಡಿ (27) ಮೂಲತಃ ಬೆಂಗಳೂರಿನ ಬನ್ನೇರುಘಟ್ಟ ನಿವಾಸಿ, ಫಾರ್ಮಾಸಿಸ್ಟ್ ಧ್ರುವಕುಮಾರ್ ಹಾಗೂ ಶೈಲಜಾ ದಂಪತಿಯ ಪುತ್ರಿ. ಹೆಬ್ಬಾಳದ ಪಶುವೈದ್ಯಕೀಯ ಕಾಲೇಜಿನಲ್ಲಿ (ಜಿಕೆವಿಕೆ) ಪದವಿ ಮುಗಿಸಿದ್ದ ಅವರು ಒಂದೂವರೆ ತಿಂಗಳ ಹಿಂದಷ್ಟೇ ಇಲ್ಲಿನ ಹುಲಿ ಸಿಂಹ ಧಾಮಕ್ಕೆ ತರಬೇತಿಗೆ ನೇಮಕಗೊಂಡಿದ್ದರು.

ಪರಿಶೀಲನೆಗೆ ತೆರಳಿದ್ದರು: ಹುಲಿ-ಸಿಂಹ ಧಾಮದಲ್ಲಿ ವಿಷ್ಣು ಹಾಗೂ ಹಂಸಿಣಿ ಎಂಬ ಗಂಡು ಮತ್ತು ಹೆಣ್ಣು ನೀರಾನೆ ಇವೆ. ಹಂಸಿಣಿ ಎಂಟು ತಿಂಗಳು ತುಂಬಿದ್ದ ಗರ್ಭಿಣಿ. ನಾಲ್ಕು ದಿನಗಳಲ್ಲಿ ಹೆರಿಗೆಗೆ ದಿನ ನಿಗದಿಯಾಗಿತ್ತು. ಈ ಹೊತ್ತಿನಲ್ಲಿ ಸಾಮಾನ್ಯವಾಗಿ ನೀರಾನೆಗಳು ಆಹಾರ ಸೇವಿಸುವುದಿಲ್ಲ. ನಿತ್ಯ ಗಮನಿಸುತ್ತಿದ್ದ ಸಮೀಕ್ಷಾ ಗುರುವಾರ ರಾತ್ರಿ 11 ಗಂಟೆ ವೇಳೆಗೆ ವಾಹನ ಚಾಲಕ ಕಾರ್ತಿಕ್ ಜೊತೆ ನೀರಾನೆಗಳು ಇದ್ದ ಬಾವಿಯೊಳಗೆ ತೆರಳಿದ್ದಾರೆ.

ನೀರಿನಲ್ಲಿ ಕದಲದೇ ಕುಳಿತಿದ್ದ ಹಂಸಿಣಿಯ ದೇಹದ ಉಷ್ಣಾಂಶ ಪರಿಶೀಲಿಸಿದ್ದಾರೆ. ಈ ವೇಳೆ ಏಕಾಏಕಿ ವ್ಯಗ್ರಗೊಂಡ ಹಂಸಿಣಿ, ಇಬ್ಬರ ಬೆನ್ನತ್ತಿದೆ. ಬಾವಿಯ ಏಣಿ ಹತ್ತಿ ಕಾರ್ತಿಕ್ ಹೊರಗೆ ಬಂದಿದ್ದಾರೆ. ಹಿಂದೆಯೇ ಏಣಿ ಹತ್ತುತ್ತಿದ್ದ ಡಾ.ಸಮೀಕ್ಷಾ ಕಾಲು ಜಾರಿ ಕೆಳಗೆ ನಿಂತಿದ್ದ ನೀರಾನೆಯ ಬಾಯಿಗೆ ಸಿಕ್ಕಿಬಿದ್ದಿದ್ದಾರೆ. ಈ ವೇಳೆ ಅದು ಬಾಯಿ ಒತ್ತಿ ಹಿಡಿದಿದ್ದು, ಮೈ ಮೂಳೆಗಳು ಮುರಿದು ತೀವ್ರ ರಕ್ತ ಸ್ರಾವದಿಂದ ಪ್ರಜ್ಞಾಹೀನರಾಗಿದ್ದಾರೆ ಎಂದು ತಿಳಿದುಬಂದಿದೆ.

ವಿಶ್ವ ನೀರಾನೆ ದಿನಾಚರಣೆಯಂದು ತ್ಯಾವರೆಕೊಪ್ಪ ಮೃಗಾಲಯದಲ್ಲಿ ನೀರಾನೆ 'ಹಂಸಿಣಿ' ಜೊತೆ ಫೋಟೊ ತೆಗೆದುಕೊಂಡು ಸ್ಟೇಟಸ್‌ಗೆ ಹಾಕಿದ್ದ ಡಾ.ಸಮೀಕ್ಷಾ ರೆಡ್ಡಿ

ಸ್ಥಳಕ್ಕೆ ಬಂದ ಮೃಗಾಲಯ ಸಿಬ್ಬಂದಿ, ಹಂಸಿಣಿಯನ್ನು ಓಡಿಸಿ, ಗಾಯಗೊಂಡಿದ್ದ ಸಮೀಕ್ಷಾ ರೆಡ್ಡಿ ಅವರನ್ನು ಕೊಂಡೊಯ್ದು ಇಲ್ಲಿನ ಮ್ಯಾಕ್ಸ್ ಆಸ್ಪತ್ರೆಗೆ ದಾಖಲಿಸಿದ್ದರು.

'ಡಾ.ಸಮೀಕ್ಷಾ ಅವರು ಫೆ. 1ರಂದು ತರಬೇತಿ ಟ್ರೈನಿ ವೈದ್ಯೆಯಾಗಿ ಮೃಗಾಲಯ ಸೇರಿದ್ದರು. ರಾತ್ರಿ ನೀರಾನೆ ಬಳಿ ಹೋಗಲು ಏನು ಕಾರಣ. ಅಲ್ಲಿಗೆ ತೆರಳಲು ಅವರಿಗೆ ಯಾರು ಏನು ಸೂಚನೆ ನೀಡಿದ್ದರು ಎಂದು ತಿಳಿದಿರಲಿಲ್ಲ. ಆ ಬಗ್ಗೆ ಪರಿಶೀಲಿಸುತ್ತೇವೆ' ಎಂದು ಹುಲಿ-ಸಿಂಹ ಧಾಮದ ಕಾರ್ಯನಿರ್ವಾಹಕ ನಿರ್ದೇಶಕ ಅಮಾರಕ್ಷರ್ ತಿಳಿಸಿದರು.

ತನಿಖೆಗೆ ಅರಣ್ಯ ಸಚಿವರ ಸೂಚನೆ

ತರಬೇತಿ ನಿರತ ವೈದ್ಯೆಯು ನೀರಾನೆಗೆ ಚಿಕಿತ್ಸೆ ನೀಡಲು ತೆರಳಿದ್ದ ವೇಳೆ ಸುರಕ್ಷತಾ ನಿಯಮಗಳ ಪಾಲನೆ ಆಗಿದೆಯೇ ಎಂಬುದರ ಬಗ್ಗೆ ತನಿಖೆ ನಡೆಸಲು ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚಿಸಿದ್ದಾರೆ. ತನಿಖೆ ನಡೆಸಿ 7 ದಿನಗಳೊಳಗೆ ವರದಿ ನೀಡುವಂತೆ ಶಿವಮೊಗ್ಗದ ಅರಣ್ಯ ವಿಭಾಗದ ಸಿಸಿಎಫ್‌ಗೆ ಸೂಚನೆ ನೀಡಿದ್ದಾರೆ.

'ಟ್ರೈನಿ ವೈದ್ಯೆ ಕಳುಹಿಸಿದ್ದು ಸರಿಯೇ?'

'ತರಬೇತಿ ನಿರತ ವೈದ್ಯೆಯನ್ನು ಮಾರ್ಗದರ್ಶಕರ ನೆರವಿಲ್ಲದೆ ನೀರಾನೆಯಂತಹ ದೈತ್ಯ ಪ್ರಾಣಿಯ ಆರೋಗ್ಯ ಪರಿಶೀಲಿಸಲು ಬಿಟ್ಟಿದ್ದು ಸರಿಯೇ' ಎಂದು ಡಾ.ಸಮೀಕ್ಷಾ ರೆಡ್ಡಿ ಸೋದರ ಮಾವ ರಾಜಶೇಖರ್ ಪ್ರಶ್ನಿಸಿದರು.

'ಸಮೀಕ್ಷಾ ಪೋಷಕರಿಗೆ ಒಬ್ಬಳೇ ಮಗಳು. ವನ್ಯಜೀವಿಗಳ ಬಗ್ಗೆ ವಿಪರೀತ ಕಾಳಜಿ ಹೊಂದಿದ್ದಳು' ಎಂದು ನೊಂದುಕೊಂಡರು.

ಘಟನೆ ನಡೆದ ದಿನ ಹಿರಿಯ ವೈದ್ಯ ಡಾ.ಮುರಳಿ ಮನೋಹರ್ ಯುಗಾದಿ ಹಬ್ಬದ ಕಾರಣ ರಜೆಯಲ್ಲಿದ್ದರು ಎಂದು ಮೂಲಗಳು ತಿಳಿಸಿವೆ.

ಯುಗಾದಿ ಜಾತ್ರೆ ಸಂಭ್ರಮ...

ಚಾಮರಾಜನಗರ ಜಿಲ್ಲೆ ಹನೂರು ತಾಲ್ಲೂಕಿನ ಮಲೆ ಮಹದೇಶ್ವರ ದೇವಸ್ಥಾನದಲ್ಲಿ ಗುರುವಾರ ಯುಗಾದಿ ಜಾತ್ರೆ ಮಹೋತ್ಸವಕ್ಕೆ ಅಪಾರ ಭಕ್ತರು ಸಾಕ್ಷಿಯಾದರು

ಠಾಣೆಗೆ ಕರೆತಂದಿದ್ದ ವ್ಯಕ್ತಿ ಸಾವು

ಕಿರುಕುಳ ಆರೋಪ: ಠಾಣೆ ಮುಂದೆ ಶವವಿಟ್ಟು ಆಕ್ರೋಶ

ಪ್ರಜಾವಾಣಿ ವಾರ್ತೆ

ಹುಳಿಯಾರು(ತುಮಕೂರು): ವಿಚಾರಣೆಗಾಗಿ ಗುರುವಾರ ಹುಳಿಯಾರು ಪೊಲೀಸ್ ಠಾಣೆಗೆ ಕರೆತಂದಿದ್ದ ವ್ಯಕ್ತಿ ಠಾಣೆ ಮುಂದೆಯೇ ಕುಸಿದು ಬಿದ್ದು ಮೃತಪಟ್ಟಿದ್ದಾರೆ.

ಕಾಂತರಾಜು

'ಪೊಲೀಸರು ಥಳಿಸಿದ್ದರಿಂದ ಜೀವ ಹೋಗಿದೆ. ಇದು ಲಾಕ್‌ಅಪ್ ಡೆತ್ ಪ್ರಕರಣ. ಸಿಐಡಿ ತನಿಖೆಗೆ ವಹಿಸಬೇಕು' ಎಂದು ಗ್ರಾಮಸ್ಥರು ತಡರಾತ್ರಿ ಠಾಣೆ ಬಳಿ ಶವವಿಟ್ಟು ಪ್ರತಿಭಟಿಸಿದರು.

ಯಳನಡು ಗ್ರಾಮದ ಗುಡಿಗೌಡ ಕಾಂತರಾಜು (50) ಮೃತರು. ಇಸ್ಪೀಟ್ ಆಡುತ್ತಿದ್ದ ಅವರನ್ನು ಪೊಲೀಸರು ಇನ್ನೂ ನಾಲ್ವರ ಸಮೇತ ಹುಳಿಯಾರು ಪೊಲೀಸ್ ಠಾಣೆಗೆ ಕರೆದೊಯ್ದಿದ್ದರು.

ಠಾಣೆಯಲ್ಲಿ ಕಾಂತರಾಜು ಅಸ್ವಸ್ಥರಾಗಿದ್ದರು. ಹೊರ ಬರುತ್ತಿದ್ದಂತೆಯೇ ಠಾಣೆ ಬಳಿ ಕುಸಿದು ಬಿದ್ದಿದ್ದರು. ಕೂಡಲೇ ಆಸ್ಪತ್ರೆಗೆ ಸಾಗಿಸಲಾಯಿತು. ಪರೀಕ್ಷಿಸಿದ ವೈದ್ಯರು ಮೃತಪಟ್ಟಿರುವುದಾಗಿ ದೃಢಪಡಿಸಿದರು. ಜಿಲ್ಲಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು.

ಹುಳಿಯಾರು ಠಾಣೆ ಮುಂಭಾಗ ಯಳನಡು ಗ್ರಾಮಸ್ಥರು ಪ್ರತಿಭಟಿಸಿದರು

'ಸಂಜೆ 5.30ರಿಂದ ರಾತ್ರಿ 8 ಗಂಟೆಯ ತನಕ ಠಾಣೆಯಲ್ಲಿ ಉಳಿಸಿಕೊಂಡಿದ್ದರು. ಕಾಂತರಾಜು ಅಸ್ವಸ್ಥರಾಗಿ ಠಾಣೆಯಲ್ಲಿ ಮಲಗಿದ್ದರು. ಪೊಲೀಸರು ಕುಡಿಯಲು ನೀರೂ ಕೊಡಲಿಲ್ಲ. ಮಲಗಿದ್ದ ಕಾಂತರಾಜುಗೆ ಪೊಲೀಸರು ಕಾಲಿನಿಂದ ಒದ್ದು ಎಬ್ಬಿಸಿದರು. ಅಲ್ಲಿಂದ ಹೊರ ಬರುತ್ತಿದ್ದಂತೆಯೇ ಅವರು ಕುಸಿದು ಬಿದ್ದರು. ಪೊಲೀಸರು ತಕ್ಷಣಕ್ಕೆ ಸ್ಪಂದಿಸಲಿಲ್ಲ. ನಾವು ಕೂಗಾಡಿದ ನಂತರ ಆಸ್ಪತ್ರೆಗೆ ಕರೆದುಕೊಂಡು ಹೋಗಲು ವಾಹನ ತರಿಸಿದರು' ಎಂದು ಕಾಂತರಾಜು ಜತೆಗೆ ಠಾಣೆಗೆ ಹೋಗಿದ್ದ ಸತೀಶ್ ಆರೋಪಿಸಿದರು. ಮಾಜಿ ಸಚಿವ ಜೆ.ಸಿ. ಮಾಧುಸ್ವಾಮಿ ಠಾಣೆಗೆ ಭೇಟಿ ನೀಡಿದ್ದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್ ಮಧ್ಯರಾತ್ರಿ ಠಾಣೆಗೆ ತೆರಳಿ ಪರಿಸ್ಥಿತಿ ಪರಿಶೀಲಿಸಿದರು.

> **ಠಾಣೆಗೆ ಕರೆ ತಂದ ನಂತರ ಸಾವು ಸಂಭವಿಸಿದೆ. ಪ್ರಕರಣವನ್ನು ಸಿಐಡಿ ತನಿಖೆಗೆ ನೀಡಲಾಗುವುದು. ಸಾವಿಗೆ ಕಾರಣ ಏನು ಎಂಬುವುದು ಮರಣೋತ್ತರ ಪರೀಕ್ಷೆ ವರದಿಯಲ್ಲಿ ತಿಳಿಯುತ್ತದೆ**
>
> **ಜಿ.ಪರಮೇಶ್ವರ,** ಗೃಹಸಚಿವ

'ಬಿ' ಫಾರಂ ಇಲ್ಲದೇ ನಾಮಪತ್ರ ಸಲ್ಲಿಸಿದ ಶಾಮನೂರು ಶಿವಶಂಕರಪ್ಪ ಮೊಮ್ಮಗ

ದಾವಣಗೆರೆ: 8 ಜನರಿಂದ ನಾಮಪತ್ರ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಯುಗಾದಿ ಹಬ್ಬದ ಚಂದ್ರದರ್ಶನದ ಶುಭದಿನವಾದ ಶುಕ್ರವಾರ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಬಿಜೆಪಿಯ ಅಧಿಕೃತ ಅಭ್ಯರ್ಥಿ ಮತ್ತು ಕಾಂಗ್ರೆಸ್‌ನ ಟಿಕೆಟ್ ಆಕಾಂಕ್ಷಿಗಳು ಸೇರಿದಂತೆ 8 ಜನ ಅಭ್ಯರ್ಥಿಗಳು 9 ನಾಮಪತ್ರ ಸಲ್ಲಿಸಿದರು.

ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳು ಪಕ್ಷದ 'ಬಿ' ಫಾರಂ ಜೊತೆಗೆ ಸೋಮವಾರ ಮತ್ತೊಂದು ಸುತ್ತಿನ ನಾಮಪತ್ರ ಸಲ್ಲಿಕೆ ಮಾಡಲಿದ್ದಾರೆ.

ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ, ಶಾಮನೂರು ಶಿವಶಂಕರಪ್ಪ ಅವರ ಮೊಮ್ಮಗ ಸಮರ್ಥ ಶಾಮನೂರು ಸೇರಿ ನಾಲ್ವರು ಉಮೇದುವಾರಿಕೆ ಸಲ್ಲಿಸಿದರು. ಕಾಂಗ್ರೆಸ್ ಟಿಕೆಟ್ ಘೋಷಣೆಗೂ ಮುನ್ನವೇ ತಾಯಿ, ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಜೊತೆ ಬಂದ ಸಮರ್ಥ, ಪಕ್ಷದ 'ಬಿ' ಫಾರಂ ಸಿಗುವ ವಿಶ್ವಾಸದಲ್ಲಿ ಉಮೇದುವಾರಿಕೆ ಸಲ್ಲಿಸಿದರು.

ಉಪಚುನಾವಣೆಗೆ ಅಧಿಸೂಚನೆ ಪ್ರಕಟವಾದ 3 ದಿನಗಳಲ್ಲಿ ಒಂದು ನಾಮಪತ್ರ ಸಲ್ಲಿಕೆಯಾಗಿತ್ತು. ನಾಮಪತ್ರ ಸಲ್ಲಿಕೆಗೆ ಮಾರ್ಚ್ 23 ಅಂತಿಮ ದಿನ. ಶನಿವಾರ ಮತ್ತು ಭಾನುವಾರ ರಜೆ ಇರುವ ಕಾರಣಕ್ಕೆ ಶುಕ್ರವಾರ, ಕಾಂಗ್ರೆಸ್, ಬಿಜೆಪಿ, ಆಮ್ ಆದ್ಮಿ ಪಾರ್ಟಿ (ಎಎಪಿ) ಅಭ್ಯರ್ಥಿಗಳು ಹಾಗೂ ಐವರು ಪಕ್ಷೇತರರಾಗಿ ನಾಮಪತ್ರ ಸಲ್ಲಿಸಿದರು.

ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರೊಂದಿಗೆ ಬಂದು ನಾಮಪತ್ರ ಸಲ್ಲಿಸಿದ ಸಮರ್ಥ –ಪ್ರಜಾವಾಣಿ ಚಿತ್ರ

ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಉಪ ಚುನಾವಣೆ - 2026

ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಹಾಗೂ ಸಂಸದೆ ಡಾ.ಪ್ರಭಾ ಅವರ ಪುತ್ರ 27 ವರ್ಷದ ಸಮರ್ಥ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ. ಪಕ್ಷವು ಟಿಕೆಟ್ ಘೋಷಿಸುವ ಮೊದಲೇ ಉಮೇದುವಾರಿಕೆ ಸಲ್ಲಿಸಿದ್ದು ಕುತೂಹಲ ಕೆರಳಿಸಿದೆ. ಕಾಂಗ್ರೆಸ್ ಅಭ್ಯರ್ಥಿ ಹಾಗೂ ಪಕ್ಷೇತರರಾಗಿ ಅವರು ಎರಡು ಪ್ರತಿ ನಾಮಪತ್ರಗಳನ್ನು ಚುನಾವಣಾಧಿಕಾರಿಗೆ ಸಲ್ಲಿಸಿದರು.

'ಕಾಂಗ್ರೆಸ್ 'ಬಿ' ಫಾರಂ ಸಿಗುವ ಸಂಪೂರ್ಣ ವಿಶ್ವಾಸವಿದೆ. ಶುಭಗಳಿಗೆ ಎಂದು ನಾಮಪತ್ರ ಸಲ್ಲಿಸಿದ್ದೇನೆ. ಸೋಮವಾರ ಮತ್ತೊಮ್ಮೆ ರಾಜ್ಯ ನಾಯಕರೊಂದಿಗೆ ಉಮೇದುವಾರಿಕೆ ನೀಡಲಿದ್ದೇನೆ' ಎಂದು ಸಮರ್ಥ ಶಾಮನೂರು ಸುದ್ದಿಗಾರರೊಂದಿಗೆ ಮಾತನಾಡಿದರು.

ಈ ನಡುವೆ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಸಾದಿಕ್ ಪೈಲ್ವಾನ್ ಕೂಡ ಪಕ್ಷದ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ. 'ಬಿ' ಫಾರಂ ಸಿಗುವ ವಿಶ್ವಾಸದಲ್ಲಿ ಸಲ್ಲಿಸಿರುವುದಾಗಿ ಹೇಳಿದ್ದಾರೆ.

ಬಿಜೆಪಿ ಅಭ್ಯರ್ಥಿ ಚರಂತಿಮಠ ನಾಮಪತ್ರ

ಬಾಗಲಕೋಟೆ: ಬಾಗಲಕೋಟೆ ಕ್ಷೇತ್ರದ ಉಪಚುನಾವಣೆಗೆ ಮಾಜಿ ಶಾಸಕ ವೀರಣ್ಣ (ವೀರಭದ್ರಯ್ಯ) ಚರಂತಿಮಠ ಶುಕ್ರವಾರ ಬಿಜೆಪಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದರು. ಬಿಜೆಪಿ ಗುರುವಾರ ವೀರಣ್ಣ ಅವರಿಗೆ ಟಿಕೆಟ್ ಘೋಷಿಸಿತ್ತು. ಪಕ್ಷದ ಮುಖಂಡರೊಂದಿಗೆ ಸೋಮವಾರ ಮೆರವಣಿಗೆಯಲ್ಲಿ ಬಂದು, ಮತ್ತೊಮ್ಮೆ ನಾಮಪತ್ರ ಸಲ್ಲಿಸುವರು.

ಕಾಂಗ್ರೆಸ್ ನಿಂದ ಗೋವಿಂದರಾಜ ಬಳ್ಳಾರಿ (ಬಿ ಫಾರಂ ಸಲ್ಲಿಸಿಲ್ಲ), ಪಕ್ಷೇತರರಾಗಿ ಆನಂದ ಜಕಾತಿ, ಬ್ಲೂ ಇಂಡಿಯಾ ಪಕ್ಷದಿಂದ ತಳವಾರ ಶಿವಕುಮಾರ, ಉತ್ತಮ ಪ್ರಜಾಕೀಯ ಪಕ್ಷದಿಂದ ಅಂತೋಷ ಸವ್ವಸೆ ನಾಮಪತ್ರ ಸಲ್ಲಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ವೀರಣ್ಣ ಚರಂತಿಮಠ, 'ರಾಜ್ಯ ಸರ್ಕಾರದ ಆಡಳಿತ ವೈಫಲ್ಯದ ಬಗ್ಗೆ ಜನರಿಗೆ ಆಕ್ರೋಶವಿದೆ. ಬಿಜೆಪಿ, ಹಿಂದುತ್ವಕ್ಕೆ ಗುಲುವಾಗಲಿದೆ' ಎಂದರು.

ವೀರಣ್ಣ ಚರಂತಿಮಠ ಅವರು ದಶಕಗಳಿಂದ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಕಾರ್ಯಾಧ್ಯಕ್ಷರಾಗಿದ್ದಾರೆ. ಬಾಗಲಕೋಟೆ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಅಧ್ಯಕ್ಷ ಸೇರಿ ಹಲವು ಸಂಸ್ಥೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಇದ್ದಾರೆ. ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರಕ್ಕೂ ಅಧ್ಯಕ್ಷರಾಗಿದ್ದರು.

2004ರಲ್ಲಿ ಮೊದಲ ಬಾರಿಗೆ ಕ್ಷೇತ್ರದಿಂದ ವಿಧಾನಸಭೆ ಪ್ರವೇಶಿಸಿದ್ದರು. 2008 ಮತ್ತು 2018ರ ಚುನಾವಣೆಯಲ್ಲಿ ಗೆದ್ದಿದ್ದರು. 2013 ಮತ್ತು 2023ರ ಚುನಾವಣೆಯಲ್ಲಿ ಸೋತಿದ್ದರು.

ಚರಂತಿಮಠ, ದಾಸಕರಿಯಪ್ಪಗೆ ಬ

ನವದೆಹಲಿ: ಕರ್ನಾಟಕದ ಎರಡು ಕ್ಷೇತ್ರಗಳ ಉಪಚುನಾವಣೆಗೆ ಅಭ್ಯರ್ಥಿಗಳ ಪಟ್ಟಿಯನ್ನು ಬಿಜೆಪಿ ಗುರುವಾರ ಪ್ರಕಟಿಸಿದೆ. ಬಾಗಲಕೋಟೆ ಕ್ಷೇತ್ರದಲ್ಲಿ ಮಾಜಿ ಶಾಸಕ ವೀರಣ್ಣ ಚರಂತಿಮಠ ಹಾಗೂ ದಾವಣಗೆರೆ ದಕ್ಷಿಣದಲ್ಲಿ ಬಿಜೆಪಿ ಎಸ್‌ಟಿ ಮೋರ್ಚಾ ರಾಜ್ಯ ಘಟಕದ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ ಅವರಿಗೆ ಟಿಕೆಟ್ ನೀಡಿದೆ.

ಬಾಗಲಕೋಟೆಗೆ ಚರಂತಿಮಠ ಹಾಗೂ ದಾವಣಗೆರೆ ದಕ್ಷಿಣಕ್ಕೆ ಶ್ರೀನಿವಾಸ್, ಹಿಂದಿನ ಚುನಾವಣೆಗಳಲ್ಲಿ ಸೋತಿದ್ದ ಬಿ.ಜಿ. ಅಜಯ್‌ಕುಮಾರ್ ಹಾಗೂ ಯಶವಂತರಾವ್ ಜಾಧವ್ ಹೆಸರನ್ನು ಬಿಜೆಪಿ ರಾಜ್ಯ ಪ್ರಮುಖರ ಸಮಿತಿ ಶಿಫಾರಸು ಮಾಡಿತ್ತು.

ಅಭ್ಯರ್ಥಿ	ಶ್ರೀನಿವಾಸ ಟಿ.ದಾಸಕರಿಯಪ್ಪ
ಕ್ಷೇತ್ರ	ದಾವಣಗೆರೆ ದಕ್ಷಿಣ
ಪಕ್ಷ	ಬಿಜೆಪಿ
ಒಟ್ಟು ಆಸ್ತಿಯ ಮೌಲ್ಯ	₹ 5.75 ಕೋಟಿ
ನಗದು	₹ 3.60 ಲಕ್ಷ
ಒಟ್ಟು ಚರಾಸ್ತಿ	₹ 34.79 ಲಕ್ಷ
ಸ್ಥಿರಾಸ್ತಿ	₹ 5.41 ಕೋಟಿ
ವಾಹನ	4 ದ್ವಿಚಕ್ರ ವಾಹನ, 1 ಕಾರು
ಚಿನ್ನ	120 ಗ್ರಾಂ ಚಿನ್ನ
ಸಾಲ	₹ 2.96 ಲಕ್ಷ
ಅಪರಾಧ ಪ್ರಕರಣ	ಇಲ್ಲ
ಪತ್ನಿ	ಸಂಧ್ಯಾ ಎಸ್.
ಒಟ್ಟು ಆಸ್ತಿಯ ಮೌಲ್ಯ	₹ 15.94 ಲಕ್ಷ
ನಗದು	₹ 90,000
ಚಿನ್ನ	120 ಗ್ರಾಂ ಚಿನ್ನ
ತಾಯಿ	ರಂಗಮ್ಮ
ಒಟ್ಟು ಆಸ್ತಿಯ ಮೌಲ್ಯ	₹ 12.14 ಲಕ್ಷ
ನಗದು	₹ 5,000
ಚಿನ್ನ	100 ಗ್ರಾಂ ಚಿನ್ನ

ಅಜಯ್ ಕುಮಾರ್ ಅವರಿಗೆ ಟಿಕೆಟ್ ನೀಡಬೇಕು ಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಅವರು ಹೈಕಮಾಂಡ್ ಮಟ್ಟದಲ್ಲಿ ಭಾರಿ ಲಾಬಿ ನಡೆಸಿದ್ದರು. ಆದರೆ, ಪಕ್ಷವು ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಬಣದಲ್ಲಿ ಗುರುತಿಸಿಕೊಂಡಿರುವ ಶ್ರೀನಿವಾಸ್ ಅವರಿಗೆ ಟಿಕೆಟ್ ನೀಡಿದೆ.

ಅ
ಕ್ಷೇತ್ರ
ಪಕ್ಷ
ಒಟ್ಟು ಆಸ್ತಿ
ನಗದು
ಒಟ್ಟು ಚರ
ಸ್ಥಿರಾಸ್ತಿ
ಸಾಲ
ಅಪರಾಧ

ಅಭ್ಯರ್ಥಿ
ಕ್ಷೇತ್ರ
ವಿದ್ಯಾರ್ಹತೆ
ನಗದು
ಚರ ಆಸ್ತಿ
ಸ್ಥಿರ ಆಸ್ತಿ
ಸಾಲ
ಪತ್ನಿ
ನಗದು
ಚರ ಆಸ್ತಿ

ಎಂಬ... ವರ್ಷದ... ಉಪಾಧ್... ದಾಸಕರಿ... ನಗರಾಭಿ... ಅಧ್ಯಕ್ಷರಾ...

ಸರಣಿ ಸಭೆ ನಡೆಸಿದ ಸುರ್ಜೇವಾಲಾ • ಸಿ.ಎಂ, ಡಿಸಿಎಂ ಜತೆ ಸಮಾಲೋಚನೆ

ದಾವಣಗೆರೆ ದಕ್ಷಿಣ: ಅಭ್ಯರ್ಥಿ ಆಯ್ಕೆ ಕಗ್ಗಂಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಬೆಂಗಳೂರಿಗೆ ಬಂದು ಸರಣಿ ಸಭೆಗಳನ್ನು ನಡೆಸಿದರೂ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಆಯ್ಕೆ ಕಗ್ಗಂಟಾಗಿಯೇ ಉಳಿಯಿತು.

ಶುಕ್ರವಾರ ಬೆಂಗಳೂರಿಗೆ ಬಂದ ಸುರ್ಜೇವಾಲಾ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಜತೆ ಸಮಾಲೋಚನೆ ನಡೆಸಿ ಎರಡು ಕ್ಷೇತ್ರಗಳ ಬಗ್ಗೆ ಅಭಿಪ್ರಾಯ ಸಂಗ್ರಹಿಸಿದರು.

ಅದಾದ ಬಳಿಕ, ಡಿ.ಕೆ. ಶಿವಕುಮಾರ್ ಸಮ್ಮುಖದಲ್ಲಿ ಎಐಸಿಸಿ ಕಾರ್ಯದರ್ಶಿಗಳಾದ ಅಭಿಷೇಕ್ ದತ್, ಗೋಪಿನಾಥ್ ಪಳನಿಸ್ವಾಮಿ, ಸಚಿವರಾದ ಈಶ್ವರ ಖಂಡ್ರೆ, ಜಮೀರ್ ಅಹಮದ್ ಖಾನ್, ಕೃಷ್ಣ ಬೈರೇಗೌಡ, ಶರಣ ಪ್ರಕಾಶ ಪಾಟೀಲ, ರಹೀಂ ಖಾನ್, ಮಧು ಬಂಗಾರಪ್ಪ, ಆರ್.ಬಿ ತಿಮ್ಮಾಪುರ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ವಿನಯಕುಮಾರ್ ಸೊರಕೆ, ಜಿ.ಸಿ.ಚಂದ್ರಶೇಖರ್ ಸೇರಿ ಹಲವು ಮುಖಂಡರೊಂದಿಗೆ ಸುದೀರ್ಘ ಸಮಾಲೋಚನೆ ಚರ್ಚೆ ನಡೆಸಿದರು.

> **ಚುನಾವಣಾ ಉಸ್ತುವಾರಿ ಸಮಿತಿಗಳು ನೀಡಿದ ವರದಿ, ಎಲ್ಲರ ಅಭಿಪ್ರಾಯಗಳನ್ನು ಹೈಕಮಾಂಡ್ ಗಮನಕ್ಕೆ ತಂದು ಶನಿವಾರದ ಒಳಗೆ ಅಭ್ಯರ್ಥಿ ಘೋಷಿಸಲಾಗುವುದು**
>
> **ರಣದೀಪ್ ಸಿಂಗ್ ಸುರ್ಜೇವಾಲಾ,** ಕಾಂಗ್ರೆಸ್ ರಾಜ್ಯ ಉಸ್ತುವಾರಿ

ಸಚಿವ ಜಮೀರ್ ಅಹಮದ್ ಖಾನ್ ಸೇರಿದಂತೆ ಹಲವು ಮುಖಂಡರು ಅಲ್ಪಸಂಖ್ಯಾತರಿಗೇ ಟಿಕೆಟ್ ನೀಡುವಂತೆ ಬಿಗಿಪಟ್ಟು ಹಿಡಿದರೆ, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಪುತ್ರನಿಗೆ ಟಿಕೆಟ್ ಕೊಡಿಸಲು ಹಲವರು ಇನ್ನಿಲ್ಲದ ಪ್ರಯತ್ನ ನಡೆಸಿದರು.

'ಅಲ್ಪಸಂಖ್ಯಾತ ಸಮುದಾಯಕ್ಕೆ ಟಿಕೆಟ್ ನೀಡಿದರೆ ಗೆಲುವು ಸಾಧ್ಯ' ಎನ್ನುವ ಜಮೀರ್ ಮಾತಿಗೆ ರಹೀಂ ಖಾನ್, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ವಿಧಾನಪರಿಷತ್ ಆಡಳಿತ ಪಕ್ಷದ ಮುಖ್ಯಸಚೇತಕ ಸಲೀಂ ಅಹಮದ್, ಶಾಸಕರಾದ ತನ್ವೀರ್ ಸೇಠ್, ರಿಜ್ವಾನ್ ಅರ್ಷದ್, ಎನ್.ಎ. ಹ್ಯಾರಿಸ್ ಸೇರಿದಂತೆ ಅಲ್ಪಸಂಖ್ಯಾತ ನಾಯಕರು ಧ್ವನಿಗೂಡಿಸಿದ್ದಾರೆ. ಈ ಕ್ಷೇತ್ರದಲ್ಲಿ ವಕ್ಫ್ ಮಂಡಳಿ ಮಾಜಿ ಅಧ್ಯಕ್ಷ ಅನ್ವರ್ ಬಾಷಾ, ವಿಧಾನಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್, ಸಾದಿಕ್ ಪೈಲ್ವಾನ್, ಸೈಫುಲ್ಲಾ ಅವರ ಪುತ್ರನ ಹೆಸರು ನೀಡಿದ್ದಾರೆ ಎನ್ನಲಾಗಿದೆ.

ಸಭೆಯ ಬಳಿಕ ಮಾತನಾಡಿದ ಸಲೀಂ ಅಹಮದ್, 'ಮುಸ್ಲಿಂ ಸಮುದಾಯಕ್ಕೆ ಟಿಕೆಟ್ ನೀಡಲು ಕೋರಿದ್ದೇವೆ. ಹೈಕಮಾಂಡ್ ಜತೆ ಚರ್ಚಿಸಿ, ನಿರ್ಧಾರ ಪ್ರಕಟಿಸುವುದಾಗಿ ಹೇಳಿದ್ದಾರೆ' ಎಂದರು.

> **ಯಾರಿಗೆ ಟಿಕೆಟ್ ನೀಡಿದರೂ ಒಮ್ಮತದಿಂದ ಕೆಲಸ ಮಾಡುವುದಾಗಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಸೇರಿದಂತೆ ಪಕ್ಷದ ಎಲ್ಲ ನಾಯಕರು ಹೇಳಿದ್ದಾರೆ**
>
> **ಡಿ.ಕೆ.ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

ಬಾಗಲಕೋಟೆ: ಮೇಟಿ ಕುಟುಂಬಕ್ಕೇ ಟಿಕೆಟ್

ಬಾಗಲಕೋಟೆ ಕ್ಷೇತ್ರದ ಅಭ್ಯರ್ಥಿ ಆಯ್ಕೆ ಕುರಿತು ಸಮಾಲೋಚನೆ ನಡೆಸಲಾಗಿದ್ದು, ಎಚ್.ವೈ.ಮೇಟಿ ಅವರ ಕುಟುಂಬದ ಸದಸ್ಯರೊಬ್ಬರಿಗೆ ಟಿಕೆಟ್ ಅಂತಿಮಗೊಳಿಸಲಾಗಿದೆ ಎಂದು ಪಕ್ಷದ ಮೂಲಗಳು ಹೇಳಿವೆ.

ಮೇಟಿ ಅವರ ಕುಟುಂಬದ ಸದಸ್ಯರು ಚುನಾವಣೆಯಲ್ಲಿ ಸ್ಪರ್ಧಿಸಲು ಪೈಪೋಟಿ ನಡೆಸುತ್ತಿದ್ದಾರೆ. ಪುತ್ರಿ ಬಾಯಕ್ಕ ಅವರಿಗೆ ಟಿಕೆಟ್ ನೀಡುವಂತೆ ಹಲವರು ಒತ್ತಡ ಹಾಕಿದ್ದಾರೆ ಎನ್ನಲಾಗಿದೆ.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ... ಕೋರಿ ಅಲ್ಪಸಂಖ್ಯಾತ ಸಮುದಾಯದ ... ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮನವಿ ... ಅಹಮದ್ ಖಾನ್, ನಸೀರ್ ಅಹಮದ್, ತ...

ಸಮರ್ಥ್‌ಗೆ ಟಿಕೆಟ್: ಹ...

ಅಲ್ಪಸಂಖ್ಯಾತ ನಾಯಕರ ಬಿಗಿಪಟ್ಟಿನ ನ... ಎಸ್.ಎಸ್.ಮಲ್ಲಿಕಾರ್ಜುನ್ ಪುತ್ರ ಸಮರ್... ಹಲವರು ಪ್ರಯತ್ನ ನಡೆಸಿದ್ದಾರೆ.

'ಬಾಗಲಕೋಟೆಯಲ್ಲಿ ಮೇಟಿ ಅವರ... ದಾವಣಗೆರೆಗೂ ಅದೇ ನಿಯಮ ಅನ್ವಯ... ಮಹಾಸಭಾದ ಅಧ್ಯಕ್ಷರೂ ಆಗಿರುವ ಸಚಿ... ಹಲವರು ಹೈಕಮಾಂಡ್ ನಾಯಕರ ಮೇ...

ಸುದ್ದಿ 2 ನಿ...

₹2.50 ಲಕ್ಷ ಸುಪ... ತಂದೆಯನ್ನು ಕೊ...

ಯಾದಗಿರಿ: ಆಸ್ತಿ ವಿಚಾರಕ್ಕೆ ಮಗನೊ... ಕೊಟ್ಟು ತಂದೆಯನ್ನು ಕೊಲೆ ಮಾಡಿಸಿದ... ಪೊಲೀಸರು ಮಗ ಸೇರಿ ಐವರನ್ನು ಬಂ...

ವಡಗೇರಾ ತಾಲ್ಲೂಕಿನ ಗೋನಾಲ... ಕೊಲೆಯಾದವರು. ಸುಪಾರಿ ನೀಡಿದ್ದ ... ಆರೋಪಿಗಳಾದ ಆಂಧ್ರಪ್ರದೇಶದ ಕನ... ಗ್ರಾಮದ ರಮೇಶ ನರಸಪ್ಪ (32), ಜಿ.... ತಿಕ್ಕಯ್ಯ (28) ಹಾಗೂ ಎಂ.ವೀರೇಶ ... ಬಂಧಿಸಲಾಗಿದೆ.

ಕೊಲೆಗೈದ ನಾಲ್ವರು ಆರೋಪಿಗಳ... ಕೆಲಸಕ್ಕೆ ಬಂದಿದ್ದರು. ಆಗ ಮಹಿಳೆಯರ... ವರ್ತಿಸಿದ್ದ. ಹಳೇ ವೈಷಮ್ಯ ಇರಿಸಿಕೊಂ... ಕೊಲೆ ಮಾಡಿದ್ದಾರೆ ಎಂದು ಪೊಲೀಸ್...

'ಮೇ ಅಂತ್ಯಕ್ಕೆ ತುಂ... ಕ್ರೆಸ್ಟ್ ಗೇಟ್ ಅಳ...



ಹೊಸಪೇಟೆ (ವಿಜಯನಗರ): '... ಅಂತ್ಯದ ವೇಳೆಗೆ ಎಲ್ಲ 33 ಕ್ರೆಸ್ಟ್‌ಗೇ... ಅಳವಡಿಕೆ ಕಾರ್ಯ ಪೂರ್ಣವಾಗಲಿ... ಎನ್.ಎಸ್.ಬೋಸರಾಜು ಇಲ್ಲಿ ಹೇಳಿ...

ಅಣೆಕಟ್ಟೆಯಲ್ಲಿ ಶುಕ್ರವಾರ ಕಾ... ಬಳಿಕ ಮಾತನಾಡಿ, 'ಸದ್ಯ 18 ಗೇ... ತಿಂಗಳಲ್ಲಿ 23 ಗೇಟ್‌ಗಳ ಅಳ... ಗೇಟ್‌ಗಳನ್ನು ಮೇ ಅಂತ್ಯದೊಳಗೆ ಅ...

'ಜೂನ್‌ನಿಂದ ಮಳೆ ಬಂದು ಜ... ಹಿಂದಿನಂತೆಯೇ ನೀರು ಲಭಿಸುವ ನಿ...

'ಜಲಾಶಯದಲ್ಲಿ ಹೂಳು ತು... ನೀರು ನಿಲ್ಲುವ ಸಾಮರ್ಥ್ಯ ಕಡಿಮೆ... ಸಮಾನಾಂತರ ಜಲಾಶಯ ನಿರ್ಮಿ... ಯಿಸುತ್ತಲಿದ್ದೇವೆ. ತೆಲಂಗಾಣ ... ಬಳಿಕ ಆಂಧ್ರಪ್ರದೇಶ ಮುಖ್ಯಮಂ... ನಿರೀಕ್ಷೆಯಿದೆ' ಎಂದು ಹೇಳಿದರು.

ಸುತ್ತೂರು ಮಠದಿಂ...

ಮೈಸೂರು: ಸುತ್ತೂರು ವೀರಸಿಂಹಾಸನ ಮಹಾಸಂಸ್ಥಾನ ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಸಹಯೋಗದಲ್ಲಿ ಏ.4ರಿಂದ 6ರವರೆಗೆ ಶ್ರೀಕ್ಷೇತ್ರದಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರು ಮತ್ತು ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರಿಗೆ ಶಿಬಿರ

‘ಪತ್ನಿ ಸೇವಕಿಯಲ್ಲ, ಪತಿಯೂ ಮನೆಗೆಲಸದಲ್ಲಿ ಪಾಲುದಾರ’

ಮುಖ್ಯಾಂಶಗಳು

- ಕರ್ನಾಟಕ ಹೈಕೋರ್ಟ್ ಆದೇಶ ಪ್ರಶ್ನಿಸಿದ್ದ ಅರ್ಜಿ
- ಪತಿ, ಪತ್ನಿ ಖುದ್ದು ಹಾಜರಿಗೆ ಸುಪ್ರೀಂ ಕೋರ್ಟ್ ಸೂಚನೆ
- ಏಪ್ರಿಲ್ 27ಕ್ಕೆ ವಿಚಾರಣೆ ಮುಂದೂಡಿಕೆ

ನವದೆಹಲಿ (ಪಿಟಿಐ): ‘ಪತ್ನಿಯು ಪರಿಚಾರಕಿಯಲ್ಲ, ಜೀವನ ಸಂಗಾತಿ. ಅಡುಗೆ ಮಾಡುವುದು, ಮನೆ ಸ್ವಚ್ಛತೆ ಮತ್ತು ಬಟ್ಟೆ ಒಗೆಯುವುದು ಸೇರಿದಂತೆ ಮನೆಗೆಲಸಗಳನ್ನು ಪತ್ನಿಗೆ ಸಮನಾಗಿ ಪತಿಯೂ ಮಾಡಬೇಕು’ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

ಕರ್ನಾಟಕ ಹೈಕೋರ್ಟ್ ನೀಡಿದ್ದ ಆದೇಶವೊಂದನ್ನು ಪ್ರಶ್ನಿಸಿ ವ್ಯಕ್ತಿಯೊಬ್ಬರು ಸಲ್ಲಿಸಿದ್ದ ಅರ್ಜಿ ವಿಚಾರಣೆ ಸಂದರ್ಭದಲ್ಲಿ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರಿದ್ದ ಪೀಠವು ಈ ಅಭಿಪ್ರಾಯಪಟ್ಟಿದೆ.

ಕಿರುಕುಳದ ಕಾರಣ ಹೇಳಿ, ವ್ಯಕ್ತಿಯೊಬ್ಬರು ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸಿದ್ದರು. ಅದನ್ನು ವಿಚಾರಣಾ ನ್ಯಾಯಾಲಯವು ಮಂಜೂರು ಮಾಡಿತ್ತು. ಆದರೆ, ಹೈಕೋರ್ಟ್ ಅದನ್ನು ವಜಾಗೊಳಿಸಿತ್ತು. 2017ರಲ್ಲಿ ಮದುವೆಯಾಗಿದ್ದ ದಂಪತಿ, 2019ರಿಂದ ಪ್ರತ್ಯೇಕವಾಗಿದ್ದರು.

‘ಕಿರುಕುಳ ಏನು?’ ಎಂದು ಸುಪ್ರೀಂ ಕೋರ್ಟ್ ಪೀಠವು ಅರ್ಜಿದಾರರ ಪರ ವಕೀಲರನ್ನು ಪಶ್ನಿಸಿತು. ‘ಆಕೆ ಅನುಚಿತವಾಗಿ ವರ್ತಿಸುತ್ತಿದ್ದು, ಅಡುಗೆ ಮಾಡುತ್ತಿಲ್ಲ’ ಎಂದು ವಕೀಲರು ತಿಳಿಸಿದರು.

‘ಕಾಲ ಬದಲಾಗಿದೆ. ನೀವೂ ಮನೆ ಕೆಲಸಗಳಲ್ಲಿ ಸರಿ ಸಮಾನವಾಗಿ ಭಾಗವಹಿಸಬೇಕು. ಹೈಕೋರ್ಟ್ ಸರಿಯಾದ ಆದೇಶ ನೀಡಿದೆ’ ಎಂದು ನ್ಯಾಯಮೂರ್ತಿ ವಿಕ್ರಮ್ ನಾಥ್ ಹೇಳಿದರು.

‘ಇಬ್ಬರೂ ಸರ್ಕಾರಿ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಇಬ್ಬರನ್ನೂ ಕರೆಸಿ, ಅವರೊಂದಿಗೆ ಮಾತನಾಡುತ್ತೇವೆ’ ಎಂದು ಸೂಚಿಸಿದ ಪೀಠ, ಏಪ್ರಿಲ್ 27ಕ್ಕೆ ವಿಚಾರಣೆಯನ್ನು ಮುಂದೂಡಿ, ಖುದ್ದು ಹಾಜರಾಗಲು ಸೂಚಿಸಿತು.

ವಿಚಾರಣೆ: ಹಿಂದೆ ಸರಿದ ಸಿಜೆಐ

ಚುನಾವಣಾ ಆಯೋಗದ ನೇಮಕಾತಿ ಕಾಯ್ದೆ ಸಿಂಧುತ್ವ ಪ್ರಶ್ನಿಸಿದ ಪಿಐಎಲ್

ನವದೆಹಲಿ (ಪಿಟಿಐ): ಮುಖ್ಯ ಚುನಾವಣಾ ಆಯುಕ್ತರು (ಸಿಇಸಿ) ಹಾಗೂ ಚುನಾವಣಾ ಆಯೋಗಗಳಿಗೆ (ಇಸಿ) ನೇಮಿಸುವ ಜವಾಬ್ದಾರಿ ಸಮಿತಿಯಿಂದ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅವರನ್ನು ಹೊರಗಿಟ್ಟ 2023ರ ಕಾನೂನಿನ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಲಾದ ಅರ್ಜಿ ವಿಚಾರಣೆಯಿಂದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ಹಿಂದೆ ಸರಿದಿದ್ದಾರೆ.

ಸೂರ್ಯಕಾಂತ್

‘ನನ್ನ ಮೇಲೆ ಹಿತಾಸಕ್ತಿ ಸಂಘರ್ಷದ ಆರೋಪವಿದೆ. ಇದರಲ್ಲಿ ಹಿತಾಸಕ್ತಿ ಸಂಘರ್ಷವಿದೆ’ ಎಂದು ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಹಾಗೂ ವಿಪುಲ್ ಪಂಚೋಲಿ ಪಕ್ಕದಲ್ಲಿ ಕೂತಿದ್ದ ಸಿಜೆಐ ತಿಳಿಸಿದರು.

ಮುಖ್ಯ ಚುನಾವಣಾಧಿಕಾರಿ ಹಾಗೂ ಇತರೆ ಚುನಾವಣಾಧಿಕಾರಿ (ನೇಮಕಾತಿ, ಸೇವಾ ನಿಯಮ ಹಾಗೂ ಸೇವಾವಧಿ) ಕಾಯ್ದೆ 2023ರ ಕೆಲವು ನಿಬಂಧನೆಗಳ ಸಿಂಧುತ್ವ ಕುರಿತಾಗಿ ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ವಿಚಾರಣೆಯನ್ನು ನ್ಯಾಯಪೀಠ ನಡೆಸಿತು.

‘ಸೇವಾ ಹಿರಿತನ ಹೊಂದಿರುವ ನ್ಯಾಯಮೂರ್ತಿಗಳ ಪೀಠದಲ್ಲಿ ಈ ಅರ್ಜಿಯ ವಿಚಾರಣೆ ನಡೆಸುವುದು ಸೂಕ್ತ’ ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ತಿಳಿಸಿದರು.

ಅರ್ಜಿದಾರರಲ್ಲಿ ಒಬ್ಬರ ಪರ ಹಾಜರಾದ ಹಿರಿಯ ವಕೀಲ ಪ್ರಶಾಂತ್ ಭೂಷಣ್ ಅವರು ಸಿಜೆಐ ಅವರ ನಿಲುವನ್ನು ಬೆಂಬಲಿಸಿದರು.

ಈ ಸಲಹೆಯನ್ನು ಪರಿಗಣಿಸಿದ ಮುಖ್ಯ ನ್ಯಾಯಮೂರ್ತಿ ಏಪ್ರಿಲ್ 7ರಂದು ಮತ್ತೊಂದು ಪೀಠಕ್ಕೆ ವರ್ಗಾಯಿಸಲು ತಿಳಿಸಿದರು. ಹೊಸ ಪೀಠವು ಹಿರಿಯ ನ್ಯಾಯಮೂರ್ತಿಗಳನ್ನು ಒಳಗೊಂಡಿರುತ್ತದೆ ಎಂದು ಈ ವೇಳೆ ಸ್ಪಷ್ಟಪಡಿಸಿದರು.

ಮುಖ್ಯ ಚುನಾವಣಾ ಆಯುಕ್ತರ ನೇಮಕಾತಿ ಸಮಿತಿಯು ಪ್ರಧಾನಿ, ವಿರೋಧ ಪಕ್ಷದ ನಾಯಕ ಹಾಗೂ ಮುಖ್ಯ ನ್ಯಾಯಮೂರ್ತಿ ಅವರನ್ನು ಒಳಗೊಂಡಿರಬೇಕು ಎಂದು ಸುಪ್ರೀಂ ಕೋರ್ಟ್ ಐತಿಹಾಸಿಕ ತೀರ್ಪು ನೀಡಿತ್ತು. ಇದಾದ ಬೆನ್ನಲ್ಲೇ, ಕಾನೂನಿಗೆ ತಿದ್ದುಪಡಿ ತಂದಿದ್ದ ಕೇಂದ್ರ ಸರ್ಕಾರ, ಸಮಿತಿಯಿಂದ ಸಿಜೆಐ ಅವರನ್ನು ಕೈಬಿಟ್ಟಿತ್ತು.

ಕಾನೂನು ಜಾರಿಗೆ ಬರುವವರೆಗೂ ಈಗಿನ ವ್ಯವಸ್ಥೆಯೂ ಜಾರಿಯಲ್ಲಿರಲಿದೆ ಎಂದು ನ್ಯಾಯಪೀಠ ಸ್ಪಷ್ಟಪಡಿಸಿತ್ತು.

2023ರ (ತಿದ್ದುಪಡಿ) ಕಾಯ್ದೆಯ ಪ್ರಕಾರ, ಪ್ರಧಾನಿ, ಪ್ರಧಾನಿ ನೇಮಿಸಿದ್ದ ಕೇಂದ್ರ ಸಚಿವ, ವಿರೋಧ ಪಕ್ಷದ ನಾಯಕರನ್ನು ಸಮಿತಿಯು ಒಳಗೊಂಡಿತ್ತು. ಸಮಿತಿಯಿಂದ ಸಿಜೆಐ ಅವರನ್ನು ಕೈಬಿಡುವ ಮೂಲಕ ನೇಮಕಾತಿ ಪ್ರಕ್ರಿಯೆಯ ಸ್ವಾತಂತ್ರ್ಯವನ್ನು ದುರ್ಬಲಗೊಳಿಸಲಾಗಿದೆ ಎಂದು ಕಾಂಗ್ರೆಸ್ ನಾಯಕಿ ಜಯಾ ಠಾಕೂರ್ ಹಾಗೂ ಅಸೋಸಿಯೇಟೆಡ್ ಡೆಮಾಕ್ರಟಿಕ್ ರಿಫಾರ್ಮ್ಸ್ ಸಂಸ್ಥೆಯು ಪಿಐಎಲ್ ಸಲ್ಲಿಸಿತ್ತು.

ಯುಎಪಿಎ ಪ್ರಕರಣ: ಜಾಮೀನು

ನವದೆಹಲಿ (ಪಿಟಿಐ): ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯಡಿ (ಯುಎಪಿಎ) ಬಂಧಿಸಲಾಗಿದ್ದ ಇಬ್ಬರು ಆರೋಪಿಗಳಿಗೆ ದೆಹಲಿ ಹೈಕೋರ್ಟ್ ಶುಕ್ರವಾರ ಜಾಮೀನು ಮಂಜೂರು ಮಾಡಿದೆ.

ದೇಶದಲ್ಲಿ ಭಯೋತ್ಪಾದಕ ಚಟುವಟಿಕೆ ನಡೆಸಲು ಸಾಮಾಜಿಕ ಜಾಲತಾಣಗಳ ಮೂಲಕ ಸಂಚು ರೂಪಿಸಿದ ಆರೋಪದಲ್ಲಿ ಹ್ಯಾರಿಸ್ ನಿಸಾರ್ ಲಾಂಗೂ ಮತ್ತು ಜಮೀನ್ ಆದಿಲ್ ಭಟ್ ಅವರನ್ನು ಎನ್‌ಐಎ 2021ರಲ್ಲಿ ವಶಕ್ಕೆ ಪಡೆದಿತ್ತು. ವಿಚಾರಣಾ ನ್ಯಾಯಾಲಯ ಅವರ ಜಾಮೀನು ಅರ್ಜಿಯನ್ನು 2023ರಲ್ಲಿ ತಿರಸ್ಕರಿಸಿತ್ತು.

ನ್ಯಾಯಮೂರ್ತಿ ನವೀನ್ ಚಾವ್ಲಾ ಮತ್ತು ರವೀಂದರ್ ದುದೇಜಾ ಅವರ ನ್ಯಾಯ ಪೀಠವು, ಇಬ್ಬರು ಆರೋಪಿಗಳು ಈಗಾಗಲೇ ಅನುಭವಿಸಿರುವ ನಾಲ್ಕೂವರೆ ವರ್ಷಗಳ ಸೆರೆವಾಸ, ಮತ್ತು ಕೃತ್ಯದಲ್ಲಿ ಅವರ ಸೀಮಿತ ಪಾತ್ರವನ್ನು ಪರಿಗಣಿಸಿ, ಜಾಮೀನು ಅರ್ಜಿಯನ್ನು ಮಾನ್ಯ ಮಾಡಿದೆ.

‘ಸ್ವಾರ್ಥವೇ ಘರ್ಷಣೆಗೆ ಮೂಲ’

ನಾಗ್ಪುರ (ಪಿಟಿಐ): ಜಗತ್ತಿನಲ್ಲಿ ಘರ್ಷಣೆ ಮತ್ತು ಬಿಕ್ಕಟ್ಟುಗಳಿಗೆ ಸ್ವಾರ್ಥ ಹಿತಾಸಕ್ತಿಗಳು, ಪ್ರಾಬಲ್ಯದ ಬಯಕೆಯೇ ಮೂಲ ಕಾರಣ ಎಂದು ಆರ್‌ಎಸ್‌ಎಸ್ ಸರಸಂಘ ಚಾಲಕ ಮೋಹನ್ ಭಾಗವತ್ ಹೇಳಿದರು.

ಏಕತೆ, ಶಿಸ್ತು ಮತ್ತು ಧರ್ಮದ ಅನುಸರಣೆಯಿಂದ ಶಾಂತಿ ಸಾಧ್ಯ ಎಂದು ಅವರು ಪ್ರತಿಪಾದಿಸಿದರು. ನಾಗ್ಪುರದಲ್ಲಿ ವಿಶ್ವ ಹಿಂದೂ ಪರಿಷತ್‌ನ (ವಿಎಚ್‌ಪಿ) ವಿದರ್ಭ ಪ್ರಾಂತ ಕಚೇರಿಗೆ ಶಂಕುಸ್ಥಾಪನೆ ನೆರವೇರಿಸಿದ ಬಳಿಕ ಅವರು ಸಭೆಯಲ್ಲಿ ಮಾತನಾಡಿದರು.

ಸುಮಾರು 2,000 ವರ್ಷಗಳಿಂದಲೂ ಜಗತ್ತು ಸಂಘರ್ಷಗಳನ್ನು ತಡೆಯಲು ವಿವಿಧ ವಿಚಾರಗಳನ್ನು ಪ್ರಯೋಗಿಸಿದೆ. ಆದರೆ ಯಶಸ್ಸು ಕಂಡಿರುವುದು ಅಲ್ಪ ಮಾತ್ರ ಎಂದರು.

ಧಾರ್ಮಿಕ ಅಸಹಿಷ್ಣುತೆ, ಬಲವಂತದ ಮತಾಂತರ, ಶ್ರೇಷ್ಠತೆ ಮತ್ತು ಕೀಳರಿಮೆಯ ವಿಚಾರಗಳು ಇನ್ನೂ ಅಸ್ತಿತ್ವದಲ್ಲಿವೆ ಎಂದ ಅವರು, ಸಂಘರ್ಷ ಬಿಟ್ಟು ಸಾಮರಸ್ಯ ಮತ್ತು ಸಹಕಾರದಿಂದ ಮುನ್ನಡೆಯುವಂತೆ ಕರೆ ನೀಡಿದರು.

‘ಭಾರತವು ಮಾನವೀಯತೆಯನ್ನು ನಂಬುತ್ತದೆ. ಆದರೆ ಇತರರು ಶ್ರೇಷ್ಠತೆಯ ಅಸ್ತಿತ್ವ ಮತ್ತು ಉಳಿವಿಗಾಗಿ ಹೋರಾಟದಲ್ಲಿ ತೊಡಗಿದ್ದಾರೆ. ಜಗತ್ತಿಗೆ ಬೇಕಿರುವುದು ಸಾಮರಸ್ಯವೇ ಹೊರತು ಸಂಘರ್ಷವಲ್ಲ’ ಎಂದು ಹೇಳಿದರು.

‘ಸಮುದಾಯದ ವಿರುದ್ಧ ದ್ವೇಷ ಭಾಷಣ ಸಲ್ಲ’

ನವದೆಹಲಿ (ಪಿಟಿಐ): ಬ್ರಾಹ್ಮಣ ಸಮುದಾಯವನ್ನು ಗುರಿಯಾಗಿರಿಸಿಕೊಂಡು ದ್ವೇಷ ಭಾಷಣ ಮಾಡುವುದನ್ನು ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸುವಂತೆ ಕೋರಿ ಸಲ್ಲಿಸಲಾದ ಅರ್ಜಿಯನ್ನು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಇಂತಹ ಬೆಳವಣಿಗೆಯನ್ನು ‘ಬ್ರಾಹ್ಮಣಫೋಬಿಯಾ’ ಎಂದು ಬಣ್ಣಿಸಿದೆ.

ಮಹಾಲಿಂಗಂ ಬಾಲಾಜಿ ಅವರು ವಾದ ಮಂಡಿಸಿದ ಅರ್ಜಿ ವಿಚಾರಣೆ ನಡೆಸಲು ನಿರಾಕರಿಸಿದ ನ್ಯಾಯಮೂರ್ತಿ ಬಿ.ವಿ.ನಾಗರತ್ನ ಹಾಗೂ ಉಜ್ವಲ್ ಭುಯಾನ್ ನೇತೃತ್ವದ ನ್ಯಾಯಪೀಠವು, ಯಾವುದೇ ಸಮುದಾಯದ ವಿರುದ್ಧ ದ್ವೇಷ ಭಾಷಣ ಮಾಡಬಾರದು ಎಂದು ತಿಳಿಸಿದೆ.

‘ಯಾವುದೇ ಸಮುದಾಯದ ವಿರುದ್ಧ ದ್ವೇಷ ಭಾಷಣ ಮಾಡುವುದನ್ನು ಒಪ್ಪುವುದಿಲ್ಲ. ಇದು ಶಿಕ್ಷಣ, ಬೌದ್ಧಿಕ ಬೆಳವಣಿಗೆ ಹಾಗೂ ಸಹಿಷ್ಣುತೆಯನ್ನು ಒಳಗೊಂಡಿದೆ. ಎಲ್ಲರೂ ಭ್ರಾತೃತ್ವವನ್ನು ಪಾಲಿಸಿದರೆ, ಎಲ್ಲಿಯೂ ದ್ವೇಷ ಭಾಷಣ ಇರುವುದಿಲ್ಲ’ ಎಂದು ನ್ಯಾಯಮೂರ್ತಿ ನಾಗರತ್ನ ತಿಳಿಸಿದ್ದಾರೆ.

ದ್ವೇಷ ಭಾಷಣದ ವಿಚಾರದಲ್ಲಿ ಒಂದು ಸಮುದಾಯಕ್ಕೆ ಮಾತ್ರ ಏಕೆ ರಕ್ಷಣೆ ಕೋರಲಾಗಿದೆ ಎಂದು ಈ ವೇಳೆ ಅರ್ಜಿದಾರರನ್ನು ಪ್ರಶ್ನಿಸಿದರು.

ಅರ್ಜಿದಾರರು ಸ್ವತಃ ಅರ್ಜಿ ಹಿಂಪಡೆಯಲು ಮಾಡಿದ ಮನವಿಗೆ ನ್ಯಾಯಾಲಯವು ಸಮ್ಮತಿ ನೀಡಿತು.

‘ಅರ್ಜಿದಾರರು ಅರ್ಜಿಯನ್ನು ಹಿಂದಕ್ಕೆ ಪಡೆಯಲು ಒಪ್ಪಿದ್ದಾರೆ. ಅವರು ಸಲ್ಲಿಕೆಯನ್ನು ದಾಖಲೆಯಲ್ಲಿ ಇರಿಸಲಾಗಿದೆ. ಅರ್ಜಿ ಹಿಂದಕ್ಕೆ ಪಡೆದಿರುವ ಕಾರಣ, ಅರ್ಜಿ ವಜಾಗೊಳಿಸಲಾಗಿದೆ’ ಎಂದು ನ್ಯಾಯಪೀಠ ತಿಳಿಸಿದೆ.

ಎನ್‌ಸಿಇಆರ್‌ಟಿ ಪುಸ್ತಕ ಪರಿಶೀಲನೆಗೆ ಸಮಿತಿ

ನವದೆಹಲಿ (ಪಿಟಿಐ): ಎನ್‌ಸಿಇಆರ್‌ಟಿಯ ಎಂಟನೇ ತರಗತಿ ಪುಸ್ತಕದ ‘ನ್ಯಾಯಾಂಗದಲ್ಲಿ ಭ್ರಷ್ಟಾಚಾರ’ ಕುರಿತ ಅಧ್ಯಾಯದ ಪರಿಶೀಲನೆಗಾಗಿ ಸುಪ್ರೀಂ ಕೋರ್ಟ್‌ನ ಇಬ್ಬರು ನಿವೃತ್ತ ನ್ಯಾಯಮೂರ್ತಿಗಳು ಮತ್ತು ಮಾಜಿ ಅಟಾರ್ನಿ ಜನರಲ್ ಅವರನ್ನು ಒಳಗೊಂಡ ಸಮಿತಿಯನ್ನು ರಚನೆ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಶುಕ್ರವಾರ ತಿಳಿಸಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯಾ ಬಾಗ್ಚಿ, ವಿಪುಲ್ ಎಂ.ಪಾಂಚೋಲಿ ಅವರಿಗೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಈ ಮಾಹಿತಿ ತಿಳಿಸಿದರು.

ನಿವೃತ್ತ ನ್ಯಾಯಮೂರ್ತಿಗಳಾದ ಇಂದು ಮಲ್ಹೋತ್ರಾ, ಅನಿರುದ್ಧ ಬೋಸ್ ಹಾಗೂ ಮಾಜಿ ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ಅವರನ್ನು ಸಮಿತಿಯು ಒಳಗೊಂಡಿದೆ ಎಂದು ಹೇಳಿದರು.

ಜೆಡಿಯು ಅಧ್ಯಕ್ಷ ಸ್ಥಾನಕ್ಕೆ ನಿತೀಶ್ ನಾಮಪತ್ರ

ನವದೆಹಲಿ (ಪಿಟಿಐ): ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗುವ ಮೂಲಕ ರಾಷ್ಟ್ರ ರಾಜಕಾರಣಕ್ಕೆ ಮರಳಲು ಸಿದ್ಧತೆ ನಡೆಸಿರುವ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಜೆಡಿಯು ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದಾರೆ.

ಜೆಡಿಯು ರಾಷ್ಟ್ರೀಯ ಕಾರ್ಯಾಧ್ಯಕ್ಷ ಸಂಜಯ್ ಕುಮಾರ್ ಝಾ ಅವರು ಪಕ್ಷದ ಕೇಂದ್ರ ಕಚೇರಿಯಲ್ಲಿ ನಿತೀಶ್ ಅವರ ಪರವಾಗಿ ಗುರುವಾರ ನಾಮಪತ್ರ ಸಲ್ಲಿಸಿದರು.

ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಲು ಮಾರ್ಚ್ 22ರವರೆಗೂ ಕಾಲಾವಕಾಶ ಇದೆ. ವಾಪಸ್ ಪಡೆಯಲು 24 ಕೊನೆ ದಿನ. 23ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ.

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಗರಾಭಿವೃದ್ಧಿ ಭವನ, ನಂ.22, 17ನೇ ‘ಎಫ್’ ಅಡ್ಡ ರಸ್ತೆ, ಹಳೆ ಮದ್ರಾಸ್ ರಸ್ತೆ, ಇಂದಿರಾನಗರ 2ನೇ ಹಂತ, ಬಿಎಂಟಿಸಿ ಬಸ್ ಡಿಪೊ ಹತ್ತಿರ, ಬೆಂಗಳೂರು–560038, ದೂ: 91–80–25196100, 25196124, ಇ–ಮೇಲ್: info@kuidfc.com ವೆಬ್‌ಸೈಟ್: www.kuidfc.com
ಸಂ. ಕೆಯುಐಡಿಎಫ್‌ಸಿ/ಆಡಳಿತ/ಭದ್ರತಾ ಸಿಬ್ಬಂದಿ/ಟೆಂಡರ್/ಸಿಆರ್–65/2025–26 ದಿನಾಂಕ: 18.03.2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕೆಯುಐಡಿಎಫ್‌ಸಿ ಯ ಸಂಸ್ಥೆಯಲ್ಲಿ **ಭದ್ರತಾ ಸಿಬ್ಬಂದಿ ಹಾಗೂ ಚಾಲಕರ ಸೇವೆಯನ್ನು 2 ವರ್ಷದ** ಅವಧಿಗೆ ಪಡೆಯಲು ಅಧಿಕೃತ ಮಾನವ ಸಂಪನ್ಮೂಲ ಪೂರೈಸುವ ಸಂಸ್ಥೆಗಳಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ವಿವರಗಳು ವೆಬ್‌ಸೈಟ್ ವಿಳಾಸ **https://kppp.karnataka.gov.in** ನಲ್ಲಿ ದಿನಾಂಕ: **23.03.2026ರಿಂದ 06.04.2026ರ ಸಂಜೆ 5.30 ಗಂಟೆಯವರೆಗೂ** ಲಭ್ಯವಿರುತ್ತದೆ. ಆಸಕ್ತ ಬಿಡ್ಡುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರವೇ ಪ್ರಸ್ತಾವನೆಗಳನ್ನು ಸಲ್ಲಿಸಬಹುದಾಗಿದೆ. ಇದರ ಬಗ್ಗೆ ಮುಂದಿನ ಯಾವುದೇ ಪ್ರಕಟಣೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ವಾಸಾಸಂಇ/ ಉನಿ–ಸಿ.ಪಿ/ 6362/ ಕೆಎಸ್‌ಎಂಸಿಎ/ 2025–26 ಸಹಿ/– ಪ್ರಧಾನ ವ್ಯವಸ್ಥಾಪಕರು (ಆಡಳಿತ)

TUNGABHADRA BOARD: TB DAM
e-Procurement Long Term Tender Notice
IFB Nos.52/2025-26 to 74/2025-26 Dt.18.03.2026

Tender for **23 Nos. of Works** in respect of LLC Division, Ballari under ‘Works Category” are invited through `e-Procurement’.

Bid Document downloading Start Date & Time:	20.03.2026 at 11:00 AM
Bid Document downloading End Date & Time:	06.04.2026 at 3:00 PM
Bid Submission End Date & Time:	06.04.2026 at 5:30 PM
Date of opening of Commercial Stage: (upto Rs.50.00 Lakhs)	06.04.2026 at 6:00 PM
Date of opening of PQ Stage: (above Rs.50.00 Lakhs)	06.04.2026 at 6:00 PM
Date of opening of Commercial Stage: (Above Rs.50.00 Lakhs)	08.04.2026 at 11:00 AM

Further details can be seen @ https://tender.apeprocurement.gov.in

Ph: 08394 - 259114
Email: seibtbb@yahoo.com

Sd/-
S.Narayana Naik
Superintending Engineer
I.B, TB Board, TB Dam

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಉಪ ನಿರ್ದೇಶಕರ ಕಛೇರಿ, ಬೆಂಗಳೂರು ನಗರ ಜಿಲ್ಲೆ
ಸುಧಾರಣಾ ಸಂಸ್ಥೆಗಳ ಸಂಕೀರ್ಣ ಡಾ: ಎಂ. ಹೆಚ್.ಮರೀಗೌಡ ರಸ್ತೆ, ಬೆಂಗಳೂರು–560029. Email ID: dwcd.dd@gmail.com Phone No.080-29578688
ಸಂ:ಉಪನಿ/ಬೆಂ.ನ/ಆ/ಬಾ.ಮೂ.ಸೇ/ಟೆಂಡರ್/77/2025–26/1577 ದಿನಾಂಕ: 20.03.2026

ಟೆಂಡರ್ ಪ್ರಕಟಣೆ

2026–27ನೇ ಸಾಲಿಗೆ ಉಪ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ನಗರ ಜಿಲ್ಲೆ ಹಾಗೂ ಜಿಲ್ಲಾ ವ್ಯಾಪ್ತಿಯಡಿ ಬರುವ ಅಧೀನ ಕಛೇರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಒಂದು ವರ್ಷದ ಅವಧಿಗೆ ಅರ್ಹ ಏಜೆನ್ಸಿಗಳಿಂದ ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಇ–ಟೆಂಡರ್ ಸಲ್ಲಿಸಲು ನಿಗದಿಪಡಿಸಿದ ಅಂತಿಮ **ದಿನಾಂಕ: 01.04.2026 ಸಂಜೆ: 5:30** ಗಂಟೆಯಾಗಿದ್ದು ತಾಂತ್ರಿಕ ಬಿಡ್‌ನ್ನು **ದಿನಾಂಕ: 04.04.2026 ಬೆಳಿಗ್ಗೆ 11:30 ಗಂಟೆಗೆ** ಹಾಗೂ ಆರ್ಥಿಕ ಬಿಡ್‌ನ್ನು **ದಿನಾಂಕ: 07.04.2026 ಬೆಳಗ್ಗೆ 11:30 ಗಂಟೆಗೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: **http://eproc.karnataka.gov.in** ಅಥವಾ ದೂರವಾಣಿ ಸಂಖ್ಯೆ: 080–29578688 ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/– ಉಪ ನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಬೆಂಗಳೂರು ನಗರ ಜಿಲ್ಲೆ.
ವಾಸಾಸಂಇ/ವಾ.ಪ್ರಾ/ಎಎ/6371/2025–26

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (ಕೆಎಸ್‌ಎನ್‌ಡಿಎಂಸಿ)
(ಕರ್ನಾಟಕ ಸರ್ಕಾರದ ನೋಂದಾಯಿತ ಸಂಸ್ಥೆ)
ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ಅಟ್ಟೂರು ಲೇಔಟ್ ಹತ್ತಿರ, ಯಲಹಂಕ, ಬೆಂಗಳೂರು–560 064. ದೂ.: 080–67355000
ಸಂಖ್ಯೆ: ಕರಾನೈವಿಉಕೇ/ಎಸಿಟಿ/13/2020 ದಿನಾಂಕ: 18.03.2026

ಇ–ಟೆಂಡರ್ ಪ್ರಕಟಣೆ

ಈ ಕಚೇರಿಯು ಕೆಳಕಂಡ ಟೆಂಡರ್ ಅನ್ನು ಇ–ಸಂಗ್ರಹಣಾ ವೇದಿಕೆ ಮುಖಾಂತರ ಆಹ್ವಾನಿಸಿರುತ್ತದೆ.

a) ಟೆಂಡರ್ ಸಂಖ್ಯೆ. KSNDMC/2025-26/IND0003/Call-2 - 1530 ಟೆಲಿಮೆಟ್ರಿಕ್ ಮಳೆಮಾಪನ ಯಂತ್ರಗಳು ಸರಬರಾಜು ಮಾಡಿ, ಸ್ಥಾಪಿಸಲು ಹಾಗೂ ನಿರ್ವಹಣೆ ಮಾಡಲು. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 06.04.2026,** ಪ್ರಿ ಬಿಡ್ ಸಭೆ **ದಿನಾಂಕ: 26.03.2026, 11:00AM** ಸ್ಥಳ: KSNDMC ಕಛೇರಿ, ಯಲಹಂಕ.

b) ಟೆಂಡರ್ ಸಂಖ್ಯೆ. KSNDMC/2025-26/IND0004/Call-2 - 429 ಟೆಲಿಮೆಟ್ರಿಕ್ ಮಳೆಮಾಪನ ಯಂತ್ರಗಳು ಸರಬರಾಜು ಮಾಡಿ, ಸ್ಥಾಪಿಸಲು, ನವೀಕರಿಸಲು ಹಾಗೂ ನಿರ್ವಹಣೆ ಮಾಡಲು. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 06.04.2026,** ಪ್ರಿ ಬಿಡ್ ಸಭೆ **ದಿನಾಂಕ: 26.03.2026, 12:00PM** ಸ್ಥಳ: KSNDMC ಕಛೇರಿ, ಯಲಹಂಕ.

ಈ ಟೆಂಡರ್‌ಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಇ–ಪ್ರೊಕ್ಯೂರ್ಮೆಂಟ್ ವೇದಿಕೆಯಲ್ಲಿ **“https://kppp.karnataka.gov.in”** ಪಡೆಯಬಹುದು.

ಸಹಿ/– ನಿರ್ದೇಶಕರು

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)
ಕಾರ್ಯಪಾಲಕ ಇಂಜಿನಿಯರ್, ನಂ.2, ಕಟ್ಟಡಗಳ ವಿಭಾಗ, 1ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು. ದೂ: 080 22220227
E-Portal : https://kppp.karnataka.gov.in/#/portal/portal-home

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 20/2025–26
ದಿನಾಂಕ: 18–03–2026

ಕಾರ್ಯಪಾಲಕ ಇಂಜಿನಿಯರ್, ನಂ2 ಕಟ್ಟಡಗಳ ವಿಭಾಗ, ಬೆಂಗಳೂರು ರವರು ಕರ್ನಾಟಕದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅದಿನಿಯಮ–2000ರನ್ವಯ ಕೆಡಬ್ಲ್ಯೂ–1 ಕೆಡಬ್ಲ್ಯೂ–2 ನಿಯಮಗಳಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **(https://kppp.karnataka.gov.in/)** ಪಿಡಬ್ಲ್ಯೂಡಿಯಲ್ಲಿ ನೋಂದಣಿ ಮಾಡಿರುವ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಟೆಂಡರ್ ಪ್ರೋಸಸಿಂಗ್ ಬೆಲೆ ಮತ್ತು ಇಎಂಡಿ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿದೆ.

1. ಟೆಂಡರ್ ಡಾಕ್ಯುಮೆಂಟ್‌ನ್ನು ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೌಡ್ ಮಾಡಿಕೊಳ್ಳಲು ನಿಗದಿಪಡಿಸಿರುವ ದಿನಾಂಕ : 18.03.2026 ರಿಂದ 25.03.2026 ಸಂಜೆ 05.30 ಗಂಟೆಯವರೆಗೆ.
2. ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ : 25.03.2026 ಸಂಜೆ 5.30 ಗಂಟೆಯವರೆಗೆ.
3. ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ ದಿನಾಂಕ : 27.03.2026 ರಂದು ಬೆಳಿಗ್ಗೆ 10.30 ಕ್ಕೆ ತೆರೆಯಲಾಗುವುದು.

ಹೆಚ್ಚಿನ ವಿವರಗಳಿಗೆ ಕರ್ನಾಟಕದ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **(https://kppp.karnataka.gov.in/)** ಪಡೆಯಬಹುದಾಗಿದೆ ಹಾಗೂ ಈ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು
ನಂ.2ನೇ ಕಟ್ಟಡಗಳ ವಿಭಾಗ, ಬೆಂಗಳೂರು.
DIPR/CP/6374/Zen/2025-26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಕಂಟೋನ್‌ಮೆಂಟ್, ಬಳ್ಳಾರಿ ದೂರವಾಣಿ: 08392–200293
ಸಂ: ಕಾನಿಇಂ/ಸನೀ&ಅಂ.ಅ.ವಿ/ಬ/ಸ.ಇಂ–2/2025–26/2395 ದಿ:16.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(“KPPP” ಪೋರ್ಟಲ್ ಕೆ.ಡಬ್ಲೂ–4 ಮುಖಾಂತರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಲೆಕ್ಕಶೀರ್ಷಿಕೆ 4702 ಅಣೆಕಟ್ಟು ಪಿಕಪ್ –ಪ್ರಧಾನ ಕಾಮಗಾರಿಯಡಿ ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ 2 ಕಾಮಗಾರಿ ಹಾಗೂ ಬಳ್ಳಾರಿ ಜಿಲ್ಲೆ 01 ಕಾಮಗಾರಿಗಳಿಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಕಾರ್ಯನಿರ್ವಾಹಕ ಇಂಜಿನೀಯರವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಿಗಿಟ್ಟ ಕನಿಷ್ಠ ಅಂದಾಜು ಮೊತ್ತ ರೂ. 100.73 ಲಕ್ಷ ಟೆಂಡರಿಗಿಟ್ಟ ಗರಿಷ್ಠ ಅಂದಾಜು ಮೊತ್ತ ರೂ. 200.42 ಲಕ್ಷಗಳಿರುತ್ತದೆ. ಟೆಂಡರ್‌ನ್ನು ದಿನಾಂಕ: 17.03.2026 ರಿಂದ ದಿನಾಂಕ: 27.03.2026ರ ಸಂಜೆ 5.30 ಗಂಟೆಯವರಗೆ ಸಲ್ಲಿಸಬಹುದು. ಕಾಮಗಾರಿಯ ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 30.03.2026 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ಗಳನ್ನು ದಿನಾಂಕ:02.04.2026 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು “KPPP” ವೆಬ್‌ಸೈಟ್ http://kppp.karnataka.gov.in ನಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಬಳ್ಳಾರಿ
ಡಿಐಪಿಆರ್/ಬಳ್ಳಾರಿ/1164/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ – ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಹೊಸನಗರ ಉಪ ವಿಭಾಗ, ಹೊಸನಗರ
ಜಿಲ್ಲೆ: ಶಿವಮೊಗ್ಗ. ತಾಲ್ಲೂಕು:ಹೊಸನಗರ ಇ.ಮೇಲ್: acfhnr@gmail.com
No: ACF/HNR/ KFDF/CR-1/2025-26/99 Date: 17.03.2026

ಸವಿಸ್ತಾರ ಇ–ಟೆಂಡರ್ ಪ್ರಕಟಣೆ.
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಇ–ಟೆಂಡರ್ ಪ್ರಕಟಣೆ)

2026–27 ನೇ ಸಾಲಿನಲ್ಲಿ ಸಾಗರ ವಿಭಾಗದ ವಿವಿಧ ಅರಣ್ಯ ವಲಯಗಳ ವ್ಯಾಪ್ತಿಯ ವಿವಿಧ ಪ್ರದೇಶದಲ್ಲಿ KFDF ಯೋಜನೆಯಡಿ 98 ಮುಂದುವರೆದ ಕಾಮಗಾರಿ ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ ಹಾಗೂ ಸಸಿಗಳ ನಿರ್ವಹಣೆ ಮಾಡಲು ಅಂದಾಜು ಒಟ್ಟು 7.37 ಕೋಟಿ ರೂ ಗಳಿಗೆ ಕಾಮಗಾರಿಗಳಿಗೆ ಅನುಭವ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದ್ವಿ–ಲಕೋಟೆ ಪದ್ಧತಿಯಲ್ಲಿ ಯೂನಿಟ್‌ವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:01–04–2026 ಸಂಜೆ 5–20 ಗಂಟೆಯವರೆಗೆ ನಿಗಧಿಪಡಿಸಲಾಗಿರುತ್ತದೆ. ಕಾಮಗಾರಿಗಳು ಮತ್ತು ಸ್ಥಳಗಳ ಸಂಪೂರ್ಣ ವಿವರಗಳನ್ನು ಇ– ಪ್ರಕ್ಯೂರ್‌ಮೆಂಟ್‌ನಲ್ಲಿ ವಿವರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹೊಸನಗರ ಉಪ ವಿಭಾಗ, ಹೊಸನಗರ
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25–26/108/03/2054

ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ
ನಂ.1 ಕಟ್ಟಡಗಳ ವಿಭಾಗ, ಎಸ್.ಜೆ.ಪಿ. ಆವರಣ, ಬೆಂಗಳೂರು.ದೂರವಾಣಿ: 080–22255210
ಸಂಖ್ಯೆ: ಕಾಅ/ಕವಿ.1/ಎಇ–3/ಎಇ–2/ಎಇ–ಎಲ್‌ಹೆಚ್/2025–26/86 ದಿನಾಂಕ: 18.03.2026

ಟೆಂಡರ್‌ಗಾಗಿ ಆಹ್ವಾನ

ಮೇಲ್ಕಂಡ ಇಲಾಖೆಯು ಸೂಚಿತ ಸ್ಥಳಗಳಲ್ಲಿ **ವುಡನ್ ಸ್ಟೋರೇಜ್ ಯೂನಿಟ್‌ಗಳು/ವಾರ್ಡ್‌ರೋಬ್‌ಗಳು, ಮಾಡ್ಯುಲರ್ ಕಿಚನ್, ಟಿವಿ ಯೂನಿಟ್‌ಗಳನ್ನು ಒದಗಿಸುವುದು, ಶೌಚಾಲಯ ದುರಸ್ತಿ, ಕಚೇರಿ ನವೀಕರಣ, ಆರ್ಕಿಟೆಕ್ಚರಲ್/ಒಳಾಂಗಣ/ಹೊರಾಂಗಣ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಲಹಾ ಸೇವೆಗಳು, ಎಂಎಸ್ ಗ್ರೇಟಿಂಗ್ ಒದಗಿಸುವುದು, ಪಾರ್ಕಿಂಗ್ ಏರಿಯಾಗೆ ಫ್ಲೋರಿಂಗ್ ಟೈಲ್ಸ್ ಒದಗಿಸುವುದು, ಟೆರೇಸ್‌ನ ವಾಟರ್‌ಪ್ರೂಫಿಂಗ್, ಪೇಂಟಿಂಗ್ ಒದಗಿಸುವುದು ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳು ಸೇರಿದಂತೆ ಒಟ್ಟು 05 ಕಾಮಗಾರಿಗಳಿಗೆ** ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(http://kppp.karnataka.gov.in)** ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕಾಮಗಾರಿಗಿಟ್ಟ ಅಂದಾಜು ಮೊತ್ತ: **ಕನಿಷ್ಠ ರೂ.10.07 ಲಕ್ಷಗಳು, ಗರಿಷ್ಠ ರೂ.762.62 ಲಕ್ಷಗಳು**. ಇಎಂಡಿ: **ಕನಿಷ್ಠ ರೂ.12,600/–, ಗರಿಷ್ಠ ರೂ.11,44,000/–** ಪ್ರತೀ ಕಾಮಗಾರಿಯ ಕಾಲಾವಧಿ: **2 ರಿಂದ 24 ತಿಂಗಳು (ಮಳೆಗಾಲ ಸೇರಿದಂತೆ)**. ಕಾಮಗಾರಿಯ ದಸ್ತಾವೇಜು ಬೆಲೆ: **ಕೆಪಿಪಿ ಪೋರ್ಟಲ್‌ನಲ್ಲಿ ತಿಳಿಸಿರುವಂತೆ**. ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ **ದಿನಾಂಕ: ಕ್ರ.ಸಂ.1ಕ್ಕೆ 23.03.2026, ಸಂಜೆ 5.00 ಗಂಟೆಯೊಳಗೆ ಮತ್ತು ಕ್ರ.ಸಂ.2 ರಿಂದ 5ಕ್ಕೆ 24.03.2026, ಸಂಜೆ 5.00 ಗಂಟೆಯೊಳಗೆ**. ಟೆಂಡರ್‌ಗಳನ್ನು ತೆರೆಯುವ ದಿನಾಂಕ: ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಕಾಮಗಾರಿಯ ಸಂಕ್ಷಿಪ್ತ ವಿವರ, ಇಂಡೆಂಟ್ ಸಂಖ್ಯೆಗಳು, ಅಂದಾಜು ಮೊತ್ತ, ಇಎಂಡಿ, ಕಾಲಾವಧಿ, ಮೀಸಲಾತಿ ಮತ್ತು ಇತರೆ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಚೇರಿಯಿಂದ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http://kppp.karnataka.gov.in** ಮೂಲಕ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ವಾಸಾಸಂಇ/ಉನಿ–ಸಿ.ಪಿ/6382/ಕೆಎಸ್‌ಎಂಸಿಎ/2025–26

ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಕೊಪ್ಪಳ.
ದೂರವಾಣಿ ಸಂಖ್ಯೆ: 08539–220054
ಸಂ: ಕಾನಿಇಂ/ಸನೀಮತ್ತು ಅ.ಅ.ವಿ/ಕೊಪ್ಪಳ/ತಾಶಾ/2025–26/5631 ದಿ:20–03–2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕೊಪ್ಪಳ ಹಾಗೂ ರಾಯಚುರು ಜಿಲ್ಲೆಯ ಟೆಂಡರ್ ಕಾಮಗಾರಿಗಾಗಿ 2702–4702 ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 8 ಕಾಮಗಾರಿಗಳ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಅಂದಾಜು **ಮೊತ್ತ ರೂ.11 ಲಕ್ಷಗಳಿಂದ 33.89 ಲಕ್ಷಗಳಿರುತ್ತದೆ**. ಟೆಂಡರ್‌ಗಳನ್ನು **ದಿನಾಂಕ: 23–03–2026**ರಿಂದ **ದಿನಾಂಕ: 30–03–2026 ಸಂಜೆ. 16.00**ಗಂಟೆಯವರೆಗೆ ಸಲ್ಲಿಸಬಹುದು. ಪೂರ್ವಭಾವಿ ಸಭೆ **ದಿನಾಂಕ: 27–03–2026 ರಂದು ಬೆಳ್ಳಿಗ್ಗೆ 11.00 ಗಂಟೆಗೆ** ತೆಗೆದುಕೊಳ್ಳಲಾಗುವುದು. ತಾಂತ್ರಿಕ ಬಿಡ್‌ನ್ನು **ದಿನಾಂಕ: 01–04–2026 ರಂದು ಬೆಳಿಗ್ಗೆ 11.00 ಗಂಟೆಗೆ** ತೆರೆಯಲಾಗುವುದು, ಆರ್ಥಿಕ ಬಿಡ್‌ನ್ನು **ದಿನಾಂಕ: 03–04–2026 ರಂದು ಬೆಳಿಗ್ಗೆ 11.00 ಗಂಟೆಗೆ** ತೆರೆಯಲಾಗುವುದು ಹೆಚ್ಚಿನ ಮಾಹಿತಿಗಳನ್ನು “ಕೆ.ಪಿ.ಪಿ” ವೆಬ್‌ಸೈಟ್ Karnataka Public Procurement Portalನಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಕೊಪ್ಪಳ.
ವಾ.ಸಾ.ಇ/ಕೊಪ್ಪಳ/764/ದೇಶಪಾಂಡೆಪಬ್ಲಿಸಿಟಿ/2025–26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ
ಗ್ರಾಮೀಣ ಅಭಿವೃದ್ಧಿ ಪಂಚಾಯತ ರಾಜ್ ಇಂಜನೀಯರಿಂಗ್ ಯೋಜನಾ ವಿಭಾಗ ಕಲಬುರಗಿ
ಸಂಖ್ಯೆ: ಕಾನಿಅ/ಪಂರಾಇಂಯೋವಿಕ/ತಾಶಾ/ಟೆಂಡರ/2025–26/1011 ದಿನಾಂಕ : 18–03–2026

ಇ-ಪ್ರೊಕ್ಯೂರಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ ದ್ವಿ-ಲಕೋಟೆ ಪದ್ಧತಿಯಲ್ಲಿ

1.	ಕಾಮಗಾರಿಗಳ ಇಂಡೆಂಟ್ ಸಂಖ್ಯೆ ಮತ್ತು ಟೆಂಡರಿಗಿಟ್ಟ ಅಂದಾಜು ಮೊತ್ತ	1) KRRDA/2025-26/RD/WORK_INDENT 321/call-2 APT-Rs.73,58,758.09 2) KRRDA/2025-26/RD/WORK_INDENT 324/call-2 APTt-Rs. 79,90,275.51
2.	ಲೆಕ್ಕ ಶೀರ್ಷಿಕೆ	2025–26ನೇ ಸಾಲಿನ 5054
3.	ಗುತ್ತಿಗೆದಾರರ ಅರ್ಹತೆ	3ನೇ ದರ್ಜೆ ಮತ್ತು ಮೇಲ್ಪಟ್ಟು
4.	ಟೆಂಡರ ಫಾರಂ ಪಡೆಯುವ ದಿನಾಂಕ	18–03–2026 ರಿಂದ 27–03–2026 ಸಾಯಂಕಾಲ 04:00 ಗಂಟೆವರೆಗೆ
5.	ಟೆಂಡರ ಅರ್ಜಿ ಬೆಲೆ	KPPP ನಿಯಮಾನುಸಾರ
6.	ಇ.ಎಂ.ಡಿ.	KPPP ಪೋರ್ಟಲ್ ನಲ್ಲಿ ದೊರೆಯುತ್ತದೆ.
7.	ಟೆಂಡರ ಸಲ್ಲಿಸುವ ದಿನಾಂಕ	18–03–2026 ರಿಂದ 27–03–2026 ಸಾಯಂಕಾಲ 04:00 ಗಂಟೆವರೆಗೆ
8.	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	30–03–2026 ಸಾಯಂಕಾಲ 04:01 ಗಂಟೆ ನಂತರ
9.	ಆರ್ಥಿಕ ಬಿಡ್ ತೆರೆಯುವ ದಿನಾಂಕ	01–04–2026 ಬೆಳಿಗ್ಗೆ 11:00 ಗಂಟೆ ನಂತರ
10.	ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ	ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಗ್ರಾಮಿಣಾಭಿವೃದ್ಧಿ ಪಂಚಾಯತ ರಾಜ್ ಇಂಜನೀಯರಿಂಗ್ ಯೋಜನಾ ವಿಭಾಗ ಅಂಬೇಡ್ಕರ ವಸತಿ ನಿಲಯದ ಎದುರಿಗೆ ರಾಜಾಪೂರ ರಸ್ತೆ ಕಲಬುರಗಿ E-mail : kn-gul-1@pmgsy.nic.in
11.	ಅಂತರಜಾಲ ತಾಣದ ವಿಳಾಸ	www.kppp.karnataka.gov.in

ಸಹಿ/– **ಉದಯಕುಮಾರ ಹೌದೆ**
ಕಾರ್ಯನಿರ್ವಾಹಕ ಅಭಿಯಂತರರು
ಗ್ರಾಮೀಣ ಅಭವೃದ್ಧಿ ಪಂಚಾಯತ ರಾಜ್
ಇಂಜನೀಯರಿಂಗ್ ಯೋಜನಾ ವಿಭಾಗ ಕಲಬುರಗಿ

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ.
ಕಾರ್ಯಪಾಲಕ ಅಭಿಯಂತರರು ವಿದ್ಯುತ್ ವಿಭಾಗ
ಶಿಮನಪಾಶಿ:ಕಾ.ಅ:ವಿದ್ಯುತ್:ಡಿ:ಎಂ/ಸಿ.ಆರ್:23/2025–26 ದಿನಾಂಕ:18.03.2026

ಟೆಂಡರ್ ಪ್ರಕಟಣೆ

ಇ–ಪ್ರಕ್ಯೂರ್ ಮೆಂಟ್ www.kppp.karnataka.gov.in ಮುಖಾಂತರ
ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ & ಸಮಯ: 26.03.2026 10.30 AM
ಟೆಂಡರ್ ತೆರೆಯುವ ದಿನಾಂಕ & ಸಮಯ: 27.03.2026 10.35 AM

ಕ್ರ.ಸಂ. 1. ಇಂಡೆಂಟ್ ಸಂಖ್ಯೆ: DMA/2025-26/EL/WORK_INDENT 56573 ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ವಚ್ಛ ಭಾರತ್ ಮಿಷನ್ 2.0 ಅಡಿಯಲ್ಲಿ ಅನುಪಿನಕಟ್ಟೆ, ಗ್ರಾಮದಲ್ಲಿ ನಿರ್ಮಿಸಲಾಗುತ್ತಿ ರುವ 22 TPD ಮತ್ತು 50 TPD Material Recovery Facility(MRF) ಘಟಕಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿ **ಟೆಂಡರ್ ಗಿಟ್ಟ ಮೊತ್ತ ರೂ.ಗಳಲ್ಲಿ:** 1026596.24 **ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):** 26000.00

ಕ್ರ.ಸಂ. 2. ಇಂಡೆಂಟ್ ಸಂಖ್ಯೆ: DMA/2025-26/SE7463 Providing vehicles along with driver on hire basis for Shivamogga City Corporation (3 numbers A/C Cars and 12 numbers Non A/C Cars) - Package 1 **ಟೆಂಡರ್ ಗಿಟ್ಟ ಮೊತ್ತ ರೂ.ಗಳಲ್ಲಿ:** 6541920.00 **ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):** 164000.00

ಕ್ರ.ಸಂ. 3. ಇಂಡೆಂಟ್ ಸಂಖ್ಯೆ: DMA/2025-26/SE7240 DESIGN, FABRICATING, DEVELOPMENT, INSTALLATION, OPERATION AND MAINTANANCE OF ILLUMINATED ADVERTISEMENT BOARDS AT BUS SHELTERS OF SHIVAMOGGA CITY CORPORATION **ಟೆಂಡರ್ ಗಿಟ್ಟ ಮೊತ್ತ ರೂ.ಗಳಲ್ಲಿ:** 1275000.00 **ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):** 32000.00

ಸೂಚನೆ: ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು ವೆಬ್ ಸೈಟ್ www.kppp.karnataka.gov.in ಮೂಲಕ ಪಡೆಯಬಹುದು.
ಹೆಚ್ಚಿನ ವಿವರಗಳಿಗೆ ಕಾರ್ಯಪಾಲಕ ಅಭಿಯಂತರರು(ವಿ) ರವರ ಕಛೇರಿಯನ್ನು ಕರ್ತವ್ಯದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು(ವಿ) ಮಹಾನಗರ ಪಾಲಿಕೆ, ಶಿವಮೊಗ್ಗ
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25–26/121/03/2061

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ
ಗ್ರಾಮೀಣ ಅಭಿವೃದ್ಧಿ ಪಂಚಾಯತ ರಾಜ್ ಇಂಜನೀಯರಿಂಗ್ ಯೋಜನಾ ವಿಭಾಗ ಕಲಬುರಗಿ
ಸಂಖ್ಯೆ: ಕಾನಿಅ/ಪಂರಾಇಂಯೋವಿಕ/ತಾಶಾ/ಟೆಂಡರ/2025–26/1012 ದಿನಾಂಕ : 18–03–2026

ಇ-ಪ್ರೊಕ್ಯೂರಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ ಏಕ-ಲಕೋಟೆ ಪದ್ಧತಿಯಲ್ಲಿ

1.	ಕಾಮಗಾರಿಗಳ ಇಂಡೆಂಟ್ ಸಂಖ್ಯೆ ಮತ್ತು ಟೆಂಡರಿಗಿಟ್ಟ ಅಂದಾಜು ಮೊತ್ತ	1) KRRDA/2025-26/BG/WORK_INDENT 325 APT-Rs. 33,45,371.42 2) KRRDA/2025-26/RD/WORK_INDENT 326 APT-Rs. 4629836.83
2.	ಲೆಕ್ಕ ಶೀರ್ಷಿಕೆ	2025–26ನೇ ಸಾಲಿನ 5054
3.	ಗುತ್ತಿಗೆದಾರರ ಅರ್ಹತೆ	3ನೇ ದರ್ಜೆ ಮತ್ತು ಮೇಲ್ಪಟ್ಟು
4.	ಟೆಂಡರ ಫಾರಂ ಪಡೆಯುವ ದಿನಾಂಕ	18–03–2026 ರಿಂದ 27–03–2026 ಸಾಯಂಕಾಲ 04:00 ಗಂಟೆವರೆಗೆ
5.	ಟೆಂಡರ ಅರ್ಜಿ ಬೆಲೆ	KPPP ನಿಯಮಾನುಸಾರ
6.	ಇ.ಎಂ.ಡಿ.	KPPP ಪೋರ್ಟಲ್ ನಲ್ಲಿ ದೊರೆಯುತ್ತದೆ.
7.	ಟೆಂಡರ ಸಲ್ಲಿಸುವ ದಿನಾಂಕ	18–03–2026 ರಿಂದ 27–03–2026 ಸಾಯಂಕಾಲ 04:00 ಗಂಟೆವರೆಗೆ
8.	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	30–03–2026 ಸಾಯಂಕಾಲ 04:01 ಗಂಟೆ ನಂತರ
9.	ಆರ್ಥಿಕ ಬಿಡ್ ತೆರೆಯುವ ದಿನಾಂಕ	30–03–2026 ಸಾಯಂಕಾಲ 04:00 ಗಂಟೆ ನಂತರ
10.	ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ	ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಗ್ರಾಮಿಣಾಭಿವೃದ್ಧಿ ಪಂಚಾಯತ ರಾಜ್ ಇಂಜನೀಯರಿಂಗ್ ಯೋಜನಾ ವಿಭಾಗ ಅಂಬೇಡ್ಕರ ವಸತಿ ನಿಲಯದ ಎದುರಿಗೆ ರಾಜಾಪೂರ ರಸ್ತೆ ಕಲಬುರಗಿ E-mail : kn-gul-1@pmgsy.nic.in
11.	ಅಂತರಜಾಲ ತಾಣದ ವಿಳಾಸ	www.kppp.karnataka.gov.in

ಸಹಿ/– **ಉದಯಕುಮಾರ ಹೌದೆ**
ಕಾರ್ಯನಿರ್ವಾಹಕ ಅಭಿಯಂತರರು
ಗ್ರಾಮೀಣ ಅಭವೃದ್ಧಿ ಪಂಚಾಯತ ರಾಜ್
ಇಂಜನೀಯರಿಂಗ್ ಯೋಜನಾ ವಿಭಾಗ ಕಲಬುರಗಿ

ಕರ್ನಾಟಕ ಸರ್ಕಾರ
ಪುರಸಭೆ ಕಾರ್ಯಾಲಯ, ಮುದ್ದೇಬಿಹಾಳ
ದೂರವಾಣಿ ಸಂ: 08356–220876,
ವೆಬ್‌ಸೈಟ್: www.muddebihaltown.mrc.gov.in
ಇ–ಮೇಲ್: itstaff_ulb_muddebihal@yahoo.co.in
ಕ್ರ.ಸಂ:ಪುಸಮು/ಎಸ್.ಎಫ್.ಸಿ/ವಿಶೇಷ/ಟೆಂಡರ್/2025–26
ದಿನಾಂಕ:18.03.2026

ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಯಾವತ್ತು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಸಿವ್ಹಿಲ್ ಗುತ್ತಿಗೆದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೇ, ಎಸ್. ಎಫ್. ಸಿ ವಿಶೇಷ ಅನುದಾನ 2024–25 ಯೋಜನೆಯ ಅನುದಾನದಡಿ ಪಟ್ಟಣದಲ್ಲಿ ಅತಿ ಅವಶ್ಯವಿರುವ ಈ ಕೆಳಗೆ ಕಾಣಿಸಿದಂತೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಗೊಳ್ಳಲು ಇ–ಪ್ರೋಕ್ಯೂರಮೆಂಟ್ ಮೂಲಕ ಐಟಂವಾರು ದರವಾರುಗಳನ್ನು ಅರ್ಹ ಗುತ್ತಿಗೆದಾರರಿಂದ ಕೆ.ಡಬ್ಲೂ–4 ನಮೂನೆಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಕಾಮಗಾರಿ ವಿಭಾಗದಲ್ಲಿ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಇಂಡೆಂಟ್ ನಂ: **DMA/2025-26/BD/WORK_INDENT56545**

01. ಭರ್ತಿ ಮಾಡಿದ ಕೆ.ಪಿ.ಪಿ.ಪಿ ಹಾಗೂ ಇ.ಎಂ.ಡಿ ಠೇವಣಿಯನ್ನು ಆನ್‌ಲೈನ್ ಮೂಲಕ ಸ್ವೀಕರಿಸುವ ಕೊನೆಯ ದಿನಾಂಕ: 30.03.2026 (ಸಂಜೆ 17.00 ರವರೆಗ)
02. ಕೆ.ಪಿ.ಪಿ.ಪಿ ಮುಖಾಂತರ ಟೆಂಡರ್ ತೆಗೆಯುವ ದಿನಾಂಕ: 01.04.2026 (ಬೆಳಿಗ್ಗೆ 11.00 ಘಂಟೆಗೆ)
03. ಕೆಲಸದ ಅವಧಿ: ಕೆ.ಪಿ.ಪಿ.ಪಿ ನಲ್ಲಿ ನಮೂದಿಸಿದಂತೆ.
04. ಫಾರಂ ಬೆಲೆ ಕೆ.ಪಿ.ಪಿ.ಪಿ– ಪೋರ್ಟಲ್ ಮುಖಾಂತರ ಪಡೆಯಬಹುದು. ಹಾಗೂ ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಹೆಚ್ಚಿನ ವಿವರಗಳಿಗಾಗಿ ಪುರಸಭೆ ಕಾರ್ಯಾಲಯ ಮುದ್ದೇಬಿಹಾಳ ಹಾಗೂ ವೆಬ್‌ಸೈಟ್‌ನಲ್ಲಿ ಪಡೆಯಬಹುದು.

http://kppp.karnataka.gov.in & www.muddebihal town.mrc.gov.in and any changes in tender Addendum or corrigendum can be published in kpp portal only will not publish in newspapers.

ಸಹಿ/– ಮುಖ್ಯಾಧಿಕಾರಿಗಳು, ಪುರಸಭೆ, ಮುದ್ದೆಬಿಹಾಳ
ಸಹಿ/– ಆಡಳಿತಾಧಿಕಾರಿಗಳು, ಪುರಸಭೆ, ಮುದ್ದೇಬಿಹಾಳ
ವಾಸಾಸಂಇ/ವಿಜಯಪುರ/829/ಕೆಎಸ್‌ಎಂಸಿಎ/2025–26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಊಟ ಮಾಡಿದ್ದು ಹೊಟ್ಟೆಗೆ ಹೋಗಬೇಕಾದರೆ ಬಾಯಿಯೇ ಸರಿಯಾದ ಮಾರ್ಗ. ತಾಯ್ನುಡಿ ಜನರ ಬಾಯಿ.

ಎ.ಆರ್. ಕೃಷ್ಣಶಾಸ್ತ್ರಿ

ಸಂಪಾದಕೀಯ

ಕೆಪಿಎಸ್‌ಸಿ ಸುಧಾರಣೆಗೆ ಸಮಿತಿ ಜನರ ಕಣ್ಣಿಗೆ ಮಣ್ಣೆರಚುವ ತಂತ್ರ

ಪ್ರತಿಭಾನ್ವಿತ ಉದ್ಯೋಗಾಕಾಂಕ್ಷಿಗಳ ಕನಸುಗಳನ್ನು ಕ್ರೂರವಾಗಿ ಹೊಸಕುತ್ತಲೇ ಇರುವ ಕರ್ನಾಟಕ ಲೋಕಸೇವಾ ಆಯೋಗದಲ್ಲಿ (ಕೆಪಿಎಸ್‌ಸಿ) ಸುಧಾರಣೆ ತರಲು ಸದನ ಸಮಿತಿ ರಚಿಸುವುದಾಗಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಘೋಷಿಸಿದೆ. ಆಯೋಗದ ನೇಮಕಾತಿಯಲ್ಲಿ ಅಕ್ರಮ ನಡೆದ ಆರೋಪ ಎದುರಾದಾಗಲೆಲ್ಲ ಸಮಿತಿ ರಚಿಸಿಯೋ, ತನಿಖೆ ನಡೆಸಿಯೋ ತಮ್ಮ ಮೇಲಿನ ಕಳಂಕದಿಂದ ಪಾರಾಗುವ ಅಡ್ಡಹಾದಿಯನ್ನು ಸರ್ಕಾರಗಳು ಹಿಡಿದಿರುವುದು ಇದು ಮೊದಲೇನಲ್ಲ. 384 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ 2024ರ ಫೆಬ್ರುವರಿಯಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು. ಅದರ ಪೂರ್ವಭಾವಿ ಪರೀಕ್ಷೆಯಿಂದಲೇ ಆಯೋಗಕ್ಕೆ ಮಸಿ ಮೆತ್ತಿಕೊಳ್ಳಲಾರಂಭಿಸಿತು. ಅಭ್ಯರ್ಥಿಗಳ ಆಕ್ರೋಶಕ್ಕೆ ಮಣಿದ ಸರ್ಕಾರ ಮತ್ತೊಮ್ಮೆ ಪೂರ್ವಭಾವಿ ಪರೀಕ್ಷೆ ನಡೆಸುವಂತೆ ಸೂಚಿಸಿತು. ಮುಖ್ಯಪರೀಕ್ಷೆಯಿಂದ ವ್ಯಕ್ತಿತ್ವ ಪರೀಕ್ಷೆಗೆ (ಸಂದರ್ಶನ) ಅರ್ಹತೆ ಪಡೆದವರ ಪಟ್ಟಿ ಪ್ರಕಟವಾಗುತ್ತಿದ್ದಂತೆ, ಅಕ್ರಮದ ಆರೋಪ ಆಯೋಗಕ್ಕೆ ಸುತ್ತಿಕೊಂಡಿತು. ವಿಧಾನಸಭೆ ಕಲಾಪದಲ್ಲಿಯೂ ಇದು ಪ್ರತಿಧ್ವನಿಸಿತು. ಸದಸ್ಯರ ಚರ್ಚೆಗೆ ಉತ್ತರ ಕೊಡಬೇಕಾದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಇಷ್ಟೆಲ್ಲಾ ಆಗಿದೆ, ನಾನು ಏನೆಂದು ಉತ್ತರ ಕೊಡಲಿ? ನಮ್ಮ ಬಳಿ ಹೇಳಲು ಏನಿದೆ' ಎಂದು ಬೇಸರಿಸಿಕೊಂಡು ಉತ್ತರಿಸುವ ಹೊಣೆಯನ್ನು ಸಚಿವ ಕೃಷ್ಣ ಬೈರೇಗೌಡರಿಗೆ ವಹಿಸಿದರು. 'ಕೆಪಿಎಸ್‌ಸಿಗೆ ಸುಧಾರಣೆ ತರಲು ಸದನ ಸಮಿತಿ ರಚಿಸಿ, ಅದು ನೀಡುವ ವರದಿ-ಶಿಫಾರಸುಗಳನ್ನು ಮುಂದಿನ ಅಧಿವೇಶನದಲ್ಲಿ ಮಂಡಿಸುತ್ತೇವೆ. ಎಲ್ಲ ಶಿಫಾರಸುಗಳನ್ನು ಅನುಷ್ಠಾನ ಮಾಡುತ್ತೇವೆ' ಎಂದು ಅವರು ಪ್ರಕಟಿಸಿದ್ದಾರೆ.

ಕ್ರಾಂತಿಕಾರಕ ಹೋಟಾ ಸಮಿತಿ ವರದಿಯನ್ನು ಮೂಲೆಗೆ ತಳ್ಳಿರುವ ಸರ್ಕಾರ, ಈಗ ಸದನ ಸಮಿತಿಯ ಮೂಲಕ ಕೆಪಿಎಸ್‌ಸಿಯನ್ನು ಭ್ರಷ್ಟಾಚಾರದಿಂದ ಮುಕ್ತಗೊಳಿಸುವ ನಾಟಕ ಮಾಡುತ್ತಿದೆ.

2008-2013ರಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರದ ಅವಧಿಯಲ್ಲಿಯೂ 362 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮ ನಡೆದ ಆರೋಪ ಎದುರಾಗಿತ್ತು. ಬಳಿಕ ಅಧಿಕಾರಕ್ಕೆ ಬಂದಿದ್ದ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಈ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಿತ್ತು. ಅಂದಿನ ಅಧ್ಯಕ್ಷ ಹಾಗೂ ಕೆಲವು ಸದಸ್ಯರ ವಿರುದ್ಧ ಸಿಐಡಿ ದೋಷಾರೋಪ ಪಟ್ಟಿ ಸಲ್ಲಿಸಿತ್ತು. ಆಗಲೂ ಸದನದಲ್ಲಿ ನಡೆದ ಚರ್ಚೆ ಬಳಿಕ ಕೆಪಿಎಸ್‌ಸಿ ಸುಧಾರಣೆಗೆ ಸಮಿತಿ ರಚಿಸುವುದಾಗಿ ಸರ್ಕಾರ ಘೋಷಿಸಿತ್ತು. ಕೇಂದ್ರ ಲೋಕಸೇವಾ ಆಯೋಗದ ಮಾಜಿ ಅಧ್ಯಕ್ಷ ಪಿ.ಸಿ. ಹೋಟಾ ನೇತೃತ್ವದಲ್ಲಿ ಸಮಿತಿಯನ್ನೂ ರಚಿಸಿತ್ತು. ಆಯೋಗದ ಕಾರ್ಯವೈಖರಿ ಹಾಗೂ ನೇಮಕಾತಿಯಲ್ಲಿ ಸಮಗ್ರ ಪಾರದರ್ಶಕತೆ ತಂದು, ಅಭ್ಯರ್ಥಿಗಳಲ್ಲಿ ವಿಶ್ವಾಸ ಮೂಡಿಸುವ ಮಾದರಿಯೊಳಗೆ ಹಲವು ಶಿಫಾರಸುಗಳನ್ನು ಸಮಿತಿ ಮಾಡಿತ್ತು. ಅಧ್ಯಕ್ಷ, ಸದಸ್ಯರ ಆಯ್ಕೆಗೆ ಶೋಧನಾ ಸಮಿತಿ, ವ್ಯಕ್ತಿತ್ವ ಸಂದರ್ಶನದ ನೇತೃತ್ವವನ್ನು ಅಧ್ಯಕ್ಷ ಅಥವಾ ಹಿರಿಯ ಸದಸ್ಯರೊಬ್ಬರು ನಿರ್ವಹಿಸುವ ಬದಲು ಸದಸ್ಯರೇ ಅಲ್ಲದ, ಹೊರರಾಜ್ಯದ ವಿಷಯ ತಜ್ಞರ ಮೂಲಕ ನಡೆಸಬೇಕು, ಸಂದರ್ಶನದ ತಂಡ ವಾರಕ್ಕೊಮ್ಮೆ ಬದಲಾಗಬೇಕು ಹಾಗೂ ಸಂದರ್ಶನ ಆರಂಭವಾಗುವ ಕೆಲವೇ ಗಂಟೆಗಳ ಮೊದಲು ಅವರ ಹೆಸರನ್ನು ಬಹಿರಂಗಪಡಿಸಬೇಕು, ಸಂದರ್ಶನಕ್ಕೆ ನಿಗದಿಪಡಿಸಿದ ಅಂಕವೇ ಭ್ರಷ್ಟಾಚಾರಕ್ಕೆ ಕಾರಣವಾಗಿರುವುದರಿಂದ ಅದನ್ನು 200ರಿಂದ 25ಕ್ಕೆ ಇಳಿಸಬೇಕು, ಪರೀಕ್ಷಾ ಪದ್ಧತಿಯಲ್ಲಿ ಸಮಗ್ರ ಬದಲಾವಣೆ ಮಾಡಬೇಕು, ಆಯೋಗದ ಶೇ 50ಕ್ಕಿಂತ ಹೆಚ್ಚು ಸಿಬ್ಬಂದಿಯನ್ನು ವರ್ಗಾಯಿಸಿ ಬೇರೆ ಇಲಾಖೆಯಿಂದ ನಿಯೋಜನೆ ಮಾಡಬೇಕು ಎಂಬ ಸಲಹೆಗಳು ಪ್ರಮುಖವಾಗಿದ್ದವು. 2015ರ ಅಕ್ಟೋಬರ್‌ನಲ್ಲಿ ನಡೆದ ಸಚಿವ ಸಂಪುಟ ಸಭೆ ಸಮಿತಿಯ ಶಿಫಾರಸುಗಳನ್ನು ಅಂಗೀಕರಿಸಿತ್ತು. ಅದನ್ನು ಅನುಷ್ಠಾನ ಮಾಡುವ ಸಂದರ್ಭದಲ್ಲಿ, ಸದಸ್ಯರ ನೇಮಕದಲ್ಲಿ ತನ್ನ ವಿವೇಚನಾ ಅಧಿಕಾರವನ್ನು ಉಳಿಸಿಕೊಂಡ ಸರ್ಕಾರ, ಹೋಟಾ ಸಮಿತಿಯ ಶಿಫಾರಸುಗಳನ್ನು ಜಾರಿ ಮಾಡಿರುವುದಾಗಿ ಪ್ರತಿಪಾದಿಸಿತು. ಆದರೆ, ಕೆಪಿಎಸ್‌ಸಿಗೆ ಹಿಡಿದ ಭೀಕರ ರೋಗ ವಾಸಿಯಾಗಲೇ ಇಲ್ಲ.

ಕೆಪಿಎಸ್‌ಸಿಯಲ್ಲಿ ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಡುವುದೇ ಸದಸ್ಯರ ನೇಮಕ. ಅದಕ್ಕೆ ಚಿಕಿತ್ಸೆ ಕೊಡಲು ಹೋಗದ ಸರ್ಕಾರ, ಆ ಪರಮಾಧಿಕಾರವನ್ನು ತನ್ನಲ್ಲಿಯೇ ಉಳಿಸಿಕೊಂಡಿತು. ಈಗಿರುವ ಅಧ್ಯಕ್ಷರೂ ಸೇರಿ ಹಲವು ಸದಸ್ಯರು ಬಿಜೆಪಿ ಸರ್ಕಾರದ ಅವಧಿಯಲ್ಲಿ ನೇಮಕವಾದವರು. ಕಾಂಗ್ರೆಸ್ ಸರ್ಕಾರ ಕೆಲವರನ್ನು ನೇಮಕ ಮಾಡಿದೆಯಾದರೂ ಅವರಲ್ಲಿಯೂ ಲೋಕಾಯುಕ್ತ ತನಿಖೆ ಎದುರಿಸುತ್ತಿದ್ದವರು ಇದ್ದಾರೆ. ಈಗ, ಮತ್ತೆ ನೇಮಕಾತಿ ಅಕ್ರಮದ ಸದ್ದು ಜೋರಾದ ಮೇಲೆ ಸದನ ಸಮಿತಿ ರಚಿಸುವುದಾಗಿ ಸರ್ಕಾರ ಪ್ರಕಟಿಸಿದೆ. ಸದಸ್ಯರ ನೇಮಕದಲ್ಲಿ ಹಣ ಮತ್ತು ಜಾತಿ ಪ್ರಭಾವ ಬೀರುವುದನ್ನು ತಪ್ಪಿಸಿ, ದಕ್ಷರು, ಪ್ರಾಮಾಣಿಕರನ್ನು ನೇಮಿಸದ ಹೊರತು ಸುಧಾರಣೆ ಅಸಾಧ್ಯ ಎಂಬುದು ಸರ್ಕಾರ ನಡೆಸುವವರಿಗೆ ಗೊತ್ತಿಲ್ಲದ ಸಂಗತಿಯೇನಲ್ಲ. ಹಾಗಾಗಿ, ಯುಪಿಎಸ್‌ಸಿ ಮಾದರಿಯಲ್ಲಿ ಪರೀಕ್ಷೆ ನಡೆಸಲು ನೀಲನಕ್ಷೆ ಹಾಕಿಕೊಟ್ಟ ಹೋಟಾ ಸಮಿತಿಯ ಶಿಫಾರಸುಗಳನ್ನು ಜಾರಿ ಮಾಡುವುದು ಬಿಟ್ಟು, ಸದನ ಸಮಿತಿ ರಚನೆ ಎಂಬ ಕಾಲಹರಣದ ತೀರ್ಮಾನವು ಜನರ ಕಣ್ಣಿಗೆ ಮಣ್ಣೆರಚುವ ತಂತ್ರವಷ್ಟೆ.

ಜಾಲಡಿ

ನುಡಿ-ನಡೆಯ ವಿವೇಕ

ಚಳವಳಿ, ಪ್ರತಿಭಟನೆ, ಟೀಕೆ-ಟಿಪ್ಪಣಿಗಳ ಪರಿಭಾಷೆ ಸೂಕ್ಷ್ಮವಾಗಿರದಿದ್ದರೆ, ಸಾಮಾಜಿಕ ಜಾಲತಾಣಗಳಲ್ಲಿ ಯಾವುದನ್ನು ಪೋಸ್ಟ್ ಮಾಡಬೇಕು, ಮಾಡಬಾರದು ಎಂಬ ವಿವೇಕ ಇರದಿದ್ದರೆ ಇವೆಲ್ಲ ತಮ್ಮ ಆಶಯ, ಅರ್ಥ ಕಳೆದುಕೊಳ್ಳುತ್ತವೆ. ಚಳವಳಿ, ಪ್ರತಿಭಟನೆ, ಟೀಕೆ ಟಿಪ್ಪಣಿಯಂತವು ಸೊಗಸುಗಾರರ ಟ್ರೆಂಡ್ ಆಗದಿರಲಿ.

ಎಂ. ಜವರಾಜ್, ಲೇಖಕ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಮುಖ್ಯಮಂತ್ರಿಗಳಾದವರಿಗೆ ಸರ್ಕಾರಿ ನೌಕರರ ವರ್ಗಾವಣೆಗಿಂತ ಮಾಡಬೇಕಾದ ಉತ್ತಮ ಕೆಲಸಗಳಿವೆ ಎಂದು ಹೈಕೋರ್ಟ್ ಚಾಟಿ ಬೀಸಿರುವುದು ರಾಜ್ಯದಲ್ಲಿ ದುರಾಡಳಿತ, ವರ್ಗಾವಣೆ ದಂಧೆ ಎಷ್ಟು ತಾಂಡವವಾಡುತ್ತಿದೆ ಎನ್ನುವುದಕ್ಕೆ ಕನ್ನಡಿ ಹಿಡಿದಿದೆ.

ಆರ್. ಅಶೋಕ, ವಿಧಾನಸಭಾ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಬುಧವಾರ, 21-3-2001

● **ರಕ್ಷಣಾ ಹಗರಣದಲ್ಲಿ ತಪ್ಪೆಸಗಿಲ್ಲ**

ನವದೆಹಲಿ, ಮಾರ್ಚ್ 20- ರಕ್ಷಣಾ ಅವ್ಯವಹಾರದಲ್ಲಿ ತಮ್ಮ ಸರ್ಕಾರ ಯಾವುದೇ ಪ್ರಮಾದ ಎಸಗಿಲ್ಲ ಎಂದು ಪ್ರಧಾನಿ ವಾಜಪೇಯಿ ಅವರು ಇಂದು ಬಲವಾಗಿ ಸಮರ್ಥಿಸಿಕೊಂಡರು. ಇಲ್ಲಿ ನಡೆದ ಬಿಜೆಪಿ ಸಂಸದೀಯ ಸಭೆ ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಹಗರಣದಲ್ಲಿ ಭಾಗಿಯಾಗಿರುವವರು ಎನ್ನಲಾದ ಅಪರಾಧಿಗಳು ಯಾವುದೇ ಸ್ಥಾನಮಾನ ಹೊಂದಿರಲಿ, ಅವರನ್ನು ಕಠಿಣವಾಗಿ ಶಿಕ್ಷಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

ವಿದ್ಯಾರ್ಥಿನಿ ಸಾವು: ಮಂಡ್ಯ ಪ್ರಕ್ಷುಬ್ಧ

ಮಂಡ್ಯ, ಮಾರ್ಚ್ 20- ನಾಪತ್ತೆಯಾಗಿದ್ದ ಶಾಲಾ ಬಾಲಕಿಯೊಬ್ಬಳ ಶವ ಇಂದು ಇಲ್ಲಿನ ಪೊಲೀಸ್ ಕಾಲೋನಿ ಬಾವಿಯಲ್ಲಿ ಸಿಕ್ಕಿದ್ದು, ಈಕೆಯನ್ನು ಕೆಲ ಹುಡುಗರು ಅಪಹರಿಸಿ, ಅತ್ಯಾಚಾರ ಮಾಡಿ, ಕೊಲೆಗೈದ ಶಂಕೆಯಲ್ಲಿ ಶವವಿಟ್ಟು ಪ್ರತಿಭಟನೆ ನಡೆದ ಕಾರಣ ನಗರದಲ್ಲಿ ಉದ್ರಿಕ್ತ ವಾತಾವರಣ ನಿರ್ಮಾಣವಾಗಿ, ಕಲ್ಲು ತೂರಾಟ, ಬೆಂಕಿ, ಧರಣಿ, ಮೆರವಣಿಗೆ, ಅಂಗಡಿ ಬಂದ್, ಲಾಠಿ ಪ್ರಹಾರ ನಡೆದಿದೆ.

75 ವರ್ಷಗಳ ಹಿಂದೆ

ಬುಧವಾರ, 21-3-1951

● **ಪರ್ಷಿಯಾದಲ್ಲಿ 'ಮಾರ್ಷಲ್ ಲಾ'**

ಟೆಹರಾನ್, ಮಾರ್ಚ್ 20- ಪರ್ಷಿಯಾದ ಷಾರವರ ಆಜ್ಞೆಯ ಮೇರೆ ಇಂದು ದೇಶದಾದ್ಯಂತ 'ಮಾರ್ಷಲ್ ಲಾ' ಮತ್ತು ಕರ್ಫ್ಯೂವನ್ನು ಜಾರಿಗೆ ತರಲಾಗಿದೆ. ಕಳೆದ ವಾರ ಮಜ್ಲಿಸ್ ಸಭೆಯು ಅನುಮೋದಿಸಿದ್ದ ಎಣ್ಣೆ ಗಣಿಗಳ ರಾಷ್ಟ್ರೀಕರಣ ಮಸೂದೆಯನ್ನು ಸೆನೇಟ್ ಸಭೆ ಅಂಗೀಕರಿಸಿತು.

● **ಇನಾಂ ಗ್ರಾಮಗಳ ರದ್ದು ಮಸೂದೆಗೆ ಒಮ್ಮತದ ಸಮರ್ಥನೆ**

ಬೆಂಗಳೂರು, ಮಾರ್ಚ್ 20- ಇಂದಿನ ಶಾಸನಸಭೆಯಲ್ಲಿ ರೆವೆನ್ಯೂ ಸಚಿವ ಎಚ್. ಸಿದ್ದಯ್ಯನವರು ಮಂಡಿಸಿದ ಇನಾಂ ಗ್ರಾಮಗಳನ್ನು ರದ್ದುಗೊಳಿಸುವುದಕ್ಕೆ ಸಂಬಂಧಿಸಿದ ಮಸೂದೆಯನ್ನು ಮಾತನಾಡಿದ ಸದಸ್ಯರೆಲ್ಲರೂ ಸಮರ್ಥಿಸಿದರು.

ಮಹಿಳಾ ಹಾಕಿ: ಆದಿವಾಸಿ ಶಕ್ತಿ

ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಜಾರ್ಖಂಡ್ ಮತ್ತು ಒಡಿಶಾದ ಆದಿವಾಸಿ ಸಮುದಾಯಗಳ ಹಾಡಿಗಳಿಗೆ ಹಾಕಿ ಕ್ರೀಡೆ ಬೆಳುದಿಂಗಳಾಗಿ ಪರಿಣಮಿಸಿದೆ. ಪ್ರತಿಭಾವಂತ ಆಟಗಾರ್ತಿಯರಿಂದ ಅವರ ಕುಟುಂಬಗಳ ದಿಕ್ಕು-ದೆಸೆ ಬದಲಾಗಿದೆ. ಜಾರ್ಖಂಡ್‌ನ ಸಲೀಮಾ, ಈ ಬಾರಿ ವಿಶ್ವಕಪ್ ಆಡಲು ಅರ್ಹತೆ ಗಿಟ್ಟಿಸಿರುವ ಭಾರತ ಮಹಿಳಾ ತಂಡದ ನಾಯಕಿ! ಜಾರ್ಖಂಡ್ ಹಾಗೂ ಒಡಿಶಾದ ಕ್ರೀಡಾಕ್ರಾಂತಿಯಲ್ಲಿ ಕರ್ನಾಟಕಕ್ಕೂ ಪಾಠಗಳಿವೆ.

ಜಾರ್ಖಂಡ್ ರಾಜ್ಯದ ಸಿಮಡೆಗಾ ಜಿಲ್ಲೆಯ ಬಾರ್ಕಿ ಚಾಪರ್ ಎಂಬ ಕುಗ್ರಾಮದ ಹೆಸರು ಈಗ ಅಂತರರಾಷ್ಟ್ರೀಯ ಮಟ್ಟದಲ್ಲಿ ಕೇಳಿಬರುತ್ತಿದೆ. ಇಲ್ಲಿರುವ ಆದಿವಾಸಿ ಕುಟುಂಬಗಳ ಗುಡಿಸಲುಗಳಲ್ಲಿ ಸಂಭ್ರಮದ ಬೆಳಕು ಚೆಲ್ಲಿದೆ. ಅದಕ್ಕೆ ಕಾರಣ, ಹಾಕಿ ಆಟಗಾರ್ತಿ ಸಲೀಮಾ ಟೆಟೆ. ಇದೇ ವರ್ಷ ನಡೆಯಲಿರುವ ಮಹಿಳೆಯರ ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಆಡಲು ಅರ್ಹತೆ ಗಿಟ್ಟಿಸಿರುವ ಭಾರತ ತಂಡದ ನಾಯಕಿ ಸಲೀಮಾ ಇದೇ ಗ್ರಾಮದವರು.

ಹೈದರಾಬಾದಿನ ಗಚಿಬೌಲಿಯಲ್ಲಿ ಈಚೆಗೆ ನಡೆದ ವಿಶ್ವಕಪ್ ಕ್ವಾಲಿಫೈಯರ್‌ನಲ್ಲಿ ಭಾರತ ತಂಡವು ಸಲೀಮಾ ನಾಯಕತ್ವದಲ್ಲಿ ಫೈನಲ್ ಪ್ರವೇಶಿಸಿತು. ಇದರೊಂದಿಗೆ ಒಂಬತ್ತನೇ ಬಾರಿ ವಿಶ್ವಕಪ್ ಆಡಲು ಅರ್ಹತೆ ಗಿಟ್ಟಿಸಿರುವ ತಂಡವು, ಈ ಬಾರಿ ಕಿರೀಟ ಧರಿಸುವ ಭರವಸೆ ಮೂಡಿಸಿದೆ.

1974ರಿಂದಲೂ ಭಾರತ ಮಹಿಳಾ ತಂಡವು ಹಾಕಿ ವಿಶ್ವಕಪ್ ಜಯಿಸಲು ಮಾಡುತ್ತಿರುವ ಪ್ರಯತ್ನ ಇದುವರೆಗೆ ಕೈಗೂಡಿಲ್ಲ. ಆದರೆ, ಈ ಹಾದಿಯಲ್ಲಿ ಜಾರ್ಖಂಡ್ ಮತ್ತು ಒಡಿಶಾದ ಕಾಡುಗಳಲ್ಲಿದ್ದ ಹಾಡಿಗಳು ಬೆಳಕು ಕಂಡಿರುವುದು ಹಾಕಿ ಕ್ರೀಡೆಯ ಯಶೋಗಾಥೆಯೇ ಸರಿ. ಬಡತನ, ಅನಕ್ಷರತೆಯಿಂದಾಗಿ ಬಳಲಿದ್ದ ಆದಿವಾಸಿಗಳ ಪಾಲಿಗೆ ಹಾಕಿ ಸ್ಟಿಕ್ 'ಮಂತ್ರದಂಡ'ದಂತೆ ಕೆಲಸ ಮಾಡಿದೆ. ಸರಿಯಾದ ರಸ್ತೆ, ಶೌಚಾಲಯ, ವಿದ್ಯುತ್ ದೀಪಗಳಿಲ್ಲದ ಈ ಕುಗ್ರಾಮಗಳ ಹೆಣ್ಣುಮಕ್ಕಳು ಒಲಿಂಪಿಕ್ಸ್‌ವರೆಗೆ ತಲುಪಿರುವುದು ಸಾಮಾನ್ಯ ಸಂಗತಿಯಲ್ಲ. ದಶಕಗಳ ಹಿಂದೆ ಪಂಜಾಬ್ ಹಾಗೂ ಹರಿಯಾಣದ ಆಟಗಾರರ ಪಾರಮ್ಯ ಹೆಚ್ಚಿದ್ದ ಹಾಕಿ ಕ್ರೀಡೆಯಲ್ಲಿ ಈಗ ಜಾರ್ಖಂಡ್ ಮತ್ತು ಒಡಿಶಾದ ಹಾಕಿಪಟುಗಳೂ ಪ್ರಾಬಲ್ಯ ಮೆರೆಯುತ್ತಿದ್ದಾರೆ. ಅಷ್ಟೇ ಅಲ್ಲ; ನಾಯಕತ್ವದಲ್ಲಿಯೂ ಸೈ ಎನ್ನಿಸಿಕೊಳ್ಳುತ್ತಿದ್ದಾರೆ. ಆದರೆ, ಅವರು ಈ ಮಟ್ಟಕ್ಕೆ ಬರುವ ಹಾದಿ ಸರಳವಾಗಿರಲಿಲ್ಲ.

ಸಲೀಮಾ ಅವರ ಬದುಕನ್ನೇ ನೋಡಿ. ಕೃಷಿಕೂಲಿ ಮಾಡುತ್ತಿದ್ದ ಸುಲಕ್ಷಣ್ ಟೆಟೆ ಮತ್ತು ಸುಭಾನಿ ಟೆಟೆ ದಂಪತಿಯ ನಾಲ್ವರು ಹೆಣ್ಣುಮಕ್ಕಳಲ್ಲಿ ಸಲೀಮಾ ಒಬ್ಬರು. ತಂದೆ ಸುಲಕ್ಷಣ್ ಅವರಿಗೆ ಹಾಕಿ ಆಟದ ಬಗ್ಗೆ ಒಲವು ಇತ್ತು. ಆದರೆ ಊರಿನಲ್ಲಿ ಯಾವ ಕ್ರೀಡಾ ಸೌಕರ್ಯಗಳೂ ಇರಲಿಲ್ಲ. ಅಪ್ಪನ ಆಟದ ಹುಚ್ಚು ಮಕ್ಕಳಿಗೂ ಬಂತು. ಕೆಲವು ಹುಡುಗರು ಆಡುವುದನ್ನು ನೋಡಿಯೇ ಸಲೀಮಾ, ಅವರ ಸಹೋದರಿ ಅಲಿಮಾ ಮತ್ತು ಮಹಿಮಾ ಕೂಡ ಬಿದಿರಿನಲ್ಲಿ ಮಾಡಿದ ಹಾಕಿ ಸ್ಟಿಕ್‌ಗಳಿಂದಲೇ ಮನೆಯಂಗಳದಲ್ಲಿ ಆಡುತ್ತಿದ್ದರು. ಸಲೀಮಾ ಎಲ್ಲರಿಗಿಂತ ಚುರುಕಾಗಿದ್ದರು. ಹುಡುಗರೊಂದಿಗೆ ಆಡುವಾಗಲೂ ಅವರ ಪಾದಚಲನೆ ಮತ್ತು ಚುರುಕಾದ ಪಾಸ್‌ಗಳು ಗಮನ ಸೆಳೆಯುತ್ತಿದ್ದವು. ಇದನ್ನು ಗಮನಿಸಿದ ಸ್ಥಳೀಯ ತರಬೇತುದಾರರೊಬ್ಬರು ಸಲೀಮಾಗೆ ಮಾರ್ಗದರ್ಶನ ನೀಡಿದರು. ಜಿಲ್ಲಾಕೇಂದ್ರವಾದ ಸಿಮಡೆಗಾದಲ್ಲಿರುವ ಶಾಲೆಗೆ ಸೇರಿಸುವಂತೆ ಸುಲಕ್ಷಣ್ ಅವರಿಗೆ ಸಲಹೆ ನೀಡಿದರು. ಅಲ್ಲಿಂದ ಬದುಕು ಬದಲಾಯಿತು.

ಸುಮಾರು 15 ವರ್ಷಗಳ ಹಿಂದೆ ಜಾರ್ಖಂಡ್, ಮಧ್ಯಪ್ರದೇಶ, ಒಡಿಶಾ ರಾಜ್ಯಗಳಲ್ಲಿ ಆದಿವಾಸಿ ಪ್ರತಿಭೆಗಳನ್ನು ಪ್ರೋತ್ಸಾಹಿಸಲು ಕೆಲವು ಕ್ರೀಡಾ ಯೋಜನೆಗಳು ಆರಂಭವಾಗಿದ್ದವು. ಅದರಲ್ಲೂ ಜಾರ್ಖಂಡ್ ಮತ್ತು ಒಡಿಶಾ ರಾಜ್ಯಗಳು ಕಾಡಂಚಿನಲ್ಲಿರುವ ಬುಡಕಟ್ಟು ಜನಾಂಗದ ಹುಡುಗ-ಹುಡುಗಿಯರನ್ನು ಆಯ್ಕೆ ಮಾಡಿ ಜಿಲ್ಲಾ ಕೇಂದ್ರಗಳಲ್ಲಿದ್ದ ವಸತಿ ನಿಲಯಗಳಿಗೆ ಸೇರಿಸಿಕೊಳ್ಳುತ್ತಿದ್ದರು. ಇದರ ಫಲ ಸಲೀಮಾಗೆ ಲಭಿಸಿತು. ತರಬೇತಿ ಸಿಕ್ಕಿತು. ಮಿಡ್‌ಫೀಲ್ಡರ್ ಆಗಿ ಬೆಳೆದರು. ಜೂನಿಯರ್ ಹಾಕಿಯಲ್ಲಿ ತಮ್ಮ ಸಾಮರ್ಥ್ಯ ಮೆರೆದರು. 2017ರಲ್ಲಿ ಅವರಿಗೆ ಭಾರತ ಮಹಿಳಾ ತಂಡದ ಪ್ರವೇಶ ಲಭಿಸಿತು. ರಾಣಿ ರಾಂಪಾಲ್, ಸವಿತಾ ಪೂನಿಯಾ, ವಂದನಾ ಕಟಾರಿಯಾ ಅವರಂತಹ ಖ್ಯಾತನಾಮ ಆಟಗಾರ್ತಿಯರೊಂದಿಗೆ ಆಡುತ್ತ ಬೆಳೆದ ಸಲೀಮಾ 2021ರ ಟೋಕಿಯೊ ಒಲಿಂಪಿಕ್ ಕೂಟದಲ್ಲಿ ಆಡುವ ಅವಕಾಶ ಪಡೆದರು. ಅದು ಅವರ ಜೀವನದ ಮಹತ್ವದ ಮೈಲಿಗಲ್ಲು.

ಆ ಕೂಟದಲ್ಲಿ ತಂಡವು ಸ್ವಲ್ಪ ಅಂತರದಲ್ಲಿ ಕಂಚಿನ ಪದಕ ತಪ್ಪಿಸಿಕೊಂಡಿತು. ಆಗ ಭಾರತ ತಂಡವು ಕ್ವಾರ್ಟರ್‌ಫೈನಲ್ ಪ್ರವೇಶಿಸಿದಾಗ ಇಡೀ ದೇಶ ಸಂಭ್ರಮಿಸಿತ್ತು. ಆದರೆ, ಸಲೀಮಾ ಅವರ ಊರಿನವರಿಗೆ ಆ ಸುದ್ದಿಯೇ ಗೊತ್ತಿರಲಿಲ್ಲ. ವಿದ್ಯುತ್ ಮತ್ತು ಟಿ.ವಿ. ಎರಡೂ ಅಲ್ಲಿರಲಿಲ್ಲ. ಇದನ್ನು ಅರಿತ ಜಾರ್ಖಂಡ್‌ನ ಆಗಿನ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು ಸಲೀಮಾ ಅವರ ಮನೆಗೆ ಟಿ.ವಿ. ಮತ್ತು ಇನ್ವರ್ಟರ್ ಕಳಿಸಿದ್ದರಂತೆ. ಊರಿನ ಜನರು ಕ್ವಾರ್ಟರ್‌ಫೈನಲ್ ನೋಡಿದ್ದರಂತೆ.

ಎರಡು ವರ್ಷಗಳ ಹಿಂದೆ ಸಲೀಮಾ ಭಾರತ ತಂಡದ ನಾಯಕಿಯಾಗಿ ನೇಮಕವಾದರು. ರೈಲ್ವೆ ಇಲಾಖೆಯಲ್ಲಿ ಉದ್ಯೋಗವೂ ಲಭಿಸಿತು. ಆರ್ಥಿಕವಾಗಿ ಕುಟುಂಬದ ಸ್ಥಿತಿಯೀಗ ಸುಧಾರಣೆಯಾಗಿದೆ. ರಾಂಚಿಯಲ್ಲಿ ಸರ್ಕಾರವು ಮನೆ ಕೂಡ ಕಟ್ಟಿಸಿಕೊಟ್ಟಿದೆ. ಇದು ಅಲ್ಲಿಯ ಹಾಡಿಗಳಲ್ಲಿರುವ ಹೆಣ್ಣುಮಕ್ಕಳ ಕಂಗಳಲ್ಲಿ ಕನಸುಗಳನ್ನು ಹುಟ್ಟುಹಾಕಲು ಕಾರಣವಾಗಿದೆ.

ಸಲೀಮಾ ಅವರೊಂದಿಗೆ ತಂಡದಲ್ಲಿರುವ ದೀಪಿಕಾ ಸೊರೆಂಗ್, ಬ್ಯೂಟಿ ಡುಂಗ್ ಡುಂಗ್ ಕೂಡ ಜಾರ್ಖಂಡ್‌ನ ಆದಿವಾಸಿ ಕುಟುಂಬದ ಕುಡಿಗಳು. ದೀಪಿಕಾ ಅವರು 2023ರ ಜೂನಿಯರ್ ಏಷ್ಯಾ ಕಪ್ ಜಯಿಸಿದ ಭಾರತ ತಂಡದಲ್ಲಿ ಮಿಂಚಿದ್ದರು. ಬಡ ಕುಟುಂಬದಿಂದ ಬಂದಿದ್ದ ದೀಪಿಕಾ ಈಗ ರೈಲ್ವೆ ಇಲಾಖೆಯ ಉದ್ಯೋಗಿ. ಬ್ಯೂಟಿ ಡುಂಗ್ ಡುಂಗ್ ಅವರೂ ಭಾರತ ತಂಡದಲ್ಲಿರುವ ಭರವಸೆಯ ಆಟಗಾರ್ತಿ. ಅವರ ಕತೆಯೂ ದೀಪಿಕಾ, ಸಲೀಮಾ ಅವರಂತೆಯೇ ಇದೆ.

ಜಾರ್ಖಂಡ್‌ನಲ್ಲಿ ಆದಿವಾಸಿ ಮಕ್ಕಳು ಹಾಕಿ ಕ್ರೀಡೆಯಲ್ಲಿ ಬದುಕು ಕಟ್ಟಿಕೊಳ್ಳಲು ಕಾರಣರಾದವರಲ್ಲಿ ರಾಂಚಿಯ ಅಕಾಡೆಮಿಯಲ್ಲಿ ಕೋಚ್ ಆಗಿದ್ದ ಪ್ರತಿಮಾ ಬರ್ವಾ ಅವರು ಪ್ರಮುಖರು. ಪ್ರತಿಮಾ ಅವರು ಕಳೆದ ವರ್ಷ ನಿಧನರಾದರು. ಸಲೀಮಾ, ಬ್ಯೂಟಿ, ದೀಪಿಕಾ ಸೇರಿದಂತೆ ಹಲವು ಆಟಗಾರ್ತಿಯರನ್ನು ತಮ್ಮ ಪ್ರತಿಭಾಶೋಧದಲ್ಲಿ ಆಯ್ಕೆ ಮಾಡಿಕೊಂಡು ಬಂದು ಮಾರ್ಗದರ್ಶನ ನೀಡಿದ್ದರು ಪ್ರತಿಮಾ.

ಒಡಿಶಾ ರಾಜ್ಯವು ಜಾರ್ಖಂಡ್‌ಗಿಂತ ಒಂದು ಹೆಜ್ಜೆ ಮುಂದಿದೆ. ಅಲ್ಲಿಯ ಸುಂದರಗಢ ಪ್ರದೇಶದಿಂದ ಹಲವಾರು ಹುಡುಗಿಯರು ಈಗ ಹಾಕಿ ಕ್ರೀಡೆಯಿಂದ ಬದುಕು ಕಂಡುಕೊಂಡಿದ್ದಾರೆ. ಸದ್ಯ ಭಾರತ ತಂಡದಲ್ಲಿರುವ ಸುನಲಿತಾ ಟೊಪ್ಪೊ ಕೂಡ ಅದರಲ್ಲಿ ಒಬ್ಬರು. ನವೀನ್ ಪಟ್ನಾಯಕ್ ಒಡಿಶಾದ ಮುಖ್ಯಮಂತ್ರಿ ಆಗಿದ್ದಾಗ ಅಲ್ಲಿನ ಸರ್ಕಾರವು ಹಾಕಿ ಕ್ರೀಡೆಗಾಗಿ ಅಂತರರಾಷ್ಟ್ರೀಯ ಮೂಲಸೌಲಭ್ಯಗಳನ್ನು ರಾಜ್ಯದಲ್ಲಿ ಅಭಿವೃದ್ಧಿಪಡಿಸಿರುವ ರೀತಿ ಅನುಕರಣೀಯ. ಸುಂದರಗಢದವರೇ ಆದ ದಿಲೀಪ್ ಟಿರ್ಕಿ 2022ರಲ್ಲಿ ಹಾಕಿ ಇಂಡಿಯಾದ ಅಧ್ಯಕ್ಷರಾದ ನಂತರ ಆದಿವಾಸಿ ಪ್ರದೇಶಗಳಲ್ಲಿ ಅಭಿವೃದ್ಧಿಗೆ ಮತ್ತಷ್ಟು ವೇಗ ಲಭಿಸಿದೆ. ದಶಕಗಳ ಹಿಂದೆ ಭಾರತ ಹಾಕಿ ತಂಡದ ನಾಯಕರೂ ಆಗಿದ್ದ ದಿಲೀಪ್ ಈಗ ಆಡಳಿತಗಾರರಾಗಿ ಹಲವು ಯೋಜನೆಗಳನ್ನು ಇಲ್ಲಿಗೆ ತಂದಿದ್ದಾರೆ.

ಹಾಕಿ ಅಂಗಳದಲ್ಲಿ ಆದಿವಾಸಿ ಪ್ರತಿಭೆಗಳ ಯಶೋಗಾಥೆ ಸ್ವಾತಂತ್ರ್ಯಪೂರ್ವದಿಂದಲೇ ದಾಖಲಾಗಿದೆ. 1928ರ ಆ್ಯಮ್‌ಸ್ಟರ್‌ಡ್ಯಾಮ್ ಒಲಿಂಪಿಕ್ ಕೂಟದಲ್ಲಿ ಭಾರತವು ಮೊದಲ ಬಾರಿ ಹಾಕಿ ಕ್ರೀಡೆಯಲ್ಲಿ ಚಿನ್ನ ಗೆದ್ದಾಗ ನಾಯಕರಾಗಿದ್ದ ಜಯಪಾಲ್ ಸಿಂಗ್ ಮುಂಡಾ ಅವರು ಜಾರ್ಖಂಡ್ ರಾಜ್ಯದ ಆದಿವಾಸಿ ಸಮುದಾಯದವರು. ಮಹಿಳೆಯರ ವಿಭಾಗದಲ್ಲಿ ಈ ಹಿಂದೆ ಉತ್ತಮ ಹೆಸರು ಮಾಡಿರುವ ಅಸುಂತಾ ಲಕ್ರಾ, ನಿಕಿ ಪ್ರಧಾನ್ ಅವರೂ ಆದಿವಾಸಿ ಸಮುದಾಯಕ್ಕೆ ಸೇರಿದವರು. ಈ ಕ್ರೀಡಾ ಅಭಿವೃದ್ಧಿಯು ಕಳೆದ ಎರಡು ದಶಕಗಳಲ್ಲಿ ಮತ್ತಷ್ಟು ವೇಗ ಪಡೆದುಕೊಂಡಿದೆ. ಒಡಿಶಾ ಮತ್ತು ಜಾರ್ಖಂಡ್ ರಾಜ್ಯಗಳು ಹಾಕಿ ಕ್ರೀಡೆಯಲ್ಲಿ ಸಾಧಿಸಿರುವ ಪ್ರಗತಿ ಗಮನಾರ್ಹವಾಗಿದೆ. ಪ್ರಸ್ತುತ ಜೂನಿಯರ್ ಮಟ್ಟದಲ್ಲಿ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಹೆಣ್ಣುಮಕ್ಕಳು ಇಲ್ಲಿ ಹಾಕಿ ತರಬೇತಿ ಪಡೆಯುತ್ತಿದ್ದಾರೆ.

ಒಡಿಶಾ, ಜಾರ್ಖಂಡ್‌ನಂತೆ ಕರ್ನಾಟಕದಲ್ಲಿಯೂ ಕ್ರೀಡಾ ಕ್ರಾಂತಿ ಮಾಡುವ ಅವಕಾಶ ಖಂಡಿತವಾಗಿಯೂ ಇದೆ. ಬ್ರಿಟಿಷರ ಕಾಲದಲ್ಲಿ ನಿರ್ಮಾಣವಾಗಿದ್ದ ಸೆಟ್ಲಮೆಂಟ್ ಪ್ರದೇಶಗಳಿಂದ (ಹುಬ್ಬಳ್ಳಿ, ಗದಗ, ಬಾಗಲಕೋಟೆ ಮತ್ತಿತರ ಕಡೆ) ಇದುವರೆಗೂ ಹಲವಾರು ಅಂತರರಾಷ್ಟ್ರೀಯ ಹಾಕಿಪಟುಗಳು ಪ್ರವರ್ಧಮಾನಕ್ಕೆ ಬಂದಿದ್ದಾರೆ. ಆದರೆ ಇವತ್ತಿಗೂ ಹುಬ್ಬಳ್ಳಿ, ಧಾರವಾಡದಲ್ಲಿ ಅಂತರರಾಷ್ಟ್ರೀಯ ಮಟ್ಟದ ಹಾಕಿ ಅಂಕಣ, ತರಬೇತಿ ವ್ಯವಸ್ಥೆಗಳು ಇಲ್ಲ. ಅಲ್ಲಿಯ ಮಕ್ಕಳು ಬೆಂಗಳೂರು, ಪುಣೆ ಅಥವಾ ಮುಂಬೈ ಹಾಸ್ಟೆಲ್‌ಗಳಿಗೆ ಹೋಗಿ ಕಲಿಯಬೇಕಾದ ಪರಿಸ್ಥಿತಿ ಇದೆ.

ಕರ್ನಾಟಕದ ಹಾಕಿ ಕ್ರೀಡೆಗೆ ಭವ್ಯ ಪರಂಪರೆ ಇದೆ. ಭಾರತವು ಒಲಿಂಪಿಕ್ಸ್‌ನಲ್ಲಿ ಕಂಡ ಸುವರ್ಣಯುಗದಲ್ಲಿ ಕನ್ನಡಿಗರಾದ ಬಿ.ಪಿ. ಗೋವಿಂದ, ಎಂ.ಎಂ. ಸೋಮಯ್ಯ, ಎಂ.ಪಿ. ಗಣೇಶ್, ಕಾಳಯ್ಯ ಅವರಂತಹ ದಿಗ್ಗಜರ ಕಾಣಿಕೆಯೂ ಇದೆ. ಆದರೆ, ಇತ್ತೀಚಿನ ದಿನಗಳಲ್ಲಿ ಭಾರತ ತಂಡದಲ್ಲಿ ಕರ್ನಾಟಕದವರ ಹೆಜ್ಜೆಗುರುತು ಕಾಣಿಸುತ್ತಿಲ್ಲ. ಕಳೆದ ಎರಡು ಒಲಿಂಪಿಕ್ ಕೂಟಗಳಲ್ಲಿ ಕಂಚಿನ ಪದಕ ಗೆದ್ದ ಪುರುಷರ ತಂಡದಲ್ಲಿಯೂ ಇರಲಿಲ್ಲ. ಈಚೆಗೆ ವಿಶ್ವಕಪ್ ಟೂರ್ನಿಗೆ ಅರ್ಹತೆ ಪಡೆದ ಮಹಿಳಾ ತಂಡದಲ್ಲಿಯೂ ಇರಲಿಲ್ಲ. ಜಾರ್ಖಂಡ್ ಮತ್ತು ಒಡಿಶಾಗಳ ಯಶಸ್ಸಿನಿಂದ ಕರ್ನಾಟಕ ಪಾಠ ಕಲಿಯಬೇಕಿದೆ.

ಕಳೆದ ಒಂದು ದಶಕದಿಂದ ಒಲಿಂಪಿಕ್ಸ್, ವಿಶ್ವಕಪ್, ಏಷ್ಯಾಕಪ್ ಮತ್ತಿತರ ಅಂತರರಾಷ್ಟ್ರೀಯ ಕ್ರೀಡಾಕೂಟಗಳಿಗೆ ಹೋಗುವ ಮುನ್ನ ಭಾರತ ತಂಡಗಳು ತರಬೇತಿ ಪಡೆಯುವುದು ಬೆಂಗಳೂರಿನ ಭಾರತೀಯ ಕ್ರೀಡಾ ಪ್ರಾಧಿಕಾರದಲ್ಲಿ ಎಂಬುದು ಗಮನಿಸಬೇಕಾದ ಸಂಗತಿ. ಸಲೀಮಾ ನಾಯಕತ್ವದ ಬಳಗವೂ ಮುಂಬರುವ ವಿಶ್ವಕಪ್ ಟೂರ್ನಿಗಾಗಿ ಇಲ್ಲಿಯೇ ಪೂರ್ವಾಭ್ಯಾಸ ಮಾಡುತ್ತಿದೆ. ಈ ಸಲ ವಿಶ್ವಕಪ್ ಜಯಿಸುವ ಕನಸು ಈ ಹುಡುಗಿಯರ ಕಂಗಳಲ್ಲಿ ಮಿನುಗುತ್ತಿದೆ.

ವಾಚಕರ ವಾಣಿ

'ಸಿಬಿಎಫ್‌ಸಿ' ಸರ್ವಾಧಿಕಾರಿ ನಡವಳಿಕೆ

ಟ್ಯುನೀಷಿಯಾದ ನಿರ್ದೇಶಕಿ ಕೌತೆರ್ ಬೆನ್ ಹನಿಯಾ ನಿರ್ದೇಶನದ 'ದಿ ವಾಯ್ಸ್ ಆಫ್ ಹಿಂದ್ ರಜಾಬ್' ಸಿನಿಮಾ, ಗಾಜಾದ ಮೇಲೆ ಇಸ್ರೇಲ್ ನಡೆಸುತ್ತಿರುವ ಆಕ್ರಮಣದಿಂದ ಬಚಾವಾಗಲು ಯತ್ನಿಸಿದ ರಜಾಬ್ ಎಂಬ ಬಾಲಕಿ, ಸಹಾಯಕ್ಕೆ ಮೊರೆ ಇಡುತ್ತಾ ಅಸುನೀಗುವ ಕಥಾವಸ್ತು ಉಳ್ಳದ್ದಾಗಿದೆ. ಆಸ್ಕರ್ ಪ್ರಶಸ್ತಿ ಸ್ಪರ್ಧೆಯ ಅತ್ಯುತ್ತಮ ಅಂತರರಾಷ್ಟ್ರೀಯ ಸಿನಿಮಾ ವಿಭಾಗದಲ್ಲಿ ಕೊನೆಯ ಸುತ್ತಿಗೆ ನಾಮಕರಣಗೊಂಡಿದ್ದ ಈ ಸಿನಿಮಾವನ್ನು ಕೇರಳ ಹಾಗೂ ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶಿಸುವುದಕ್ಕೆ ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿ (ಸಿಬಿಎಫ್‌ಸಿ) ಒಪ್ಪಿಗೆ ನೀಡಿರಲಿಲ್ಲ. ಇದೀಗ, ಈ ಸಿನಿಮಾವನ್ನು ಭಾರತದಲ್ಲಿ ವಿತರಿಸುವ ಹಕ್ಕು ಹೊಂದಿರುವ 'ಜೈ ವಿರಾತ್ರ ಎಂಟರ್‌ಟೈನ್‌ಮೆಂಟ್ ಸಂಸ್ಥೆ' ಕೂಡ, 'ಸಿಬಿಎಫ್‌ಸಿ' ಪ್ರಮಾಣಪತ್ರ ಪಡೆಯಲು ವಿಫಲವಾಗಿದೆ. ನಿರಾಕರಣೆಗೆ ಮಂಡಳಿ ಕೊಟ್ಟ ಕಾರಣ: 'ಪ್ರದರ್ಶನಕ್ಕೆ ಪರವಾನಿಗೆ ಕೊಟ್ಟರೆ ಭಾರತ-ಇಸ್ರೇಲ್ ಸಂಬಂಧ ಹಾಳಾಗುತ್ತದೆ' ಎನ್ನುವುದು. ಇಸ್ರೇಲಿನ ಸಕಲ ಆಕ್ರಮಣ ಕೃತ್ಯಗಳಿಗೆ ಅಭಯಹಸ್ತ ನೀಡಿ ಪೋಷಿಸುವ ಅಮೆರಿಕ, ಬ್ರಿಟನ್ ದೇಶಗಳಲ್ಲಿ ಪ್ರದರ್ಶನಗೊಂಡಿರುವ ಸಿನಿಮಾವು ಭಾರತದಲ್ಲಿ ಪ್ರದರ್ಶನವಾದರೆ ಇಸ್ರೇಲಿಗೆ ನೋವಾದೀತು ಎನ್ನುವುದು ಸಿಬಿಎಫ್‌ಸಿ ಕಾಳಜಿ! ಇದು ಆತಂಕಕಾರಿ ಸರ್ವಾಧಿಕಾರವಲ್ಲದೆ ಮತ್ತೇನು? ಸೆನ್ಸಾರ್ ಮಂಡಳಿಯ ಧೋರಣೆ ಖಂಡನಾರ್ಹ.

ಕೆ. ಫಣಿರಾಜ್, ಉಡುಪಿ

ಮಾತಿನ ಬೇಗೆ ನಡುವೆ ಸುಳಿದ ತಂಗಾಳಿ

ಅಸಭ್ಯ ಹಾಗೂ ಅಸಹ್ಯ ಬೈಗುಳಗಳೊಂದಿಗೆ ರಾಜಕಾರಣಿಗಳು ಒಬ್ಬರ ಮೇಲೆ ಒಬ್ಬರು ಮುಗಿಬೀಳುವುದನ್ನು ಓದಿ, ಟೀವಿಗಳಲ್ಲಿ ನೋಡಿ ಜಿಗುಪ್ಸೆಯಾಗುತ್ತಿರುವ ಸಂದರ್ಭದಲ್ಲಿ, ಬಿರುಬಿಸಿಲ ಬೇಗೆಯಲ್ಲಿ ತಂಪಾದ ಗಾಳಿ ಸುಳಿದಂತೆ ಒಂದೆರಡು ಸುದ್ದಿಗಳು ಕಾಣಿಸಿದವು. ಮೊದಲನೆಯದು, ಮಲ್ಲಿಕಾರ್ಜುನ ಖರ್ಗೆ ಅವರು, 'ದೇವೇಗೌಡರು ಪ್ರೀತಿಸಿದ್ದು ನಮ್ಮನ್ನು, ಮದುವೆಯಾಗಿದ್ದು ಮೋದಿಯವರನ್ನು' ಎಂದು ಲಘು ಹಾಸ್ಯದಲ್ಲಿ ಹೇಳಿದ್ದು ಹಾಗೂ ಅದನ್ನು ಮೋದಿಯವರು ನಗುತ್ತಲೇ ಆಸ್ವಾದಿಸಿದ್ದು. ಇದಕ್ಕೆ ದೇವೇಗೌಡರ ಪ್ರತಿಕ್ರಿಯೆಯೂ ಸದಭಿರುಚಿಯಿಂದ ಕೂಡಿದ್ದು ಖುಷಿ ಕೊಟ್ಟಿತು. ಎರಡನೆಯ ಆಹ್ಲಾದಕರ ಸುದ್ದಿ, ಖರ್ಗೆ, ದೇವೇಗೌಡ ಹಾಗೂ ಶರದ್ ಪವಾರ್ ಅವರು ತಮ್ಮ ಆಯುಷ್ಯದ ಅರ್ಧಕ್ಕೂ ಹೆಚ್ಚು ಕಾಲ ರಾಜಕೀಯದಲ್ಲಿ ಕಳೆದಿದ್ದು, ಹೊಸಬರು ಅವರ ಸದ್ಗುಣಗಳ ಮಾದರಿಯನ್ನು ಅನುಸರಿಸಬೇಕೆಂದು ಮೋದಿಯವರು ಹೊಗಳಿರುವುದು. ಹಬ್ಬಲಿ ಈ ರಸಬಳ್ಳಿ.

ಚಂದ್ರಶೇಖರ್, ಕಣಜನಹಳ್ಳಿ

ಶಿಕ್ಷಕಿಯರಿಗೆ ವಿಶೇಷ ರಿಯಾಯಿತಿ ಏಕೆ?

ಜನಗಣತಿ ಕಾರ್ಯದಿಂದ ಐವತ್ತು ವರ್ಷ ಮೀರಿದ ಶಿಕ್ಷಕಿಯರಿಗೆ ವಿನಾಯಿತಿ ನೀಡುವಂತೆ ಶಿಕ್ಷಣ ಇಲಾಖೆ ಸಂಬಂಧಪಟ್ಟವರನ್ನು ಕೋರಿದೆ. ಶಿಕ್ಷಕಿಯರ ಸಂಘದ ಮನವಿಯ ಮೇರೆಗೆ ಈ ಕೋರಿಕೆ ಸಲ್ಲಿಸಲಾಗಿದೆ ಎನ್ನಲಾಗಿದೆ. ಕೆಲವು ವಿಶೇಷ ಸೌಲಭ್ಯಗಳನ್ನು ಮಹಿಳೆಯರಿಗೆ ಕೊಡುವುದು ತಪ್ಪಲ್ಲ. ಆದರೆ, ಆ ಸೌಲಭ್ಯಗಳು ಒಂದು ಮಿತಿಯನ್ನು ಮೀರಿದರೆ ಅವು ಸ್ವತಃ ಮಹಿಳೆಯರ ಘನತೆ, ಗೌರವ, ಕರ್ತೃತ್ವ ಶಕ್ತಿಗಳಿಗೆ ಧಕ್ಕೆ ತರುತ್ತವೆ. ಶಿಕ್ಷಕಿಯರು ಕೂಡ ಶಿಕ್ಷಕರು ಮತ್ತು ಇತರ ಇಲಾಖೆ ನೌಕರರಂತೆ 60 ವರ್ಷಕ್ಕೆ ನಿವೃತ್ತಿ ಹೊಂದುವವರು. ಅವರಿಗೆ ಹತ್ತು ವರ್ಷಗಳಷ್ಟು ವಿಶೇಷ ರಿಯಾಯಿತಿ ಕೊಡುವ ಅಗತ್ಯವೇನು? ಮಹಿಳೆಯರು ಪುರುಷರಿಗಿಂತ ದುರ್ಬಲರು ಎಂದು ಸೂಚಿಸುವ ಯಾವ ತಪ್ಪು ನಿರ್ಧಾರಗಳನ್ನೂ ನಾವು ತೆಗೆದುಕೊಳ್ಳಬಾರದು. ಈ ಹಿನ್ನೆಲೆಯಲ್ಲಿ, ಶಿಕ್ಷಣ ಇಲಾಖೆ, ಐವತ್ತೈದು ವರ್ಷ ಮೀರಿದ ಯಾವುದೇ ನೌಕರರನ್ನು ಗಣತಿ ಕಾರ್ಯಕ್ಕೆ ನಿಯೋಜಿಸಬಾರದು ಎಂದು ಕೋರಿದರೆ ನ್ಯಾಯಯುತ ನಿರ್ಧಾರ ಆಗುತ್ತದೆ.

ರಾಜೇಂದ್ರ ಬುರಡಿಕಟ್ಟಿ, ಶಿವಮೊಗ್ಗ

ಮುದ್ದೇನಹಳ್ಳಿ: ಸೂಚನಾಫಲಕ ಅವಶ್ಯ

ಮುದ್ದೇನಹಳ್ಳಿಯಲ್ಲಿ ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯ ಅವರ ಜನ್ಮಸ್ಥಳ ಹಾಗೂ ಸಮಾಧಿ ಇದೆ. ಮುಖ್ಯರಸ್ತೆಯಲ್ಲಿ ನಾಮಫಲಕವಷ್ಟೇ ಇದ್ದು, ಅಲ್ಲಿಂದ ಸುಮಾರು 50 ಮೀಟರ್ ದೂರದಲ್ಲಿರುವ ಅಡ್ಡ ರಸ್ತೆಯ ಮೂಲಕ ಸಮಾಧಿ ಮತ್ತು ಮನೆಗೆ ಹೋಗಲು ಯಾವುದೇ ಮಾರ್ಗಸೂಚಿ ಫಲಕವಿಲ್ಲ. ವಾಹನಗಳಲ್ಲಿ ಬರುವ ಅನೇಕ ಪ್ರವಾಸಿಗರು ಮಾರ್ಗದರ್ಶನದ ಕೊರತೆಯಿಂದ ಸಮೀಪದ ಸ್ಕಂದಗಿರಿಯವರೆಗೆ ಹೋಗಿ ಮತ್ತೆ ಹಿಂದಿರುಗಿ ಬರುವ ಉದಾಹರಣೆಗಳಿವೆ. ಸೂಕ್ತ ಸ್ಥಳದಲ್ಲಿ ಸ್ಪಷ್ಟ ಮಾರ್ಗಸೂಚಿ ಫಲಕವನ್ನು ಸ್ಥಳೀಯ ಆಡಳಿತ ಅಳವಡಿಸಬೇಕು.

ಜಿ. ನಾಗೇಂದ್ರ ಕಾವೂರು, ಸಂಡೂರು

ಡೇಟಾ ತೆರಿಗೆ, ಜನಸಾಮಾನ್ಯರ ಸುಲಿಗೆ

ಮೊಬೈಲ್ ಡೇಟಾ ಬಳಕೆಯ ಮೇಲೆ ಪ್ರತಿ ಜಿಬಿಗೆ ₹1 ತೆರಿಗೆ ವಿಧಿಸುವ ಸರ್ಕಾರದ ಪ್ರಸ್ತಾವ ಜನಸಾಮಾನ್ಯರ ಜೇಬಿಗೆ ಕತ್ತರಿ ಹಾಕುವ ನಿರ್ಧಾರ. ಈಗಾಗಲೇ ಟೆಲಿಕಾಂ ಸೇವೆಗಳ ಮೇಲೆ ಶೇ 18ರಷ್ಟು ಜಿಎಸ್‌ಟಿ ಇದೆ. ಭಾರತದಲ್ಲಿ ತಿಂಗಳಿಗೆ ಓರ್ವ ಬಳಕೆದಾರ ಸುಮಾರು 20 ಜಿಬಿ ಡೇಟಾ ಬಳಸುತ್ತಾನೆ. ಉದ್ದೇಶಿತ ತೆರಿಗೆಯಿಂದ ಸರ್ಕಾರಕ್ಕೆ ವಾರ್ಷಿಕ ₹22,900 ಕೋಟಿ ಆದಾಯ ಬರಬಹುದು. ಆದರೆ, ಇದರಿಂದ ವಿದ್ಯಾರ್ಥಿಗಳು ಮತ್ತು ಸಣ್ಣ ವ್ಯಾಪಾರಿಗಳ ಮೇಲೆ ಗಂಭೀರ ಪರಿಣಾಮ ಉಂಟಾಗಲಿದೆ; ಡಿಜಿಟಲ್ ಸಾಕ್ಷರತೆಗೆ ಅಡ್ಡಿಯಾಗಲಿದೆ.

ವಿಜಯಕುಮಾರ ಎಚ್.ಕೆ., ರಾಯಚೂರು

ಶಿಕ್ಷಕಿಯರಿಗೆ ಶಿಶುಪಾಲನಾ ರಜೆ ಸ್ವಾಗತಾರ್ಹ

ಶಿಕ್ಷಕಿಯರಿಗೆ ಶಿಶುಪಾಲನೆಗಾಗಿ 15 ದಿನಗಳ ಮುಂಚಿತ ರಜೆ ನೀಡುವ ಕ್ರಮ ಪ್ರಶಂಸನೀಯ. ಶಿಕ್ಷಕಿಯರು ಸಮಾಜ ನಿರ್ಮಾಣದಲ್ಲಿ ಮಹತ್ತರ ಪಾತ್ರವಹಿಸುತ್ತಾರೆ. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ನೀಡುವ ಜವಾಬ್ದಾರಿಯ ಜೊತೆಗೆ ಕುಟುಂಬದ ಕರ್ತವ್ಯಗಳನ್ನೂ ನಿರ್ವಹಿಸುತ್ತಾರೆ. ತಾಯ್ತನದ ಸಮಯದಲ್ಲಿ ಅವರಿಗೆ ವಿಶ್ರಾಂತಿ ಮತ್ತು ಮಗುವಿನ ಆರೈಕೆಗಾಗಿ ಸಮಯ ದೊರಕುವುದು ಅಗತ್ಯ.ಈ ಹಿನ್ನೆಲೆಯಲ್ಲಿ ಮುಂಚಿತ ಶಿಶುಪಾಲನಾ ರಜೆ ಶಿಕ್ಷಕಿಯರಿಗೆ ನೆಮ್ಮದಿ ನೀಡುವ ಕ್ರಮವಾಗಿದೆ. ತಾಯಿ ಮತ್ತು ಮಗು ಆರೋಗ್ಯದ ದೃಷ್ಟಿಯಿಂದಲೂ ಇದು ಮಹತ್ವದ ನಿರ್ಧಾರವಾಗಿದೆ.

ಸುಶ್ಮಿತಾ ಎಚ್., ಉಡುಪಿ.

ಚುರುಮುರಿ

ಸಾರಿಸೇ... ಗುಡ್ಸೇ...

● ತುರುವೇಕೆರೆ ಪ್ರಸಾದ್

'ಏನ್ರಪ್ಪಾ, ಯಾವ್ದೋ ಕನ್ನಡ ಪಿಕ್ಚರ್ ಸಾಂಗ್‌ಗೆ ಜನ ಸಖತ್ತಾಗಿ ಮಂಗಳಾರತಿ ಮಾಡ್ತಾವ್ರಂತೆ' ಎಂದು ಸಿಬಿರೆಬ್ಬಿದ ಗುದ್ಲಿಂಗ.

'ಉಗೀದೇ ಇನ್ನೇನಾ ಮಾಡಾರು? ಡಬ್ಬಲ್ ಮೀನಿಂಗ್‌ಗೇ ಜನ ಹೈರಾಣಾಗಿದ್ರು... ಈಗ ತ್ರಿಬಲ್ ಮೀನಿಂಗ್ ಪದ ಬುಟ್ರೆ ಎಂಗ್ಲಾ?' ಎಂದು ಕೊಂಚ ಆಕ್ರೋಶದಿಂದ ಕೇಳಿದ ಮಾಲಿಂಗ.

'ತ್ರಿಬಲ್ ಮೀನಿಂಗ್ ಅಲ್ಲ, ಟೆರಿಬಲ್ ಮೀನಿಂಗ್.
ಟ್ರಬಲ್ ಮೀನಿಂಗ್' ತಿದ್ದಿದ ಕಲ್ಲೇಶಿ.

'ಸಿನಿಮಾನ ಇನ್ ಮ್ಯಾಕೆ 'ಸಿನಿ-ವ್ಯಾ!' ಅಂತ ಕರೀಬೇಕು ಕಣ್ರಲಾ! ಐಟಂ ಸಾಂಗು ಗುಜರಿ ಐಟಂ ಆಯ್ತಾ ಅವೆ'.

'ಪ್ಯಾನ್ ಇಂಡಿಯಾ ಪಿಕ್ಚರ್ರು ಅಂದ್ಮೇಲೆ ಪ್ಯಾನ್ ಇಂಡಿಯಾ ಸಾಹಿತ್ಯ ಇರ್ಬೇಕು ಕಣ್ಲಾ'.

'ಪ್ಯಾನ್ ಇಂಡಿಯಾ ಅಲ್ಲ, ಅವ್ಮಾನ್ ಇಂಡಿಯಾ! ಕನ್ನಡ ಕಸ್ತೂರಿ ಅಂತ ತುತ್ತೂರಿ ಒಡ್ಕೊಂತೀವಿ. ಅದು ಈ ತರ ಭುಜ ಜಾರಿ ಓಯ್ತಾ ಇದೆ ಅಂದ್ರೆ ನಮ್ ಕನ್ನಡದ ಮರ್ವಾದೆ ಏನಾಗ್ಬೇಕು ಅಂತಿವ್ನಿ! ಇದ್ಯಾವ ಸೀಮೆ ಬೂಸಾ ಸಾಹಿತ್ಯ?'

'ಇದು ಬೂಸಾ ಅಲ್ಲ, ಮೂಸಾ ಸಾಹಿತ್ಯ! ಇಂತದ್ನೇ ಮತ್ತೆ ಮತ್ತೆ ಬರೀತಿದ್ರೆ ಗೂಸಾ ಬೀಳೋ ಮ-ಕೇಡಿ ಸಾಹಿತ್ಯ ಆಯ್ತದೆ'.

'ಅಲ್ಲ, ಈ ಸೆನ್ಸಾರ್ ಮಾಡೋರು ಏನ್ ಮಾಡ್ತಿದ್ರು ಅಂತ?'

'ಸಾಹಿತ್ಯವೆಲ್ಲರಿಗಲ್ಲ ಅಂತ ಸರ್ವಜ್ಞ ಯೋಳವ್ನೆ... ಕೇಳಕ್ಕಾಗ್ದಿರೋರು ಕಿವಿ ಮುಚ್ಕಳ್ಳಿ ಅನ್ನೋ ಧೋರಣೆ ಕಣ್ಲಾ ಈ ಸಿನಿಮಾದೋರ್ದು'.

'ಇದ್ಕೆಲ್ಲಾ ಏನ್ ಪರಿಹಾರ ಇಲ್ವಾ ಅಂತ?'

'ಐತೆ, ಸರಿಸೇ ಅಂದಾಗೆಲ್ಲಾ ಸೈರಿಸೇ ಇಂಗಾಗಿರೋದು... ಇಂತ ಸಾಹಿತ್ಯನೆಲ್ಲಾ ಸಾರಿಸೇ, ಗುಡ್ಸೇ ಅಂತ ನಮ್ ಹೆಣ್ಮಕ್ಕು ಬಳ್ದು ಹಾಕ್ಬೇಕು. ಸಾರಿ ಸೇ (ಕ್ಷಮೆ ಕೇಳಿ) ಮತ್ತು ಗುಡ್ ಸೇ (ಒಳ್ಳೇದು ಹೇಳಿ) ಅಂತ ಹಟಕ್ ಬಿದ್ರೆ ಜೋಮ್ ಹಿಡ್ದಿರೋ ತಲೆಗಳಿಗೆ ಬುದ್ಧಿ ಬತ್ತದೆ' ಎಂದು ರೂಲಿಂಗ್ ಕೊಟ್ಟ ಪರ್ಮೇಶಿ.

ಎಲ್ಲಾ ಹೌದೌದು ಅಂತ ತಲೆಯಾಡಿಸಿದರು.

ಸಂಗತ

ಧರೆ ಉರಿದರೆ... ನಮ್ಮದು ಜಾಣಕುರುಡು!

ಯುಗಾದಿ ಆಸುಪಾಸು ಸುರಿದ ಮಳೆ ರೈತರಿಗೆ ಬೇವನ್ನಷ್ಟೆ ಉಣಿಸಿದೆ. ಜಾಗತಿಕ ವೇದಿಕೆಗಳಲ್ಲಿ ಚರ್ಚೆ ಆಗುತ್ತಿದ್ದ 'ಹವಾಮಾನ ವೈಪರೀತ್ಯ' ಕಾಲಬುಡಕ್ಕೆ ಬಂದಿದೆ!

● ಆನಂದತೀರ್ಥ ಪ್ಯಾಟಿ

ಮಾಧ್ಯಮಗಳಲ್ಲಿ ಇತ್ತೀಚೆಗೆ ವೈರಲ್ ಆದ ದೃಶ್ಯಾವಳಿ ಅಚ್ಚರಿ, ಖುಷಿ ಕೊಡುವಂತಿತ್ತು. ಧಾರವಾಡ ಜಿಲ್ಲೆ ಕಲಘಟಗಿಯ ಹೊರವಲಯವು ಥೇಟ್ 'ಕಾಶ್ಮೀರ'ದಂತೆ ಬದಲಾಗಿತ್ತು. ರಸ್ತೆ ತುಂಬೆಲ್ಲ ಆಲಿಕಲ್ಲು. ಹಿಮದ ರಾಶಿಯ ಮೇಲೆ ಕಾರುಗಳು ನಿಧಾನವಾಗಿ ಸಾಗುವ ದೃಶ್ಯದೊಂದಿಗೆ, 'ಇದು ಕಾಶ್ಮೀರ ಅಲ್ಲ; ಕಲಘಟಗಿ' ಎಂಬ ಶೀರ್ಷಿಕೆ ಗಮನಸೆಳೆಯುವಂತಿತ್ತು. ನೋಡುವವರಿಗೆ ಇದು ತುಸು ಮುದಗೊಳಿಸುವ ಸಂಗತಿಯೇ ಹೌದು. ಆದರೆ...

ಬರೀ ಎರಡು ದಶಕಗಳ ಹಿಂದೆ ವಿದೇಶಗಳಲ್ಲಿ ನಡೆಯುತ್ತಿದ್ದ ಭೂಶೃಂಗ ಸಭೆ, ಪರಿಸರ ಸಂಬಂಧಿ ಸಮಾವೇಶಗಳಲ್ಲಿ 'ಹವಾಮಾನ ವೈಪರೀತ್ಯ' ಪದ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿತ್ತು. ಮಾನವ ಸಮುದಾಯಕ್ಕೆ ಪ್ರಾಕೃತಿಕ ವಿಕೋಪಗಳೇನೂ ಹೊಸದಲ್ಲವಲ್ಲ? ಹೀಗಾಗಿ ಅದೇ ಒಂದಷ್ಟು ವಿಸ್ತಾರರೂಪದಲ್ಲಿ 'ಹವಾಮಾನ ವೈಪರೀತ್ಯ'ವಾಗಿ ಕಾಣಿಸಿಕೊಳ್ಳುತ್ತಿದೆ ಎಂದೇ ಬಹುತೇಕರು ಪರಿಗಣಿಸಿದ್ದರು. ಆದರೀಗ ಜಾಗತಿಕ ಹವಾಮಾನ ಬದಲಾವಣೆ ನೇರ ನಮ್ಮ ಬುಡಕ್ಕೇ ಬಂದು ಕೂತಿದೆ. ಮೊನ್ನೆಯಷ್ಟೇ ಕಾಣಿಸಿಕೊಂಡ 'ಕಾಶ್ಮೀರವಲ್ಲ; ಇದು ಕಲಘಟಗಿ' ಪರಿಸ್ಥಿತಿಯು ಇದರ ಒಂದು ಝಲಕ್ ಅಷ್ಟೇ.

ರಾಜ್ಯದ ವಿವಿಧ ಕಡೆಗಳಲ್ಲಿ ಈ ಒಂದು ವಾರದಲ್ಲಿ ಭರ್ಜರಿ ಮಳೆ. ಜತೆಗೆ ಆಲಿಕಲ್ಲು! ಮಾವು, ದ್ರಾಕ್ಷಿ ಇತರೆ ಫಸಲಿನ ಆಸೆಯಲ್ಲಿದ್ದ ರೈತರ ಮೊಗದಲ್ಲೀಗ ನೋವು. ಬೇಸಿಗೆಯಲ್ಲಿ ಅಲ್ಲಲ್ಲಿ ಸಾಧಾರಣ ಮಳೆಯಾಗುವುದು ಸಹಜ. ಅದರಲ್ಲೂ 'ಯುಗಾದಿಗೆ ನಾಲ್ಕು ಹನಿ ಮಳೆಯಾಗೇ ಆಗ್ತದೆ' ಎಂಬ ನುಡಿಯು ಈ ಮಳೆಯ ಸಾಧ್ಯತೆಯನ್ನು ಬಿಂಬಿಸುತ್ತದೆ. ಈ ಸಮಯದಲ್ಲಿ ಫಸಲು ಕಟಾವಿನ ಹಂತದಲ್ಲಿ ಇರುತ್ತದೆ. ಸಾಧಾರಣ ಮಳೆಯು ಹೆಚ್ಚೇನೂ ಹಾನಿ ಮಾಡದು. ಆದರೆ. ಮೊನ್ನೆ ಸುರಿದ ಆಲಿಕಲ್ಲು ಮಳೆಯು, ರೈತರ ನಿರೀಕ್ಷೆಯನ್ನು ನಿರ್ನಾಮ ಮಾಡಿಬಿಟ್ಟಿದೆ.

ಉತ್ತರ ಕರ್ನಾಟಕದ ಪ್ರಮುಖ ತೋಟಗಾರಿಕೆ ಬೆಳೆಯಲ್ಲೊಂದಾದ ಮಾವಿನ ಉದಾಹರಣೆ ಗಮನಿಸಿ.



ಹಿಂಗಾರು ಮಳೆ ಅಕ್ಟೋಬರ್ ಹೊತ್ತಿಗೆ ಕಡಿಮೆಯಾಗುತ್ತದೆ. ಆಗ ಮಾವಿನ ಬೆಳವಣಿಗೆ ಶುರು; ಮುಂದಿನ ಹಂತವಾಗಿ ಜನವರಿಯಲ್ಲಿ ಕಾಯಿ, ಮಾರ್ಚ್ ತಿಂಗಳಲ್ಲಿ ಕಟಾವು. 'ಎಳ್ಳಮಾವಾಸ್ಯೆಗೆ ಎಳ್ಳು ಕಾಳು; ಹೋಳಿ ಹುಣ್ಣಿಮೆಗೆ ಹೋಳು ಮಾವು' ಎಂಬ ನುಡಿಗಟ್ಟನ್ನು ಹಳ್ಳಿಗರು ಬಳಸುವುದು ಇದಕ್ಕೇ. ವಿಪರ್ಯಾಸವೆಂದರೆ, ಈ ಸಲ ಮಳೆಯ ಅವಧಿ ನವೆಂಬರ್‌ವರೆಗೂ ವಿಸ್ತರಿಸಿತು. ಶುಷ್ಕ ಹವಾಮಾನ ಹಾಗೂ ನೀರಿನ ಕೊರತೆಯ ಒತ್ತಡಕ್ಕೆ (ಸ್ಟ್ರೆಸ್) ಒಳಗಾಗಿ ಡಿಸೆಂಬರ್ ತಿಂಗಳಲ್ಲಿ ಹೂವಿನಿಂದ ಕಂಗೊಳಿಸಬೇಕಿದ್ದ ಮಾವಿನ ಮರಗಳು, ಆ ಪ್ರಕ್ರಿಯೆಯನ್ನು ಮರೆತೇ ಬಿಟ್ಟವು. ಇದರ ಪರಿಣಾಮ, ಫೆಬ್ರುವರಿಯಲ್ಲಿ ಹೂವು, ಮೇ ಹೊತ್ತಿಗೆ ಇಳುವರಿ ಕಟಾವು.

ಹವಾಮಾನ ವೈಪರೀತ್ಯ ಎಂಥ ವಿಚಿತ್ರವೆಂದರೆ, ಬರೀ ಹತ್ತು ಕಿಲೋಮೀಟರ್ ದೂರದಲ್ಲೇ ಮಳೆಯಲ್ಲಿ ವ್ಯತ್ಯಾಸ ಕಾಣಿಸುತ್ತಿದೆ. ಈ ಬಾರಿಯ ಹಿಂಗಾರಿನಲ್ಲಿ ಕೊಪ್ಪಳ ಜಿಲ್ಲೆಯ ಕೆಲವು ಕಡೆಗಳಲ್ಲಿ ಅವಧಿ ಮೀರಿ ಮಳೆ ಸುರಿದಿಲ್ಲ; ಅಂಥ ಕಡೆಗಳಲ್ಲಿ ಮಾವು ಕರಾರುವಕ್ಕಾಗಿ ಅತ್ಯುತ್ತಮ ಫಸಲು ಕಂಡು, ಕಟಾವಿಗೆ ಸಿದ್ಧವಾಗಿತ್ತು. ದುರಂತ ಎಂದರೆ, ಮೊನ್ನೆ ಸುರಿದ ಆಲಿಕಲ್ಲು ಮಳೆ ಹಾಗೂ ಬಿರುಗಾಳಿಗೆ ಫಸಲು ನಾಶವಾಗಿದೆ. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ. ಹವಾಮಾನದ ಈ ವಿಪರೀತ ನಡವಳಿಕೆ ರೈತ ಸಮುದಾಯವನ್ನು ದಿಗ್ಭ್ರಮೆಗೊಳಿಸಿದೆ.

ಇದು ಬರೀ ಮಾವಿನ ಕತೆಯಲ್ಲ; ಇನ್ನೇನು ಭತ್ತ ಕೊಯ್ಲು ಮಾಡಬೇಕು... ಅಷ್ಟರಲ್ಲೇ ಭಾರಿ ಮಳೆಯು ಪೈರನ್ನು ನೆಲಸಮಗೊಳಿಸಿದೆ. ಕಾಳುಗಳಿಂದ ತುಂಬಿದ್ದ ತೆನೆಗಳು ಕೆಸರಿನಲ್ಲಿ ಹೂತುಹೋಗಿವೆ. ಉತ್ತರ ಕರ್ನಾಟಕದ ಮಳೆ ಆಶ್ರಿತ ಬೆಳೆಯಾದ ಬಿಳಿಜೋಳ, ಕುಸುಬೆ ಪೈರು ನೆಲಕಚ್ಚಿವೆ. ಏನೂ ಮಾಡದ ನಿಸ್ಸಹಾಯಕ ಸ್ಥಿತಿ ರೈತರದು. 'ನೀರಾವರಿ ಸೌಲಭ್ಯ ಇರುವ ರೈತರು, ವರ್ಷವಿಡೀ ದಾಳಿಂಬೆ ಬೆಳೆಯುತ್ತಾರೆ. ಈಗ ಆಗಿರುವ ಆಲಿಕಲ್ಲು ಮಳೆಯು ಗಿಡದ ಕಾಂಡಕ್ಕೆ ಹೊಡೆತ ಕೊಟ್ಟು ಇಡೀ ತೋಟ ಸೋಂಕಿಗೆ ತುತ್ತಾಗಿ ಮುಂದಿನ ನಾಲ್ಕೈದು ವರ್ಷಗಳ ಕಾಲ ಬಾಧೆಗೆ ಈಡಾಗುತ್ತದೆ. ಇದಂತೂ ಕೃಷಿಕರಿಗೆ ದೊಡ್ಡ ನಷ್ಟ' ಎಂದು ಕೊಪ್ಪಳದ ದಾಳಿಂಬೆ ಬೆಳೆಗಾರ ಶಂಕರ ರಡ್ಡಿ ಕಳವಳ ವ್ಯಕ್ತಪಡಿಸುತ್ತಾರೆ.

ಸಾಮಾನ್ಯವಾಗಿ ಮುಂಗಾರು ಮಳೆ ಸುರಿಯುವಾಗ ಕೆಲವೊಮ್ಮೆ ಆಲಿಕಲ್ಲು ಬೀಳುತ್ತಿದ್ದವು. ಬೊಗಸೆಯಲ್ಲಿ ಆಲಿಕಲ್ಲು ಹಿಡಿದು ಸಂಭ್ರಮಿಸುವ ಕಾಲವೊಂದಿತ್ತು. ಆದರೆ ಈಗ 'ಕಾಲ ಬದಲಾಗಿದೆ' ಎಂಬ ಮಾತಿಗೆ ಹೆಚ್ಚೆಚ್ಚು ನಿದರ್ಶನ ಸಿಗುತ್ತಿವೆ. ಬರೀ ರೈತ ಸಮುದಾಯಕ್ಕಷ್ಟೇ ಅಲ್ಲ; ಆಹಾರ ಉತ್ಪಾದನೆಗೆ ಗಂಭೀರ ಸ್ವರೂಪದ ಆತಂಕವನ್ನು 'ಹವಾಮಾನ ವೈಪರೀತ್ಯ' ತಂದೊಡ್ಡಿದೆ. ಸಂಪನ್ಮೂಲಗಳ ವಿವೇಚನಾರಹಿತ ಬಳಕೆ, ಪ್ರಕೃತಿಯೆಡೆ ತೀವ್ರ ನಿರ್ಲಕ್ಷ್ಯ, ಮಾಲಿನ್ಯದ ಹೆಚ್ಚಳ ಸೇರಿ ದಂತೆ ಹಲವು ಕಾರಣಗಳು ಇದರ ಹಿಂದಿವೆ.

ಜಾಗತಿಕ ಹವಾಮಾನ ವೈಪರೀತ್ಯಕ್ಕೆ ಪರಿಹಾರ ಏನೆಂಬುದು ಗೊತ್ತಿದ್ದರೂ ಎಲ್ಲರದ್ದೂ ಜಾಣಕುರುಡು! ಎಲ್ಲಕ್ಕಿಂತ ನಾಚಿಕೆಗೇಡು ಎಂದರೆ, ಮಾನವ ಸಮುದಾಯವನ್ನು ಕಂಗೆಡಿಸುತ್ತಿರುವ ಈ ದುಸ್ಥಿತಿಗೆ ಮಾನವನೇ ಕಾರಣ ಎಂಬ ಸಂಗತಿಯನ್ನು ನಾಜೂಕಾಗಿ ಮರೆಮಾಚಲಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರವಾಸೋದ್ಯಮ, ಕುಡಿಯುವ ನೀರು, ನೀರಾವರಿ, ವಿದ್ಯುತ್ ಉತ್ಪಾದನೆ, ಮೂಲಸೌಕರ್ಯ ಅಭಿವೃದ್ಧಿ ಸೇರಿದಂತೆ ವಿವಿಧ ಉದ್ದೇಶಗಳಿಗಾಗಿ ರಾಜ್ಯದ ವಿವಿಧ ಭಾಗಗಳಲ್ಲಿ ಸರ್ಕಾರಗಳು (ರಾಜ್ಯ ಮತ್ತು ಕೇಂದ್ರ) ಬೃಹತ್ ಯೋಜನೆಗಳನ್ನು ಕೈಗೆತ್ತಿಕೊಂಡಿವೆ. ಇನ್ನೂ ಕೆಲವು ಯೋಜನೆಗಳನ್ನು ಜಾರಿಗೊಳಿಸಲು ಉದ್ದೇಶಿಸಿವೆ. ಆದರೆ, ಬಹುಪಾಲು ಯೋಜನೆಗಳು ಸೂಕ್ಷ್ಮವಾದ ಪರಿಸರಕ್ಕೆ ಹಾನಿ ಉಂಟು ಮಾಡಲಿವೆ ಎಂದು ಆರೋಪಿಸುತ್ತಿರುವ ಸ್ಥಳೀಯ ರೈತರು, ಪರಿಸರವಾದಿಗಳು, ಸಾರ್ವಜನಿಕರು ಈ ಯೋಜನೆಗಳನ್ನು ವಿರೋಧಿಸುತ್ತಿದ್ದಾರೆ. ಪ್ರತಿರೋಧದ ನಡುವೆಯೂ ಯೋಜನೆಗಳ ಅನುಷ್ಠಾನಕ್ಕೆ ಸರ್ಕಾರಗಳು ಪಣ ತೊಟ್ಟಿವೆ. ಇಂತಹ ಪ್ರಮುಖ ಯೋಜನೆಗಳು, ಅವುಗಳನ್ನು ಜನರು ವಿರೋಧಿಸಲು ಕಾರಣವೇನು ಎನ್ನುವ ವಿವರಗಳು ಇಲ್ಲಿವೆ

ಯೋಜನೆಗಳ ಸಾಲು ಸೂಕ್ಷ್ಮ ಪರಿಸರಕ್ಕೆ ಸವಾಲು

ತುಮಕೂರಿನಲ್ಲಿ ನಡೆಯುತ್ತಿರುವ ಎತ್ತಿನಹೊಳೆ ಕಾಮಗಾರಿ

ಎತ್ತಿನಹೊಳೆ: ಹರಿಯದ ನೀರು

ಪಶ್ಚಿಮ ಘಟ್ಟದ ಮೇಲ್ಭಾಗದಲ್ಲಿ ಹುಟ್ಟುವ ಎತ್ತಿನಹೊಳೆ, ಕಾಡುಮನೆ ಹೊಳೆ, ಕೇರಿಹೊಳೆ, ಹೊಂಗಡಹಳ್ಳ ಸಹಿತ ಎಂಟು ಹೊಳೆಗಳಿಂದ ಮಳೆಗಾಲದಲ್ಲಿ ಹರಿಯುವ ಹೆಚ್ಚುವರಿ ನೀರನ್ನು (ಸುಮಾರು 24.01 ಟಿಎಂಸಿ ಅಡಿ) ಪಂಪ್ ಮಾಡಿ, ಗುರುತ್ವ ಕಾಲುವೆ ಮೂಲಕ ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ತಲುಪಿಸುವುದು ಎತ್ತಿನಹೊಳೆ ಯೋಜನೆಯ ಮುಖ್ಯ ಗುರಿ.

2013–14ನೇ ಸಾಲಿನಲ್ಲಿ ಕಾಮಗಾರಿ ಆರಂಭಿಸಿದ್ದು, 14 ವರ್ಷ ಕಳೆದರೂ ಈ ಯೋಜನೆ ಪೂರ್ಣಗೊಂಡಿಲ್ಲ. 2027ರ ಅಕ್ಟೋಬರ್ ವೇಳೆಗೆ ಪೂರ್ಣಗೊಳಿಸಿ ತುಮಕೂರಿನ ಕೆರೆಗಳಿಗೆ ನೀರು ಹರಿಸುವುದಾಗಿ ಹೇಳಲಾಗುತ್ತಿದೆ. ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಯಲ್ಲಿ ಕಾಮಗಾರಿ ಆರಂಭವಾಗಿಲ್ಲ. ಪ್ರಾರಂಭದಲ್ಲಿ ಯೋಜನೆಯ ಅಂದಾಜು ವೆಚ್ಚ ₹8,323 ಕೋಟಿ ಇತ್ತು, ಈಗ ₹25 ಸಾವಿರ ಕೋಟಿ ದಾಟಿದೆ. ಪೂರ್ಣಗೊಳ್ಳುವ ಹೊತ್ತಿಗೆ ಇನ್ನೂ ₹10 ಸಾವಿರ ಕೋಟಿ ಬೇಕಾಗಬಹುದು ಎಂದು ಅಂದಾಜಿಸಲಾಗಿದೆ. 252 ಕಿ.ಮೀ. ಉದ್ದದ ಕಾಲುವೆಯಲ್ಲಿ ಕೇವಲ 164 ಕಿ.ಮೀ ನಷ್ಟು ಕಾಮಗಾರಿ ಮುಗಿದಿದ್ದು, ಅರಣ್ಯ ಮತ್ತು ಭೂಸ್ವಾಧೀನ ಸಮಸ್ಯೆಗಳು ಮುಂದುವರಿದಿವೆ. ಈಚೆಗೆ ಕೇಂದ್ರ ಪರಿಸರ ಸಚಿವಾಲಯದ ಅರಣ್ಯ ಸಲಹಾ ಸಮಿತಿ ಷರತ್ತುಬದ್ಧ ಅನುಮತಿ ನೀಡಿದೆ.

ಈ ಯೋಜನೆಯಿಂದಾಗಿ ಸಕಲೇಶಪುರ ವ್ಯಾಪ್ತಿಯ ಪಶ್ಚಿಮ ಘಟ್ಟದ ಸೂಕ್ಷ್ಮ ಪರಿಸರ ವ್ಯವಸ್ಥೆಗೆ ಹಾನಿ, ಅರಣ್ಯ ನಾಶ ಮತ್ತು ಜೀವ ವೈವಿಧ್ಯ ಕಡಿಮೆಯಾಗುವುದನ್ನು ಪರಿಸರವಾದಿಗಳು ಪದೇ ಪದೇ ತೋರಿಸಿದ್ದಾರೆ. ಸ್ಥಳೀಯರು ಯೋಜನೆಯ ವಿರುದ್ಧ ಪ್ರತಿಭಟಿಸುತ್ತಲೇ ಇದ್ದಾರೆ. ಹಲವಾರು ಕಡೆಗಳಲ್ಲಿ ಭೂಕುಸಿತ ಉಂಟಾಗಿದ್ದು, ರಸ್ತೆ, ಕಾಫಿ ತೋಟಗಳು ಸಂಪೂರ್ಣ ನಾಶವಾಗಿವೆ.

ಕೆಆರ್‌ಎಸ್: 'ಕಾವೇರಿ'ದ ಆರತಿ

ಮೈಸೂರು ಮತ್ತು ಮಂಡ್ಯದ ಕೃಷಿ ಚಟುವಟಿಕೆಗಳಿಗೆಂದೇ ನಿರ್ಮಾಣವಾಗಿ, ಈಗ ಬೆಂಗಳೂರಿಗೂ ಕುಡಿಯುವ ನೀರು ಪೂರೈಸುತ್ತಿರುವ ಶ್ರೀರಂಗಪಟ್ಟಣ ತಾಲ್ಲೂಕಿನ ಕೃಷ್ಣರಾಜಸಾಗರ (ಕೆಆರ್‌ಎಸ್) ಜಲಾಶಯದ ಬಳಿ 'ಕಾವೇರಿ ಆರತಿ' ನಡೆಸುವುದಕ್ಕೆ ರೈತ ಸಂಘಟನೆಗಳಿಂದ ವ್ಯಾಪಕ ವಿರೋಧವಿದೆ. ಈ ವಿರೋಧದ ನಡುವೆಯೂ 2025ರ ಸೆಪ್ಟೆಂಬರ್‌ನಲ್ಲಿ ರಾಜ್ಯ ಸರ್ಕಾರ ಅದ್ದೂರಿಯಾಗಿ 'ಕಾವೇರಿ ಆರತಿ' ನಡೆಸಿದೆ.

ಜಲಾಶಯದ ಬಳಿ 'ಕಾವೇರಿ ಆರತಿ' ನಡೆಸಲು ₹92.3 ಕೋಟಿ ವೆಚ್ಚದಲ್ಲಿ ಕಾಮಗಾರಿ ನಡೆಸುವ ಹಾಗೂ ₹2,663 ಕೋಟಿ ಮೊತ್ತದಲ್ಲಿ196 ಎಕರೆ ಪ್ರದೇಶದಲ್ಲಿ 'ಅಮ್ಯೂಸ್‌ಮೆಂಟ್ ಪಾರ್ಕ್' ನಿರ್ಮಿಸುವ ರಾಜ್ಯ ಸರ್ಕಾರದ ಕ್ರಮ ರೈತರನ್ನು ಕೆರಳಿಸಿದೆ. ಕೆಆರ್‌ಎಸ್ ಅಣೆಕಟ್ಟೆ ಸುರಕ್ಷತೆ ದೃಷ್ಟಿಯಿಂದ ಜಲಾಶಯದ ಬಳಿ ಯಾವುದೇ ಅಭಿವೃದ್ಧಿ ಚಟುವಟಿಕೆ ಬೇಡ ಎಂಬುದು ರೈತರ ಆಗ್ರಹ. ಆದರೆ ರಾಜ್ಯ ಸರ್ಕಾರ ತನ್ನ ನಿರ್ಧಾರದಿಂದ ಹಿಂದೆ ಸರಿದಿಲ್ಲ.

ಎರಡೂ ಯೋಜನೆಗಳನ್ನು ವಿರೋಧಿಸಿ ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಹೈಕೋರ್ಟ್‌ನಲ್ಲಿ ದಾವೆ ಹೂಡಿದೆ.

ಕ್ರಷರ್‌ಗೆ ಅನುಮತಿ ಪಡೆಯಲು ಲಾಬಿ

ಕಪ್ಪತಗುಡ್ಡವನ್ನು ವನ್ಯಜೀವಿಧಾಮ ಎಂದು ಘೋಷಣೆ ಮಾಡಿದ ನಂತರ ಗಣಿಗಾರಿಕೆಗೆ ತಡೆ ಬಿದ್ದಿದೆ. ಆದರೆ, ವನ್ಯಜೀವಿಧಾಮದ ಗಡಿ ಪರಿಷ್ಕರಣೆ ಮಾಡಿ ಕಲ್ಲು ಕ್ರಷರ್ ಘಟಕಗಳ ಕಾರ್ಯಾಚರಣೆಗೆ ಅನುಮತಿ ನೀಡಬೇಕು ಎಂದು ಈಗಲೂ ಕೆಲವು ಗಣಿ ಮಾಲೀಕರು ಲಾಬಿ ನಡೆಸುತ್ತಲೇ ಬಂದಿದ್ದಾರೆ.

ವನ್ಯಜೀವಿಧಾಮದ 322 ಚದರ ಕಿ.ಮೀ. ಪ್ರದೇಶವನ್ನು ಪರಿಸರ ಸೂಕ್ಷ್ಮ ವಲಯ ಎಂದು ಕೇಂದ್ರ ಪರಿಸರ ಸಚಿವಾಲಯು 2025ರ ಜೂನ್ 4ರಂದು ಅಧಿಸೂಚನೆ ಹೊರಡಿಸಿತ್ತು. ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಈಗಿರುವ ಹಾಗೂ ಹೊಸ ವಾಣಿಜ್ಯ ಗಣಿಗಾರಿಕೆ, ಕಲ್ಲುಗಣಿಗಾರಿಕೆ, ಕ್ರಷರ್‌ಗಳನ್ನು ನಿಷೇಧಿಸಲಾಗಿದೆ. ವನ್ಯಜೀವಿಧಾಮದ ವ್ಯಾಪ್ತಿಯನ್ನು 178 ಚದರ ಕಿ.ಮೀ.ಗೆ ಇಳಿಸುವಂತೆ ಕೋರಿ ಹಲವು ಖಾಸಗಿ ಕಂಪನಿಗಳು ಸಲ್ಲಿಸಿದ್ದ ಅರ್ಜಿಗಳನ್ನು ತಿರಸ್ಕರಿದ್ದ ಹೈಕೋರ್ಟ್, ಪರಿಸರ ಸೂಕ್ಷ್ಮವಲಯ ವ್ಯಾಪ್ತಿಯಲ್ಲಿನ ಕಲ್ಲು ಕ್ರಷರ್ ಮತ್ತು ಗಣಿಗಾರಿಕೆ ಮುಂದುವರಿಸಲು ಅನುಮತಿ ನಿರಾಕರಿಸಿ ಈಚೆಗೆ ಆದೇಶ ನೀಡಿತ್ತು.

ಚಾಮುಂಡಿಬೆಟ್ಟದ ವಿಹಂಗಮನ ನೋಟ

ಚಾಮುಂಡಿಬೆಟ್ಟವ ಕಾಡುತ್ತಿರುವ ರೋಪ್ ವೇ 'ಗುಮ್ಮ'

ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ರೋಪ್ ವೇ ನಿರ್ಮಿಸುವ ಪ್ರಸ್ತಾವ ಈ ಹಿಂದಿನ ಬಿಜೆಪಿ ಹಾಗೂ ಈಗಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲೂ ಇತ್ತು. ನಗರದ ಪರಿಸರವಾದಿಗಳು, ಹೋರಾಟಗಾರರು ಹಾಗೂ ವಿವಿಧ ಸಂಘಟನೆಗಳ ಹೋರಾಟದಿಂದಾಗಿ ಸರ್ಕಾರ ಸದ್ಯ ಮೌನವಾಗಿದೆ.

ಪರ್ವತಮಾಲಾ ಯೋಜನೆಯಡಿ ರೋಪ್ ವೇ ನಿರ್ಮಾಣದ ತಯಾರಿಯನ್ನು ಕೇಂದ್ರ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯ ಮಾಡಿತ್ತು. 'ಚಾಮುಂಡಿ ಬೆಟ್ಟ ಉಳಿಸಿ ಸಮಿತಿ' ನೇತೃತ್ವದಲ್ಲಿ ಮೈಸೂರಿಗರು ಒಕ್ಕೊರಲಿನಿಂದ ನಡೆಯನ್ನು ಖಂಡಿಸಿದ್ದರು. ಸಹಿ ಸಂಗ್ರಹ ಚಳವಳಿ ನಡೆದು, 70 ಸಾವಿರ ಜನರು ಯೋಜನೆ ವಿರೋಧಿಸಿ ಸಹಿ ಮಾಡಿದ್ದರು. 2022ರಲ್ಲಿ ಜಿಲ್ಲಾಡಳಿತವು ಚಾಮುಂಡಿಬೆಟ್ಟವು ಪ್ರವಾಸೋದ್ಯಮ ಸ್ಥಳದ ಬದಲು ಪವಿತ್ರ ತೀರ್ಥಸ್ಥಳವೆಂಬ ಮಾನ್ಯತೆ ನೀಡಿದ್ದರಿಂದ ಯೋಜನೆಯು ನನೆಗುದಿಗೆ ಬಿದ್ದಿತು.

ಸಡಿಲ ಬೆಟ್ಟ: ರೋಪ್ ವೇ ನಿರ್ಮಾಣಕ್ಕೆ ಬೆಟ್ಟವನ್ನು ಕೊರೆದು ಬೃಹತ್ ಕಂಬಗಳನ್ನು ನಿರ್ಮಿಸಬೇಕು. ಸಡಿಲ ಮಣ್ಣು, ಗುಲಾಬಿ ಶಿಲೆಯ ಬೆಟ್ಟವಾಗಿದ್ದು ಕುಸಿಯುವ ಅಪಾಯ ಹೆಚ್ಚಿದೆಯೆಂಬ ಅಭಿಪ್ರಾಯ ತಜ್ಞರಿಂದ ವ್ಯಕ್ತವಾಗಿತ್ತು. ಅಲ್ಲದೇ ನಂದಿ ರಸ್ತೆಯು 2021ರಲ್ಲಿ ಭಾರಿ ಮಳೆಗೆ ಕುಸಿದಿತ್ತು. 'ಪ್ರಸಾದ್' ಯೋಜನೆಯಡಿ ಅಭಿವೃದ್ಧಿ ಕಾರ್ಯಗಳು ಮುಂದುವರಿದಿದ್ದು, ಬೆಟ್ಟದ ಧಾರಣಾ ಸಾಮರ್ಥ್ಯ ಕುಸಿಯುತ್ತಿದೆ ಎಂಬ ಆತಂಕವನ್ನು ಭೂವಿಜ್ಞಾನಿಗಳು ವ್ಯಕ್ತಪಡಿಸಿದ್ದಾರೆ. 'ಪರಿಸರ ಪರಿಣಾಮ ಮೌಲ್ಯಮಾಪನ (ಇಐಎ) ವರದಿ'ಯನ್ನು ಜಿಲ್ಲಾಡಳಿತ ಇದುವರೆಗೂ ಸಿದ್ಧಪಡಿಸಿಲ್ಲ. ಆದರೆ, ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಿದೆ.

ಕಳಸಾ–ಬಂಡೂರಿ: ಪರ ವಿರೋಧ

ಬೆಳಗಾವಿ, ಧಾರವಾಡ, ಗದಗ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ನೀರು ಪೂರೈಸುವ ಉದ್ದೇಶದಿಂದ ಕೈಗೆತ್ತಿಕೊಂಡಿರುವ ಕಳಸಾ–ಬಂಡೂರಿ ನಾಲೆ ತಿರುವು ಯೋಜನೆ, ಖಾನಾಪುರದ ದಟ್ಟ ಅರಣ್ಯದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿರುವ ಯೋಜನೆ. ಇದಕ್ಕೆ ಸಂಬಂಧಿಸಿದ ಕಾಮಗಾರಿಗಳು ಅಲ್ಲಲ್ಲಿ ನಡೆದಿವೆ.

ಪರಿಸರವಾದಿಗಳು, ಗೋವಾ ಸರ್ಕಾರದ ವಿರೋಧ ಇದ್ದರೂ ರಾಜ್ಯ ಸರ್ಕಾರ ಈ ಯೋಜನೆ ಅನುಷ್ಠಾನಕ್ಕೆ ಇನ್ನಿಲ್ಲದ ಪ್ರಯತ್ನ ನಡೆಸುತ್ತಿದೆ. ಬೆಳಗಾವಿ ಸೇರಿದಂತೆ ಯೋಜನೆ ವ್ಯಾಪ್ತಿಗೆ ಬರುವ ಜಿಲ್ಲೆಗಳ ರೈತರು ಕೂಡ ಯೋಜನೆ ಅನುಷ್ಠಾನಕ್ಕೆ ಒತ್ತಡ ಹಾಕುತ್ತಿದ್ದಾರೆ. ಆದರೆ, ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯದಿಂದ ಅನುಮತಿ ಸಿಕಿಲ್ಲ.

'ರಾಷ್ಟ್ರೀಯ ವನ್ಯಜೀವಿ ಮಂಡಳಿಯಿಂದ ಅನುಮತಿ ಸಿಗದ್ದರಿಂದ ಯೋಜನೆ ಸ್ಥಗಿತವಾಗಿದೆ' ಎಂದು ರಾಜ್ಯ ಸರ್ಕಾರ ಹೇಳುತ್ತಿದೆ. ಆದರೆ, 'ಯೋಜನಾ ಪ್ರದೇಶದಲ್ಲಿ ಕದ್ದುಮುಚ್ಚಿ ಕೆಲಸ ಮಾಡಲಾಗುತ್ತಿದೆ' ಎಂದು ಗೋವಾ ಸರ್ಕಾರ ತಕರಾರು ತೆಗೆದಿದೆ.

ಪರಿಸರ ವಾದಿಗಳು ಯೋಜನೆ ಬೇಡ ಎಂದು ಹೇಳಿದರೆ ರೈತರು ಯೋಜನೆ ಪರವಾಗಿದ್ದಾರೆ.


ನಂದಿ ಬೆಟ್ಟ

ನಂದಿಬೆಟ್ಟಕ್ಕೆ ರೋಪ್ ವೇ

ರಾಜ್ಯದಲ್ಲಿ ನಿರ್ಮಾಣವಾಗುತ್ತಿರುವ ಮೊದಲ ರೋಪ್ ವೇ ಯೋಜನೆ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿದೆ 'ನಂದಿ ಬೆಟ್ಟದ ರೋಪ್ ವೇ' ಯೋಜನೆ. ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯ ₹97.3 ಕೋಟಿ ವೆಚ್ಚದ ಯೋಜನೆ ಇದು. ಡೈನಮಿಕ್ಸ್ ರೋಪ್ ವೇ ಸಂಸ್ಥೆಗೆ 30 ವರ್ಷ ನಿರ್ವಹಣೆಯ ಜವಾಬ್ದಾರಿ ನೀಡಲಾಗಿದೆ.

ಈ ಯೋಜನೆಯು ದಶಕಗಳಿಂದಲೂ ಚರ್ಚೆಯಲ್ಲಿತ್ತು. 2023ರಲ್ಲಿ ಕಾಮಗಾರಿ ಆರಂಭವಾಯಿತು. ಆದರೆ ನಾನಾ ಅಡಚಣೆಗಳಿಂದ ಇಂದಿಗೂ ಕಾಮಗಾರಿ ಆಮೆ ನಡಿಗೆಯಲ್ಲಿದೆ. ಲೋಯರ್ ಟರ್ಮಿನಲ್ ಪಾಯಿಂಟ್‌ನಲ್ಲಿ (ಎಲ್‌ಟಿಪಿ) ಕಾಮಗಾರಿಗಳನ್ನು ಆರಂಭಿಸಲಾಗಿದೆ. ಎಲ್‌ಟಿಪಿಯಲ್ಲಿ ಯೋಜನೆಗೆ ವಶಪಡಿಸಿಕೊಂಡಿದ್ದ ಜಮೀನಿನ ವಿಚಾರವಾಗಿ ರೈತರು ನ್ಯಾಯಾಲಯದ ಮೊರೆ ಹೋಗಿದ್ದರು. ಈ ಬಗ್ಗೆ ಹಲವು ಸುತ್ತಿನ ಮಾತುಕತೆ ನಡೆದು ಸಂಧಾನ ಸಾಧ್ಯವಾಯಿತು.

ರೋಪ್ ವೇಯಿಂದ ಬೆಟ್ಟದ ಜೀವವೈವಿಧ್ಯಕ್ಕೆ ಧಕ್ಕೆ ಬರುತ್ತದೆ ಎಂದು ಆಕ್ಷೇಪಿಸಿ ಪರಿಸರವಾದಿಗಳು ಹೈಕೋರ್ಟ್ ಮೊರೆ ಹೋಗಿದ್ದಾರೆ. ವಿಚಾರಣೆ ನಡೆಯುತ್ತಿದೆ.

ಶರಾವತಿ ಕಣಿವೆಯ ನೋಟ

ಮುಗಿಯದ 'ಶರಾವತಿ'ಯ ಆತಂಕ

ರಾಜ್ಯ ಸರ್ಕಾರವು ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಮೂಲಕ ಶರಾವತಿ ಕಣಿವೆಯಲ್ಲಿ 2,000 ಮೆಗಾವ್ಯಾಟ್ ಸಾಮರ್ಥ್ಯದ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯನ್ನು ಅನುಷ್ಠಾನಗೊಳಿಸಲು ಮುಂದಾಗಿರುವುದು ಸ್ಥಳೀಯರು ಹಾಗೂ ನಾಡಿನ ಪರಿಸರಾಸಕ್ತರ ವಿರೋಧಕ್ಕೆ ಕಾರಣವಾಗಿದೆ. ಸದ್ಯ ಈ ಯೋಜನೆಗೆ ರಾಜ್ಯ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ. ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯದ ತಜ್ಞರ ಸಮಿತಿ ಕೂಡ ಯೋಜನೆಗೆ ಒಪ್ಪಿಗೆ ನೀಡುವುದು ಬೇಡ ಎಂದು ಶಿಫಾರಸು ಮಾಡಿದೆ.

'ರಾಜ್ಯದ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಅಗತ್ಯವಾದ ಯೋಜನೆ ಇದಾಗಿದ್ದು, ಅತಿ ಕಡಿಮೆ ಪರಿಸರ ಹಾನಿಯೊಂದಿಗೆ ಯೋಜನೆ ಜಾರಿಗೊಳಿಸಲಾಗುತ್ತಿದೆ. ಈ ಯೋಜನೆಗೆ ಹೊಸ ಅಣೆಕಟ್ಟು ನಿರ್ಮಾಣ ಮಾಡುವ ಅಗತ್ಯವಿಲ್ಲ; ಈಗಿರುವ ಗೇರುಸೊಪ್ಪ ಮತ್ತು ತಳಕಳಲೆ ಅಣೆಕಟ್ಟೆಗಳನ್ನು ಬಳಸಿಕೊಳ್ಳಲಾಗುತ್ತದೆ. ಸುರಂಗ ಮೂಲಕ ನೀರನ್ನು ಹರಿಬಿಡುವ ಮತ್ತು ಎತ್ತುವ ವ್ಯವಸ್ಥೆಯಿಂದ ಭೂಮಿಯ ಮೇಲ್ಮೈಗೆ ಯಾವುದೇ ಹಾನಿ ಆಗುವುದಿಲ್ಲ' ಎಂದು ನಿಗಮ ವಾದಿಸುತ್ತಿದೆ.

'ಜಲ ವಿದ್ಯುತ್ ಯೋಜನೆ, ಅಣೆಕಟ್ಟೆಗಳ ನಿರ್ಮಾಣದಿಂದ ಶರಾವತಿ ಕಣಿವೆ ಸೇರಿದಂತೆ ಪಶ್ಚಿಮ ಘಟ್ಟದ ಸೂಕ್ಷ್ಮ ಪರಿಸರ ಈಗಾಗಲೇ ಸಾಕಷ್ಟು ಬಾಧಿತವಾಗಿದೆ. ಈಗ ಪಂಪ್ಡ್ ಸ್ಟೋರೇಜ್ ಹೆಸರಲ್ಲಿ ಇನ್ನೊಂದು ಯೋಜನೆಯ ಮೂಲಕ ಪರಿಸರಕ್ಕೆ ಹಾನಿ ಮಾಡಲಾಗುತ್ತಿದೆ. ಈ ಪ್ರದೇಶವು ಅಳಿವಿನಂಚಿನಲ್ಲಿರುವ ಸಿಂಗಳೀಕಗಳ ಆವಾಸವಾಗಿದ್ದು, ಅವುಗಳ ನೆಲೆಗೆ ಧಕ್ಕೆಯಾಗಲಿದೆ. ಕಾಮಗಾರಿ ವೇಳೆ ಸ್ಫೋಟಕಗಳ ಬಳಕೆಯಿಂದ ನೀರು, ಮಣ್ಣು ಕಲುಷಿತಗೊಳ್ಳಲಿದೆ. ಭೂ ಕುಸಿತವಾಗಲಿದೆ' ಎಂಬುದು ಪರಿಸರಾಸ್ತಕರ ಆತಂಕ.

ಗಣಿಗಾಗಿ ಕಾಡು ನಾಶಕ್ಕೆ ವಿರೋಧ

ಗಣಿಗಾರಿಕೆಗೆ ಕಾಡು ನಾಶ ಮಾಡಬಾರದು ಮತ್ತು ಸುಸ್ಥಿರ ಗಣಿಗಾರಿಕೆಗಾಗಿ ಈಗಿರುವ ಅದಿರು ಉತ್ಪಾದನಾ ಮಿತಿಯನ್ನು ವಾರ್ಷಿಕ 2 ಕೋಟಿ ಟನ್‌ಗೆ ಮಿತಿಗೊಳಿಸಬೇಕು ಎಂಬ ಕೂಗು ಬಳ್ಳಾರಿ ಜಿಲ್ಲೆಯಲ್ಲಿ ದಿನೇ ದಿನೇ ಪ್ರಬಲಗೊಂಡಿದೆ.

ಕೇಂದ್ರ ಉಕ್ಕು ಸಚಿವಾಲಯದ ಮಾಲೀಕತ್ವದ ಕುದುರೆಮುಖ ಕಬ್ಬಿಣದ ಅದಿರು ಕಂಪನಿ ಸಂಡೂರಿನಲ್ಲಿ 'ದೇವದಾರಿ ಗಣಿ' ಎಂಬ ಹೆಸರಿನ 470.4 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲು ಪ್ರಯತ್ನಿಸುತ್ತಲೇ ಇದೆ. ಆದರೆ, ವಿರೋಧ, ಪರವಾನಗಿ ಸಿಗದ ಕಾರಣಕ್ಕೆ ಯೋಜನೆ ಆರಂಭವಾಗಿಲ್ಲ.

ಭಾರತೀಯ ಉಕ್ಕು ಪ್ರಾಧಿಕಾರ ಮಾಲೀಕತ್ವದ ಭದ್ರಾವತಿ ವಿಶ್ವೇಶ್ವರಯ್ಯ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆಯೂ ಸಂಡೂರಿನ ರಾಮಗಢ ಅರಣ್ಯ ಬ್ಲಾಕ್‌ನ ಒಟ್ಟು 150 ಎಕರೆ (60.70 ಹೆ.) ಅರಣ್ಯದಲ್ಲಿ 'ರಮಣದುರ್ಗ ಕಬ್ಬಿಣದ ಅದಿರು ಗಣಿ' ಎಂಬ ಹೆಸರಿನಲ್ಲಿ ಗಣಿ ಚಟುವಟಿಕೆ ನಡೆಸಲು ಉದ್ದೇಶಿಸಿದೆ. ಈ ಗಣಿ ಸಿಕ್ಕರೆ ವಿಐಎಸ್‌ಎಲ್ ಪುನಶ್ಚೇತನಗೊಳಿಸುವುದು ಕೇಂದ್ರದ ಇರಾದೆ. ಆದರೆ, ಈ ಗಣಿಗೂ ಸಂಘಟನೆಗಳು ವಿರೋಧ ವ್ಯಕ್ತಪಡಿಸಿವೆ.

ಆಗುಂಬೆ ಹೃದಯಕ್ಕೇ ರಂಧ್ರ

ಪಶ್ಚಿಮ ಘಟ್ಟದ ಮೂಲಕ ಹಾದು ಹೋಗುವ 169 ಎ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಆಗುಂಬೆ ಘಾಟಿಯಲ್ಲಿ ತೀರಾ ಕಿರಿದಾದ ರಸ್ತೆ ಇದೆ. ಭಾರಿ ವಾಹನಗಳ ಸಂಚಾರಕ್ಕೆ ಅವಕಾಶ ಇಲ್ಲ. ಮೇಗರವಳ್ಳಿಯಿಂದ ಆಗುಂಬೆ ನಡುವೆ ಸುಮಾರು 3 ಕಿ.ಮೀ ಉದ್ದದ ರಸ್ತೆಯನ್ನು ದ್ವಿಪಥಗೊಳಿಸುವ ಕಾಮಗಾರಿ ಅರಣ್ಯ ಇಲಾಖೆಯ ಅನುಮತಿ ವಿಳಂಬದ ಕಾರಣದಿಂದಾಗಿ ಇನ್ನೂ ಅನುಷ್ಠಾನವಾಗಿಲ್ಲ. ವಿಸ್ತರಣೆಗೆ ಬಾಕಿ ಇರುವ ಸುಮಾರು 20 ಕಿ.ಮೀ ಉದ್ದದ ರಸ್ತೆಯು ದಟ್ಟ ಕಾನನದೊಳಗೆ ಹಾದುಹೋಗುತ್ತದೆ. ಆಗುಂಬೆ ಮತ್ತು ಹೆಬ್ರಿ ನಡುವೆ ಸುರಂಗ ಮಾರ್ಗ ಹಾಗೂ ಪಾದಚಾರಿ ಮಾರ್ಗವನ್ನು ಒಳಗೊಂಡ ದ್ವಿಪಥ ರಸ್ತೆ ನಿರ್ಮಿಸಲು ಡಿಪಿಆರ್ ತಯಾರಿಸಲು ಕೇಂದ್ರದ ಭೂಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ₹2.33 ಕೋಟಿ ಮೊತ್ತದ ಟೆಂಡರ್ ಕರೆದಿದೆ.

ಆಗುಂಬೆ ಘಾಟಿಯಲ್ಲಿ ಸುರಂಗ ಕೊರೆದಿದ್ದೇ ಆದರೆ, ಅದು ಭೂಕುಸಿತಕ್ಕೆ ಕಾರಣವಾಗಬಲ್ಲುದು ಎಂಬುದು ಪರಿಸರ ಕಾರ್ಯಕರ್ತರ ಕಳವಳ.

ಬೃಹತ್ ಯೋಜನೆಗಳ ಭಾರಕ್ಕೆ ನಲುಗಿದ ಉತ್ತರ ಕನ್ನಡ

ನೌಕಾನೆಲೆ, ಅಣು ವಿದ್ಯುತ್ ಸ್ಥಾವರ, ಜಲ ವಿದ್ಯುತ್ ಘಟಕಗಳಂತಹ ದೊಡ್ಡ ಯೋಜನೆಗಳಿಂದಾಗಿ ನಲುಗಿರುವ ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಸ್ತುತ ನದಿ ತಿರುವು, ವಾಣಿಜ್ಯ ಬಂದರು ಸ್ಥಾಪನೆಯ ಬೃಹತ್ ಯೋಜನೆಗಳನ್ನು ಜಾರಿಗೊಳಿಸಲು ಮುಂದಾಗಿರುವುದು ಪರಿಸರವಾದಿಗಳ ಕಣ್ಣು ಕೆಂಪಗಾಗಿಸಿದೆ. ಅವರೊಟ್ಟಿಗೆ ಜಿಲ್ಲೆಯ ಜನರು ಯೋಜನೆ ವಿರುದ್ಧ ನಿರಂತರ ಪ್ರತಿಭಟಿಸುತ್ತಿದ್ದಾರೆ.

ನದಿ ತಿರುವು: ಧಾರವಾಡ ಜಿಲ್ಲೆಯಲ್ಲಿ ಹುಟ್ಟಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಹರಿದು ಅರಬ್ಬಿ ಸಮುದ್ರ ಸೇರುವ ಬೇಡ್ತಿ ನದಿಯನ್ನು ಹಾವೇರಿ ಮತ್ತು ಗದಗ ಜಿಲ್ಲೆಯ ವ್ಯಾಪ್ತಿಗೆ ನೀರು ಪೂರೈಕೆಗೆ ವರದಾ ನದಿಗೆ ಜೋಡಿಸಲು 'ಬೇಡ್ತಿ–ವರದಾ ನದಿ ಜೋಡಣೆ ಯೋಜನೆ' ಜಾರಿಗೊಳಿಸಲು ಸರ್ಕಾರ ಮುಂದಾಗಿದೆ. ಜನರ ಪ್ರಬಲ ವಿರೋಧದ ನಡುವೆಯೂ ಯೋಜನೆಯ ಪೂರ್ವ ಕಾರ್ಯಸಾಧ್ಯತಾ ವರದಿ ಪುರಸ್ಕರಿಸಿ, ಯೋಜನೆ ಜಾರಿ ಸಲುವಾಗಿ ಡಿಪಿಆರ್ ಸಿದ್ಧಪಡಿಸಲಾಗಿದೆ. ಅಂದಾಜು ₹25,163 ಕೋಟಿ ವೆಚ್ಚದ ಯೋಜನೆ ಇದು. ನದಿ ನೀರು ಸಂಗ್ರಹಕ್ಕೆ ಶಿರಸಿಯ ಸಹಸ್ರಲಿಂಗ ಮತ್ತು ಪಟ್ಟಣದ ಹೊಳೆ ಬಳಿ ಹಾಗೂ ಯಲ್ಲಾಪುರದ ಬೇಡ್ತಿ ಸೇತುವೆ ಸಮೀಪ ಕಿರು ಅಣೆಕಟ್ಟೆ ನಿರ್ಮಾಣ ಮಾಡಿ ಅಲ್ಲಿಂದ 246.58 ಕಿ.ಮೀ ಪೈಪ್‌ಲೈನ್ ಮೂಲಕ ಕೊಂಡೊಯ್ಯುವುದು ಯೋಜನೆಯ ಸ್ವರೂಪ.

'ಬೇಡ್ತಿ ನದಿ ನೀರನ್ನು ಉತ್ತರ ಕನ್ನಡದ ಯಲ್ಲಾಪುರ, ಶಿರಸಿ, ಅಂಕೋಲಾ ತಾಲ್ಲೂಕುಗಳ 1.5 ಲಕ್ಷ ರೈತರು ಕೃಷಿ ಚಟುವಟಿಕೆಗೆ ಅವಲಂಬಿಸಿದ್ದಾರೆ. ಶಿರಸಿ ನಗರ, ಯಲ್ಲಾಪುರ ಪಟ್ಟಣಕ್ಕೆ ಕುಡಿಯುವ ನೀರು ಪೂರೈಸುವ ಯೋಜನೆಯೂ ಇದೇ ನದಿಯನ್ನು ಅವಲಂಭಿಸಿದೆ. ಬೇಡ್ತಿಯ ಮುಂದುವರಿದ ಭಾಗವಾಗಿರುವ ಗಂಗಾವಳಿ ನದಿಯ ನೀರನ್ನು, ಕಾರವಾರ ನಗರ, ಅಂಕೋಲಾ ಪಟ್ಟಣ, ಕದಂಬ ನೌಕಾನೆಲೆ, ನೂರಾರು ಹಳ್ಳಿಗಳಿಗೆ ಕುಡಿಯುವ ಉದ್ದೇಶಕ್ಕೆ ಪೂರೈಸಲಾಗುತ್ತಿದೆ. ಬೇಸಿಗೆಯ ಆರಂಭದಲ್ಲೇ ಹರಿವು ಕಡಿಮೆಯಾಗುವ ಈ ನದಿಯನ್ನು ತಿರುಗಿಸಿದರೆ ಲಕ್ಷಾಂತರ ಜನರಿಗೆ ಕುಡಿಯುವ ನೀರು ಪೂರೈಕೆಗೆ ತೊಂದರೆಯಾಗಲಿದೆ' ಎಂಬುದು ಬೇಡ್ತಿ–ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ವಾದ.

ಅಘನಾಶಿನಿಗೂ ಕಂಟಕ: ಯಾವುದೇ ಅಣೆಕಟ್ಟೆ ಇಲ್ಲದೆ ನಿರಾತಂಕವಾಗಿ ಹರಿಯುತ್ತಿರುವ ಅಘನಾಶಿನಿ ನದಿಗೂ ನದಿ ತಿರುವು ಯೋಜನೆಯ ಅಪಾಯ ಎದುರಾಗಿದೆ. ಕೇಂದ್ರ ಜಲಶಕ್ತಿ ಇಲಾಖೆ ಮತ್ತು ರಾಜ್ಯ ಜಲಸಂಪನ್ಮೂಲ ಇಲಾಖೆ ಜಂಟಿಯಾಗಿ ಅಂದಾಜು ₹23,000 ಕೋಟಿ ವೆಚ್ಚದಲ್ಲಿ ಅಘನಾಶಿನಿ ನದಿಯನ್ನು ಚಿತ್ರದುರ್ಗ ಜಿಲ್ಲೆಯ ವಾಣಿ ವಿಲಾಸ ಸಾಗರಕ್ಕೆ (ವೇದಾವತಿ ನದಿ) ಜೋಡಿಸುವ ಯೋಜನೆ ಜಾರಿಗೆ ಮುಂದಾಗಿವೆ. 199 ಕಿ.ಮೀ ಉದ್ದದ ಪೈಪ್‌ಲೈನ್ ಮೂಲಕ, ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆ ವ್ಯಾಪ್ತಿಯಲ್ಲಿ ಅಂದಾಜು 600 ಎಕರೆ ಅರಣ್ಯ ಭೂಮಿ ಬಳಕೆ ಮಾಡಿಕೊಂಡು ಸಿದ್ದಾಪುರ ತಾಲ್ಲೂಕಿನ ಬಾಳೆಕೊಪ್ಪ ಬಳಿ ಅಣೆಕಟ್ಟೆ ನಿರ್ಮಿಸಿ, ನೀರು ಪಂಪ್ ಮಾಡಿ ಗೋಳಿಮಕ್ಕಿ ಹಾರ್ಸಿಕಟ್ಟಾ, ಸಿದ್ದಾಪುರ, ಸಾಗರ, ಶಿವಮೊಗ್ಗ, ತರೀಕೆರೆ, ಅಜ್ಜಂಪುರ ಮಾರ್ಗವಾಗಿ ವಾಣಿವಿಲಾಸ ಜಲಾಶಯಕ್ಕೆ ನೀರು ತುಂಬಿಸುವ ಯೋಜನೆ ಜಾರಿಗೊಳಿಸಲು ಪ್ರಾಥಮಿಕ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಲಾಗಿದೆ. ಯೋಜನೆಗೆ 1.20 ಲಕ್ಷ ಮರಗಳು ಬಲಿಯಾಗುವ ಸಾಧ್ಯತೆ ಇದೆ.


ಕೇಣಿಯಲ್ಲಿ ಸರ್ವಋತು ಆಳಸಮುದ್ರ ಬಂದರು ಸ್ಥಾಪನೆಯಾಗಲಿರುವ ಪ್ರದೇಶದ ಗ್ರಾಫಿಕ್ ಚಿತ್ರ

ಬಂದರು ನಿರ್ಮಾಣ: ಅಂಕೋಲಾದ ಕೇಣಿಯಲ್ಲಿ ಅಂದಾಜು ₹6,515 ಕೋಟಿ ವೆಚ್ಚದ ಬಂದರು ನಿರ್ಮಾಣಕ್ಕೆ ಜೆಎಸ್‌ಡಬ್ಲ್ಯು ಕಂಪನಿಯ ಅಂಗ ಸಂಸ್ಥೆಯಾಗಿರುವ ಕೇಣಿ ಬಂದರು ಪ್ರೈವೆಟ್ ಲಿಮಿಟೆಡ್ (ಕೆಪಿಪಿಎಲ್) ಸಿದ್ಧತೆ ಕೈಗೊಂಡಿದೆ. ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಆಧಾರದಲ್ಲಿ ಬಂದರು ಯೋಜನೆ ಕೈಗೊಳ್ಳಲು 2022ರಲ್ಲಿ ರಾಜ್ಯ ಸರ್ಕಾರ ಆದೇಶಿಸಿದೆ. 2023ರಲ್ಲಿ ಸರ್ಕಾರದೊಂದಿಗೆ ಕಂಪನಿ ಒಪ್ಪಂದ ಮಾಡಿಕೊಂಡಿದೆ. ಕೇಣಿ ಗ್ರಾಮದ ಕಡಲತೀರದಿಂದ ಅನತಿ ದೂರದಲ್ಲಿ, ಸಮುದ್ರದಲ್ಲೇ 457 ಎಕರೆ ಪ್ರದೇಶದಲ್ಲಿ ಬಂದರು ನಿರ್ಮಿಸುವ ಯೋಜನೆ ಇದು. 309 ಎಕರೆ ಪ್ರದೇಶದಲ್ಲಿ ಸರಕು ಸಂಗ್ರಹಣೆ ಪ್ರದೇಶ, 116 ಎಕರೆಯಲ್ಲಿ ರಸ್ತೆ, ರೈಲು ಮಾರ್ಗ ನಿರ್ಮಾಣ ನಡೆಯಲಿದೆ. ಇಲ್ಲಿಂದ ಅಂಕೋಲಾ ತಾಲ್ಲೂಕಿನ ಬಾಳೆಗುಳಿ ಸಮೀಪ ರಾಷ್ಟ್ರೀಯ ಹೆದ್ದಾರಿ–66ಕ್ಕೆ 4.5 ಕಿ.ಮೀ ಷಟ್ಪಥ ಮಾರ್ಗ, 6.5 ಕಿ.ಮೀ ಉದ್ದದ ರೈಲು ಮಾರ್ಗ ಸ್ಥಾಪನೆ ಯೋಜನೆಯಲ್ಲಿ ಸೇರಿದೆ.

ಆದರೆ, ಯೋಜನೆ ವಿರೋಧಿಸಿ ಪ್ರಬಲ ಹೋರಾಟ ನಡೆದಿದೆ. ಯೋಜನೆಗೆ ಇನ್ನೂ ಅಂತಿಮ ಪರಿಸರ ಅನುಮತಿ ಸಿಕ್ಕಿಲ್ಲ. ಯೋಜನೆ ವಿರುದ್ಧ ಆಗಾಗ ಹೋರಾಟ ನಡೆಯುತ್ತಲೇ ಇದೆ.

ಗುಂಡಣ್ಣ

© 2025 by King Features Syndicate, Inc. World Rights reserved

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

21 ಮಾರ್ಚ್ 2026 ಶನಿವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುಕ್ಲ ತೃತೀಯ ಗಂ 23-57, ನಕ್ಷತ್ರ: ಅಶ್ವಿನಿ ಗಂ 24-38 ಯೋಗ: ಐಂದ್ರ ಗಂ. 19-01 ಕರಣ: ತೈತಿಲ ಗಂ 13-15 ಮೀನ ಮಾಸದ 07 ನೇ ದಿನ. ಮಳೆ ನಕ್ಷತ್ರ : ಉತ್ತರಾಭಾದ್ರ 2 ನೇ ಪಾದ. ರಾಹುಕಾಲ : ಬೆಳಿಗ್ಗೆ 09-00 - 10-30 , ಸೂರ್ಯೋದಯ : 06-37 ಸೂರ್ಯಾಸ್ತ : 06-38, ಮುಸ್ಲಿಂ ದಿನಾಂಕ : 1 ಶವ್ವಾಲ್, ದಿನ ವಿಶೇಷ : ಗೌರಿ ತೃತೀಯಾ, ಈದ್-ಉಲ್-ಫಿತರ್, ಅದೃಷ್ಟ ಸಂಖ್ಯೆ : 8, 1

ಮೇಷ: ಸಹೋದ್ಯೋಗಿಗಳಿಂದ ಅಥವಾ ಅಕ್ಕ ಪಕ್ಕದವರಿಂದ ಸಮಸ್ಯೆಗಳು ಹೆಚ್ಚುವುದಕ್ಕೆ ಮುಂಚಿತವಾಗಿಯೇ ಜಾಣ್ಮೆಯಿಂದ ಪರಿಹಾರ ಕಂಡುಕೊಳ್ಳಿ. ಸಾಮಾಜಿಕವಾಗಿ ಜನೋಪಕಾರದಿಂದ ಶ್ಲಾಘನೆ ಲಭಿಸಲಿದೆ.

ವೃಷಭ: ಸ್ನೇಹಿತರಲ್ಲಿ ತೀರಾ ವೈಯಕ್ತಿಕ ವಿಚಾರಗಳನ್ನು ಹಂಚಿಕೊಳ್ಳುವುದು ಸರಿಯಲ್ಲ. ಎಲ್ಲಾ ಕಿರಿ ಕಿರಿಗಳನ್ನೂ, ತೊಂದರೆ ತಾಪತ್ರಯಗಳನ್ನೂ ಶಾಂತ ರೀತಿಯಿಂದ ಎದುರಿಸುವಿರಿ.

ಮಿಥುನ: ಕೌಟುಂಬಿಕ ವಿಚಾರವಾಗಿ ತೆಗೆದುಕೊಳ್ಳುವ ಪ್ರತಿ ಹೆಜ್ಜೆಯೂ ಮುಂದಿನ ದಿನಗಳಲ್ಲಿ ಕೀರ್ತಿಯನ್ನು ಹೆಚ್ಚಿಸುತ್ತದೆ. ಪ್ರಭಾವಿ ವ್ಯಕ್ತಿಗಳನ್ನು ಸಂದರ್ಶಿಸುವ ಅವಕಾಶ ಸಿಗುವುದು.

ಕರ್ಕಾಟಕ: ಆಭರಣಗಳ ಖರೀದಿ, ಸತ್ಕಾರ್ಯದಲ್ಲಿ ಆಸಕ್ತಿ, ಬಂಧು-ಬಾಂಧವರ ಸಹಾಯದ ಸತ್ಫಲವನ್ನು ಕಾಣಬಹುದು. ಮೇಲಧಿಕಾರಿಗಳೊಂದಿಗಿನ ಮಾತುಕತೆ ಫಲ ನೀಡಲಿದೆ.

ಸಿಂಹ: ವಿದ್ಯಾರ್ಥಿಗಳು ವಿಶೇಷ ಅಧ್ಯಯನ ಕ್ಷೇತ್ರಗಳಲ್ಲಿ ಮುಂದುವರಿಯಲು ಅವಕಾಶಗಳು ಸೃಷ್ಟಿಯಾಗುತ್ತವೆ. ಪ್ರೀತಿ ಪಾತ್ರರೊಂದಿಗೆ ಹೊಸ ಯೋಜನೆಯನ್ನು ಆರಂಭಿಸುವ ಬಗ್ಗೆ ಚರ್ಚೆ ನಡೆಸುವಿರಿ.

ಕನ್ಯಾ: ಸಿದ್ಧ ಉಡುಪುಗಳ ಮಾರಾಟಗಾರರಿಗೆ ರಫ್ತಿನಿಂದ ಲಾಭವನ್ನು ಪಡೆಯಬಹುದು. ಆಲಸ್ಯ, ನಿದ್ದೆಯಂತಹ ಸಮಸ್ಯೆ ನಿಮ್ಮನ್ನು ಕಾಡಲಿವೆ. ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಇದು ಸಕಾಲ.

ತುಲಾ: ಲಾಭದ ನಿರೀಕ್ಷೆಯಿಲ್ಲದೆ ಮಾಡಿದ ಕೆಲಸದಲ್ಲೂ ಅನಿರೀಕ್ಷಿತ ಲಾಭ ಇರುವುದರಿಂದ ಸಂತೋಷ ಆಗುವುದು. ಅಮೂಲ್ಯ ವಸ್ತುಗಳ ಚೋರ ಕೃತ್ಯಗಳು ನಡೆಯಲಿವೆ.

ವೃಶ್ಚಿಕ: ಸಂಘ–ಸಂಸ್ಥೆಗಳ ಜವಾಬ್ದಾರಿಯನ್ನು ನೋಡುವವರಿಗೆ ನಾಲ್ಕಾರು ಮಾತುಗಳನ್ನು ಕೇಳಬೇಕಾಗುವುದು. ಇತರರ ಮಾತುಗಳನ್ನು ನಕಾರಾತ್ಮಕವಾಗಿ ತೆಗೆದುಕೊಳ್ಳುವ ಬದಲು ತಪ್ಪುಗಳನ್ನು ಸರಿಪಡಿಸಿಕೊಳ್ಳಿ.

ಧನು: ರಕ್ಷಣಾ ವಿಭಾಗದಲ್ಲಿ ಕಾರ್ಯ ನಿರ್ವಹಿಸುವವರು ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕಾಗುವುದು. ಯಾವುದೇ ವಿಷಯವನ್ನಾದರೂ ಪತಿಯಲ್ಲಿ ಮುಕ್ತವಾಗಿ ಹೇಳಿಕೊಳ್ಳುವುದರಿಂದ ಪರಿಹಾರ ಸಿಗುವುದು.

ಮಕರ: ಸರ್ಕಾರಿ ಅಧಿಕಾರಿಗಳಲ್ಲಿ ವಿನಯ ಪೂರ್ವಕವಾಗಿ ನಡೆದುಕೊಳ್ಳುವುದರಿಂದ ಕೆಲಸ ಸರಾಗವಾಗಿ ನಡೆಯುವುದು. ವ್ಯವಹಾರದಿಂದ ದೂರ ಉಳಿಯುವುದು ಉತ್ತಮ.

ಕುಂಭ: ತಾಂತ್ರಿಕ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವವರಿಗೆ ಅವಕಾಶಗಳ ಜತೆಗೆ ಸ್ವಂತ ಉದ್ಯಮ ಸ್ಥಾಪಿಸುವ ಯೋಚನೆಗಳು ಹಾಗೂ ಅದಕ್ಕೆ ಬೇಕಾದ ಆರ್ಥಿಕ ಸಹಾಯದ ಜತೆ ಜನಬಲ ಸಿಗಲಿದೆ.

ಮೀನ: ನೈತಿಕವಾಗಿ ಪರಸ್ಪರ ಬೆಂಬಲವಾಗಿರುವ ಸ್ನೇಹ ಸಂಬಂಧ ವೃದ್ಧಿಯಾಗಲಿದೆ. ಮೆಚ್ಚಿದ ವರ ಅಥವಾ ವಧುವಿನ ಜತೆಗೆ ಮದುವೆಯಾಗಲು ಮನೆಯ ಹಿರಿಯರಿಂದ ಒಪ್ಪಿಗೆ ಸಿಗಲಿದೆ.

ಪದಬಂಧ 6349

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ದಶಕಗಳ ಹಿಂದಿನ| ಬಾಗಿಲು! (2)
3.ಹೊಸದಾಗಿ ಅಭಿನಯಿಸುತ್ತಿರುವವನು (4)
6.ಪಾಪಿಗಳ ಲೋಕ (3)
8.ಬರದಲ್ಲಿ ತೋರಿದ ಡೌಲು (4)
9.ತುಂಬ ಹದಗೆಟ್ಟ ಸ್ಥಿತಿ (3)
10.ಸಮಾಧಾನವಾಗಿ ನಡೆದ ರಾಜಿ (3)
11.ವೇಶ ಧರಿಸಿ ಒಟ್ಟುಗೂಡುವುದು (4)
13.ಇದು ಶ್ರೇಷ್ಠವಾದುದು 3)
15.ಧಾರಾಕಾರವಾಗಿ ಸುರಿಯುವ ಮಳೆ (4)
16.ಆದಾಯವಲ್ಲ! ಇದು ಬರೀ ಖರ್ಚು! (2)

ಮೇಲಿಂದ ಕೆಳಕ್ಕೆ
2.ನೋಡುವಿಕೆಯನ್ನು ಹೀಗೆನ್ನಿ (3)
3.ನೃತ್ಯ ಮಾಡುವವನು ಇಲ್ಲಿದ್ದಾನೆ (3)
4.ಈತ ಮುಸಲ್ಮಾನ ದೊರೆ (3)
5.ವನದಲ್ಲಿ ದೊರೆತ ಗಳಿಕೆ (4)
7.ರಸ ಒಸರುವ ಜಿಹ್ವೆ (3)
9.ಅವನು ಸರ ತರಲು ತೋರಿದ ಆತುರ (4)
10.ಸಾರವುಳ್ಳ ಕುಟುಂಬ (3)
12.ಮಿಡತೆಯನ್ನು ಹೀಗೂ ಹೇಳುವರು (3)
13.ಪಣವಿಟ್ಟು ಕೈಗೊಡ ಸಂಚಾರ (3)
14.ನೆನಪಿಗೆ ಬಾರದಿರುವುದು (3)



6348ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಂಧಕಾರ 3.ಆಯುಧ
4.ಗಲಿಬಿಲಿ 6.ದವಸ
8.ಹಗೇವು 9.ಕುಟೀರ
10.ಮಲ್ಲಿಗೆ 13.ಕವಾಡಿಗ
14.ಸಹಾಯ 15.ತಿರುಪತಿ

ಮೇಲಿಂದ ಕೆಳಕ್ಕೆ:
1.ಅಂಧ 2.ರಗಡು
3.ಆಮೋದ 5.ಲಿಲಾವು
7.ಸತ್ಕಾರ 8.ಹರಾಮ
9.ಕುಹಕ 11.ಗೆಳೆಯ
12.ಜಗತಿ 14.ಸತಿ

ಸುಡೊಕು 6733

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4			9		1		3	
	9							4
8		3	4		5	9		
7								8
	8		1	6	2		9	
		9	7			2		
		8		1			4	
9		4	8		7	1		5
	1			9			8	

6732 ಸುಡೊಕು

6	2	4	9	1	7	3	5	8
5	1	3	8	4	6	9	2	7
9	7	8	2	5	3	4	1	6
7	4	9	5	3	8	1	6	2
1	8	6	4	2	9	7	3	5
2	3	5	6	7	1	8	4	9
4	9	2	3	8	5	6	7	1
3	6	1	7	9	2	5	8	4
8	5	7	1	6	4	2	9	3

ಟಿಎಂಸಿ ಪ್ರಣಾಳಿಕೆ: ಹತ್ತು ಭರವಸೆ

ಮಹಿಳೆಯರ ಮಾಸಿಕ ನೆರವು ₹500ರಷ್ಟು ಹೆಚ್ಚಳ ● ಜನರ ಮನೆ ಬಾಗಿಲಿಗೆ ಚಿಕಿತ್ಸೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಯಲ್ಲಿ ಗೆದ್ದು ಮತ್ತೆ ಅಧಿಕಾರಕ್ಕೆ ಬರುವ ತವಕದಲ್ಲಿರುವ ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ಅಧ್ಯಕ್ಷೆ, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಪಕ್ಷದ ಚುನಾವಣಾ ಪ್ರಣಾಳಿಕೆಯನ್ನು ಶುಕ್ರವಾರ ಬಿಡುಗಡೆ ಮಾಡಿದ್ದು, 10 ಪ್ರಮುಖ ಭರವಸೆಗಳನ್ನು ಘೋಷಿಸಿದ್ದಾರೆ.

ಅಸ್ತಿತ್ವದಲ್ಲಿರುವ ಕಲ್ಯಾಣ ಯೋಜನೆಗಳ ವ್ಯಾಪ್ತಿಯನ್ನು ವಿಸ್ತರಿಸುವುದರ ಜತೆಗೆ ಆರೋಗ್ಯ ಸೇವೆ ಮತ್ತು ಮೌಲಸೌಕರ್ಯ ಬಲಪಡಿಸುವ ಕುರಿತು ಪ್ರಣಾಳಿಕೆಯಲ್ಲಿ ಪ್ರಸ್ತಾಪಿಸಿದ್ದಾರೆ. ಅಲ್ಲದೆ, ಪಕ್ಷದ ಬೆನ್ನೆಲುಬಾಗಿರುವ ಮಹಿಳೆಯರ ಬೆಂಬಲವನ್ನು ಆಕರ್ಷಿಸುವ ಕೊಡುಗೆಗಳನ್ನೂ ಪ್ರಕಟಿಸಿದ್ದಾರೆ.

294 ಸದಸ್ಯ ಬಲದ ಪಶ್ಚಿಮ ಬಂಗಾಳ ವಿಧಾನಸಭೆಗೆ ಏಪ್ರಿಲ್ 23 ಮತ್ತು 29ರಂದು ಮತದಾನಗಳು ನಡೆಯಲಿವೆ. ಮೇ 4ರಂದು ಮತ ಎಣಿಕೆ ನಡೆಯಲಿದೆ.

> ಈ ಭರವಸೆಗಳು ಮುಂದಿನ ಐದು ವರ್ಷಗಳವರೆಗೆ ಉತ್ತಮ ಆಡಳಿತ ನಡೆಸುವುದಕ್ಕೆ ಪಕ್ಷಕ್ಕೆ ಅಡಿಪಾಯವಾಗಲಿದ್ದು, ರಾಜ್ಯದ ಅಭಿವೃದ್ಧಿಯನ್ನು ಖಚಿತಪಡಿಸುತ್ತವೆ
> **ಮಮತಾ ಬ್ಯಾನರ್ಜಿ,** ಟಿಎಂಸಿ ಅಧ್ಯಕ್ಷೆ

ಪ್ರಮುಖ ಘೋಷಣೆಗಳು:

- ಮಹಿಳೆಯರಿಗಾಗಿ ಇರುವ 'ಲಕ್ಷ್ಮಿರ್ ಭಂಡಾರ್ ಯೋಜನೆ'ಯಡಿ ನೀಡುತ್ತಿರುವ ಮಾಸಿಕ ನೆರವನ್ನು ₹500ರಷ್ಟು ಏರಿಸಲಾಗುವುದು. ಅಂದರೆ ಸಾಮಾನ್ಯ ವರ್ಗದ ಮಹಿಳೆಯರಿಗೆ ತಿಂಗಳಿಗೆ ₹1,500 ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ತಿಂಗಳಿಗೆ ₹1,700 ಅನ್ನು ನೇರ ವರ್ಗಾವಣೆ ಮೂಲಕ ವಿತರಿಸಲಾಗುವುದು
- 'ದುವಾರೆ ಚಿಕಿತ್ಸಾ' ಯೋಜನೆ ಅಡಿಯಲ್ಲಿ ಆರೋಗ್ಯ ಸೇವೆಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸಲಾಗುವುದು. ಇದರ ಅಡಿ ರಾಜ್ಯದಲ್ಲಿ ಪ್ರತಿ ವರ್ಷ, ಪ್ರತಿ ತಾಲ್ಲೂಕು, ಪಟ್ಟಣಗಳಲ್ಲಿ ಸರ್ಕಾರದ ವತಿಯಿಂದ ಆರೋಗ್ಯ ಶಿಬಿರಗಳನ್ನು ಆಯೋಜಿಸಲಾಗುವುದು
- 'ಬಾಂಗ್ಲಾ–ಯುವ–ಸಾಥಿ' ಯೋಜನೆ ಮೂಲಕ ನಿರುದ್ಯೋಗಿ ಯುವ ಸಮೂಹಕ್ಕೆ ಆರ್ಥಿಕ ನೆರವನ್ನು ಮುಂದುವರಿಸಲಾಗುವುದು. ಇದರ ಅಡಿಯಲ್ಲಿ ಅರ್ಹ ಫಲಾನುಭವಿಗಳಿಗೆ ತಿಂಗಳಿಗೆ ₹1,500 ದೊರೆಯಲಿದೆ
- ರೈತರು ಮತ್ತು ಭೂರಹಿತ ಕೃಷಿಕರನ್ನು ಬೆಂಬಲಿಸಲು ಹಾಗೂ ರಾಜ್ಯದ ಕೃಷಿ ವ್ಯವಸ್ಥೆಯನ್ನು ಬಲಪಡಿಸಲು ₹30,000 ಕೋಟಿ ಮೊತ್ತದ ವಿಶೇಷ ಕೃಷಿ ಬಜೆಟ್ ಮಂಡಿಸಲಾಗುವುದು
- ರಾಜ್ಯದ ಪ್ರತಿಯೊಂದು ಕುಟುಂಬಕ್ಕೂ 'ಪಕ್ಕಾ ಮನೆ' ಮತ್ತು ಶುದ್ಧೀಕರಿಸಿದ ಕುಡಿಯುವ ನೀರು ದೊರೆಯುವಂತೆ ಮಾಡಲಾಗುವುದು
- ವಿದ್ಯಾರ್ಥಿಗಳಿಗೆ ಉತ್ತಮ ಸೌಲಭ್ಯ ಮತ್ತು ಜಾಗತಿಕ ಗುಣಮಟ್ಟದ ಶಿಕ್ಷಣವನ್ನು ಖಾತರಿಪಡಿಸಲು ಸರ್ಕಾರಿ ಶಾಲೆಗಳ ಮೂಲಸೌಕರ್ಯ ವೃದ್ಧಿಗೆ ಒತ್ತು ನೀಡಲಾಗುವುದು
- ವಿಶ್ವ ದರ್ಜೆಯ ಲಾಜಿಸ್ಟಿಕ್ಸ್, ಬಂದರುಗಳು ಮತ್ತು ವಾಣಿಜ್ಯ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಮೂಲಕ ರಾಜ್ಯವನ್ನು ಪೂರ್ವ ಭಾರತದ ವಾಣಿಜ್ಯ ಕೇಂದ್ರವಾಗಿ ಅಭಿವೃದ್ಧಿಪಡಿಸಲು ಕ್ರಮ ತೆಗೆದುಕೊಳ್ಳಲಾಗುವುದು
- ಆಡಳಿತ ಸುಧಾರಣೆಗಾಗಿ ಏಳು ಹೊಸ ಜಿಲ್ಲೆಗಳನ್ನು ರಚಿಸಲಾಗುವುದು. ಅಲ್ಲದೆ ರಾಜ್ಯದಾದ್ಯಂತ ಪುರಸಭೆಗಳ ಸಂಖ್ಯೆಗಳನ್ನು ಹೆಚ್ಚಿಸಲಾಗುವುದು

ಟಿಎಂಸಿ ಚುನಾವಣಾ ಪ್ರಣಾಳಿಕೆಯನ್ನು ಮಮತಾ ಬ್ಯಾನರ್ಜಿ ಶುಕ್ರವಾರ ಬಿಡುಗಡೆ ಮಾಡಿದರು. ಸಂಸದ ಅಭಿಷೇಕ್ ಬ್ಯಾನರ್ಜಿ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

'ಅನಧಿಕೃತವಾಗಿ ರಾಷ್ಟ್ರಪತಿ ಆಡಳಿತ'

ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಯಲ್ಲಿ ಸೋಲುತ್ತೇವೆ ಎಂಬ ಆತಂಕದಿಂದ ಬಿಜೆಪಿಯವರು ರಾಜ್ಯದಲ್ಲಿ ಅನಧಿಕೃತವಾಗಿ ರಾಷ್ಟ್ರಪತಿ ಆಡಳಿತ ಹೇರಿದ್ದಾರೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಶುಕ್ರವಾರ ಆರೋಪಿಸಿದರು.

ವಿಧಾನಸಭಾ ಚುನಾವಣೆ ಬಳಿಕ ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಮತ್ತು ಜನಗಣತಿ ಹೆಸರಿನಲ್ಲಿ ರಾಜ್ಯದ ಹಲವರ ಪೌರತ್ವವನ್ನು ಕಸಿದುಕೊಳ್ಳುವ ಹುನ್ನಾರವನ್ನು ಕೇಂದ್ರ ಸರ್ಕಾರ ಹೊಂದಿದೆ ಎಂದು ಅವರು ದೂರಿದರು.

ಕೇಂದ್ರ ಸರ್ಕಾರದ ಈ ರೀತಿಯ ಪ್ರಯತ್ನಗಳ ವಿರುದ್ಧ ಜನರು ಜಾಗರೂಕರಾಗಿರಬೇಕು ಎಂದು ಎಚ್ಚರಿಸಿದರು. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಗೆಲ್ಲುವುದಕ್ಕೆ ಪೂರಕವಾಗಿ ಕ್ಷೇತ್ರಗಳ ಪುನರ್‌ವಿಂಗಡನೆ ಕಾರ್ಯವನ್ನು ಚುನಾವಣಾ ಆಯೋಗ ಕೈಗೆತ್ತಿಕೊಂಡರೂ ಅಚ್ಚರಿಯಿಲ್ಲ ಎಂದರು.

'ಎಐಎಡಿಎಂಕೆಯಿಂದ ಶೀಘ್ರ ನಿರ್ಧಾರ'

ನವದೆಹಲಿ/ ಚೆನ್ನೈ (ಪಿಟಿಐ): ಎಐಎಡಿಎಂಕೆಯು ಬಿಜೆಪಿ ಮತ್ತು ಎನ್‌ಡಿಎ ಇತರ ಪಕ್ಷಗಳೊಂದಿಗಿನ ಸೀಟು ಹಂಚಿಕೆ ಬಗ್ಗೆ ಶೀಘ್ರವೇ ಅಂತಿಮ ತೀರ್ಮಾನಕ್ಕೆ ಬರಲಿದೆ. ಇನ್ನು ನಾಲ್ಕು ದಿನಗಳಲ್ಲಿ ಈ ಕುರಿತ ಔಪಚಾರಿಕ ಘೋಷಣೆಯನ್ನು ಪ್ರಕಟಿಸಲಿದೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಶುಕ್ರವಾರ ಹೇಳಿದರು.

ಪಳನಿಸ್ವಾಮಿ

ಮಾತುಕತೆಯಲ್ಲಿ ಬಿಕ್ಕಟ್ಟು ಏರ್ಪಟ್ಟಿದೆ ಎಂಬುದನ್ನು ಅಲ್ಲಗಳೆದ ಅವರು, 'ಮಾತುಕತೆಯು ಸುಗಮವಾಗಿ ನಡೆಯುತ್ತಿದೆ. ಭಿನ್ನಾಭಿಪ್ರಾಯವನ್ನು ಸೌಹಾರ್ದಯುತವಾಗಿ ಪರಿಹರಿಸಿಕೊಳ್ಳುತ್ತೇವೆ' ಎಂದು ತಿಳಿಸಿದರು.

ಬಿಜೆಪಿ, ಎಎಂಎಂಕೆ, ಪಿಎಂಕೆ ಪಕ್ಷಗಳನ್ನು ಒಳಗೊಂಡ ಎನ್‌ಡಿಎಯನ್ನು ಎಐಎಡಿಎಂಕೆ ಪಕ್ಷವು ವಿಧಾನಸಭೆ ಚುನಾವಣೆಯಲ್ಲಿ ಮುನ್ನಡೆಸಲಿದೆ.

ನವದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಾಲ್ಕು ದಿನಗಳಲ್ಲಿ ಎಲ್ಲವೂ ತಿಳಿಯಲಿದೆ. ನಿರ್ಧಾರವನ್ನು ಅಂತಿಮಗೊಳಿಸಿ ಪ್ರಕಟಿಸುತ್ತೇವೆ. ಇದು ಡಿಎಂಕೆ ಮೈತ್ರಿಯಂತೆ ಅಲ್ಲ. ಇಲ್ಲಿ ಎಲ್ಲವೂ ಸುಗಮ ಮತ್ತು ಸಮಗ್ರವಾಗಿದೆ' ಎಂದರು.

ತಮಿಳುನಾಡು ಬಿಜೆಪಿ ಉಸ್ತುವಾರಿ ಪೀಯೂಷ್ ಗೋಯಲ್ ಅವರು ಶನಿವಾರ ರಾಜ್ಯಕ್ಕೆ ಭೇಟಿ ನೀಡಿ, ಸೀಟು ಹಂಚಿಕೆ ಬಗ್ಗೆ ಚರ್ಚಿಸಲಿದ್ದಾರೆ ಎಂದರು.

'ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗಿನ ಮಾತುಕತೆ ಆತ್ಮೀಯವಾಗಿತ್ತು. ತಮಿಳುನಾಡಿನ ರಾಜ್ಯಕೀಯ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸಿದವು' ಎಂದು ಹೇಳಿದರು.

ನಟ ವಿಜಯ್ ನೇತೃತ್ವದ ಟಿವಿಕೆ ಪಕ್ಷದೊಂದಿಗೆ ಮೈತ್ರಿ ಇಲ್ಲ ಎಂದು ಮತ್ತೊಮ್ಮೆ ಸ್ಪಷ್ಟಪಡಿಸಿದರು.

ಸೀಟು ಹಂಚಿಕೆ

ಎಐಎಡಿಎಂಕೆ ಕಚೇರಿ ಮುಚ್ಚಿ: ಡಿಎಂಕೆ

ಎಐಎಡಿಎಂಕೆಯು ಸೀಟು ಹಂಚಿಕೆ ಬಗ್ಗೆ ಬಿಜೆಪಿಯೊಂದಿಗೆ ದೆಹಲಿಯಲ್ಲಿ ಮಾತುಕತೆ ನಡೆಸಿದ್ದರ ವಿಚಾರವಾಗಿ ಪಳನಿಸ್ವಾಮಿ ಅವರ ವಿರುದ್ಧ ಡಿಎಂಕೆ ವಾಗ್ದಾಳಿ ನಡೆಸಿದೆ.

ಡಿಎಂಕೆ ನಾಯಕ, ಸಚಿವ ಕೆ.ಎನ್.ನೆಹರೂ ಅವರು, 'ತಮಿಳುನಾಡಿನಲ್ಲಿರುವ ಎಐಎಡಿಎಂಕೆ ಮುಖ್ಯ ಕಚೇರಿಯನ್ನು ಮುಚ್ಚಿ. ಇಲ್ಲಿನ ಪಕ್ಷವೊಂದು ಮೈತ್ರಿಯನ್ನು ಮುನ್ನಡೆಸುತ್ತಾ, ದೆಹಲಿಯಲ್ಲಿ ಸೀಟು ಹಂಚಿಕೆ ಬಗ್ಗೆ ಮಾತನಾಡುತ್ತಿರುವುದು ಅಚ್ಚರಿಯ ಸಂಗತಿ' ಎಂದು ಹೇಳಿಕೆಯಲ್ಲಿ ಹೇಳಿದ್ದಾರೆ.

'ತನಿಖಾ ಸಂಸ್ಥೆಗಳು ಸಮನ್ಸ್ ನೀಡುತ್ತಿರುವ ಮಧ್ಯೆಯೇ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪಳನಿಸ್ವಾಮಿ ಅವರನ್ನು ಆಹ್ವಾನಿಸಿ ಸೀಟು ಹಂಚಿಕೆ ಬಗ್ಗೆ ಮಾತನಾಡಿದ್ದಾರೆ.

ಎಐಎನ್‌ಆರ್‌ಸಿಗೆ 16, ಬಿಜೆಪಿ 14 ಕ್ಷೇತ್ರ

ಪುದುಚೆರಿ (ಪಿಟಿಐ): ಆಡಳಿತಾರೂಢ ಎಐಎನ್‌ಆರ್‌ಸಿ ಹಾಗೂ ಬಿಜೆಪಿ–ಎಐಎಡಿಎಂಕೆ ಮೈತ್ರಿ ಪಕ್ಷಗಳು, ಪುದುಚೆರಿ ವಿಧಾನಸಭೆ ಚುನಾವಣೆಗೆ ಸೀಟು ಹಂಚಿಕೆ ಕುರಿತು ಒಪ್ಪಂದ ಮಾಡಿಕೊಂಡಿವೆ. ಈ ಪ್ರಕಾರ ಎಐಎನ್‌ಆರ್‌ಸಿ 16 ಹಾಗೂ ಬಿಜೆಪಿ 14 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿವೆ.

ಮುಖ್ಯಮಂತ್ರಿ ಎನ್.ರಂಗಸ್ವಾಮಿ ಹಾಗೂ ಕೇಂದ್ರ ಸಚಿವ ಮನ್ಸುಖ್ ಮಾಂಡವೀಯ ಅವರು ಇಲ್ಲಿ ಖಾಸಗಿ ಹೋಟೆಲ್‌ವೊಂದರಲ್ಲಿ ಸಭೆ ನಡೆಸಿದರು.

ಬಿಜೆಪಿಯು ತನ್ನ 14 ಸ್ಥಾನಗಳ ಪೈಕಿ, ಎಐಎಡಿಎಂಕೆ ಹಾಗೂ ಎಲ್‌ಜೆಕೆಗಳಿಗೆ ತಲಾ 2 ಸ್ಥಾನಗಳನ್ನು ನೀಡಿದೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರಾಡಳಿತ ಪ್ರದೇಶ ಪಾಂಡಿಚೇರಿಯಲ್ಲಿ ಏ.9ರಂದು ವಿಧಾನಸಭೆ ಚುನಾವಣೆ ನಡೆಯಲಿದೆ.

ರಾಯ್‌ಜೊರ್‌ಗೆ 11 ಸ್ಥಾನ

ಗುವಾಹಟಿ (ಪಿಟಿಐ): ಅಸ್ಸಾಂ ವಿಧಾನಸಭೆ ಚುನಾವಣೆ ಸಂಬಂಧ ಹಲವು ದಿನಗಳ ಮಾತುಕತೆ ಮತ್ತು ಅನಿಶ್ಚಿತತೆಯ ಬಳಿಕ ಕಾಂಗ್ರೆಸ್ ಮತ್ತು ರಾಯ್‌ಜೊರ್ ದಳ ಸೀಟು ಹಂಚಿಕೆಯನ್ನು ಅಂತಿಮಗೊಳಿಸಿದೆ.

11 ಕ್ಷೇತ್ರಗಳನ್ನು ಸ್ಥಳೀಯ ಪಕ್ಷವಾದ ರಾಯ್‌ಜೊರ್ ದಳಕ್ಕೆ ಬಿಟ್ಟುಕೊಡುವ ಒಪ್ಪಂದಕ್ಕೆ ಕಾಂಗ್ರೆಸ್ ನಾಯಕ ಗೌರವ್ ಗೋಗೊಯಿ ಸಹಿ ಮಾಡಿದ್ದಾರೆ.

ಶಶಿಕಲಾ– ರಾಮದಾಸ್ ಮೈತ್ರಿ

ಪ್ರಜಾವಾಣಿ ವಾರ್ತೆ

ಚೆನ್ನೈ: 'ಆಲ್ ಇಂಡಿಯಾ ಪುರಚ್ಚಿ ತಲೈವರ್ ಮಕ್ಕಳ್ ಮುನ್ನೇತ್ರ ಕಳಗಂ'(ಎಐಪಿಟಿಎಂಎಂಕೆ) ಪಕ್ಷದ ಸಂಸ್ಥಾಪಕಿ ವಿ.ಕೆ. ಶಶಿಕಲಾ ಅವರು, ಎಸ್. ರಾಮದಾಸ್ ನೇತೃತ್ವದ ಪಿಎಂಕೆ ಬಣದೊಂದಿಗೆ ಮೈತ್ರಿ ಮಾಡಿಕೊಳ್ಳುವುದಾಗಿ ಶುಕ್ರವಾರ ಘೋಷಿಸಿದರು.

ತಿಂಡಿವನಂ ಬಳಿಯ ತೈಲಪುರಂನಲ್ಲಿರುವ ತೋಟದ ಮನೆಯಲ್ಲಿ ಶಶಿಕಲಾ ಮತ್ತು ರಾಮದಾಸ್ ಜಂಟಿಯಾಗಿ ಮೈತ್ರಿ ಘೋಷಿಸಿದರು.

ಎನ್‌ಡಿಎ ಮೈತ್ರಿಕೂಟಕ್ಕೆ ಸೇರ್ಪಡೆ ಆಗಲು ಇಬ್ಬರೂ ಯತ್ನಿಸಿದ್ದರು. ಮಾತುಕತೆ ವಿಫಲವಾಗಿತ್ತು. ಆಗಲೇ ಮೈತ್ರಿ ಮಾಡಿಕೊಳ್ಳುವ ನಿರೀಕ್ಷೆ ವ್ಯಕ್ತವಾಗಿತ್ತು.

ತಮ್ಮ ಪುತ್ರ ಆರ್. ಅನ್ಬುಮಣಿ ಅವರಿಂದ ದೂರ ಇರುವ ರಾಮದಾಸ್ ಅವರು ವಣ್ಣಿಯಾರ್ ಪ್ರಾಬಲ್ಯದ ಉತ್ತರ ತಮಿಳುನಾಡಿನಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಸಾಧ್ಯತೆ ಇದೆ.

ಈ ಎರಡೂ ಪಕ್ಷಗಳ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ವಿಜಯಿಗಳಾಗದಿದ್ದರೂ, ಎಐಎಡಿಎಂಕೆ ಹಾಗೂ ಪಿಎಂಕೆ ಅಭ್ಯರ್ಥಿಗಳಿಗೆ ಬಲವಾದ ಪೆಟ್ಟು ನೀಡಲಿದ್ದಾರೆ ಎಂಬ ವಿಶ್ಲೇಷಣೆ ರಾಜಕೀಯ ವಲಯದಲ್ಲಿ ಕೇಳಿಬರುತ್ತಿದೆ.

ಪಾಲಕ್ಕಾಡ್: ತ್ರಿಕೋನ ಸ್ಪರ್ಧೆಯಲ್ಲಿ 'ಬಿರಿಯಾನಿ' ಜನಪ್ರಿಯತೆ

ಪ್ರಜಾವಾಣಿ ವಾರ್ತೆ

ತಿರುವನಂತಪುರಂ: ಕೇರಳದ ಪಾಲಕ್ಕಾಡ್ ವಿಧಾನಸಭಾ ಕ್ಷೇತ್ರದ ಚುನಾವಣೆಯಲ್ಲಿ ಏರ್ಪಟ್ಟಿರುವ ತ್ರಿಕೋನ ಸ್ಪರ್ಧೆಯಲ್ಲಿ 'ಬಿರಿಯಾನಿ ಹೌಸ್' ಎಲ್ಲರ ಗಮನ ಸೆಳೆಯುತ್ತಿದೆ.

ಸಿಪಿಎಂ ನೇತೃತ್ವದ ಎಲ್‌ಡಿಎಫ್ ಪಕ್ಷದ ಅಭ್ಯರ್ಥಿ-ಹೋಟೆಲ್ ಉದ್ಯಮಿ ಎನ್‌ಎಂಆರ್ ರಜಾಕ್, ಪಾಲಕ್ಕಾಡ್ ನಲ್ಲಿರುವ ಜನಪ್ರಿಯ ಎನ್‌ಎಂಆರ್ ಬಿರಿಯಾನಿ ಹೌಸ್ ನಡೆಸುವ ಕುಟುಂಬದ ಸದಸ್ಯರಲ್ಲಿ ಒಬ್ಬರು. 'ರಾವುತ್ತರ್ ಬಿರಿಯಾನಿ'ಗೆ ಹೆಸರುವಾಸಿಯಾದ ಈ 'ಬಿರಿಯಾನಿ ಹೌಸ್' ಪಾಲಕ್ಕಾಡ್‌ನಲ್ಲಿ ನಾಲ್ಕು ಶಾಖೆಗಳನ್ನು ಹೊಂದಿದೆ.

ರಜಾಕ್‌ಗೆ ಪ್ರತಿಸ್ಪರ್ಧಿಯಾಗಿ ಬಿಜೆಪಿಯಿಂದ ಪಕ್ಷದ 'ಫೈರ್‌ಬ್ರ್ಯಾಂಡ್' ನಾಯಕಿ ಶೋಭಾ ಸುರೇಂದ್ರನ್ ಕಣಕ್ಕಿಳಿದಿದ್ದಾರೆ. ಕಾಂಗ್ರೆಸ್ ನೇತೃತ್ವದ ಯುಡಿಎಫ್ ಪಕ್ಷದಿಂದ ಪಾಲಕ್ಕಾಡ್‌ನ ಖ್ಯಾತ ನಟಿ, ಹಾಸ್ಯನಟ ರಮೇಶ್ ಪಿಶಾರಡಿ ಅವರು ಕಣದಲ್ಲಿದ್ದಾರೆ. ತ್ರಿಕೋನ ಸ್ಪರ್ಧೆಯಲ್ಲಿ 'ಬಿರಿಯಾನಿ ಹೌಸ್' ಹೆಚ್ಚು ಸದ್ದು ಮಾಡುತ್ತಿದೆ. ಕಳೆದ ಮೂರು ಚುನಾವಣೆಗಳಲ್ಲಿ ದ್ವಿತೀಯ ಸ್ಥಾನ ಪಡೆದು ಈ ಬಾರಿ ಗೆಲ್ಲುವ ಭರವಸೆಯೊಂದಿಗೆ ಕಣಕ್ಕಿಳಿದಿರುವ ಅವರಿಗೆ 'ಬಿರಿಯಾನಿ ಹೌಸ್' ಖ್ಯಾತಿ ತೀವ್ರ ಸ್ಪರ್ಧೆ ನೀಡುವಂತೆ ಕಾಣುತ್ತಿದೆ.

ಎನ್‌ಎಂಆರ್ ರಜಾಕ್ ಅವರನ್ನು ಸಿಪಿಎಂ ಬೆಂಬಲಿತ ಸ್ವತಂತ್ರ ಅಭ್ಯರ್ಥಿ ಎಂದು ಘೋಷಿಸಿದ ತಕ್ಷಣ, 'ಎನ್‌ಎಂಆರ್ ಬಿರಿಯಾನಿ ಹೌಸ್' ವ್ಯಾಪಕವಾಗಿ ಜನರನ್ನು ಸೆಳೆಯಲು ಆರಂಭಿಸಿದೆ.

2009-10ರಲ್ಲಿ ರಜಾಕ್ ಮತ್ತು ಸಹೋದರರು ತಮ್ಮ ತಾಯಿಯವರ ಬಿರಿಯಾನಿ ಖಾದ್ಯದ ಬಗೆಯನ್ನೇ ನೆಚ್ಚಿಕೊಂಡು 'ಬಿರಿಯಾನಿ ಹೌಸ್' ಆರಂಭಿಸಿದರು. ಇವರು ತಯಾರಿಸುವ 'ರಾವುತ್ತರ್ ಬಿರಿಯಾನಿ', ಮಾಂಸ ಮತ್ತು ಅನ್ನವನ್ನು ಪ್ರತ್ಯೇಕವಾಗಿ ಬೇಯಿಸುವ ಸಾಮಾನ್ಯ ಬಿರಿಯಾನಿ ಪಾಕವಿಧಾನಗಳಿಗಿಂತ ಭಿನ್ನವಾಗಿದೆ. ಇದರಲ್ಲಿ ಅನ್ನ ಮತ್ತು ಮಾಂಸ ಎರಡನ್ನೂ ಒಟ್ಟಿಗೆ ಬೇಯಿಸಲಾಗುತ್ತದೆ.

ಪಾಲಕ್ಕಾಡ್‌ನಲ್ಲಿರುವ ಎನ್‌ಎಂಆರ್ ಬಿರಿಯಾನಿ ಹೌಸ್ ಫುಡ್ ವ್ಲಾಗರ್ಸ್ ನೆಚ್ಚಿನ ತಾಣವಾಗಿದೆ. ಬಿರಿಯಾನಿ ಮಳಿಗೆಯು, ಮಟನ್, ಚಿಕನ್ ಸೇರಿದಂತೆ ವೈವಿಧ್ಯಮಯ ಮಾಂಸಾಹಾರ ಪೂರೈಸುತ್ತದೆ.

ಅಂದಹಾಗೆ, 2021ರ ವಿಧಾನಸಭಾ ಚುನಾವಣೆಯಲ್ಲಿ ಪಾಲಕ್ಕಾಡ್ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ 'ಮೆಟ್ರೊ ಮ್ಯಾನ್' ಈ.ಶ್ರೀಧರನ್ ಗಮನ ಸೆಳೆದಿದ್ದರು. ಶ್ರೀಧರನ್ ಅವರು ಕಾಂಗ್ರೆಸ್ ಅಭ್ಯರ್ಥಿ ಶಫಿ ಪರಂಬಿಲ್ ಅವರ ಎದುರು 3859 ಮತಗಳಿಂದ ಪರಾಭವಗೊಂಡಿದ್ದರು.

2016ರಲ್ಲಿ ಶೋಭಾ ಸುರೇಂದ್ರನ್ ಅವರು ಪಾಲಕ್ಕಾಡ್ ಕ್ಷೇತ್ರದಲ್ಲಿ ಬಿಜೆಪಿಯಿಂದ ಕಣಕ್ಕಿಳಿದಿದ್ದು, ಎರಡನೇ ಸ್ಥಾನ ಪಡೆದಿದ್ದರು. ಆಗ ಎಲ್‌ಡಿಎಫ್ ಅಭ್ಯರ್ಥಿ ಮೂರನೇ ಸ್ಥಾನ ಪಡೆದಿದ್ದರು. ಶೋಭಾ ಅವರು, ಪರಂಬಿಲ್ ಎದುರು 17483 ಮತಗಳ ಅಂತರದಿಂದ ಪರಾಭವಗೊಂಡಿದ್ದರು.

ಅಡ್ಡ ಮತದಾನ: ಮತ್ತೊಬ್ಬರಿಗೆ ನೋಟಿಸ್

ಚಂಡೀಗಢ (ಪಿಟಿಐ): ರಾಜ್ಯಸಭೆ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದ ಆರೋಪ ಹಿನ್ನೆಲೆಯಲ್ಲಿ ಹರಿಯಾಣದ ಮತ್ತೊಬ್ಬ ಶಾಸಕರಿಗೆ ಕಾಂಗ್ರೆಸ್ ಶುಕ್ರವಾರ ಷೋಕಾಸ್ ನೋಟಿಸ್ ನೀಡಿದೆ.

ರಾಟಿಯಾ ಕ್ಷೇತ್ರದ ಶಾಸಕ ಜರ್ನೈಲ್ ಸಿಂಗ್ ಅವರಿಗೆ ಹರಿಯಾಣ ಕಾಂಗ್ರೆಸ್‌ನ ಶಿಸ್ತು ಪಾಲನಾ ಸಮಿತಿ ಅಧ್ಯಕ್ಷ ಧರಂಪಾಲ್ ಮಲಿಕ್ ಶಿಸ್ತು ಕ್ರಮದ ನೋಟಿಸ್ ರವಾನಿಸಿದ್ದಾರೆ. ಏಳು ದಿನಗಳಲ್ಲಿ ನೋಟಿಸ್‌ಗೆ ಉತ್ತರ ನೀಡುವಂತೆ ಸೂಚಿಸಲಾಗಿದೆ. ಈಗಾಗಲೇ ನಾಲ್ವರು ಶಾಸಕರಿಗೆ ನೋಟಿಸ್ ಕೊಡಲಾಗಿದೆ.

ಕೇರಳ ಜನತೆ ಬದಲಾವಣೆಗೆ ಸನ್ನದ್ಧರು: ರಾಹುಲ್ ಗಾಂಧಿ

ನವದೆಹಲಿ (ಪಿಟಿಐ): 'ಕೇರಳದ ಜನರು ಬದಲಾವಣೆ ತರಲು ಸನ್ನದ್ಧರಾಗಿದ್ದಾರೆ' ಎಂದು ಹೇಳಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು, ಯುಡಿಎಫ್ (ಸಂಯುಕ್ತ ಪ್ರಜಾಸತ್ತಾತ್ಮಕ ರಂಗ) ಅಧಿಕಾರಕ್ಕೆ ಬರಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ರಾಹುಲ್ ಗಾಂಧಿ

ಶುಕ್ರವಾರ ತಮ್ಮ 'ಎಕ್ಸ್' ಖಾತೆಯಲ್ಲಿ ' ಟೀಂ ಯುಡಿಎಫ್ ಈಸ್ ಟೀಂ ಕೇರಳಂ' ಎಂದು ಪೋಸ್ಟ್ ಮಾಡಿರುವ ಅವರು, ' ನಮ್ಮ ಪ್ರತಿಯೊಬ್ಬ ಅಭ್ಯರ್ಥಿಯೂ ಕೇರಳದ ಧ್ವನಿ, ಆಕಾಂಕ್ಷೆ ಮತ್ತು ಜನರ ನಂಬಿಕೆಯನ್ನು ಪ್ರತಿಬಿಂಬಿಸಲಿದ್ದಾರೆ' ಎಂದಿದ್ದಾರೆ.

'ಕೇರಳ ನನಗೆ ಮನೆ, ಕೇರಳಿಗರು ನನ್ನ ಕುಟುಂಬ ಇದ್ದಂತೆ. ಅವರು ನನಗೆ ನೀಡಿದ ಪ್ರೀತಿ ಮತ್ತು ವಿಶ್ವಾಸಕ್ಕೆ ನಾನು ಋಣಿಯಾಗಿದ್ದೇನೆ. ಯಾವತ್ತೂ ಅವರ ಪಾಲುದಾರ' ಎಂದಿದ್ದಾರೆ.

ಏಪ್ರಿಲ್ 9ರಂದು ನಡೆಯುವ ವಿಧಾನಸಭೆ ಚುನಾವಣೆಗೆ ತಾನು ಸ್ಪರ್ಧಿಸುವ 92 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ ನಂತರ ರಾಹುಲ್ ಅವರು ಈ ಪೋಸ್ಟ್ ಮಾಡಿದ್ದಾರೆ.

ಸಂಸದರಿಗೆ ಟಿಕೆಟ್ ಇಲ್ಲ: ಆಡಳಿತಾರೂಢ ಎಲ್‌ಡಿಎಫ್ ವಿರುದ್ಧ ಪ್ರಬಲ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಕಾಂಗ್ರೆಸ್ ಕೆಲ ಸಂಸದರಿಗೂ ಟಿಕೆಟ್ ನೀಡಲಿದೆ ಎಂಬ ಚರ್ಚೆಗಳಿದ್ದವು. ಆದರೆ ಯಾವುದೇ ಸಂಸದರನ್ನು ಕಣಕ್ಕಿಳಿಸಿಲ್ಲ.

ಕರ್ನಾಟಕ ಸರ್ಕಾರ
ನಗರಸಭೆ ಕಾರ್ಯಾಲಯ, ಯಾದಗಿರಿ
ಜಿ: ಯಾದಗಿರಿ. ಕರ್ನಾಟಕ ರಾಜ್ಯ., ದೂರವಾಣಿ: 08443–256300

ಸಂ: ಸಸಯಾ:ತಾಂತ್ರಿಕ ಶಾಖೆ:ಇ–ಟೆಂಡರ:2025–26 ದಿನಾಂಕ:17–03–2026.

–: ಇ–ಪ್ರಕ್ಯೂರಮೆಂಟ್ ಮರು ಟೆಂಡರ ಪ್ರಕಟಣೆ :: ದ್ವಿ–ಲಕೋಟೆ ಪದ್ಧತಿ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಯಾದಗಿರಿ ಜಿಲ್ಲೆಯ ಯಾದಗಿರಿ ನಗರಸಭೆಯ ಪೌರಾಯುಕ್ತರು ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮಗಳು 2000ರ ಇ–ಪ್ರಕ್ಯೂರಮೆಂಟ್ ಪದ್ದತಿಯಲ್ಲಿ ಅಮೃತ 2.0 ರ ಅನುದಾನದಡಿಯಲ್ಲಿ ತೆಗೆದುಕೊಂಡಿರುವ ಕಾಮಗಾರಿಯ ಇಂಡೆಂಟ್ ನಂಬರ್ DMA/2025-26/OW/WORK_ INDENT 54504/CALL-2 - ಗೆ ಇ–ಪ್ರಕ್ಯೂರಮೆಂಟ್ ಪೋರ್ಟಲನಲ್ಲಿ ಟೆಂಡರ್ ಕರೆಯಲಾಗಿದ್ದು, ಇಪ್ರಕ್ಯೂರಮೆಂಟ್ ಪೋರ್ಟಲನಲ್ಲಿ ನೋಂದಾಯಿಸಲ್ಪಟ್ಟ ಲೋಕೋಪಯೋಗಿ ಇಲಾಖೆಯ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಕೆ.ಡಬ್ಲ್ಯೂ–4 ರ Standard Tender Documentಗಳ ಅಡಿಯಲ್ಲಿ ಇ–ಟೆಂಡರನ್ನು ಆಹ್ವಾನಿಸಲಾಗಿದೆ. ಇ–ಪ್ರಕ್ಯೂರಮೆಂಟ್‌ನಲ್ಲಿ http://eproc.karnataka.gov.in ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್ ಲೈನ್ ಮೂಲಕ ಟೆಂಡರಗಳನ್ನು ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೆಬ್‌ಸೈಟ್ www.yadgircity.mrc.gov.in ರಲ್ಲಿ ನೋಡಬಹುದು ಹಾಗೂ ತಾಂತ್ರಿಕ ಅಧಿಕಾರಿಗಳನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

1) ಟೆಂಡರಗಳನ್ನು ಸಲ್ಲಿಸಲು ಪ್ರಾರಂಭ ದಿನಾಂಕ :17–03–2026 ರಂದು 11.00 ಗಂಟೆಯಿಂದ 2) ಪೂರ್ವ ಬಿಡ್ ಸಭೆ ದಿನಾಂಕ:23–03–2026 ರಂದು ಬೆಳಿಗ್ಗೆ 11.00 ಗಂಟೆಗೆ 3) ಟೆಂಡರಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 26–03–2026 ರಂದು ಸಾಯಂಕಾಲ 5.00ರ ವರೆಗೆ 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 27–03–2026 5) ಆರ್ಥಿಕ ಬಿಡ್ ತೆರೆಯುವ ದಿನಾಂಕ : 01–04–2026.

ಸಹಿ/– ಪೌರಾಯುಕ್ತರು
ನಗರಸಭೆ ಯಾದಗಿರಿ
ವಾ.ಸಾ.ಸಂ.ಇ/ಯಾದಗಿರಿ/605/ಕೆ.ಎಸ್.ಎಂ.ಸಿ&ಎ/2025–26

ಕರ್ನಾಟಕ ಸರ್ಕಾರ
ಕರ್ನಾಟಕ ಪರೀಕ್ಷಾ ಪ್ರಾಧಿಕಾರ
ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012. ದೂರವಾಣಿ: 080–23 460 460 (5 ಲೈನ್‌ಗಳು)
ಇ–ಮೇಲ್: keauthority-ka@nic.in ವೆಬ್‌ಸೈಟ್: https://cetonline.karnataka.gov.in/kea/

ಸಂಖ್ಯೆ: ಇಡಿ/ಕೆಇಎ/ಆರ್‌ಇಸಿ/ಸಿ.ಆರ್–01/2026 ದಿನಾಂಕ: 18–03–2026

ಅಧಿಸೂಚನೆ

PGCET-2026 – ಮೊದಲನೆ ವರ್ಷದ / 1ನೇ ಸೆಮಿಸ್ಟರ್ ಗಳ ಎಂಬಿಎ / ಎಂಸಿಎ /ಎಂಇ/ಎಂ.ಟೆಕ್/ ಎಂ.ಆರ್ಕಿಟೆಕ್ಚರ್ ಕೋರ್ಸುಗಳ ಕೋರ್ಸುಗಳಿಗೆ ಪ್ರವೇಶ

1. ಕರ್ನಾಟಕ ಮತ್ತು ಕರ್ನಾಟೇಕತರ ಅಭ್ಯರ್ಥಿಗಳಿಂದ 2026–27ನೇ ಸಾಲಿನ ಮೊದಲನೇ ವರ್ಷದ / 1ನೇ ಸೆಮಿಸ್ಟರ್‌ಗಳ (ಪೂರ್ಣಾವಧಿ / ಅರೆಕಾಲಿಕ) ಎಂಬಿಎ / ಎಂಸಿಎ / ಎಂಇ / ಎಂ.ಟೆಕ್ / ಎಂ.ಆರ್ಕಿಟೆಕ್ಚರ್ ಕೋರ್ಸುಗಳ ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
2. **ಆಸಕ್ತ ಅಭ್ಯರ್ಥಿಗಳು 2005 ಮತ್ತು 2011 ರ ಪಿಜಿಸಿಇಟಿ ನಿಯಮಗಳು ಮತ್ತು ಅದರ ತಿದ್ದುಪಡಿಗಳ ಅನ್ವಯ ಎಂಬಿಎ / ಎಂಸಿಎ / ಎಂಇ / ಎಂ.ಟೆಕ್ ಕೋರ್ಸ್‌ಗಳಿಗೆ** ಪ್ರವೇಶ ಪಡೆಯಲು ಅರ್ಹತೆ ಪಡೆಯುವುದಕ್ಕಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ PGCET-2026 ಕ್ಕೆ ಹಾಜರಾಗಬೇಕು.
ಎಂಇ, ಎಂಟೆಕ್ ಪ್ರವೇಶ ಪರೀಕ್ಷೆಯನ್ನು Civil Engineering, Computer Science Engineering, Mechanical Sciences, and Electrical Sciences ವಿಷಯಗಳಿಗೆ ಮಾತ್ರ ನಡೆಸಲಾಗುತ್ತದೆ.

ಸ್ನಾತಕೋತ್ತರ ಸಾಮಾನ್ಯ ಪ್ರವೇಶ ಪರೀಕ್ಷೆ– PGCET-2026 – ಪರೀಕ್ಷಾ ವೇಳಾಪಟ್ಟಿ ಮತ್ತು ವಿಧಾನ

ದಿನಾಂಕ / ದಿನ	ಸಮಯ	ಮೊದಲನೇ ವರ್ಷದ / ಮೊದಲನೇ ಸೆಮಿಸ್ಟರ್ ಪ್ರವೇಶ	ಒಟ್ಟು ಪ್ರಶ್ನೆಗಳು	ಒಟ್ಟು ಅಂಕಗಳು	ಪರೀಕ್ಷಾ ವಿಧಾನ
23–05–2026 ಶನಿವಾರ	ಮ. 02.30 ರಿಂದ 04.30	# ಎಂಇ / ಎಂ.ಟೆಕ್ *	100	100	ಪಿಜಿಸಿಇಟಿ ಅನ್ನು ಓಎಂಆರ್ ಮೂಲಕ ನಡೆಸಲಾಗುತ್ತದೆ. ಪ್ರಶ್ನೆ ಪತ್ರಿಕೆಯು ವಸ್ತುನಿಷ್ಠ ಬಹು ಆಯ್ಕೆ ಮಾದರಿ ಯಾಗಿರುತ್ತದೆ.
24–05–2026 ಭಾನುವಾರ	ಬೆ.10.30 ರಿಂದ ಮ. 12.30	ಎಂಸಿಎ	100	100	
	ಮ.02.30 ರಿಂದ 04.30	ಎಂಬಿಎ	100	100	

(*Non-programmable calculators are allowed for M.E. / M.Tech. examination only)

3. ಪಠ್ಯಕ್ರಮ: PGCET-2026 ರ ಪಠ್ಯಕ್ರಮವನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ.
4. **ಸರ್ಕಾರದ ಪತ್ರ ಸಂಖ್ಯೆ ಇಡಿ 161 ಟಿಇಸಿ 2025 ದಿನಾಂಕ 27–06–2026ರ ಅನ್ವಯ Bio-Technology, Chemical Engineering, Environmental Engineering, Polymer Science, and Textile Technology ವಿಷಯಗಳಿಗೆ** ಎಂಇ, ಎಂಟೆಕ್ ಪ್ರವೇಶ ಪರೀಕ್ಷೆಯನ್ನು ನಡೆಸುವುದಿಲ್ಲ, ಮುಂದುವರಿದು ಸದರಿ ವಿಷಯಗಳಿಗೆ ಪ್ರವೇಶಾತಿಯನ್ನು ಆಯಾ ಪದವಿ ಪರೀಕ್ಷೆಗಳಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ನೀಡಲಾಗುತ್ತದೆ; ಹಾಗೂ
5. ಎಮ್.ಆರ್ಕಿಟೆಕ್ಚರ್ ಕೋರ್ಸುಗಳ ಪ್ರವೇಶಾತಿಗೆ ಅಭ್ಯರ್ಥಿಗಳು ಕೌನ್ಸಿಲ್ ಆಫ್ ಆಕಿಟೆಕ್ಚರ್, ನವದೆಹಲಿ ರವರು ನಡೆಸುವ ಪಿಜಿಇಟಿಎ–2026 ರಲ್ಲಿ ಅರ್ಹತೆ ಪಡೆದಿರಬೇಕು. ಮತ್ತು
6. ಅಭ್ಯರ್ಥಿಗಳು ಕರ್ನಾಟಕದ ಪಿಜಿಸಿಇಟಿ–2026ಕ್ಕೆ ಆನ್‌ಲೈನ್ ಮೂಲಕ ನೊಂದಾಯಿಸಿ ಕೊಂಡು, ಆನ್‌ಲೈನ್ ಅರ್ಜಿ ಸಲ್ಲಿಸಿ, ಅರ್ಜಿ ಶುಲ್ಕ ಪಾವತಿಸುವುದು ಕಡ್ಡಾಯವಾಗಿರುತ್ತದೆ.
7. ಇಂಜಿನಿಯರಿಂಗ್ ಹಾಗು ಟೆಕ್ನಾಲಜಿ ವಿಭಾಗದಲ್ಲಿ GATE ಪರೀಕ್ಷೆಯಲ್ಲಿ ಅರ್ಹತೆ ಪಡೆದಿರುವ ಅಭ್ಯರ್ಥಿಗಳು ಮಾತ್ರ ವಿಟಿಯು, ಬೆಳಗಾವಿ ಅಡಿಯಲ್ಲಿನ ವಿವಿಧ ಎಂ.ಟೆಕ್ ಕೋರ್ಸುಗಳಿಗೆ ಪ್ರವೇಶ ಪಡೆಯಲು ಅರ್ಹರಾಗುತ್ತಾರೆ. ಗೇಟ್ ಪರೀಕ್ಷೆಯಲ್ಲಿ ಮಾನ್ಯತೆ ಅಂಕಗಳನ್ನು ಹೊಂದಿರುವವರು (Valid GATE Score) ಎಂಇ / ಎಂ.ಟೆಕ್ / ಎಂ. ಆರ್ಕ್ ಕೋರ್ಸ್‌ಗಳ ಪ್ರವೇಶಕ್ಕಾಗಿ, ಪಿಜಿಸಿಇಟಿ–2026ಕ್ಕೆ ಹಾಜರಾಗಬೇಕಾಗಿರುವುದಿಲ್ಲ, ಆದರೆ ಅಂತಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಗಳನ್ನು ಭರ್ತಿ ಮಾಡಿ ಶುಲ್ಕವನ್ನು ಪಾವತಿಸಿ ಪ್ರವೇಶಕ್ಕೆ ಅರ್ಹರಾಗಬಹುದು.
8. ಪಿಜಿಸಿಇಟಿ–2026 ಇ–ಮಾಹಿತಿ ಬುಲೆಟಿನ್ ನಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಅರ್ಹತಾ ಷರತ್ತುಗಳನ್ನು ಪೂರೈಸದ ಅಭ್ಯರ್ಥಿಗಳನ್ನು ಕರ್ನಾಟಕೇತರ ಅಭ್ಯರ್ಥಿಗಳು ಎಂದು ಪರಿಗಣಿಸಲಾಗುತ್ತದೆ **(clause-n);** ಮತ್ತು ಇಂತಹ ಅಭ್ಯರ್ಥಿಗಳು ಎಂಬಿಎ / ಎಂಸಿಎ ಕೋರ್ಸುಗಳಿಗೆ ಆಡಳಿತ ಮಂಡಳಿಯವರು ಸರ್ಕಾರಕ್ಕೆ ಬಿಟ್ಟು ಕೊಡುವ ಸೀಟುಗಳಿಗೆ ಮಾತ್ರ ಪ್ರವೇಶ ಪಡೆಯಬಹುದು; ಹಾಗೂ SC/ST/OBC ಅರ್ಹತಾ ಮಾನದಂಡಗಳು ಕರ್ನಾಟಕದ SC/ST/OBC ಅಭ್ಯರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ ಎಂಬುದನ್ನು ದಯವಿಟ್ಟು ಗಮನಿಸಿ.
9. ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿರುವ ಮಾಹಿತಿ ಪುಸ್ತಕ, ಶೈಕ್ಷಣಿಕ ಅರ್ಹತೆ, ವಿವಿಧ ವರ್ಗಗಳ ಸೀಟುಗಳಿಗೆ ನಿಗದಿಪಡಿಸಿರುವ ಅರ್ಹತಾ ಮಾನದಂಡಗಳು ಮತ್ತು ಅಂತಹ ಸೀಟುಗಳಿಗೆ ನಿಗದಿಪಡಿಸಿರುವ ಅಭ್ಯರ್ಥಿಯ ಅರ್ಹತೆ ಹಾಗು ಇತ್ಯಾದಿ ಮಾನದಂಡಗಳನ್ನು ಕಡ್ಡಾಯವಾಗಿ ಓದಿಕೊಂಡು ನೊಂದಣಿ ಮಾಡಿಕೊಳ್ಳಲು ಸೂಚಿಸಿದೆ.
10. **ಆಸಕ್ತ ಅಭ್ಯರ್ಥಿಗಳು ಕೆಇಎ ಮೂಲಕ 2026ನೇ ಸಾಲಿನ ಎಂಬಿಎ / ಎಂಸಿಎ /ಎಂಇ/ಎಂ.ಟೆಕ್/ ಎಂ.ಆರ್ಕಿಟೆಕ್ಚರ್ ಕೋರ್ಸುಗಳ ಪ್ರವೇಶಾತಿಗೆ ಅರ್ಹತೆ ಪಡೆಯಲು 23–03–2026 ರ ಬೆಳಿಗ್ಗೆ 11.00 ರಿಂದ ದಿನಾಂಕ 08–04–2026 ರ ರಾತ್ರಿ 11.59 ರೊಳಗಾಗಿ** ಆನ್‌ಲೈನ್ ಮೂಲಕ ನೊಂದಣಿ ಮಾಡಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿರುತ್ತದೆ. **ದಿನಾಂಕ 10–04–2026 ರೊಳಗೆ** ಶುಲ್ಕವನ್ನು ಪಾವತಿಸಬಹುದಾಗಿರುತ್ತದೆ.
11. ಅಭ್ಯರ್ಥಿಗಳು ಹೊಂದಿರುವ ಯುಜಿ ಪದವಿಗಳ ಆಧಾರದ ಮೇಲೆ ಆಯ್ಕೆ ಮಾಡಿಕೊಳ್ಳುವ ಸ್ನಾತಕೋತ್ತರ ಪದವಿಗಳು ಮತ್ತು ಪ್ರಾಧಿಕಾರವು ನೀಡುವ ಎಲ್ಲಾ ಪ್ರವೇಶಗಳು; ಸರ್ಕಾರ, ಸಂಬಂಧಿಸಿದ ವಿಶ್ವವಿದ್ಯಾನಿಲಯಗಳ ಹಾಗೂ ಅಪೆಕ್ಸ್ ಸಂಸ್ಥೆಗಳು ನೀಡುವ ಅನುಮೋದನೆಗೆ ಒಳಪಟ್ಟಿರುತ್ತದೆ.
12. ಪ್ರವೇಶಾತಿ ನಿಯಮಾವಳಿಗಳು, ವಿವರವಾದ ಅಧಿಸೂಚನೆ, ಅರ್ಹತಾ ಕಂಡಿಕೆಗಳು, ವಿವಿಧ ವೇಳಾಪಟ್ಟಿ ಇತ್ಯಾದಿಗಳ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ಅಭ್ಯರ್ಥಿಗಳು ಕೆಇಎ ವೆಬ್‌ಸೈಟ್ https://cetonline.karnataka.gov.in/kea/ ಗೆ ಭೇಟಿ ನೀಡುವುದು.

ಸಹಿ/–
(ಹೆಚ್. ಪ್ರಸನ್ನ, ಭಾ.ಆ.ಸೇ.)
ಕಾರ್ಯನಿರ್ವಾಹಕ ನಿರ್ದೇಶಕರು.
ವಾಸಾಸಂಇ/ವಾಪ್ರ/ಜಿಎ/6370/2025–26

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಕಾಮಗಾರಿ ವಿಭಾಗ ಬೆಳಗಾವಿ.

ಸಂ: ವಾಕರಸಾ/ಕಾನಿಅ/ಬೆವಿ/ನಕ್ಷೆ/903/2025–26 ದಿನಾಂಕ: 20/03/2026

ಕೆ.ಪಿ.ಪಿ.ಪಿ ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 16/2025-26
(Through Gok Karnataka Public Procurement Portal www.kppp.karnataka.gov.in)

ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ/ಕೇಂದ್ರ ಲೋಕೋಪಯೋಗಿ ಇಲಾಖೆ, ಎಂ.ಇ.ಎಸ್ ಗಳಲ್ಲಿ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ **Gok Karnataka Public Procurement Portal** ಮುಖಾಂತರ ಟೆಂಡರ್ ಅಹ್ವಾನಿಸಲಾಗಿದೆ. ಟೆಂಡರ್ ಶೆಡ್ಯೂಲ್‌ನ ವಿವರಗಳಿಗಾಗಿ www.kppp.karnataka.gov.in ವೆಬ್‌ಸೈಟ್‌ಗೆ ಲಾಗ್‌ಆನ್ ಮಾಡಿ ಪಡೆದುಕೊಳ್ಳಬಹುದು.

ಕ್ರ ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಕಾಮಗಾರಿಯ ಹೆಸರು	ಟೆಂಡರ್ ಆಧಾರ	ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಮುಂಗಡ ಠೇವಣಿ ಮೊತ್ತ (ರೂ.ಗಳಲ್ಲಿ)	ಗುತ್ತಿಗೆದಾರರ ದರ್ಜೆ	ಭರ್ತಿ ಮಾಡಿದ ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ
1	16	ಚಿಕ್ಕೋಡಿಯಲ್ಲಿ ನೂತನ ವಿಭಾಗೀಯ ಕಾರ್ಯಾಗಾರವನ್ನು ನಿರ್ಮಿಸುವುದು (1 ನೇ ಹಂತ).(2ನೇ ಕರೆ)	ದ್ವಿ–ಲಕೋಟೆ	572=50	8,58,750=00	ದರ್ಜೆ–1	30/03/2026

ಇನ್ನುಳಿದ ವಿವರಗಳನ್ನು ವಿವರವಾದ ಟೆಂಡರ್ ಪ್ರಕಟಣೆಯಲ್ಲಿರುವಂತೆ ಖಚಿತ ಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸತಕ್ಕದ್ದು. ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಪಡೆಯಬಹುದಾಗಿದೆ ಮತ್ತು ಈ ಕಛೇರಿ ದೂರವಾಣಿ ಸಂ. 0831–2451475 ಗೆ ಸಂಪರ್ಕಿಸ ಬಹುದಾಗಿದೆ ಹಾಗೂ ಸಹಾಯವಾಣಿ (help desk) : +91-8046010000 and +91-8068948777 ಸಂಪರ್ಕಿಸಬಹುದಾಗಿದೆ. ಯಾವುದೇ ತಿದ್ದುಪಡಿ ಮತ್ತು ದಿನಾಂಕಗಳಲ್ಲಿನ ಮುಂದೂಡಿಕೆಗಳಿದ್ದಲ್ಲಿ **Gok Karnataka Public Procurement Portal** ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–
ಕಾರ್ಯನಿರ್ವಾಹಕ ಅಭಿಯಂತರರು,
ವಾಕರಸಾ ಸಂಸ್ಥೆ, ಕಾಮಗಾರಿ ವಿಭಾಗ, ಬೆಳಗಾವಿ.
ವಾ.ಸಾ.ಇ./ಬೆಳಗಾವಿ/2128/2025–26/ದೇಶಪಾಂಡೆಪಬ್ಲಿಸಿಟಿ

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು–3 ರವರ ಕಛೇರಿ,
1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052.

ಸಂಖ್ಯೆ: ಡಿಜಿಎಂ–3/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/23/2025–26/ಕರೆ–2 ದಿನಾಂಕ : 18.03.2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಇ–ಪಾವತಿ ರೂಪದಲ್ಲಿ ಪ್ರತಿ ಕೆಲಸದ ಐಟಂ (ಮರುಪಾವತಿಸಲಾಗದ) ಮುಂದೆ ನಿಗದಿತ ಶುಲ್ಕವನ್ನು ಪಾವತಿಸುವ ಮೂಲಕ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್ ಸೈಟ್ (https://kppp.karnataka.gov.in) ನಿಂದ ಟೆಂಡರ್ ದಾಖಲೆಗಳನ್ನು ಡೌನ್ ಲೋಡ್ ಮಾಡಬಹುದು. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಬಿಡ್‌ದಾರರು ಬಿಡ್ ಅನ್ನು ಸಲ್ಲಿಸಬೇಕು.

ಕ್ರ ಸಂ	ಕಾಮಗಾರಿಗಳ ಹೆಸರು	ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ)	ಇಎಂಡಿ (ಮೊತ್ತ ರೂ.ಗಳಲ್ಲಿ)	ಸೇವಾ ಒಪ್ಪಂದದ ನಿಗದಿತ ಅವಧಿ
1	Loading and Transportation of LVP/SUP/MLP Generated in Bengaluru Central City Corporation area to cement industries	499.50	7,49,250.00	06 ತಿಂಗಳು
2	Loading and Transportation of LVP/SUP/MLP Generated in Bengaluru West City Corporation area to cement industries	499.50	7,49,250.00	06 ತಿಂಗಳು
3	Loading and Transportation of LVP/SUP/MLP Generated in Bengaluru South City Corporation area to cement industries	499.50	7,49,250.00	06 ತಿಂಗಳು

ಟೆಂಡರ್ ಕಾರ್ಯಸೂಚಿ : (1) ಬಿಡ್ ಪೂರ್ವ ಪ್ರಶ್ನೆಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : **23.03.2026 ರಂದು ಮಧ್ಯಾಹ್ನ 15.00 ಗಂಟೆಯವರೆಗೆ** (2) ಬಿಡ್ ಪೂರ್ವ ಸಭೆಯು ದಿನಾಂಕ : **24.03.2026 ರಂದು ಮಧ್ಯಾಹ್ನ 15:00 ಗಂಟೆಗೆ** ಸಿಇ & ಸಿಜಿಎಂ–2, (ಟೆಕ್) ಬಿಎಸ್‌ಡಬ್ಲ್ಯೂಎಂಎಲ್, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು ರವರ ಕಚೇರಿಯಲ್ಲಿ ನಡೆಯಲಿದೆ (3) ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **27.03.2026 ರಂದು ಸಂಜೆ 16.00 ಗಂಟೆಯವರೆಗೆ** (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **30.03.2026 ರಂದು 16.30 ಗಂಟೆಗೆ** (5) ತಾಂತ್ರಿಕವಾಗಿ ಅರ್ಹ ಬಿಡ್ಡಾದರಿಗೆ ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕವನ್ನು ತಿಳಿಸಲಾಗುವುದು.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–3, ಬಿಎಸ್‌ಡಬ್ಲ್ಯೂಎಂಎಲ್
ವಾಸಾಸಂಇ/ವಾ.ಪ್ರ/6366/ಎಸ್‌ಎಸ್‌ಸಿ/2025–26

ಕರ್ನಾಟಕ ಸರ್ಕಾರ
ರಾಯಚೂರು ಮಹಾನಗರ ಪಾಲಿಕೆ
E-mail:itstaff_ulb_raichura@yahoo.com Website:-www.raichurcity.gov.in
Phone No:08532-226768 Fax No:08532-226316

ಸಂ.ರಾಮಪ/ತಾಂತ್ರಿಕ/ಕಾ/ಅ/2025–26 ದಿನಾಂಕ: 17–03–2026.

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ 2.0 ಪದ್ಧತಿ ಅಡಿಯಲ್ಲಿ).

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗಿನ ಅನುದಾನದಲ್ಲಿ ಈ ಕೆಳಗೆ ತೋರಿಸಿದ ಇಂಡೆಂಟ್ ನಂಬರ ಸೇವಾ / ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ 2.0 ಪದ್ಧತಿ ಅಡಿಯಲ್ಲಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಅರ್ಹ ಗುತ್ತಿಗೆದಾರರು WWW.KPPP.Karnataka.gov.in ವೆಬ್‌ಸೈಟ್ ಮೂಲಕ ಭಾಗವಹಿಸತಕ್ಕದ್ದು, ಹಾಗೂ ಹೆಚ್ಚಿನ ವಿವರಗಳಿಗಾಗಿ ಮಹಾನಗರ ಪಾಲಿಕೆಯ ವೆಬ್‌ಸೈಟ್ WWW.raichurcity. mrc.gov.in ರಲ್ಲಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿದೆ.

ಕ್ರ. ಸಂ	ಅನುದಾನದ ವಿವರ	ಕಾಮಗಾರಿಗಳ ವಿವರ	ಇಂಡೆಂಟ್ ನಂಬರ
1	2024–25, 2025–26 ಎಸ್.ಸಿ.ಪಿ ಕೆ.ಕೆ.ಆರ್.ಡಿ.ಬಿ ಅನುದಾನ.	Request for proposal (RFP) for Selection of an NGO for the Community Engagement and Awareness Campaign to Address The Problem of Synthetic Toddy Consumption in Harijanwada 1, Harijanwada 2, and Devinagar wards in Urban Raichur- 2 year programme **Estimate Cost Rs.1,02,47,600/**	DMA/2025-26/ SE7491
2	ಅಮೃತ್ 2.0 ಅನುದಾನ.	- Development Works in Mavinkere Azad Nagar, Ward No 04 in Raichur City **Estimate Cost Rs.2,87,00,000/-**	DMA/2025-26/ BD/WORK_ INDENT53013
4	ಮಹಾನಗರ ಪಾಲಿಕೆ ಅನುದಾನದಲ್ಲಿ	Repair and Maintenance of UGD in Raichur City **Estimate Cost Rs.1,00,00,000/-**	DMA/2025-26/ WS/WORK_ INDENT56574

ಸಹಿ/– ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ, ರಾಯಚೂರು.
DIP/RCR/775KSMCA/778/2025-26

ಶುದ್ಧ ಕುಡಿಯುವ ನೀರು ಘಟಕ ದುರಸ್ತಿ ತಡ

7 ಗ್ರಾಮಗಳಲ್ಲಿ ಸಮಸ್ಯೆ, ನೀರು ಒದಗಿಸಲು ನಗರ ಜಿಲ್ಲಾ ಪಂಚಾಯಿತಿ ಸಿದ್ಧತೆ ಆರಂಭ

• ಉಮೇಶ ಭಟ್ಟ ಪಿ.ಎಚ್.

ಮುಖ್ಯಾಂಶಗಳು
- ಬೇಸಿಗೆ ನಿರ್ವಹಣೆಗೆ ₹2.51 ಕೋಟಿ ಮೀಸಲು
- ಬಾಡಿಗೆ ಆಧಾರದಲ್ಲಿ 39 ಕೊಳವೆ ಬಾವಿ
- 7 ಹಳ್ಳಿಗಳಿಗೆ ಟ್ಯಾಂಕರ್ ನೀರು ಪೂರೈಕೆ

ಬೆಂಗಳೂರು: ಬೇಸಿಗೆ ಆರಂಭಗೊಂಡು ತಿಂಗಳು ಕಳೆಯುತ್ತಾ ಬಂದಿದ್ದರೂ ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸುಸ್ಥಿತಿಯಲ್ಲಿಡುವ ಚಟುವಟಿಕೆ ಈಗ ಆರಂಭವಾಗಿದೆ.

ಬೇಸಿಗೆ ಆರಂಭಕ್ಕೂ ಮುನ್ನ ನೀರಿನ ಲಭ್ಯತೆಯ ಎಲ್ಲ ಮೂಲಗಳನ್ನು ಸಿದ್ಧವಿಟ್ಟುಕೊಳ್ಳಬೇಕು ಎಂದು ಸರ್ಕಾರ ತಿಂಗಳ ಹಿಂದೆಯೇ ಸೂಚನೆ ನೀಡಿದೆ. ಇದರ ನಡುವೆ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಕೊನೆ ಕ್ಷಣದಲ್ಲಿ ತಯಾರಿ ಆರಂಭಿಸಲಾಗಿದೆ. ನಗರ ಜಿಲ್ಲಾಪಂಚಾಯಿತಿ ಐದು ತಾಲ್ಲೂಕುಗಳ 85 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ 767 ಗ್ರಾಮಗಳಿದ್ದು, ಒಟ್ಟು 831 ಶುದ್ಧ ಕುಡಿಯುವ ನೀರಿನ ಘಟಕಗಳಿವೆ. ಇವುಗಳಲ್ಲಿ 91 ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಅಡಿಯಲ್ಲಿದ್ದರೆ, ಉಳಿದ 740 ಕರ್ನಾಟಕ ಹಾಲು ಮಹಾಮಂಡಳಿ, ಸಿಎಸ್‌ಆರ್ ಅನುದಾನ ಬಳಸಿ ನಿರ್ಮಿಸಲಾಗಿದೆ.

ಒಟ್ಟು ಶುದ್ಧ ಕುಡಿಯುವ ನೀರಿನ ಘಟಕಗಳಲ್ಲಿ 760 ಬಳಕೆಗೆ ಯೋಗ್ಯವಾಗಿವೆ. ಉಳಿದ 71 ಘಟಕಗಳು ಹಾಳಾಗಿವೆ. ಇವುಗಳಲ್ಲಿ 37 ಘಟಕಗಳ ರಿಪೇರಿ ಕಾರ್ಯವನ್ನು ನೀರು ಸರಬರಾಜು ವಿಭಾಗ ಆರಂಭಿಸಿದೆ. ಇದು ಏಪ್ರಿಲ್ ಎರಡನೇ ವಾರದ ಹೊತ್ತಿಗೆ ಪೂರ್ಣಗೊಳ್ಳಲಿದೆ. ಇನ್ನೂ 34 ಘಟಕಗಳ ದುರಸ್ತಿ ಆರಂಭವಾಗಬೇಕಿದೆ.

ಚೂಡಹಳ್ಳಿ, ಆವಲಹಳ್ಳಿ, ಕೊಂಡಶೆಟ್ಟಿಹಳ್ಳಿ, ಮಾರತ್‌ಹಳ್ಳಿ, ಮಾರನಾಯಕನಹಳ್ಳಿ, ಬ್ಯಾಲಹಳ್ಳಿ ಸಹಿತ ಹಲವು ಭಾಗಗಳಲ್ಲಿ ಘಟಕಗಳ ದುರಸ್ತಿ ನಡೆದಿದೆ. ಬನ್ನೇರುಘಟ್ಟ, ತಾವರಕೆರೆ, ಹಕ್ಕಿಪಕ್ಕಿ ಕಾಲೊನಿ, ಶಿಕಾರಿಪಾಳ್ಯ ಕೆಲವು ಕಡೆಗಳಲ್ಲಿ ಘಟಕಗಳ ಸುತ್ತಮುತ್ತ ಅಂತರ್ಜಲ ಕುಸಿತದಿಂದ ನೀರು ಸಮರ್ಪಕವಾಗಿ ಸಿಗುತ್ತಿಲ್ಲ.

ಶುದ್ಧ ಕುಡಿಯುವ ನೀರಿನ ಘಟಕಗಳ ದುರಸ್ತಿ ಕಾರ್ಯ

> ಹೆಚ್ಚಿನ ಭಾಗದಲ್ಲಿ ಸದ್ಯಕ್ಕೆ ನೀರಿನ ಸಮಸ್ಯೆಯಿಲ್ಲ. ತೊಂದರೆ ಆಗಬಹುದಾದ ಗ್ರಾಮಗಳ ಪಟ್ಟಿ ಮಾಡಿ ಯೋಜನೆ ಸಿದ್ಧಪಡಿಸಿಕೊಂಡಿದ್ದೇವೆ
> **ಆರ್. ಯತೀಶ್,** ಮುಖ್ಯಕಾರ್ಯನಿರ್ವಹಣಾಧಿಕಾರಿ, ನಗರ ಜಿಲ್ಲಾ ಪಂಚಾಯಿತಿ

'ಶುದ್ಧ ಕುಡಿಯುವ ನೀರಿನ ಘಟಕಗಳು ನಿರ್ವಹಣೆಯಿಲ್ಲದೇ ನೀರಿಗೆ ತೊಂದರೆ ಅನುಭವಿಸುವಂತಾಗಿದೆ. ವಿವಿಧ ಅನುದಾನದಡಿ ನಿರ್ಮಿಸಿರುವ ಘಟಕಗಳನ್ನು ಕಾಲಕಾಲಕ್ಕೆ ಸರಿಪಡಿಸಬೇಕು. ಬೇಸಿಗೆ ಬಂದಾಗ ಕೆಲಸ ಕೈಗೆತ್ತಿಕೊಂಡರೆ ಸ್ಥಳೀಯರಿಗೆ ಸಮಸ್ಯೆಯಾಗುವುದಿಲ್ಲವೇ' ಎಂದು ಬ್ಯಾಲಹಳ್ಳಿ ಗ್ರಾಮಸ್ಥರು ಪ್ರಶ್ನಿಸುತ್ತಾರೆ.

'ಕಚ್ಚಾ ನೀರಿನಿಂದಾಗಿ ಘಟಕಗಳು ಸಂಪೂರ್ಣ ಬಳಕೆಗೆ ಯೋಗ್ಯವಿಲ್ಲದೇ ಇರುವುದು, ನೀರಿನ ಲಭ್ಯತೆ ಪ್ರಮಾಣ ಕಡಿಮೆಯಾಗಿರುವುದು ಸೇರಿ ನಾನಾ ಕಾರಣಗಳಿಂದ ದುರಸ್ತಿ ವಿಳಂಬವಾಗಿದೆ. ಸದ್ಯ ಶೇ 90ರಷ್ಟು ಘಟಕಗಳಲ್ಲಿ ನೀರು ಸಿಗುತ್ತಿದೆ. ಶೇ 10ರಷ್ಟರಲ್ಲಿ ಮಾತ್ರ ಸಮಸ್ಯೆಯಿದ್ದು, ಆದಷ್ಟು ಬೇಗನೇ ಎಲ್ಲಾ ಘಟಕ ದುರಸ್ತಿ ಮುಗಿಸಿ ನೀರು ಒದಗಿಸುತ್ತೇವೆ' ಎಂದು ಜಿಲ್ಲಾ ಪಂಚಾಯಿತಿ ನೀರು ಸರಬರಾಜು ವಿಭಾಗದ ಕಾರ್ಯಕಾಲಿಕ ಎಂಜಿಜಿನಿಯರ್ ಎಚ್.ಎನ್. ಮಂಜುನಾಥ ತಿಳಿಸಿದರು.

7 ಹಳ್ಳಿಗಳಲ್ಲಿ ಸಮಸ್ಯೆ– ಆತಂಕ: ಆನೇಕಲ್ ತಾಲ್ಲೂಕಿನ ಬಸವನಪುರ, ಲಕ್ಷ್ಮೀಪುರ, ಶಿಕಾರಿಪಾಳ್ಯ, ಮಾರಗೊಂಡನಹಳ್ಳಿ, ಹುಲಿಮಂಗಲ, ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾವರೆಕೆರೆ, ಚೆನ್ನೇನಹಳ್ಳಿ ಜೆಟ್ಟಿ ಪಾಳ್ಯ ಸಹಿತ ಏಳು ಹಳ್ಳಿಗಳಲ್ಲಿ ನೀರಿನ ಸಮಸ್ಯೆ ಎದುರಾಗಬಹುದು ಎನ್ನುವ ವರದಿಯನ್ನು ಸರ್ಕಾರಕ್ಕೆ ನೀಡಲಾಗಿದೆ. ಈ ಗ್ರಾಮಗಳಲ್ಲಿ ಪರ್ಯಾಯ ವ್ಯವಸ್ಥೆಗೂ ಜಿಲ್ಲಾ ಪಂಚಾಯಿತಿಯಿಂದ ತಯಾರಿ ಮಾಡಿಕೊಳ್ಳಲಾಗುತ್ತಿದೆ.

'ಆನೇಕಲ್, ಬೆಂಗಳೂರು ದಕ್ಷಿಣ, ಯಲಹಂಕ ಹಾಗೂ ಮಹದೇವಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನೀರಿನ ಪರಿಸ್ಥಿತಿ ಎದುರಿಸಲು ಆಯಾ ಪಂಚಾಯಿತಿ ಆಡಳಿತಾಧಿಕಾರಿಗಳು, ಪಿಡಿಒಗಳು ಕಾರ್ಯಯೋಜನೆ ರೂಪಿಸಿದ್ದಾರೆ. ವಾರದಲ್ಲಿ ಒಂದು ದಿನ ಕಡ್ಡಾಯವಾಗಿ ಸಭೆ ನಡೆಸಿ ಕುಡಿಯುವ ನೀರಿನ ಸ್ಥಿತಿಗತಿ ಕುರಿತು ಚರ್ಚಿಸುವಂತೆಯೂ ಸೂಚಿಸಲಾಗಿದೆ. ಆಯಾ ಶಾಸಕರ ಅಧ್ಯಕ್ಷತೆಯಲ್ಲಿರುವ ಕಾರ್ಯಪಡೆ ಸಭೆ ನಡೆಯಲಿವೆ' ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಕಾವೇರಿ ನೀರೂ ಇಲ್ಲ

ಬೆಂಗಳೂರು ನಗರಕ್ಕೆ ತೊರೆಕಾಡನಹಳ್ಳಿಯಿಂದ ಕಾವೇರಿ ನೀರು ತರುವ ಮಾರ್ಗದಲ್ಲಿ ಹಲವು ಗ್ರಾಮಗಳಿದ್ದರೂ ಅಲ್ಲಿಗೂ ಕಾವೇರಿ ನೀರು ಸರಬರಾಜು ಆಗುತ್ತಿಲ್ಲ. 767 ಗ್ರಾಮಗಳು ಕೊಳವೆ ಬಾವಿ ನೀರಿಗೆ ಅವಲಂಬಿತವಾಗಿವೆ. ಬನ್ನೇರುಘಟ್ಟ ಹಾಗೂ ಹೆನ್ನಾಗರ ಪಂಚಾಯಿತಿ ಭಾಗಕ್ಕೆ ಕಾವೇರಿ ನೀರು ಕೊಡಿಸುವ ಪ್ರಯತ್ನಗಳು ಆರಂಭಗೊಂಡಿದ್ದರೂ, ಅದು ಇನ್ನಷ್ಟು ವಿಳಂಬವಾಗುವ ಸಾಧ್ಯತೆಗಳಿವೆ.

ದೆಹಲಿ– ವ್ಯಾಂಕೋವರ್ 7 ಗಂಟೆ ಹಾರಾಟದ ಬಳಿಕ ಮರಳಿದ ವಿಮಾನ

ನವದೆಹಲಿ (ಪಿಟಿಐ)

ದೆಹಲಿಯಿಂದ ವ್ಯಾಂಕೋವರ್‌ಗೆ ಹೋಗುತ್ತಿದ್ದ ಏರ್ ಇಂಡಿಯಾ ವಿಮಾನವು 7 ಗಂಟೆ ಹಾರಾಟ ನಡೆಸಿದ ಬಳಿಕ, ಕಾರ್ಯಾಚರಣೆಯಲ್ಲಿ ಸಮಸ್ಯೆ ಕಾಣಿಸಿಕೊಂಡ ಕಾರಣ ದೆಹಲಿಗೆ ಮರಳಿತು.

'ದೆಹಲಿಯಿಂದ ವ್ಯಾಂಕೋವರ್‌ಗೆ ಹೊರಟಿದ್ದ ಏರ್ ಇಂಡಿಯಾ ಎಐ185 ವಿಮಾನದಲ್ಲಿ ಕಾರ್ಯಾಚರಣೆಯ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ಅದು ದೆಹಲಿಗೆ ಮರಳಿತು. ಎಲ್ಲಾ ಪ್ರಯಾಣಿಕರು ಹಾಗೂ ಸಿಬ್ಬಂದಿ ಸುರಕ್ಷಿತವಾಗಿದ್ದಾರೆ' ಎಂದು ಏರ್ ಇಂಡಿಯಾ ಶುಕ್ರವಾರ ತಿಳಿಸಿದೆ. ಆದರೆ ಘಟನೆ ಬಗ್ಗೆ ಅದು ಹೆಚ್ಚಿನ ಮಾಹಿತಿಯನ್ನು ನೀಡಿಲ್ಲ.

ಶುಕ್ರವಾರ ಮುಂಜಾನೆ ವಿಮಾನವು ವ್ಯಾಂಕೋವರ್‌ಗೆ ಹೊರಟಿತು ಎಂದೂ ಏರ್ ಇಂಡಿಯಾ ತಿಳಿಸಿದೆ.

ಬೋಯಿಂಗ್ 777–200 ಎಲ್‌ಆರ್ ವಿಮಾನ ವಿಟಿ– ಎಐಐ, ಚೀನಾದ ವಾಯುಪ್ರದೇಶದಿಂದ ದೆಹಲಿಗೆ ಮರಳಿತು ಎಂದು ಗೊತ್ತಾಗಿದೆ.

ಕುದುರೆಮುಖ ರಾಷ್ಟ್ರೀಯ ಉದ್ಯಾನದಲ್ಲಿ ಕಾಣಿಸಿಕೊಂಡಿದ್ದ ಕಾಳ್ಗಿಚ್ಚು

ಕುದುರೆಮುಖದಲ್ಲಿ ಕಾಳ್ಗಿಚ್ಚು

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಕುದುರೆಮುಖ ರಾಷ್ಟ್ರೀಯ ಉದ್ಯಾನದಲ್ಲಿ ಕಾಳ್ಗಿಚ್ಚು ಕಾಣಿಸಿಕೊಂಡಿದ್ದು, ಸುಮಾರು 18 ಎಕರೆಯಷ್ಟು ಹುಲ್ಲುಗಾವಲು ಸುಟ್ಟುಹೋಗಿದೆ.

ಶೃಂಗೇರಿ ತಾಲ್ಲೂಕಿನ ಕೆರೆಕಟ್ಟೆ ವನ್ಯಜೀವಿ ವಲಯದ ಮಾಣಿಕ್ಯ ಬೆಟ್ಟ, ಸೀನರಿಗುಡ್ಡದಲ್ಲಿ ಗುರುವಾರ ಮಧ್ಯಾಹ್ನ ಕಾಳ್ಗಿಚ್ಚು ಕಾಣಿಸಿಕೊಂಡಿತ್ತು. ಸ್ಥಳಕ್ಕೆ ತೆರಳಿದ ಅರಣ್ಯ ಇಲಾಖೆ ಸಿಬ್ಬಂದಿ ರಾತ್ರಿ ವೇಳೆಗೆ ಬೆಂಕಿ ನಂದಿಸಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

'ಪ್ರಾಣಿ–ಪಕ್ಷಿ ಸೇರಿ ಅಪರೂಪದ ಸಸ್ಯ ಸಂಪತ್ತು ನಾಶವಾಗಿದೆ. ಅರಣ್ಯ ಇಲಾಖೆ ಸಿಬ್ಬಂದಿಯ ನಿರ್ಲಕ್ಷ್ಯ ಇದಕ್ಕೆ ಕಾರಣ' ಎಂದು ಪರಿಸರವಾದಿಗಳು ಆರೋಪಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ಕುದುರೆಮುಖ ರಾಷ್ಟ್ರೀಯ ಉದ್ಯಾನದ ಡಿಸಿಎಫ್ ಶಿವರಾಮ ಬಾಬು, 'ಕಾಳ್ಗಿಚ್ಚಿನ ಮಾಹಿತಿ ದೊರೆತ ಕೂಡಲೇ ಸ್ಥಳಕ್ಕೆ ಸಿಬ್ಬಂದಿ ತೆರಳಿ ಬೆಂಕಿ ನಂದಿಸಿದ್ದಾರೆ. 18 ಎಕರೆಯಷ್ಟು ಹುಲ್ಲುಗಾವಲು ಸುಟ್ಟಿದೆ. ಶೋಲಾ ಕಾಡು ಮತ್ತು ಪ್ರಾಣಿ–ಪಕ್ಷಿಗಳಿಗೆ ತೊಂದರೆಯಾಗಿಲ್ಲ' ಎಂದು ತಿಳಿಸಿದರು.

'ಜನವರಿ ತಿಂಗಳಿಗೂ ಮೊದಲೇ ಎಲ್ಲೆಡೆ ಬೆಂಕಿ ನಿರ್ಬಂಧಕ ಗೆರೆ ನಿರ್ಮಿಸಲಾಗಿತ್ತು. ಆದ್ದರಿಂದ ಹೆಚ್ಚು ಹಾನಿಯಾಗಿಲ್ಲ. 25 ಕಡೆ ಬೆಂಕಿ ಕಾಣಿಸಿಕೊಂಡಿತ್ತು ಎಂಬುದು ಕೇವಲ ವದಂತಿ. ಸ್ಯಾಟ್‌ಲೈಟ್‌ನಲ್ಲಿ ಹಾಗೆ ಕಾಣಿಸಿರಬಹುದು. ನೈಜವಾಗಿ ಎರಡು ಕಡೆ ಮಾತ್ರ ಬೆಂಕಿ ಕಾಣಿಸಿಕೊಂಡಿತ್ತು' ಎಂದೂ ಅವರು ಸ್ಪಷ್ಟಪಡಿಸಿದರು.

ಯುಗಾದಿ– ರಂಜಾನ್‌ನ ಸಹಬಾಳ್ವೆ ತೆರೆದಿಟ್ಟ ಸಾಮರಸ್ಯ ಬಹುಭಾಷಾ ಕವಿಗೋಷ್ಠಿ

ಕವಿತೆಗಳಲ್ಲಿಯೂ ಕಾಡಿದ ಯುದ್ಧದಾಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುದ್ಧದಾಹ, ಸಾಯುವ ಕಂದಮ್ಮಗಳು, ಛಿದ್ರವಾದ ಶಾಲೆ... ಈಗ ನಡೆಯುತ್ತಿರುವ ಯುದ್ಧದ ಒಳಹೊರಗನ್ನು ಬಹುತೇಕ ಕವನಗಳು ಬಿಚ್ಚಿಟ್ಟವು. ಯುಗಾದಿ–ರಂಜಾನ್‌ನ ಸಹಬಾಳ್ವೆಯನ್ನು ತೆರೆದಿಟ್ಟವು. ಮತೀಯವಾದ–ಮೂಲಭೂತವಾದದ ಅಪಾಯವನ್ನು ಎತ್ತಿ ತೋರಿಸಿದವು. ಶಾಂತಿಗಾಗಿ ಕನವರಿಸಿದವು.

ಯುಗಾದಿ–ರಂಜಾನ್ ಹಬ್ಬದ ಪ್ರಯುಕ್ತ ಜಾಗೃತ ನಾಗರಿಕರು– ಕರ್ನಾಟಕದ ಸಹಕಾರದಲ್ಲಿ ಜನ ಶಿಕ್ಷಣ ಟ್ರಸ್ಟ್ ಶುಕ್ರವಾರ ಹಮ್ಮಿಕೊಂಡಿದ್ದ ಸಾಮರಸ್ಯ ಬಹುಭಾಷಾ ಕವಿಗೋಷ್ಠಿ ಇದಕ್ಕೆ ವೇದಿಕೆಯಾಯಿತು.

'ಮೂರು ವರ್ಷಗಳಿಂದ ಯುಗಾದಿ ಮತ್ತು ರಂಜಾನ್ ಒಟ್ಟೊಟ್ಟಿಗೆ ಬಂದಿವೆ. ಭಾರತದ ನೆಲ ಹೀಗೆ ಇರುವುದು ಎಂಬುದನ್ನು ಇದು ಸಾರುತ್ತಿದೆ' ಎಂದು ಆರಂಭದಲ್ಲಿಯೇ ಜನಶಿಕ್ಷಣ ಟ್ರಸ್ಟ್‌ನ ಕೆ.ಎಸ್. ವಿಮಲಾ ಸೌಹಾರ್ದ ಪರಂಪರೆಯನ್ನು ನೆನಪು ಮಾಡಿಕೊಂಡರು.

'ದುಷ್ಟತನ ವಿಶ್ವವ್ಯಾಪಿ ಹರಡಿದೆ. ದುಷ್ಟರು, ದುರುಳರು ರಾಜಕೀಯವನ್ನು ಮುನ್ನಡೆಸುತ್ತಿರುವುದು ಇದಕ್ಕೆ ಕಾರಣ. ಅಲ್ಲಲ್ಲಿ ಅಶಾಂತಿ ಇತ್ತು. ಈಗ ಜಾಗತಿಕ ಅಶಾಂತಿ ಉಂಟಾಗಿದೆ. ಶಾಂತಿಯ ಕಾಲದಲ್ಲಿ ಕ್ರಾಂತಿಯ ಮಾತಾಡುತ್ತಾ, ಕ್ರಾಂತಿಯ ಕಾಲದಲ್ಲಿ ಮೌನವಾಗುವ ಬೂಟಾಟಿಕೆಯ ಮನುಷ್ಯರು ಇರುವ ಕಾಲದಲ್ಲಿ ಇಂಥ ಕವಿಗೋಷ್ಠಿಗಳು ಸೃಜನಶೀಲ ಪ್ರತಿಭಟನೆ' ಎಂದು ಕವಿ ಎಸ್.ಜಿ. ಸಿದ್ಧರಾಮಯ್ಯ ಅವರು ಷರಾ ಬರೆದರು.

ಸಾಮರಸ್ಯ ಬಹುಭಾಷಾ ಕವಿಗೋಷ್ಠಿಯಲ್ಲಿ ಅಗ್ರಹಾರ ಕೃಷ್ಣ ಮೂರ್ತಿ, ಎಸ್‌.ಜಿ. ಸಿದ್ಧರಾಮಯ್ಯ, ವಿಜಯಮ್ಮ ಮಾತುಕತೆ ನಡೆಸಿದರು. ಕವಿ–ಕವಯಿತ್ರಿಗಳು ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

'ಈ ಯುದ್ಧಕ್ಕೆ ಜನರೇ ಕಾರಣ. ವ್ಯಾಪಾರಿ ಬುದ್ಧಿ ಇರುವ ಯುದ್ಧಪಿಪಾಸು ಟ್ರಂಪ್‌ನಿಂದಾಗಿ ಯುದ್ಧ ನಡೆಯುತ್ತಿದೆ. ಬರಾಕ್ ಒಬಾಮರಂಥ ಸಾಹಿತ್ಯಾಸಕ್ತರು ಅಮೆರಿಕದ ಅಧ್ಯಕ್ಷರಾಗಿದ್ದಿದ್ದರೆ ಯುದ್ಧ ಉಂಟಾಗುತ್ತಿರಲಿಲ್ಲ. ಕೇವಲ ವ್ಯಾಪಾರಬುದ್ಧಿ ಇದ್ದಲ್ಲಿ ಅಪಾಯ ತಪ್ಪಿದ್ದಲ್ಲ' ಎಂದು ಅವರು ಎಚ್ಚರಿಸಿದರು.

ಅಮೆರಿಕದ ನೆರವಿನೊಂದಿಗೆ ನಡೆಯುತ್ತಿರುವ ಇಸ್ರೇಲ್–ಇರಾನ್ ಯುದ್ಧಗಳ ಸುತ್ತವೇ ಹಲವು ಕವಿತೆಗಳಿದ್ದವು. ಇಸ್ರೇಲ್–ಪ್ಯಾಲೆಸ್ಟೀನ್ ಯುದ್ಧವೂ ಕವನದ ವಸ್ತುಗಳಾದವು. ದೆಹಲಿಯಲ್ಲಿ ತಾಲಿಬಾನಿ ನಾಯಕನ ಸುದ್ದಿಗೋಷ್ಠಿಗೆ ಪತ್ರಕರ್ತೆಯರನ್ನು ಹೊರಗಿಟ್ಟಿದ್ದಕ್ಕೆ ಆಕ್ರೋಶವೂ ಕವನಗಳಲ್ಲೇ ವ್ಯಕ್ತವಾದವು. ಪ್ರಕೃತಿಯಲ್ಲಿ ಇಲ್ಲದ ಭೇದಗಳು ಮನುಷ್ಯರಲ್ಲಿ ಇರುವುದನ್ನು ಈ ಭುವಿ ಜನರಿಗೇಕೆ ಎಂದು ಕವಿತೆಗಳು ಪ್ರಶ್ನಿಸಿದವು. ಪ್ಯಾಲೆಸ್ಟೀನ್ ಜನರ ಕಷ್ಟವನ್ನು ಹೋಗಲಾಡಿಸುವ ಮಳೆ ಸುರಿಯಲಿ ಎಂಬ ಆಶಯವೂ ವ್ಯಕ್ತವಾಯಿತು. ಜಾತಿ–ಧರ್ಮ ಭೇದಗಳು, ಹಿಂಸೆ, ಕೊಲೆ, ಹೆಣ್ಣಿನ ಸೇರಿದಂತೆ ಜ್ವಲಂತ ವಿಷಯಗಳೇ ಕವಿತೆಯ ವಸ್ತುಗಳಾದವು.

ಸ್ವರಚಿತ– ಪರ ರಚಿತ ಕವನಗಳು..

ಕನ್ನಡದ ಕವಿತೆಗಳ ಜೊತೆಗೆ ಒಂದು ತಮಿಳು, ಒಂದು ಮಲಯಾಳಂ, ಎರಡು ಇಂಗ್ಲಿಷ್ ಕವನಗಳೂ ಇದ್ದವು. ಹೆಚ್ಚಿನವು ಸ್ವರಚಿತ ಮತ್ತು ಕೆಲವು ಬೇರೆಯವರು ರಚಿತ ಕವಿತೆಗಳಾಗಿದ್ದವು. ಶಾಕಿರಾ ಖಾನಂ, ಪದ್ಮಿನಿ ನಾಗರಾಜ್, ಆರ್ದ್ರಾ, ಪ್ರತಿಭಾ ನಂದಕುಮಾರ್, ಅಮರಲತಾ, ಯಡಿಯೂರ್ ಪಲ್ಲವಿ, ರಾಘವೇಂದ್ರ ಗೌಡರ್, ಮಂಜಪ್ಪ ಮಾಗೋಡಿ, ಚಂದ್ರಶೇಖರ ತಾಳ್ಯ, ಹಾಜಿರಾ ಖಾನಂ, ಸಂಧ್ಯಾರಾಣಿ, ಸಿದ್ಧಾರ್ಥ ಎಂ.ಎಸ್., ಮಮತಾ ಸಾಗರ್, ರೇಷ್ಮಾ ರಮೇಶ್, ಹೇಮಂತ ಲಿಂಗಪ್ಪ, ಎಂ.ಸಿ. ಜಯಮಾಲಾ, ರವಿಚಂದ್ರ, ಸತ್ಯಮೂರ್ತಿ, ಕಿರಣ್, ಕುಮಾರಸ್ವಾಮಿ ಬೆಜ್ಜಿಹಳ್ಳಿ ಕವನಗಳು ವಾಚಿಸಿದರು.

'ಕಾವ್ಯವನ್ನು ಗಂಭೀರವಾಗಿ ತೆಗೆದುಕೊಳ್ಳದ ಈ ಕಾಲದಲ್ಲಿ ಹೃದಯದೊಳಗೆ ಕವಿತೆಗಳಿಗೆ ಜಾಗ ಇರಿಸದೇ ಇದ್ದರೆ ಅಪಾಯ. ಕವಿತೆ ಬರೆಯದಿದ್ದರೂ ಓದುವ, ಕೇಳುವ ಮನಸ್ಸಾದರೂ ಇರಬೇಕು' ಎಂದು ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಗೋಷ್ಠಿಗೆ ಮುಕ್ತಾಯ ಹಾಡಿದರು.

ಮಾದಕ ವಸ್ತು: ಜಾಗೃತಿ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾದಕ ದ್ರವ್ಯ ನಿಯಂತ್ರಣ ಬ್ಯೂರೊದ 41ನೇ ಸ್ಥಾಪನಾ ದಿನವನ್ನು 'ನಶಾ ಮುಕ್ತ ಭಾರತ' ಅಭಿಯಾನದ ಅಡಿಯಲ್ಲಿ ಮಾದಕ ದ್ರವ್ಯ ದುರುಪಯೋಗ ಜಾಗೃತಿ ಕಾರ್ಯಕ್ರಮವನ್ನು ಆರ್‌ಆರ್‌ಎಂಸಿಎಚ್ ಆಚರಿಸಲಾಯಿತು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ, ಮಾದಕ ದ್ರವ್ಯ ನಿಯಂತ್ರಣ ಬ್ಯೂರೊ ಮತ್ತು ದಿಶಾಬೋಧ್ ಫೌಂಡೇಶನ್ ಸಹಯೋಗದೊಂದಿಗೆ ರಾಜರಾಜೇಶ್ವರಿ ಸಮೂಹ ಸಂಸ್ಥೆಗಳು ಈ ಕಾರ್ಯಕ್ರಮವನ್ನು ಆಯೋಜಿಸಿದ್ದವು.

'ಮಾದಕ ವಸ್ತುಗಳ ಬಳಕೆ ಬೇಡ' ಎಂಬ ಸಂದೇಶವನ್ನು ಪ್ರಚಾರ ಮಾಡುವುದರ ಜೊತೆಗೆ ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲು ವಾಕಥಾನ್ ನಡೆಯಿತು. ಗಣ್ಯರು, ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಸಿಬ್ಬಂದಿ ಭಾಗವಹಿಸಿದ್ದರು.

ಮಾದಕ ದ್ರವ್ಯ ದುರುಪಯೋಗ ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಗಣ್ಯರು

'ನಶಾ ಮುಕ್ತ ಭಾರತ - ಯುವ ಶುದ್ಧಿ ಅಭಿಯಾನ'ದಲ್ಲಿ ಆರ್‌ಆರ್‌ಎಂಸಿಎಚ್ ಒಪ್ಪಂದವನ್ನು ವಿವರಿಸಿದರು. 13 ಜಿಲ್ಲೆಗಳಲ್ಲಿ 16 ಕಾರ್ಯಕ್ರಮಗಳ ಮೂಲಕ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಯಿತು. 77,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತು 1,500 ಶಿಕ್ಷಕರನ್ನು ತಲುಪಲಾಯಿತು. ಮಾದಕ ದ್ರವ್ಯ ದುರುಪಯೋಗದ ವಿರುದ್ಧ ಪ್ರತಿಜ್ಞೆ ಮಾಡುವಂತೆ, ಆರೋಗ್ಯಕರ ಕ್ಯಾಂಪಸ್ ಅನ್ನು ಉತ್ತೇಜಿಸಲಾಯಿತು. ಸುಮಾರು 12,000 ವಿದ್ಯಾರ್ಥಿಗಳು ಅಂಗಾಂಗ ದಾನಕ್ಕೆ ಪ್ರತಿಜ್ಞೆ ಮಾಡಿದರು ಎಂದು ಮಾಹಿತಿ ನೀಡಲಾಯಿತು.

ದಿಶಾಬೋಧ್ ಫೌಂಡೇಶನ್ ಎನ್‌ಸಿಬಿಯ ಸಬ್-ಇನ್‌ಸ್ಪೆಕ್ಟರ್ ವಿಕಾಸ್ ಸಿಂಗ್, ದಿಶಾಬೋಧ್ ಫೌಂಡೇಶನ್‌ನ ಕಾಂತಿ ಶೆಟ್ಟಿ, ಸಂಸ್ಥಾಪಕ ಅಧ್ಯಕ್ಷ ಡಾ. ಎ.ಸಿ. ಷಣ್ಮುಗಂ, ಅಧ್ಯಕ್ಷ ಎ.ಸಿ.ಎಸ್. ಅರುಣ್ ಕುಮಾರ್, ಅಧ್ಯಕ್ಷೆ ಲಲಿತಾ ಲಕ್ಷ್ಮಿ, ಕಾರ್ಯನಿರ್ವಾಹಕ ನಿರ್ದೇಶಕ ಡಾ. ಎಸ್. ವಿಜಯಾನಂದ್, ಸಿಇಒ ಸೀತಾರಾಮ್, ಡೀನ್ ಡಾ. ಸತ್ಯಮೂರ್ತಿ, ಪ್ರಾಂಶುಪಾಲ ಡಾ. ಬಸವರಾಜ ಭಂಡಾರೆ ಉಪಸ್ಥಿತರಿದ್ದರು.

ಮಳೆನೀರು; ಇಳಿಯದ ವಿಮಾನ

ದೇವನಹಳ್ಳಿ: ನಗರದ ಸುತ್ತಮುತ್ತ ಬುಧವಾರ ಹಾಗೂ ಗುರುವಾರ ರಾತ್ರಿ ಸುರಿದ ಭಾರಿ ಮಳೆಯಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (ಕೆಐಎ) ಆವರಣದಲ್ಲಿ ನೀರು ತುಂಬಿಕೊಂಡಿದೆ.

ಆಲಿಕಲ್ಲು ಮಳೆ ಸುರಿದಿದ್ದರಿಂದ ವಿಮಾನ ಇಳಿಯಲು ಸಮಸ್ಯೆ ಎದುರಾಗಿದ್ದು, ಸಂಚಾರದಲ್ಲಿ ವ್ಯತ್ಯಯ ಉಂಟಾಗಿದೆ. ಬೇರೆಡೆಯಿಂದ ಬೆಂಗಳೂರಿಗೆ ಬಂದ 20ಕ್ಕೂ ಹೆಚ್ಚು ವಿಮಾನಗಳ ಮಾರ್ಗ ಬದಲಾವಣೆ ಮಾಡಲಾಗಿದೆ.

ವಿಮಾನಗಳನ್ನು ಚೆನ್ನೈ, ಹೈದರಾಬಾದ್, ಮಂಗಳೂರು ಸೇರಿದಂತೆ ಬೆಂಗಳೂರಿಗೆ ಹತ್ತಿರದ ವಿಮಾನ ನಿಲ್ದಾಣಗಳಿಗೆ ಕಳಿಸಲಾಗಿದೆ. ದೆಹಲಿಯಿಂದ ಬರಬೇಕಿದ್ದ ಕೆಲವು ವಿಮಾನಗಳನ್ನು ಕೂಡ ಚೆನ್ನೈಗೆ ಕಳುಹಿಸಲಾಗಿದೆ. ಮಳೆಯಿಂದಾಗಿ 30ಕ್ಕೂ ಹೆಚ್ಚು ವಿಮಾನಗಳ ಹಾರಾಟ ಮತ್ತು ಲ್ಯಾಂಡಿಂಗ್ ವಿಳಂಬಗೊಂಡಿದ್ದು, ಪ್ರಯಾಣಿಕರು ತೊಂದರೆ ಅನುಭವಿಸಿದರು. ವಿಮಾನ ನಿಲ್ದಾಣದ ಬಸ್ ನಿಲ್ದಾಣ ಹಾಗೂ ರಸ್ತೆಗಳಲ್ಲಿ ನೀರು ನುಗ್ಗಿ ಸಂಚಾರಕ್ಕೆ ತೊಂದರೆ ಉಂಟಾಯಿತು. ಇದರಿಂದಾಗಿ ಪ್ರಯಾಣಿಕರು ವಿಮಾನ ನಿಲ್ದಾಣದಲ್ಲಿಯೇ ಹಲವು ತಾಸು ಕಳೆಯಬೇಕಾಯಿತು. ಏರ್ ಇಂಡಿಯಾ ವಿಮಾನ ಸಂಚಾರ ರದ್ದಾದ ಹಿನ್ನೆಲೆಯಲ್ಲಿ ಸಂಗೀತಗಾರ ರಿಕ್ಕಿ ಕೇಜ್ ಹಾಗೂ ಅವರ ತಂಡ ವಿಮಾನ ನಿಲ್ದಾಣದಲ್ಲಿ ಸಿಲುಕಿಕೊಂಡಿತ್ತು.

ಸೋರಿದ ವಿಮಾನ ನಿಲ್ದಾಣ: ವಿಮಾನ ನಿಲ್ದಾಣದ ಟರ್ಮಿನಲ್–1ರ ಹೊರ ಭಾಗದ ಚಾವಣಿ ಪೈಪ್‌ಗಳಿಂದ ಮಳೆನೀರು ಸೋರುತ್ತಿರುವ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಟರ್ಮಿನಲ್ ಒಳಭಾಗ ಹಾಗೂ ಹೊರಭಾಗದಲ್ಲಿ ನೀರು ನಿಂತಿದೆ. 'ಕರ್ನಾಟಕ ಪೋರ್ಟ್‌ಫೋಲಿಯೊ' ಎಂಬ ಎಕ್ಸ್ ಖಾತೆಯಲ್ಲಿ ಕೆಲ ವಿಡಿಯೊ ಹಂಚಿಕೊಳ್ಳಲಾಗಿದೆ.

ಕಾಮಗಾರಿ ಮಾಹಿತಿ ಫಲಕ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಭಿವೃದ್ಧಿ ಸೇರಿದಂತೆ ಯಾವ ಕಾಮಗಾರಿಗಳನ್ನು ನಡೆಸುತ್ತಿದ್ದರೂ ಆ ಪ್ರದೇಶದಲ್ಲಿ ಅದರ ಸಂಪೂರ್ಣ ಮಾಹಿತಿಯುಳ್ಳ ಫಲಕವನ್ನು ಕಡ್ಡಾಯವಾಗಿ ಅಳವಡಿಸಬೇಕು ಎಂದು ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್.ರಮೇಶ್ ಸೂಚಿಸಿದರು.

ಹೊರಮಾವು ಅಗರ, ಬಂಜಾರ ಬಡಾವಣೆ, ಕಲ್ಕೆರೆ ಬಡಾವಣೆ, ಬಾಬುಸಾಪಾಳ್ಯ ಹಾಗೂ ಚಳ್ಳಕೆರೆ ಸುತ್ತಮುತ್ತಲಿನ ಪ್ರದೇಶದ ರಸ್ತೆ ಮತ್ತು ಮೂಲಸೌಕರ್ಯ ಅಭಿವೃದ್ಧಿ, ರೈಲ್ವೆ ಅಂಡರ್ ಪಾಸ್ ಕಾಮಗಾರಿ, ಕೆರೆಗಳ ಅಭಿವೃದ್ಧಿ, ಕಸ ವಿಲೇವಾರಿ ಹಾಗೂ ಪಾದಚಾರಿ ಮಾರ್ಗ ಒತ್ತುವರಿ ವಿಷಯಗಳಿಗೆ ಸಂಬಂಧಿಸಿದಂತೆ ಡಿ.ಎಸ್.ರಮೇಶ್ ಅವರು ಶುಕ್ರವಾರ ಸ್ಥಳ ಪರಿಶೀಲನೆ ನಡೆಸಿದರು.

ಸ್ಥಳೀಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪ್ರತಿನಿಧಿಗಳು ಹಾಗೂ ನಿವಾಸಿಗಳೊಂದಿಗೆ ಚರ್ಚೆ ನಡೆಸಿದ ಆಯುಕ್ತರು, ಸಮಸ್ಯೆಗಳ ತ್ವರಿತ ಪರಿಹಾರಕ್ಕಾಗಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶಿಸಿದರು.

ಬಾಬುಸಾಪಾಳ್ಯ ರೈಲ್ವೆ ಅಂಡರ್‌ಪಾಸ್ ಕಾಮಗಾರಿಯು ಖಾಸಗಿ ಹಾಗೂ ರೈಲ್ವೆ ಇಲಾಖೆಯ ನಡುವಿನ ಭೂ ವಿವಾದ ಕಾರಣದಿಂದ ವಿಳಂಬವಾಗಿದೆ. ತಡೆಯಾಜ್ಞೆ ಇಲ್ಲದಿರುವುದನ್ನು ಖಚಿತಪಡಿಸಿಕೊಂಡು ಕೂಡಲೇ ಕಾಮಗಾರಿಯನ್ನು ಆರಂಭಿಸ ಬೇಕು ಹೊರಮಾವು ಅಗರ ಕೆರೆಯಲ್ಲಿ ನಿರ್ವಹಣೆ ಕಾಮಗಾರಿಗಳನ್ನು ಶೀಘ್ರದಲ್ಲಿ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಅಗರ ಕೆರೆ ರಸ್ತೆಯು ತಗ್ಗು ಪ್ರದೇಶದಲ್ಲಿದ್ದು, ಪ್ರತಿ ವರ್ಷವೂ ಮಳೆಯಿಂದಾಗಿ ನೀರು ನಿಂತು ಸಮಸ್ಯೆಯಾಗುತ್ತಿದ್ದು, ಈ ಸಮಸ್ಯೆಯನ್ನು ನಿವಾರಿಸಲು ರಸ್ತೆ ಮಟ್ಟ ಸುಧಾರಣೆ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಬಿಟುಮನ್ ಕೊರತೆಯಿಂದ ಡಾಂಬರೀಕರಣ ಕಾಮಗಾರಿ ವಿಳಂಬವಾಗಿದ್ದು, ಹಾಟ್ ಮಿಕ್ಸ್ ಪೂರೈಕೆಯಾದ ಕೂಡಲೇ ಡಾಂಬರೀಕರಣ ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಚಿಸಲಾಗಿದೆ ಎಂದು ಆಯುಕ್ತರು ನಾಗರಿಕರಿಗೆ ತಿಳಿಸಿದರು.

ನಗರದಲ್ಲಿ ಇಂದು

ಸಮಸ್ಯೆ ಮಾರ್ಗದರ್ಶನ ಹಾಗೂ ದರ್ಶನ ಕಾರ್ಯಕ್ರಮ: ರಾಮಾನಂದಾಚಾರ್ಯ ನರೇಂದ್ರಾಚಾರ್ಯ, ಕಾನಿಫನಾಥ ಮಹಾರಾಜ, ಆಯೋಜನೆ: ರಾಮಾನಂದ ಸಂಪ್ರದಾಯ ಭಕ್ತ ಸೇವಾ ಸಮಿತಿ, ಸ್ಥಳ: ಚಂದ್ರಶೇಖರ ಭಾರತೀ ಕಲ್ಯಾಣ ಮಂಟಪ, ಪಂಪ ಮಹಾಕವಿ ರಸ್ತೆ, ಶಂಕರಪುರ, ಬೆಳಿಗ್ಗೆ 9

ಕಾಕೋಳು ವೇಣುಗೋಪಾಲಸ್ವಾಮಿಯ ಬ್ರಹ್ಮರಥೋತ್ಸವ: ಸಭಾಂಗಣ ಉದ್ಘಾಟನೆ: ಅಕ್ಷೋಭ್ಯರಾಮಪ್ರಿಯತೀರ್ಥ ಸ್ವಾಮೀಜಿ, ಭಕ್ತಿ ಲಹರಿ: ಶ್ರೀಪಾದರಾಜ ಭಜನಾ ಮಂಡಳಿ, ಆಯೋಜನೆ ಹಾಗೂ ಸ್ಥಳ: ಕಾಕೋಳು ವೇಣುಗೋಪಾಲಸ್ವಾಮಿ ದೇವಸ್ಥಾನ ಟ್ರಸ್ಟ್, ಕಾಕೋಳು ಕ್ಷೇತ್ರ, ರಾಜಾನುಕುಂಟೆ ಸಮೀಪ, ಯಲಹಂಕ, ಬೆಳಿಗ್ಗೆ 9.30

'ಗದಾಯುದ್ಧ' ಯಕ್ಷಗಾನ ತಾಳಮದ್ದಳೆ: ಹಿಮ್ಮೇಳ: ವಿಷ್ಣುಪ್ರಸಾದ ಕಲ್ಲೂರಾಯ, ಅಮೋಘ ಕುಂಟಿನಿ, ಪವನ್‌ರಾಜ್ ಕಲ್ಲೂರಾಯ, ಗೋಪಾಲಕೃಷ್ಣ ಕುಂಜತ್ತಾಯ, ಮುಮ್ಮೇಳ: ಸರ್ಪಂಗಳ ಈಶ್ವರ ಭಟ್, ಕೆ.ಈ. ರಾಧಾಕೃಷ್ಣ, ಸುಜಾತಾ ರಮೇಶ್, ವೀಣಾ ರಾಮಚಂದ್ರನ್, ಸುಧನ್ವ ದೇರಾಜೆ, ಮಟ್ಟಿ ರಾಮಚಂದ್ರರಾವ್, ಸುಜಾತಾ ರಮೇಶ್, ಆಯೋಜನೆ: ಕೇಂದ್ರೀಯ ಅಬಕಾರಿ ಮತ್ತು ಸೀಮಾ ಶುಲ್ಕ ಇಲಾಖೆಯ ನಿವೃತ್ತರ ಸಂಘ, ಸ್ಥಳ: ರವೀಂದ್ರಕಲಾಕ್ಷೇತ್ರ, ಜೆ.ಸಿ.ರಸ್ತೆ, ಬೆಳಿಗ್ಗೆ 9.30

'ಸಂಪೂರ್ಣ ಶ್ರೀ ದೇವಿ ಮಹಾತ್ಮೆ' ಯಕ್ಷಗಾನ: ಹಿಮ್ಮೇಳ: ಸುಬ್ರಾಯ ಹೆಬ್ಬಾರ್ ಬಿ., ಅಕ್ಷಯ್ ಪ್ರಭು, ಮನೋಜ್ ಆಚಾರ್, ಗಜಾನನ ಹೆಗಡೆ ಕಲ್ಲಬ್ಬೆ, ಮುಮ್ಮೇಳ: ಪ್ರಶಾಂತ ಹೆಗಡೆ ಮೂರೂರು, ಲಕ್ಷ್ಮೀಪ್ರಸಾದ್ ಆಚಾರ್, ಸುದರ್ಶನ್ ಶೆಟ್ಟಿಗಾರ್, ಆತ್ರೇಯ ಗಾಂವ್ಕರ್, ಆತ್ರೇಯ ಪೂಜಾರಿ, ಭರತ್ ರಾಜ್ ಪರ್ಕಳ, ಕೌಸ್ತುಭ ಉಡುಪ, ಸುಖದ ಭಟ್, ಭಾಸ್ವತಿ ಗೋಪಾಲ ಕಜೆ, ಮನ್ವಿತ್ ಗಾಂವ್ಕರ್, ಶಿಥಿಲ್ ಶೆಟ್ಟಿ, ಸ್ವಸ್ತಿಕ್ ನಾಯಕ್, ಶ್ರೀವತ್ಸ, ನಿತ್ಯ ಗೌಡ, ಹಿಮಾನಿ, ಭುವನ್ ಬಿ., ಜನ್ಮೈ ಅಭಿಷೇಕ್ , ಆಯೋಜನೆ: ಯಕ್ಷೇಶ್ವರಿ ಯಕ್ಷಗಾನ, ಸ್ಥಳ: ಕ್ಲಾಸಿಕ್ ಆರ್ಚರ್ಡ್ ಲೇಔಟ್, ಜೆ.ಪಿ.ನಗರ, ಸಂಜೆ 5

'ಬಾಯ್ಬಡ್ಕಿ' ನಾಟಕದ ದೃಶ್ಯ

ಹಾಸ್ಯ ನಾಟಕಗಳ ಹಬ್ಬ: ಸಂಜೆ 4ಕ್ಕೆ ವನಿತಾ ರಂಗಾಯಣ ನಿರ್ದೇಶನದಲ್ಲಿ 'ಬಾಯ್ ತುಂಬ ನಕ್ಬಿಡಿ' ನಾಟಕ ಪ್ರದರ್ಶನ, ಸಂಜೆ 7ಕ್ಕೆ ಭೀಷ್ಮ ರಾಮಯ್ಯ ನಿರ್ದೇಶನದಲ್ಲಿ 'ಬಾಯ್ಬಡ್ಕಿ' ನಾಟಕ ಪ್ರದರ್ಶನ, ತಂಡ: ಅಂತರಂಗ ಬಹಿರಂಗ, ಸ್ಥಳ: ವಾಡಿಯಾ ಸಭಾಂಗಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ

ತಿಂಗಳ ನಾಟಕ ಸಂಭ್ರಮ: ದೃಶ್ಯಕಾವ್ಯ ತಂಡದಿಂದ 'ಮಾಯಾ ಬೇಟೆ' ನಾಟಕ ಪ್ರದರ್ಶನ, ರಚನೆ: ಕೆ.ವೈ. ನಾರಾಯಣಸ್ವಾಮಿ, ನಿರ್ದೇಶನ: ನಂಜುಂಡೇಗೌಡ ಸಿ., ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30

ಮಂಡಲ ವಿಶೇಷ ಕಲಾ ಪ್ರದರ್ಶನ ಉದ್ಘಾಟನೆ: ಅತಿಥಿಗಳು: ಕೆ.ಜಿ. ಲಿಂಗದೇವರು, ಸುಶ್ಮಿತಾ ಮಾನ್, ಜಲಜಾಕ್ಷಿ ಸುಧೇಂದ್ರ, ಆಯೋಜನೆ: ಮಂಡಲ ಆರ್ಟಿಸ್ಟ್ ಕಲೆಕ್ಟಿವ್, ಸ್ಥಳ: ವೆಂಕಟಪ್ಪ ಆರ್ಟ್ ಗ್ಯಾಲರಿ, ಕಸ್ತೂರ್‌ಬಾ ರಸ್ತೆ, ಸಂಜೆ 4

ಮಹಿಳಾ ದಿನಾಚರಣೆ ಅಂಗವಾಗಿ 'ಸ್ಟಾರ್ ವುಮೆನ್' ಪ್ರಶಸ್ತಿ ಪ್ರದಾನ ಸಮಾರಂಭ: ಅತಿಥಿಗಳು: ಅನಸೂಯ ಮಂಜುನಾಥ್, ರೂಪಾ ಆರ್., ಶಿವಾನಿ, ಅನಿತಾ, ಆಶಾ, ಅಪೂರ್ವಾ ರೆಡ್ಡಿ, ಶಾಂತಾ ರಾಮಸ್ವಾಮಿ, ಆಯೋಜನೆ: ಡಾ.ಎಪಿಜೆ ಅಬ್ದುಲ್ ಕಲಾಂ ಸೇವಾ ಸಮಿತಿ, ಸ್ಥಳ: ಯುವಪಥ ಸಭಾಂಗಣ, ಜಯನಗರ, ಬೆಳಿಗ್ಗೆ 10

'ಮಾತೃ ಸಂಗಮ' ಮಹಿಳೆಯರ ಸಮಾವೇಶ: ಭಜನೆ, ಚಿಂತನೆ, ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು, ಅತಿಥಿಗಳು: ಭಾರತಿ ರೆಡ್ಡಿ, ಪರಿಮಳ ಮೂರ್ತಿ, ಜಯಪ್ರಕಾಶ್, ಆಯೋಜನೆ: ಕೇಶವ ಸೇವಾ ಸಮಿತಿ, ಸ್ಥಳ: ಸಾಯಿ ಕಲ್ಯಾಣ ಮಂಟಪ, ದಕ್ಷಿಣ ಅಯೋಧ್ಯೆ ಆವರಣ, ಕಾಚರಕನಹಳ್ಳಿ, ಬೆಳಿಗ್ಗೆ 10

ಶಾರದಾ ಚೈತ್ರ ಅವರ 'ನಿಗಳ ಪುಸ್ತಕ ಬಿಡುಗಡೆ: ಶತಾವಧಾನಿ ಆರ್. ಗಣೇಶ್, ಪುಸ್ತಕ ಪರಿಚಯ: ಮೀರಾಬಾಯಿ ಫಡ್ಕೆ, ಆಯೋಜನೆ: ಸ್ನೇಹ ಬುಕ್ ಹೌಸ್, ಸ್ಥಳ: ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಯುಐಎ ಅಂತರರಾಷ್ಟ್ರೀಯ ಕಾನೂನು ವಿಚಾರಸಂಕಿರಣ: ಉದ್ಘಾಟನೆ: ಎ.ಕೆ. ಗಂಗೂಲಿ, ಭಾಷಣ: ಎಂ.ಎನ್. ವೆಂಕಟಾಚಲಯ್ಯ, ಕೆ.ಕೆ. ವೇಣುಗೋಪಾಲ್, ಕೃಷ್ಣನ್ ವೇಣುಗೋಪಾಲ್, ಕೆ. ಶಶಿಕಿರಣ್ ಶೆಟ್ಟಿ, ಪ್ರಶಾಂತ್ ಕುಮಾರ್, ಸಂತೋಷ್ ಹೆಗ್ಡೆ, ವಿಭು ಬಖ್ರು, ಸೂರ್ಯಕಾಂತ್, ಆಯೋಜನೆ: ಅಂತರರಾಷ್ಟ್ರೀಯ ವಕೀಲರ ಒಕ್ಕೂಟ (ಯುಐಎ), ಸ್ಥಳ: ಕರ್ನಾಟಕ ನ್ಯಾಯಾಂಗ ಅಕಾಡೆಮಿ, ಕ್ರೆಸೆಂಟ್ ರಸ್ತೆ, ಬೆಳಿಗ್ಗೆ 10.30


ಎಂ.ಎನ್. ವೆಂಕಟಾಚಲಯ್ಯ

ವಿಶ್ವ ಕವಿತಾ ದಿನದ ಅಂಗವಾಗಿ ಬಹುಭಾಷಾ ಕವಿಗೋಷ್ಠಿ: ಕವಿಗಳು: ಎಂ.ಆರ್. ಕಮಲಾ, ಬಿಂದು ಸಜಿವ್, ತೇನ್‌ಮೊಳಿಯನ್, ಅವಿನೇನಿ ಭಾಸ್ಕರ್, ಆಯೋಜನೆ ಹಾಗೂ ಸ್ಥಳ: ಕೇಂದ್ರ ಸಾಹಿತ್ಯ ಅಕಾಡೆಮಿ, ದಕ್ಷಿಣ ಪ್ರಾದೇಶಿಕ ಕಚೇರಿ, ಕಲಾಗ್ರಾಮದ ಎದುರು, ಮಲ್ಲತ್ತಹಳ್ಳಿ, ಸಂಜೆ 4.30

ಭರತನಾಟ್ಯ ರಂಗಪ್ರವೇಶ: ಸಹಸ್ರ ರಘುರಾಮನ್, ಅತಿಥಿಗಳು: ಅನನ್ಯಾ ಎಂ., ನಾರಾಯಣಸ್ವಾಮಿ, ರಾಧಾ ಬದ್ರಿ, ಆಯೋಜನೆ: ವಿದ್ಯಾ ಕಲಾಶ್ರಮ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ.ರಸ್ತೆ, ಸಂಜೆ 5

120ನೇ ವರ್ಷದ ಶ್ರೀರಾಮೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ, ವೀಣೆ: ಜ್ಯೋತ್ಸ್ನಾ ಹೆಬ್ಬಾರ್, ಮೃದಂಗ: ತೇಜಸ್ ಶ್ರೀವತ್ಸ ಮನ್ಮೋಹನ್, ಘಟ: ಆರ್. ವಿಶ್ವನಾಥ್, ದ್ವಂದ್ವ ಗಾಯನ: ಎಂ.ಬಿ. ಹರಿಹರನ್, ಎಸ್. ಅಶೋಕ್, ಪಿಟೀಲು: ಹೊಸಹಳ್ಳಿ ವಿ. ರಘುರಾಮ್, ಮೃದಂಗ: ಎಚ್.ಎಸ್. ಸುಧೀಂದ್ರ, ಆಯೋಜನೆ: ಶ್ರೀರಾಮ ಭಕ್ತ ಸಭಾ, ಸ್ಥಳ: ಶ್ರೀಕಂಠೇಶ್ವರ ಭವನ, ಐದನೇ ಅಡ್ಡ ರಸ್ತೆ, ಮಲ್ಲೇಶ್ವರ, ಸಂಜೆ 5.15

'ಪ್ರಾತಿನಿಧಿಕ ಜೈನ ಶಾಸನಗಳು' ವಿಷಯದ ಬಗ್ಗೆ ಉಪನ್ಯಾಸ: ಸ್ಮಿತಾ ರೆಡ್ಡಿ ಡಿ., ಅಧ್ಯಕ್ಷತೆ: ಎಂ.ಎಸ್. ರವಿಕೀರ್ತಿ, ಉಪಸ್ಥಿತಿ: ಮಮತಾ ಕಾಂತರಾಜ್, ನಾಗಶ್ರೀ ಮುಪ್ಪಾನೆ, ಆಯೋಜನೆ: ಜೈನ್ ಮಿಲನ್, ಬೆಂಗಳೂರು ಸೆಂಟ್ರಲ್, ಸ್ಥಳ: ಚಕ್ರೇಶ್ವರಿ ಮಹಿಳಾ ಸಮಾಜ, ಆನೆಬಂಡೆ ರಸ್ತೆ, ಜಯನಗರ 3ನೇ ಬಡಾವಣೆ, ಸಂಜೆ 5.30

ಕನ್ನಡ–ಹಿಂದಿ ಚಿತ್ರಗೀತೆಗಳ ಗಾಯನ: ಎಚ್.ಎಸ್. ಶ್ರೀನಿವಾಸಮೂರ್ತಿ, ಜ್ಯೋತಿ ರವಿಪ್ರಕಾಶ್, ಎಚ್.ಕೆ. ರಘು, ಸಿರಿ ಚಂದ್ರಶೇಖರ್, ಆಯೋಜನೆ: ವಕೀಲ್ ಗಾರ್ಡನ್ ಸಿಟಿ ಸಿವಾಸಿಗಳ ಮತ್ತು ಆದಿತ್ಯ ಹಾರ್ಮೋನಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಶಾಲಿಮಾರ್‌ಬಾಗ್, ವಕೀಲ್ ಗಾರ್ಡನ್ ಸಿಟಿ, ಸಂಜೆ 5.30

ಯುಗಾದಿ ಉತ್ಸವ ಹಾಗೂ 'ಶ್ರೀಕೃಷ್ಣ ದೇವರಾಯ ಪ್ರಶಸ್ತಿ' ಪ್ರದಾನ ಸಮಾರಂಭ: ಉದ್ಘಾಟನೆ: ರಮೇಶ್ ಕುಮಾರ್, ಅತಿಥಿಗಳು: ರಾಮಲಿಂಗಾರೆಡ್ಡಿ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಅಧ್ಯಕ್ಷತೆ: ಎ. ರಾಧಾಕೃಷ್ಣ ರಾಜು, ಪ್ರಶಸ್ತಿ ಪುರಸ್ಕೃತರು: ಚಂದ್ರಬೋಸ್, ಗುರುಕಿರಣ್, ಗಾಯನ: ಲಾಸ್ಯ ಮಯೂರ, ಧನಲಕ್ಷ್ಮಿ, ಆಯೋಜನೆ ಹಾಗೂ ಸ್ಥಳ: ತೆಲುಗು ವಿಜ್ಞಾನ ಸಮಿತಿ, ವೈಯಾಲಿಕಾವಲ್, ಸಂಜೆ 4


ಗುರುಕಿರಣ್

'ರಾಮಯ್ಯ ಇಂಟರ್‌ನ್ಯಾಷನಲ್ ಮೂಟ್ ಆ್ಯಂಡ್ ಎಡಿಆರ್' ಸಮ್ಮೇಳನ: ಅತಿಥಿಗಳು: ಸೂರ್ಯಕಾಂತ್, ಬಿ.ವಿ. ನಾಗರತ್ನ, ಎನ್. ಕೋಟಿಶ್ವರ್ ಸಿಂಗ್, ಅರ್ಜುನ್ ರಾಮ್ ಮೇಘವಾಲ್, ಚಂದ್ರ ದುಬೆ, ವಿಭು ಬಖ್ರು, ಮನನ್ ಕುಮಾರ್ ಮಿಶ್ರಾ, ಮೋಹನ್ ಪೀರಿಸ್, ಆಯೋಜನೆ: ರಾಮಯ್ಯ ಕಾಲೇಜ್ ಆಫ್ ಲಾ, ಸ್ಥಳ: ಹಿಲ್ಟನ್, ಮಾನ್ಯತಾ ಬಿಸಿನೆಸ್ ಪಾರ್ಕ್, ಸಂಜೆ 6

ಶ್ರೀರಾಮಾಯಣ ಉಪನ್ಯಾಸ: ವಿದ್ಯಾವಿಜಯತೀರ್ಥ ಸ್ವಾಮೀಜಿ, ಆಯೋಜನೆ ಹಾಗೂ ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 11ನೇ ಅಡ್ಡರಸ್ತೆ, ತ್ಯಾಗರಾಜನಗರ, ಸಂಜೆ 6.30

ಶ್ರೀರಾಮನವಮಿ ಉತ್ಸವ: ಭರತನಾಟ್ಯ: ನೃತ್ಯ ದಿಶಾ ಟ್ರಸ್ಟ್ ವಿದ್ಯಾರ್ಥಿಗಳು, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6.30

'ಶ್ರೀಮದ್ ರಾಮಾಯಣ' ಪ್ರವಚನ ಸಪ್ತಾಹ: ದ್ವೈಪಾಯನಾಚಾರ್ಯ, ಆಯೋಜನೆ ಹಾಗೂ ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಶನಿವಾರ • ಮಾರ್ಚ್ 21, 202
ಪ್ರಜಾವಾಣಿ

ಪಾದಚಾರಿ ಮಾರ್ಗಕ್ಕೆ ಹೊಸ ನೀತಿ

‘ಮುಖ್ಯರಸ್ತೆ, ಉಪ ಮುಖ್ಯರಸ್ತೆಗಳಲ್ಲಿ ಬೀದಿಬದಿ ವ್ಯಾಪಾರಕ್ಕೆ ಅವಕಾಶವಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪಾದಚಾರಿ ಮಾರ್ಗಗಳಲ್ಲಿ ಸಾರ್ವಜನಿಕರ ಸುರಕ್ಷಿತ ಓಡಾಟಕ್ಕೆ ಅನುಕೂಲ ಮಾಡಿಕೊಡಲು ಹೊಸ ನೀತಿ ರೂಪಿಸಲಾಗುವುದು. ಮುಖ್ಯರಸ್ತೆ ಮತ್ತು ಉಪ ಮುಖ್ಯರಸ್ತೆಗಳಲ್ಲಿ ಬೀದಿಬದಿ ವ್ಯಾಪಾರಕ್ಕೆ ಅವಕಾಶ ನೀಡುವುದಿಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ವಿಧಾನಸೌಧದಲ್ಲಿ ಜಿಬಿಎ ವ್ಯಾಪ್ತಿಯ ಐದು ಪಾಲಿಕೆಗಳ ಬಜೆಟ್ ಸಿದ್ಧತೆ ಹಾಗೂ ಜಿಬಿಎ ಕಾರ್ಯಕಾರಿ ಸಭೆ ನಡೆಸಿದ ಬಳಿಕ ಅವರು ಸುದ್ದಿಗಾರರಿಗೆ ಸಭೆಯ ವಿವರ ನೀಡಿದರು.

ನಾಗರಿಕರು ಪಾದಚಾರಿ ಮಾರ್ಗದಲ್ಲಿ ಓಡಾಡಲು ಪರದಾಡುತ್ತಿದ್ದು, ಬೀದಿ ಬದಿ ವ್ಯಾಪಾರಿಗಳು ಪಾದಚಾರಿ ಮಾರ್ಗ ಒತ್ತುವರಿ ಮಾಡಿದ್ದಾರೆ. ಅವರಿಗೆ ಪ್ರತ್ಯೇಕ ಜಾಗ ಕಲ್ಪಿಸಲು ತೀರ್ಮಾನಿಸಲಾಗಿದೆ. ಬೀದಿಬದಿ ವ್ಯಾಪಾರಿಗಳ ವ್ಯಾಪಾರಕ್ಕೆ ನಿರ್ದಿಷ್ಟ ರಸ್ತೆಗಳನ್ನು ನಿಗದಿ ಮಾಡಬೇಕು. ಇದಕ್ಕೆ ಎಲ್ಲಾ ಶಾಸಕರು ಒಮ್ಮತದ ಅಭಿಪ್ರಾಯ ತಿಳಿಸಿದ್ದಾರೆ ಎಂದರು.

‘ಹಗಲು ವೇಳೆ ವ್ಯಾಪಾರ ಮಾಡಿ, ರಾತ್ರಿ ವೇಳೆ ಗಾಡಿಯನ್ನು ಬೀದಿ– ಬದಿಯಲ್ಲಿ ಕಟ್ಟಿ ಹೋಗಿದ್ದರೆ, ಅಧಿಕಾರಿಗಳು ಎಲ್ಲವನ್ನು ಪ್ಯಾಕ್ ಮಾಡಿಕೊಂಡು ಹೋಗಲಿದ್ದಾರೆ. ಈಗಲೇ ಈ ವಿಚಾರದಲ್ಲಿ ವ್ಯಾಪಾರಿಗಳು ಜಾಗೃತರಾಗಿರಬೇಕು’ ಎಂದು ಹೇಳಿದರು.

‘60 ಸಾವಿರ ಬೀದಿಬದಿ ವ್ಯಾಪಾರಿಗಳು ನೋಂದಣಿ ಮಾಡಿಕೊಂಡಿದ್ದು, 30 ಸಾವಿರ ಮಂದಿ ನಮಗೆ ವಾಹನ ಬೇಕು ಎಂದು ಕೇಳಿದ್ದಾರೆ. ಅದಕ್ಕೆ ಟೆಂಡರ್ ಕರೆಯಲಾಗಿದೆ. ಬೀದಿ ಬದಿ ವ್ಯಾಪಾರಿಗಳ ಗುರುತಿನ ಚೀಟಿ ಇದ್ದವರಿಗೆ ಮಾತ್ರ ವ್ಯಾಪಾರ ಮಾಡಲು ಅವಕಾಶ ನೀಡಲಾಗುವುದು. ಯಾರು ಗುರುತಿನ ಚೀಟಿ ಹೊಂದಿಲ್ಲವೋ ಅಂತಹವರಿಗೆ ಬೀದಿ ಬದಿಯಲ್ಲಿ ವ್ಯಾಪಾರಕ್ಕೆ ಅವಕಾಶವಿಲ್ಲ’ ಎಂದರು.

‘ಇವತ್ತು ಜಿಬಿಎ ವ್ಯಾಪ್ತಿಯ ಎಲ್ಲಾ ಶಾಸಕರನ್ನು ಕರೆದು ಪಾಲಿಕೆಗಳ ಬಜೆಟ್ ಕುರಿತು ಸಭೆ ನಡೆಸಲಾಯಿತು. ಇದರ ಜತೆಗೆ ಕೆಲವು ಪ್ರಮುಖ ನಿರ್ಣಯಗಳ ಬಗ್ಗೆ ಚರ್ಚೆ ನಡೆಸಲಾಯಿತು. ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಸಭೆಯಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯ ತಿಳಿಸಿದ್ದಾರೆ. ಜಿಬಿಎ ಕಾರ್ಯಕಾರಿ ಸಭೆ ನಡೆಸಲಾಗಿದೆ. ಪೊಲೀಸ್, ಬೆಸ್ಕಾಂ, ಬಿಎಂಆರ್‌ಸಿಎಲ್, ಜಲಮಂಡಳಿ, ಬಿಡಿಎ ಅಧಿಕಾರಿಗಳು, ಸಚಿವರು, ಶಾಸಕರು, ಸಚಿವರು ಭಾಗವಹಿಸಿದ್ದರು’ ಎಂದು ಹೇಳಿದರು.

‘ಐದೂ ಪಾಲಿಕೆಗಳು ತಮ್ಮದೇ ಆದ ಪ್ರತ್ಯೇಕ ಬಜೆಟ್ ತಯಾರಿಸಿಕೊಂಡಿದ್ದಾರೆ. ಶಾಸಕರೂ ಕೂಡ ತಮ್ಮ ಮನವಿ ಸಲ್ಲಿಸಿದ್ದಾರೆ. ವಾರ್ಡ್‌ವಾರು ಅನುದಾನ ನೀಡಬೇಕು ಎಂದು ಒತ್ತಾಯ ಮಾಡಿದ್ದಾರೆ’ ಎಂದರು.

‘ಸ್ಥಳೀಯ ಶಾಸಕರ ಜತೆ ಚರ್ಚೆ ಮಾಡಿ ಪಾಲಿಕೆ ವ್ಯಾಪ್ತಿಯ ಉದ್ಯಾನಗಳ ಪ್ರವೇಶಕ್ಕೆ ಯಾವ ಸಮಯ ನೀಡಬೇಕು ಎಂದು ತೀರ್ಮಾನಿಸಲಾಗುವುದು’ ಎಂದು ಅವರು ಹೇಳಿದರು.

‘ಪ್ರತಿ ವಾರ್ಡಿಗೆ ₹5 ಕೋಟಿಯಿಂದ ₹10 ಕೋಟಿ ಅನುದಾನ ಕೇಳುತ್ತಿದ್ದು, ಎಷ್ಟು ನೀಡಲಾಗುವುದು’ ಎಂಬ ಪ್ರಶ್ನೆಗೆ, ‘ನೋಡೋಣ, ಅವರು ಆಕಾಶ ಕೇಳುತ್ತಿದ್ದಾರೆ. ಭೂಮಿಯನ್ನೂ ಕೇಳುತ್ತಿದ್ದಾರೆ’ ಎಂದು ಮಾರ್ಮಿಕವಾಗಿ ನುಡಿದರು.

ಜಿಬಿಎ ಸಭೆಯಲ್ಲಿ ಡಿ.ಕೆ.ಶಿವಕುಮಾರ್ ಮಾತನಾಡಿದರು. ದಿನೇಶ್ ಗುಂಡೂರಾವ್ ಉಪಸ್ಥಿತರಿದ್ದರು.

ಅನಧಿಕೃತ ಫ್ಲೆಕ್ಸ್: ₹1 ಲಕ್ಷದವರೆಗೆ ದಂಡ

‘ಇನ್ನು ಮುಂದೆ ಯಾರು ಅನಧಿಕೃತವಾಗಿ ಫ್ಲೆಕ್ಸ್ ಹಾಕುತ್ತಾರೊ, ಅವರಿಗೆ ಪ್ರತಿ ಫ್ಲೆಕ್ಸ್‌ಗೆ ₹50 ಸಾವಿರದಿಂದ ₹1 ಲಕ್ಷದವರೆಗೆ ದಂಡ ವಿಧಿಸಲು ಸೂಚಿಸಿದ್ದೇನೆ’ ಎಂದು ಶಿವಕುಮಾರ್ ತಿಳಿಸಿದರು.

‘ನಾವು ಎಷ್ಟೇ ಹೇಳಿದರೂ ಫ್ಲೆಕ್ಸ್ ಹಾಕುವುದು ಹೆಚ್ಚುತ್ತಿದೆ. ನಮ್ಮ ಪಕ್ಷವೂ ಸೇರಿ ಎಲ್ಲಾ ಪಕ್ಷದವರೂ ಫ್ಲೆಕ್ಸ್ ಹಾಕುತ್ತಿದ್ದಾರೆ’ ಎಂದರು.

‘ಹುಟ್ಟುಹಬ್ಬ, ಶುಭಾಶಯ ಸೇರಿ ವಿವಿಧ ರೀತಿಯ ಫ್ಲೆಕ್ಸ್ ಹಾವಳಿ ಹೆಚ್ಚಾಗಿದೆ. ಸರ್ಕಾರದಿಂದ ಜಾಹೀರಾತು ಪ್ರಕಟಿಸಲು ಕೆಲವು ಜಾಗ ನಿಗದಿ ಮಾಡಿದ್ದು, ಅಲ್ಲಿ ಅನುಮತಿ ಪಡೆದು ಹಾಕಿಕೊಳ್ಳಲಿ. ಇದರ ಹೊರತಾಗಿ ಫ್ಲೆಕ್ಸ್ ಹಾಕಿದರೆ ನಂತರದ ಪರಿಣಾಮಗಳನ್ನು ನೀವು ಅನುಭವಿಸಬೇಕಾಗುತ್ತದೆ. ಈ ವಿಚಾರವಾಗಿ ಪೊಲೀಸ್ ಹಾಗೂ ಪಾಲಿಕೆಗಳ ಅಧಿಕಾರಿಗಳಿಗೆ ಜವಾಬ್ದಾರಿ ವಹಿಸಲಾಗಿದೆ’ ಎಂದರು.

ಟೋಯಿಂಗ್ ಜಾರಿ

‘ವಾಹನ ನಿಲುಗಡೆಗೆ ರಸ್ತೆಗಳಲ್ಲಿ ನಿಗದಿಪಡಿಸಲಾದ ಸ್ಥಳದ ಹೊರತಾಗಿ, ಇತರೆ ಯಾವುದೇ ಪ್ರದೇಶದಲ್ಲಿ ವಾಹನಗಳನ್ನು ನಿಲುಗಡೆ ಮಾಡಿದರೆ ಟೋಯಿಂಗ್ ಮಾಡಲಾಗುತ್ತದೆ’ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

‘ಎಲ್ಲಾ ಪಾಲಿಕೆಗಳಿಗೆ ತಲಾ ಎರಡು ಟೋಯಿಂಗ್ ವಾಹನಗಳನ್ನು ನೀಡಿದ್ದೇವೆ. ವಾಹನ ನಿಲುಗಡೆಗೆ ಅವಕಾಶ ಇರದ ಕಡೆ ನಿಲ್ಲಿಸಿದರೆ ಪೊಲೀಸರ ಸಹಕಾರದೊಂದಿಗೆ ಟೋಯಿಂಗ್ ಮಾಡಲಾಗುವುದು’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

‘ವಾಹನಗಳನ್ನು (ಅನಾಥ ವಾಹನ) ವಾರಗಟ್ಟಲೆ ರಸ್ತೆಗಳಲ್ಲಿ ನಿಲ್ಲಿಸಿದ್ದರೆ ಅವುಗಳನ್ನು ಎತ್ತಿಕೊಂಡು ಹೋಗಿ ನಿಗದಿತ ಜಾಗದಲ್ಲಿ ‘ಡಂಪ್’ ಮಾಡಲಾಗುವುದು’ ಎಂದು ಶಿವಕುಮಾರ್ ತಿಳಿಸಿದರು.

‘ಇಂತಹ ವಾಹನಗಳನ್ನು ಕೊಂಡೊಯ್ಯುವ ಜವಾಬ್ದಾರಿಯನ್ನು ಪೊಲೀಸರಿಗೆ ನೀಡಲಾಗಿದೆ. ಬೆಳ್ಳಹಳ್ಳಿ, ಸೊಂಡೆಕೊಪ್ಪ ಸೇರಿದಂತೆ ನಾಲ್ಕು ಕಡೆ ಜಾಗ ನಿಗದಿ ಮಾಡಲಾಗಿದೆ. ಇನ್ನು ಕೆಲವು ಜಾಗ ನಿಗದಿ ಮಾಡಲಾಗುವುದು’ ಎಂದರು.

‘ಒಳಮೀಸಲು: 25ರಂದು ಸಿ.ಎಂ ಮನೆಗೆ ರ್‍ಯಾಲಿ ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಒಳಮೀಸಲಾತಿ ಅನ್ವಯಿಸಿಯೇ ನೇಮಕಾತಿ ನಡೆಸಬೇಕು ಎಂದು ಆಗ್ರಹಿಸಿ ಮಾದಿಗ ಸಂಘಟನೆಗಳ ಒಕ್ಕೂಟದಿಂದ ಇದೇ 25ರಂದು ಬೆಳಿಗ್ಗೆ 11ಕ್ಕೆ ಬೆಂಗಳೂರಿನ ಗಾಂಧಿನಗರದಿಂದ ಮುಖ್ಯಮಂತ್ರಿ ಮನೆಗೆ ರ್‍ಯಾಲಿ ನಡೆಸಲಾಗುವುದು’ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯಾಧ್ಯಕ್ಷ ಎನ್.ಮೂರ್ತಿ ತಿಳಿಸಿದರು.

‘ಅದೇ ದಿನ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಆದಿ ಜಾಂಬವ ಮಠದ ಷಡಕ್ಷರ ಮುನಿ ಸ್ವಾಮೀಜಿ ಅವರ ತಂಡವು ಹರಿಹರದಲ್ಲಿ ಇರುವ ಪ್ರೊ.ಬಿ.ಕೃಷ್ಣಪ್ಪ ಅವರ ಸಮಾಧಿಯಿಂದ ಕೈಗೊಂಡಿರುವ ಕಾಲ್ನಡಿಗೆ ಜಾಥಾಕ್ಕೂ ಒಕ್ಕೂಟದಿಂದ ಬೆಂಬಲ ನೀಡಲಾಗುವುದು’ ಎಂದು ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ತಿಳಿಸಿದರು.

‘ಒಳಮೀಸಲಾತಿ ಇಲ್ಲದೇ 56,432 ಸರ್ಕಾರಿ ಹುದ್ದೆಗಳನ್ನು ನೇಮಕ ಮಾಡಲು ಆದೇಶ ಹೊರಡಿಸಿರುವ ಸರ್ಕಾರದ ಕ್ರಮ ಸರಿಯಲ್ಲ. ಅಧಿಕಾರಕ್ಕೆ ಬಂದರೆ ಮೊದಲ ಅಧಿವೇಶನದಲ್ಲಿಯೇ ಒಳ ಮೀಸಲಾತಿ ಜಾರಿ ಮಾಡುವ ಭರವಸೆಯನ್ನು ಈಡೇರಿಸಿಲ್ಲ. ಕಾಂಗ್ರೆಸ್ ಸರ್ಕಾರ ಆರಂಭದಿಂದಲೂ ಒಳ ಮೀಸಲಾತಿ ವಿರೋಧಿಯಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಮುತುವರ್ಜಿ ವಹಿಸುತ್ತಿಲ್ಲ. ಇದಕ್ಕೆ ವಿಶೇಷ ಸಚಿವ ಸಂಪುಟ ಸಭೆ ಕರೆದು ದೀರ್ಘ ಚರ್ಚೆಯ ಅಗತ್ಯವೂ ಇಲ್ಲ. ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದೆ ಎಂದು ನೆಪ ಹೇಳಿಕೊಂಡು ವಿಳಂಬ ಮಾಡಬಾರದು’ ಎಂದು ಆಗ್ರಹಿಸಿದರು.

ಕರ್ನಾಟಕ ಮಾದಿಗ ದಂಡೋರದ ರಾಜ್ಯಾಧ್ಯಕ್ಷ ಶಂಕರಪ್ಪ, ಮಾದಿಗ ಮೀಸಲು ಹೋರಾಟ ಸಮಿತಿಯ ಮಹಾಸಭಾ ಗೌರವಾಧ್ಯಕ್ಷ ಕೇಶವ ಮೂರ್ತಿ, ವಿಶ್ವ ಜಾಂಬವ ಮಹಾಸಭಾದ ಭೀಮ್‌ರಾಜ್, ಶ್ರೀರಾಮ್, ಬಿ.ನರಸಪ್ಪ, ಹನುಮಂತಪ್ಪ, ಜೆ.ಸಿ.ಪ್ರಕಾಶ್, ಕೈವಾರ ದೇವರಾಜು, ಶಿವರಾಜ್, ಹುಸೇನಪ್ಪ ಸ್ವಾಮಿ, ಬಿ.ಆರ್.ಮುನಿರಾಜು ಉಪಸ್ಥಿತರಿದ್ದರು.

ಕೇಂದ್ರ ಸಚಿವ ಚೌಧರಿಗೆ ಜೀವ ಬೆದರಿಕೆ ಕರೆ

ನವದೆಹಲಿ (ಪಿಟಿಐ): ಕೇಂದ್ರ ಸಚಿವ ಜಯಂತ್ ಚೌಧರಿ ಅವರಿಗೆ ವ್ಯಕ್ತಿಯೊಬ್ಬರಿಂದ ಜೀವ ಬೆದರಿಕೆ ಕರೆ ಬಂದಿದ್ದು, ಈ ಸಂಬಂಧ ದೂರು ದಾಖಲಾಗಿದೆ. ದೂರನ್ನು ಆಧರಿಸಿ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಜಯಂತ್ ಚೌಧರಿ

ಕೌಶಲ ಅಭಿವೃದ್ಧಿ ಮತ್ತು ಉದ್ಯಮಶೀಲತೆಯ ರಾಜ್ಯ ಸಚಿವ (ಸ್ವತಂತ್ರ) ಜಯಂತ್ ಅವರಿಗೆ ಮಾ. 18ರಂದು ಬೆಳಿಗ್ಗೆ 11 ಗಂಟೆಗೆ ಬೆದರಿಕೆ ಕರೆ ಬಂದಿತ್ತು ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

‘ಬೆದರಿಕೆ ಕರೆ ಮಾಡಿದ ವ್ಯಕ್ತಿಯನ್ನು ಪಶ್ಚಿಮ ಬಂಗಾಳದ ಮುರ್ಷಿದಾಬಾದ್‌ನ ನಿವಾಸಿ ಮೊಹಮ್ಮದ್ ಇಸ್ಮಾಯಿಲ್ ಎಂದು ಗುರುತಿಸಲಾಗಿದೆ. ಆರೋಪಿಯನ್ನು ಬಂಧಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗಿದ್ದು, ಆ ನಂತರವಷ್ಟೇ ಬೆದರಿಕೆ ಕರೆಯ ಹಿಂದಿನ ಉದ್ದೇಶ ತಿಳಿಯಲಿದೆ’ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಚಟಾಕಿ ಸುದ್ದಿ

ಒಂದು ವಾರ ಮಳೆ ಸಂಭವ

ಬೆಂಗಳೂರು: ರಾಜ್ಯದ ಕೆಲವೆಡೆ ಮುಂದಿನ ಒಂದು ವಾರ ಸಾಧಾರಣ ಮಳೆಯಾಗುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯು ಶನಿವಾರ ಒಂಬತ್ತು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಿಸಿದೆ.

ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು ಹಾಗೂ ಮೈಸೂರು ಜಿಲ್ಲೆಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದ್ದು, ಈ ಜಿಲ್ಲೆಗಳಲ್ಲಿ ಗುಡುಗು ಹಾಗೂ ಭಾರಿ ಗಾಳಿ ಸಹಿತ ಮಳೆಯಾಗುವ ಸಂಭವವಿದೆ. ಈ ಜಿಲ್ಲೆಗಳ ಕೆಲವೆಡೆ ಇದೇ 27ರವರೆಗೂ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ.

24ರಿಂದ ಕರಾವಳಿಯ ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಒಂದೆರಡು ಕಡೆ ಸಾಧಾರಣ ಮಳೆಯಾಗುವ ಸಂಭವವಿದೆ. ಅಲ್ಲಿಯವರೆಗೆ ವಾತಾವರಣದಲ್ಲಿ ಉಷ್ಣಾಂಶ ಹೆಚ್ಚಳವಾಗುವ ಸಾಧ್ಯತೆಯಿದೆ.

ಬೆಂಗಳೂರಿನಲ್ಲಿ ಶನಿವಾರ ಮೋಡ ಕವಿದ ವಾತಾವರಣ ಇರಲಿದ್ದು, ಗುಡುಗು ಹಾಗೂ ಗಾಳಿ ಸಹಿತ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ನೀರಿನ ಕೊರತೆ: ಕ್ಷಿಪ್ರ ಕಾರ್ಯಪಡೆ ರಚನೆ

ಬೆಂಗಳೂರು: ‘ಕುಡಿಯುವ ನೀರಿನ ಸಮಸ್ಯೆ ತಲೆದೋರದಂತೆ ಸೂಕ್ತ ಮುನ್ನೆಚ್ಚರಿಕೆ ವಹಿಸಬೇಕು. ಪ್ರತಿ ತಿಂಗಳು 2ನೇ ಮತ್ತು 4ನೇ ಸೋಮವಾರ ಸಭೆ ನಡೆಸಬೇಕು’ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಪಿಡಿಒಗಳಿಗೆ ಸೂಚಿಸಿದ್ದಾರೆ.

ಪ್ರಿಯಾಂಕ್ ಖರ್ಗೆ

ಕುಡಿಯುವ ನೀರಿನ ಅಭಾವ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಿಸಲು ಜಿಲ್ಲಾ ಪಂಚಾಯಿತಿಗಳಲ್ಲಿ 24/7 ನಿಯಂತ್ರಣ ಕೊಠಡಿಗಳನ್ನು ತೆರೆಯಬೇಕು. ತಾಲ್ಲೂಕುಮಟ್ಟದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದಲ್ಲಿ ಕ್ಷಿಪ್ರ ಕಾರ್ಯಪಡೆ ರಚಿಸಿ, ಪರಿಸ್ಥಿತಿ ಅವಲೋಕಿಸಬೇಕು. ಕೈಗೊಂಡ ಕ್ರಮಗಳ ಕುರಿತ ವರದಿಯನ್ನು ಜಿಲ್ಲಾ ಪಂಚಾಯಿತಿ ಸಿಇಒ ಅವರಿಗೆ ಸಲ್ಲಿಸಬೇಕು ಎಂದು ಸಲಹೆ ನೀಡಿದ್ದಾರೆ.

ಗ್ರಾಮೀಣ ವಸತಿ ಪ್ರದೇಶಗಳಲ್ಲಿನ ನೀರಿನ ಮೂಲಗಳನ್ನು ಶೇ 100ರಷ್ಟು ಭೌತಿಕ ಪರಿಶೀಲನೆ ನಡೆಸಿ, ಕೊಳವೆಬಾವಿಗಳ ಸುತ್ತಮುತ್ತಲೂ ಯಾವುದೇ ಕಲುಷಿತ ನೀರು ಅಥವಾ ಚರಂಡಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿದ್ದಾರೆ.

ಟೆನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯ ಸಮಾರೋಪ ಸಮಾರಂಭದಲ್ಲಿ ನಿರ್ಮಲಾನಂದನಾಥ ಸ್ವಾಮೀಜಿ ಬಹುಮಾನ ವಿತರಿಸಿದರು

ಯುವಶಕ್ತಿಗೆ ಪ್ರೋತ್ಸಾಹ ನೀಡಿ: ನಿರ್ಮಲಾನಂದನಾಥ ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ‘ಯುವಶಕ್ತಿಗೆ ಪ್ರೋತ್ಸಾಹ ನೀಡಿ ರಾಷ್ಟ್ರದ ನಿರ್ಮಾಣದಲ್ಲಿ ತೊಡಗಿಸಿಕೊಳ್ಳಬೇಕು’ ಎಂದು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಸಲಹೆ ನೀಡಿದರು.

ಕೆಂಗೇರಿ ಗಣೇಶ ಮೈದಾನದಲ್ಲಿ ಶಾಸಕ ಎಸ್.ಟಿ.ಸೋಮಶೇಖರ್ ನೇತೃತ್ವದಲ್ಲಿ ನಡೆದ ಎಸ್‌ಟಿಎಸ್ ಕಪ್-2026 ಟೆನಿಸ್‌ಬಾಲ್ ಕ್ರಿಕೆಟ್ ಪಂದ್ಯದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

‘ಬರೀ ಬುದ್ಧಿವಂತಿಕೆಯಿಂದಲೇ ಯುವ ಜನತೆ ಬದುಕು ಕಟ್ಟಿಕೊಳ್ಳುವುದಕ್ಕೆ ಸಾಧ್ಯವಿಲ್ಲ, ಸನ್ನಡತೆ ಹಾಗೂ ಸಂಸ್ಕಾರಗಳ ಅರಿವಿದ್ದವರು ಒಳ್ಳೆಯ ಬದುಕು ಕಟ್ಟಿಕೊಳ್ಳಲು ಸಾಧ್ಯ’ ಎಂದರು.

ಎಸ್.ಟಿ ಸೋಮಶೇಖರ್ ಮಾತನಾಡಿ, ‘ವರ್ಷದಲ್ಲಿ ಎರಡು ಬಾರಿ ಕ್ರೀಡಾಕೂಟ ಆಯೋಜಿಸುವ ಆಲೋಚನೆ ಇದ್ದು, ಈ ತಿಂಗಳ ಅಂತ್ಯದಲ್ಲಿ ಮಹಿಳೆಯರಿಗೂ ಕ್ರೀಡಾಕೂಟ ನಡೆಸಲಾಗುವುದು. ಮಹಿಳೆಯರಿಗಾಗಿ ರಂಗೋಲಿ ಸ್ಪರ್ಧೆ, ಸಂಗೀತ ಚಟುವಟಿಕೆ ಹಮ್ಮಿಕೊಳ್ಳಲಾಗುವುದು’ ಎಂದರು.

ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಕೆ.ಶ್ರೀಕಾಂತ್ ಮಾತನಾಡಿದರು. ನಿಶಾಂತ್ ಸೋಮಶೇಖರ್, ಎಸ್.ಟಿ.ಶ್ರೀನಿವಾಸ್, ಕೆ.ಪಿ.ನಂಜುಂಡಿ, ಕರ್ನಾಟಕ ವಸತಿ ಮಹಾಮಂಡಲ ನಿರ್ದೇಶಕ ಇ.ದೊಡ್ಡ ನಾಗಯ್ಯ, ನಿವೃತ್ತ ಎಂಜಿನಿಯರ್ ಬೋರೇಗೌಡ ಇದ್ದರು.

ವಿಜೇತ ತಂಡಗಳಿಗೆ ಟ್ರೋಫಿ, ಪ್ರಶಸ್ತಿ ಪತ್ರ, ನಗದು ಬಹುಮಾನ ಹಾಗೂ ಶ್ರೇಷ್ಠ ಆಟಗಾರನಿಗೆ ದ್ವಿಚಕ್ರ ವಾಹನ, ಬೌಲರ್‌ಗೆ ಎಲೆಕ್ಟ್ರಿಕ್ ದ್ವಿಚಕ್ರ ವಾಹನ, ಭಾಗವಹಿಸಿದ್ದ 365 ತಂಡಗಳಿಗೆ ತಲಾ ₹12 ಸಾವಿರ ಪ್ರೋತ್ಸಾಹಧನ ವಿತರಿಸಲಾಯಿತು.

ಲಂಚ ಆರೋಪ ಪ್ರಕರಣದ ವಿಚಾರಣೆಗೆ ನಕಾರ

‘ಸಾಕ್ಷ್ಯಗಳಿದ್ದಾಗ ವಿಚಾರಣೆ ಅನಿವಾರ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇಲಾಖಾ ವಿಚಾರಣೆಯಲ್ಲಿ ದೋಷಮುಕ್ತರಾಗಿದ್ದಾರೆ ಎಂದ ಮಾತ್ರಕ್ಕೆ ಆರೋಪಿಗಳ ವಿರುದ್ಧದ ಕ್ರಿಮಿನಲ್ ಪ್ರಕರಣದ ವಿಚಾರಣೆ ಎದುರಿಸುವ ಅಗತ್ಯವಿಲ್ಲ ಎಂಬುದು ಸಮರ್ಥನೀಯವಲ್ಲ’ ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಅಭಿಪ್ರಾಯಪಟ್ಟಿದೆ.

‘ನನ್ನ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಬೇಕು’ ಎಂದು ಕೋರಿ ಚಿತ್ರದುರ್ಗದ ಸಹಕಾರ ಸಂಘಗಳ ಉಪ ನಿಬಂಧಕರ ಕಚೇರಿ ಸೂಪರಿಂಟೆಂಡೆಂಟ್ ಆರ್.ಗೀತಾ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಜಾಗೊಳಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಬಲವಾದ ಸಾಕ್ಷ್ಯಾಧಾರಗಳಿದ್ದಾಗ ಪ್ರಕರಣದ ವಿಚಾರಣೆ ಮುಂದುವರಿಸುವುದು ನ್ಯಾಯದ ದೃಷ್ಟಿಯಿಂದ ಅಗತ್ಯ’ ಎಂದು ಪ್ರತಿಪಾದಿಸಿದೆ.

ಮುಖ್ಯಾಂಶಗಳು

- ₹15 ಸಾವಿರ ಲಂಚ ಪಡೆಯುತ್ತಿದ್ದಾಗ ಲೋಕಾಯುಕ್ತ ಬಲೆಗೆ
- ‘ಪ್ರತಿ ಪ್ರಕರಣವೂ ತನ್ನದೇ ಸಾಕ್ಷ್ಯಾಧಾರ ಆಧರಿಸಿರುತ್ತದೆ’

‘ಇಲಾಖೆ ವಿಚಾರಣೆಯಲ್ಲಿ ದೋಷಮುಕ್ತಗೊಳಿಸುವಿಕೆ ಕ್ರಿಮಿನಲ್ ಮೊಕದ್ದಮೆಯ ಮೇಲೆ ಪ್ರಭಾವ ಬೀರಬಹುದು. ಪ್ರತಿಯೊಂದು ಪ್ರಕರಣವೂ ತನ್ನದೇ ಆದ ವಾಸ್ತವಿಕ ಮತ್ತು ಸಾಕ್ಷ್ಯಾಧಾರಗಳನ್ನು ಆಧರಿಸಿರುತ್ತದೆ. ಹೀಗಾಗಿ, ಕ್ರಿಮಿನಲ್ ಪ್ರಕರಣವನ್ನು ಪುರಾವೆಗಳ ಕಠಿಣ ಮಾನದಂಡದ ಅಡಿಯಲ್ಲಿ ಪೂರ್ಣ ಪ್ರಮಾಣದ ವಿಚಾರಣೆಗೆ ಒಳಪಡಿಸುವುದು ಸಮಂಜಸ’ ಎಂದು ನ್ಯಾಯಪೀಠ ಹೇಳಿದೆ.

‘ಇಲಾಖಾ ವಿಚಾರಣೆಗಳಲ್ಲಿ ಸಾಕ್ಷಿಗಳ ಪ್ರಮಾಣವಚನ ಸ್ವೀಕಾರವನ್ನು ನ್ಯಾಯಾಂಗ ಪ್ರಕ್ರಿಯೆಯ ಸ್ಥಾನಮಾನಕ್ಕೆ ಏರಿಸುತ್ತದೆ ಎಂಬುದು ಈಗಾಗಲೇ ತಿರಸ್ಕೃತಗೊಂಡಿರುವ ವಾದ. ಕಾನೂನಿನ ಸ್ಥಿರ ತತ್ವದ ಪ್ರಕಾರ ಇಲಾಖಾ ವಿಚಾರಣೆಯು ಅರೆ-ನ್ಯಾಯಾಂಗ ಪ್ರಕ್ರಿಯೆಯಾಗೇ ಉಳಿದಿದೆ. ಸಾಕ್ಷಿಗೆ ಪ್ರಮಾಣವಚನ ನೀಡಿದ ಮಾತ್ರಕ್ಕೆ ಅದನ್ನು ಅಪರಾಧ ಪ್ರಕ್ರಿಯಾ ಸಂಹಿತೆ-1973 ಮತ್ತು ಭಾರತೀಯ ಸಾಕ್ಷ್ಯ ಕಾಯ್ದೆ-1872ರ ಅಡಿಯಲ್ಲಿ ಪರಿಗಣಿಸಲಾಗದು. ಅರ್ಜಿದಾರರು ಪೂರ್ಣ ಪ್ರಮಾಣದ ವಿಚಾರಣೆಯಲ್ಲಿ ದೋಷಮುಕ್ತರಾಗಬೇಕು’ ಎಂದು ನ್ಯಾಯಪೀಠ ವಿವರಿಸಿದೆ.

ಪ್ರಕರಣ: ಅರ್ಜಿದಾರರು 2018ರ ಜುಲೈನಲ್ಲಿ ಸಹಕಾರ ಸಂಘವೊಂದನ್ನು ನೋಂದಾಯಿಸಲು ದೂರುದಾರರಿಂದ ₹15 ಸಾವಿರ ಲಂಚ ಪಡೆಯುತ್ತಿದ್ದಾಗ ರೆಡ್ ಹ್ಯಾಂಡ್ ಆಗಿ ಲೋಕಾಯುಕ್ತ ಬಲೆಗೆ ಸಿಕ್ಕಿಬಿದ್ದಿದ್ದರು.

ಇಲಾಖಾ ವಿಚಾರಣೆಯ ವರದಿಯಲ್ಲಿ, ‘ದೂರುದಾರರು ಲಂಚವನ್ನು ಪಾವತಿಸಿಲ್ಲ. ಅವರು ಪಡೆದ ಹಣವು ಸಂಬಂಧಿಕರಿಂದ ಪಡೆದ ನಿರ್ದಿಷ್ಟ ಸಾಲಕ್ಕೆ ಸಂಬಂಧಿಸಿದೆ’ ಎಂಬ ದೂರುದಾರರ ಪ್ರತಿಕೂಲ ಹೇಳಿಕೆಯನ್ನು ದಾಖಲಿಸಲಾಗಿತ್ತು. ಈ ಮೂಲಕ ಅರ್ಜಿದಾರರನ್ನು 2023ರಲ್ಲಿ ದೋಷಮುಕ್ತಗೊಳಿಸಲಾಗಿತ್ತು.

ನೈಸ್ ಸಮಸ್ಯೆ ಪ್ರಸ್ತಾಪಿಸಿದ್ದು ರೈತ ವಿರೋಧಿಯೇ?: ಎಸ್‌ಟಿಎಸ್

ಕೆಂಗೇರಿ: ‘ಸಮಸ್ಯೆ ಪರಿಹರಿಸಲು ಸದನದಲ್ಲಿ ನೈಸ್ ರಸ್ತೆ ವಿಚಾರ ಪ್ರಸ್ತಾಪ ಮಾಡಿದ್ದೇನೆಯೇ ಹೊರತು ಯಾವುದೇ ದುರುದ್ದೇಶವಿಲ್ಲ’ ಎಂದು ಶಾಸಕ ಎಸ್.ಟಿ.ಸೋಮಶೇಖರ್ ಹೇಳಿದರು.

ಕೆ.ಗೊಲ್ಲಹಳ್ಳಿಯ ಯುಗಾದಿ ಸಂಭ್ರಮ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘25 ವರ್ಷವಾದರೂ ಭೂಮಿ ಕಳೆದುಕೊಂಡ ರೈತರಿಗೆ ನಿವೇಶನ, ಹಣ ಮಂಜೂರಾಗದ ಬಗ್ಗೆ ಮಾಹಿತಿ ನೀಡಬೇಕಾದ ಹೊಣೆಗಾರಿಕೆ ಯಾರಿಗೆ ಸೇರಿದೆ. ನನ್ನನ್ನು ಪ್ರಶ್ನಿಸುವವರು ಖೇಣಿ ಅವರಿಂದ ಜಿಪಿಎ ಪಡೆದಿರುವರೇ’ ಎಂದು ಪ್ರಶ್ನಿಸಿದರು.

ಬಿಜೆಪಿ ಮುಖಂಡ ಎಂ.ರುದ್ರೇಶ್ ಅವರ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ‘ನೈಸ್ ಸಂಸ್ಥೆಯು ಟೋಲ್ ರಸ್ತೆಯಿಂದ ಪ್ರತಿದಿನ ₹10 ಕೋಟಿ ಆದಾಯ ಗಳಿಸುತ್ತಿದೆ ಎಂದು ಸದನದಲ್ಲಿ ಆರೋಪಿಸಿರುವುದು ನಿಜ. 25 ವರ್ಷ ಕಳೆದರೂ ಭೂಮಿ ಕಳೆದುಕೊಂಡ ರೈತರಿಗೆ ನಿವೇಶನ ಹಾಗೂ ಹಣ ಮಂಜೂರಾಗದ ಬಗ್ಗೆ ಮಾಹಿತಿ ನೀಡಬೇಕಾದ ಹೊಣೆಗಾರಿಕೆ ಯಾರಿಗೆ ಸೇರಿದೆ? ಕೋಟ್ಯಂತರ ರೂಪಾಯಿ ಆದಾಯವಿರುವ ನೈಸ್ ರಸ್ತೆಯನ್ನು ವಶಪಡಿಸಿಕೊಳ್ಳಲು ಮುಂದಾದರೆ ನೈಸ್ ತಂತಾನೆ ರೈತರ ಸಂಕಷ್ಟಕ್ಕೆ ಸ್ಪಂದಿಸಲಿದೆ ಎಂಬ ಉದ್ದೇಶದಿಂದಷ್ಟೇ ರಸ್ತೆ ಸ್ವಾಧೀನಕ್ಕೆ ಮನವಿ ಮಾಡಿದ್ದೆ’ ಎಂದು ಸ್ಪಷ್ಟಪಡಿಸಿದರು.

‘ನೈಸ್ ಸಮಸ್ಯೆ ಪರಿಹಾರಕ್ಕೆ ಸಿದ್ದರಾಮಯ್ಯ, ಯಡಿಯೂರಪ್ಪ ಹಾಗೂ ಶೋಭಾ ಕರಂದ್ಲಾಜೆ ಅವರನ್ನು ಸ್ಥಳಕ್ಕೆ ಕರೆ ತಂದು ಸಮಸ್ಯೆ ಪರಿಹಾರಕ್ಕೆ ಪ್ರಯತ್ನ ನಡೆಸಿದ್ದೇನೆ. ಖೇಣಿ ಅವರೊಂದಿಗೆ ರಾಜಿ ಮಾಡಿಕೊಳ್ಳುವ ಜಾಯಮಾನ ನನ್ನದಲ್ಲ. ಅವರೊಂದಿಗೆ ನನಗೆ ಯಾವುದೇ ವ್ಯವಹಾರಗಳು ಇಲ್ಲ. ಅನ್ಯಾಯದ ಹಾದಿಗೆ ಎಂದಿಗೂ ಹೋಗಿಲ್ಲ. ಬೇಕಾದರೆ ಅಭಿವೃದ್ಧಿ ವಿಷಯದಲ್ಲಿ ಚರ್ಚೆಗೆ ಬನ್ನಿ’ ಎಂದು ಸವಾಲು ಹಾಕಿದರು.

ರದ್ದು ಮಾಡಿಸುವೆ: ‘ನಾನಾಗಿ ಬಿಜೆಪಿ ತೊರೆದಿಲ್ಲ. ರಾಜ್ಯ ಹಾಗೂ ರಾಷ್ಟ್ರ ಮಟ್ಟದ ನಾಯಕರೊಂದಿಗೆ ಈಗಲೂ ಉತ್ತಮ ಬಾಂಧವ್ಯ ಹೊಂದಿದ್ದೇನೆ. ಮನಸ್ಸು ಮಾಡಿದರೆ ಎರಡು ದಿನದಲ್ಲೇ ಉಚ್ಚಾಟನೆ ರದ್ದು ಮಾಡಿಸಿ, ಬಿಜೆಪಿ ಶಾಸಕನಾಗಿ ವಾಪಸ್ ಬರುವೆ’ ಎಂದು ತಿಳಿಸಿದರು.

ಹೈಕೋರ್ಟ್ ಆದೇಶ ರದ್ದುಪಡಿಸಿದ ಸುಪ್ರೀಂ ಕೋರ್ಟ್ • ತನಿಖೆಗೆ ನಿರ್ದೇಶನ

ಲಂಚ: ಐಎಎಸ್ ಅಧಿಕಾರಿ ಮಂಜುನಾಥ್‌ಗೆ ಸಂಕಷ್ಟ

ಪ್ರಜಾವಾಣಿ ವಾರ್ತೆ

ನವದೆಹಲಿ: ಜಮೀನು ಮಾಲೀಕತ್ವದ ವ್ಯಾಜ್ಯ ಪ್ರಕರಣದಲ್ಲಿ ಅರ್ಜಿದಾರರ ಪರ ಆದೇಶ ನೀಡಲು ಬೆಂಗಳೂರು ನಗರ ಜಿಲ್ಲಾಧಿಕಾರಿಯಾಗಿದ್ದ ಸಂದರ್ಭದಲ್ಲಿ ₹5 ಲಕ್ಷ ಲಂಚ ಪಡೆದಿರುವ ಆರೋಪ ಎದುರಿಸುತ್ತಿರುವ ಐಎಎಸ್ ಅಧಿಕಾರಿ ಜೆ. ಮಂಜುನಾಥ್ ಹಾಗೂ ಇತರರ ವಿರುದ್ಧ ತನಿಖೆ ನಡೆಸಲು ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

ಜೆ.ಮಂಜುನಾಥ್ ವಿರುದ್ಧದ ಎಫ್‌ಐಆರ್ ರದ್ದುಪಡಿಸಿದ್ದ ಹೈಕೋರ್ಟ್ ಆದೇಶ ಪ್ರಶ್ನಿಸಿ ಕರ್ನಾಟಕ ಸರ್ಕಾರ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯನ್ನು ಪುರಸ್ಕರಿಸಿರುವ ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಹಾಗೂ ಮನೋಜ್ ಮಿಶ್ರಾ ಅವರ ಪೀಠವು, ‘ಪ್ರಕರಣದ ಬಗ್ಗೆ ಕಾನೂನು ಪ್ರಕಾರ ತನಿಖೆ ನಡೆಸಬೇಕು’ ಎಂದು ಸೂಚಿಸಿದೆ.

‘ಈ ಆರೋಪಗಳು ನಿಜವೋ ಸುಳ್ಳೋ ಎಂಬುದನ್ನು ತನಿಖೆಯ ಸಮಯದಲ್ಲಿ ಸಂಗ್ರಹಿಸಿದ ದಾಖಲೆಗಳು ಮತ್ತು ವಿಚಾರಣೆಯ ಸಾಕ್ಷ್ಯಗಳ ಆಧಾರದಲ್ಲಿ ಪರಿಗಣಿಸಬೇಕಾಗುತ್ತದೆ. ಈ ಹಂತದಲ್ಲಿ, ನ್ಯಾಯಾಲಯವು ಸಾಕ್ಷ್ಯವನ್ನು ಮೌಲ್ಯಮಾಪನ ಮಾಡಿ ಆರೋಪದ ಅರ್ಹತೆಯ ಕುರಿತು ನಿರ್ದಿಷ್ಟ ತೀರ್ಮಾನಕ್ಕೆ ಬರುವುದು ಸೂಕ್ತವಲ್ಲ’ ಎಂದು ಪೀಠ ಅಭಿಪ್ರಾಯಪಟ್ಟಿದೆ.

‘ಲಂಚವನ್ನು ನೇರವಾಗಿ ಅಥವಾ ಮೂರನೇ ವ್ಯಕ್ತಿಯ ಮೂಲಕ ಪಡೆಯಲಾಗಿದೆ ಎಂಬುದು ಮುಖ್ಯವಲ್ಲ ಎಂದು 1988ರ ಕಾಯ್ದೆಯ ಸೆಕ್ಷನ್ 7 ಸ್ಪಷ್ಟವಾಗಿ ಹೇಳುತ್ತದೆ. ಈ ಸಂದರ್ಭದಲ್ಲಿ, ದಾಖಲೆಯಲ್ಲಿರುವ ಅಂಶಗಳನ್ನು ಪರಿಗಣಿಸುವಲ್ಲಿ ಮತ್ತು ಆರೋಪಗಳು ಆಧಾರರಹಿತವಾಗಿವೆ ಎಂದು ತೀರ್ಮಾನಿಸುವಾಗ ಹೈಕೋರ್ಟ್ ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿದೆ’ ಎಂದು ಪೀಠ ಹೇಳಿದೆ.

‘ಆರೋಪಗಳ ಸತ್ಯಾಸತ್ಯತೆ ಬಗ್ಗೆ ನಾವು ಯಾವುದೇ ಅಭಿಪ್ರಾಯ ವ್ಯಕ್ತಪಡಿಸಿಲ್ಲ ಎಂದು ಸ್ಪಷ್ಟಪಡಿಸಿರುವ ಪೀಠ, ಈ ಆದೇಶದಲ್ಲಿ ಮಾಡಿರುವ ಅವಲೋಕನಗಳು ಎಫ್‌ಐಆರ್ ರದ್ದುಗೊಳಿಸಬಹುದೇ ಎಂಬುದನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಮಾತ್ರ’ ಎಂದು ಹೇಳಿದೆ.

ಮಂಜುನಾಥ್

ರಾಜ್ಯ ಸರ್ಕಾರದ ಪರ ಹಿರಿಯ ವಕೀಲ ಸಿದ್ಧಾರ್ಥ ಲೂತ್ರಾ ಹಾಗೂ ಹೆಚ್ಚುವರಿ ಅಡ್ವೊಕೇಟ್ ಜನರಲ್ ನಿಶಾಂತ ಪಾಟೀಲ ವಾದ ಮಂಡಿಸಿದ್ದರು.

ಪ್ರಕರಣವೇನು?: ಆನೇಕಲ್ ತಾಲ್ಲೂಕಿನ ಕೂಡ್ಲು ಗ್ರಾಮದ 38 ಗುಂಟೆ ಜಮೀನು ಒಡೆತನಕ್ಕೆ ಸಂಬಂಧಿಸಿದ ವ್ಯಾಜ್ಯದಲ್ಲಿ ಅನುಕೂಲಕರ ಆದೇಶ ನೀಡಲು ಬೇಗೂರು ನಿವಾಸಿ ಅಜಂ ಪಾಷಾ ಎಂಬವರಿಂದ ₹5 ಲಕ್ಷ ಲಂಚ ಪಡೆಯುತ್ತಿದ್ದಾಗ ಜಿಲ್ಲಾಧಿಕಾರಿ ಕಚೇರಿ ವ್ಯವಸ್ಥಾಪಕ ಮಹೇಶ್ ಮತ್ತು ನ್ಯಾಯಾಲಯ ವಿಭಾಗದ ಸಹಾಯಕ ಚೇತನ್ ಕುಮಾರ್ ಅಲಿಯಾಸ್ ಚಂದ್ರು ಎಂಬವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) 2022ರ ಮೇ 21ರಂದು ಬಂಧಿಸಿತ್ತು.

ತನಿಖೆ ಮುಂದುವರಿಸಿದ್ದ ಎಸಿಬಿ ಅಧಿಕಾರಿಗಳು, ಮಂಜುನಾಥ್ ಅವರನ್ನು ಪ್ರಕರಣದ ಮೂರನೇ ಆರೋಪಿಯನ್ನಾಗಿ ಪರಿಗಣಿಸುವಂತೆ ನ್ಯಾಯಾಲಯಕ್ಕೆ ವರದಿ ಸಲ್ಲಿಸಿದ್ದರು. ಬಳಿಕ ಅವರನ್ನು ಬೆಂಗಳೂರು ನಗರ ಜಿಲ್ಲಾಧಿಕಾರಿ ಹುದ್ದೆಯಿಂದ ಸಮಗ್ರ ಶಿಶು ಅಭಿವೃದ್ಧಿ ಯೋಜನೆ ನಿರ್ದೇಶಕರ ಹುದ್ದೆಗೆ ವರ್ಗಾವಣೆಗೊಳಿಸಲಾಗಿತ್ತು. ಬಳಿಕ ಎಸಿಬಿ ಅಧಿಕಾರಿಗಳು ಮಂಜುನಾಥ್ ಅವರನ್ನು ಬಂಧಿಸಿದ್ದರು. ಅವರು ಹಲವು ದಿನ ಜೈಲಿನಲ್ಲಿದ್ದರು.

‘ನನ್ನ ಜಮೀನಿಗೆ ಸಂಬಂಧಿಸಿದ ಪ್ರಕರಣದ ಆದೇಶವನ್ನು ಪ್ರಕಟಿಸುವಂತೆ ಮನವಿ ಮಾಡಲು ಜಿಲ್ಲಾಧಿಕಾರಿ ಅವರನ್ನು ಭೇಟಿ ಮಾಡಿದ್ದೆ. ಅವರ ಸೂಚನೆಯಂತೆ ಮಹೇಶ್ ಅವರನ್ನು ಭೇಟಿ ಮಾಡಿದೆ. ಅವರು ಲಂಚಕ್ಕೆ ಬೇಡಿಕೆ ಇಟ್ಟಿದ್ದರು’ ಎಂದು ಅಜಂ ಪಾಷಾ ದೂರಿನಲ್ಲಿ ಉಲ್ಲೇಖಿಸಿದ್ದರು. ಜಿಲ್ಲಾಧಿಕಾರಿ ಹಾಗೂ ಮಹೇಶ್ ಜತೆಗಿನ ಸಂಭಾಷಣೆಯ ವಿವರವನ್ನು ಮೊಬೈಲ್‌ನಲ್ಲಿ ರೆಕಾರ್ಡಿಂಗ್ ಮಾಡಿಕೊಂಡಿದ್ದ ದೂರುದಾರರು, ಆ ವಿವರಗಳನ್ನೂ ದೂರಿನೊಂದಿಗೆ ತನಿಖಾ ಸಂಸ್ಥೆಗೆ ನೀಡಿದ್ದರು.

ಲಂಚದ ಹಣವನ್ನು ಮಹೇಶ್ ಮತ್ತು ಚೇತನ್ ಕುಮಾರ್ ಪಡೆದಿದ್ದರೂ, ದೂರುದಾರರಿಗೆ ಸಂಬಂಧಿಸಿದ ಕಡತ ನೇರವಾಗಿ ಜಿಲ್ಲಾಧಿಕಾರಿ ಬಳಿ ಇರುವುದು ತನಿಖೆ ವೇಳೆ ಪತ್ತೆಯಾಗಿತ್ತು. ಪ್ರಕರಣದ ವಿಚಾರಣೆ ಪೂರ್ಣಗೊಳಿಸಿ ಮೂರು ತಿಂಗಳಾದರೂ ಆದೇಶ ಪ್ರಕಟಿಸದೇ ಇರುವುದು ಕಂಡುಬಂದಿತ್ತು.

ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು ಎಂದು ಕೋರಿ ಮಂಜುನಾಥ್ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು. ಎಫ್‌ಐಆರ್ ಅನ್ನು ಹೈಕೋರ್ಟ್ ರದ್ದುಪಡಿಸಿತ್ತು.

ವಿಚಾರಸಂಕಿರಣಕ್ಕೆ ಲೇಖನ ಆಹ್ವಾನ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿಯು ಏ.6 ಮತ್ತು ಏ.7ಕ್ಕೆ ಶಿವಮೊಗ್ಗದಲ್ಲಿರುವ ಕುವೆಂಪು ವಿಶ್ವವಿದ್ಯಾಲಯದಲ್ಲಿ ಜಿ.ಎಸ್. ಶಿವರುದ್ರಪ್ಪ ಅವರ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ ಹಮ್ಮಿಕೊಂಡಿದ್ದು, ಜಿ.ಎಸ್. ಶಿವರುದ್ರಪ್ಪ ಅವರ ಜೀವನ ಮತ್ತು ಸಾಹಿತ್ಯದ ಆಧಾರದ ಮೇಲೆ ಲೇಖನಗಳನ್ನು ಆಹ್ವಾನಿಸಿದೆ.

20ರಿಂದ 50 ವರ್ಷದೊಳಗಿನವರು 4 ಪುಟಗಳ ಮಿತಿಯಲ್ಲಿ ಲೇಖನ ಕಳುಹಿಸಬಹುದಾಗಿದೆ. ಆಯ್ಕೆಯಾದ ಶಿಬಿರಾರ್ಥಿಗಳಿಗೆ ಕಾರ್ಯಕ್ರಮ ನಡೆಯುವ ದಿನಗಳಲ್ಲಿ ಊಟ ಮತ್ತು ವಸತಿ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಪ್ರಮಾಣ ಪತ್ರವನ್ನು ನೀಡಲಾಗುತ್ತದೆ.

ಲೇಖನಗಳನ್ನು ಇದೇ 31ರೊಳಗೆ ಕೊರಿಯರ್ ಅಥವಾ ಅಂಚೆ ಮೂಲಕ ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ, 2ನೇ ಮಹಡಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–560002 ಈ ವಿಳಾಸಕ್ಕೆ ಅಥವಾ ಇ ಮೇಲ್ sahitya.karnataka@gmail.comಗೆ ಕಳುಹಿಸಬೇಕು ಎಂದು ಅಕಾಡೆಮಿ ರಿಜಿಸ್ಟ್ರಾರ್ ಕರಿಯಪ್ಪ ಎನ್. ತಿಳಿಸಿದ್ದಾರೆ.

ವಿವರಕ್ಕೆ ಮೊ. ಸಂಖ್ಯೆ: 9448804044 ಅಥವಾ 6360657361

ಶರಾವತಿ ಪಂಪ್ಡ್ ಸ್ಟೋರೇಜ್ ಘಟಕ ವಿವರಣೆ ಕೇಳಿದ ವನ್ಯಜೀವಿ ಮಂಡಳಿ

ನವದೆಹಲಿ: ಎರಡು ಸಾವಿರ ಮೆಗಾವಾಟ್ ಸಾಮರ್ಥ್ಯದ ಶರಾವತಿ ಪಂಪ್ಡ್ ಸ್ಟೋರೇಜ್ ಘಟಕದ ಬಗ್ಗೆ ಹೆಚ್ಚುವರಿ ಮಾಹಿತಿ ಹಾಗೂ ವಿವರಣೆ ಒದಗಿಸುವಂತೆ ರಾಷ್ಟ್ರೀಯ ವನ್ಯಜೀವಿ ಮಂಡಳಿ ಸ್ಥಾಯಿ ಸಮಿತಿಯು ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ಕೇಂದ್ರ ಅರಣ್ಯ ಸಚಿವ ಭೂಪೇಂದರ್ ಯಾದವ್ ಅಧ್ಯಕ್ಷತೆಯಲ್ಲಿ ನಡೆದ ಮಂಡಳಿಯ 89ನೇ ಸಭೆಯಲ್ಲಿ ವನ್ಯಜೀವಿ ಅನುಮೋದನೆಯ ಈ ಪ್ರಸ್ತಾವವನ್ನು ಮುಂದೂಡಲು ತೀರ್ಮಾನಿಸಲಾಯಿತು.

ಯೋಜನೆಯಿಂದ ವಿದ್ಯುತ್ ಲಭ್ಯತೆಯ ಹೆಚ್ಚಳದ ಬಗ್ಗೆ ವಿವರವಾದ ಸಮರ್ಥನೆಯನ್ನು ರಾಜ್ಯ ಸರ್ಕಾರ ಒದಗಿಸಬೇಕು. ಸಂರಕ್ಷಿತ ಪ್ರದೇಶದ ಹೊರಗೆ ವಿದ್ಯುತ್ ಸಂಗ್ರಹದ ಪರ್ಯಾಯ ತಂತ್ರಜ್ಞಾನಗಳನ್ನು ಪರಿಶೀಲಿಸಬೇಕು. ಪ್ರಸ್ತಾವದ ಬಗ್ಗೆ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್‌ನಿಂದ ಅಭಿಪ್ರಾಯ ಪಡೆದು ಸಲ್ಲಿಸಬೇಕು ಎಂದು ಸ್ಥಾಯಿ ಸಮಿತಿ ಸೂಚಿಸಿದೆ.

ಪಂಪ್ಡ್ ಸ್ಟೋರೇಜ್ ಯೋಜನೆಯ ಪ್ರಸ್ತಾವ ಬಗ್ಗೆ 2025ರ ಜೂನ್ 26ರಂದು ನಡೆದ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯ 84ನೇ ಸಭೆಯಲ್ಲಿ ಚರ್ಚಿಸಲಾಗಿತ್ತು. ಷರತ್ತುಗಳನ್ನು ವಿಧಿಸಿ ಯೋಜನೆಗೆ ತಾತ್ವಿಕ ಅನುಮೋದನೆ ನೀಡಲಾಗಿತ್ತು. ಆಗಸ್ಟ್ 19ರಂದು ನಡೆದ ಸ್ಥಾಯಿ ಸಮಿತಿಯ 85ನೇ ಸಭೆಯಲ್ಲಿ ಪ್ರಸ್ತಾವವನ್ನು ಮರು ಪರಿಶೀಲಿಸಲಾಗಿತ್ತು. ಪಶ್ಚಿಮ ಘಟ್ಟದಲ್ಲಿ ಜಾರಿಗೊಳ್ಳಲಿರುವ ಈ ಯೋಜನೆ ಬಗ್ಗೆ ಕೆಲವು ಸದಸ್ಯರು ತೀವ್ರ ಕಳವಳ ವ್ಯಕ್ತಪಡಿಸಿದ್ದರು. ಈ ಹಿನ್ನೆಲೆಯಲ್ಲಿ, ತಜ್ಞರ ಸಮಿತಿ ರಚಿಸಿ ವರದಿ ಪಡೆದುಕೊಳ್ಳಲು ತೀರ್ಮಾನಿಸಲಾಗಿತ್ತು. ‘ಯೋಜನೆಯ ಪ್ರಸ್ತಾವವು ತಾಂತ್ರಿಕ ಅರ್ಹತೆ, ಪರಿಸರ ಸುಸ್ಥಿರತೆ ಹಾಗೂ ಸಾರ್ವಜನಿಕ ಹಿತಾಸಕ್ತಿ ಹೊಂದಿಲ್ಲ’ ಎಂದು ಸಮಿತಿ ಇತ್ತೀಚೆಗೆ ವರದಿ ಸಲ್ಲಿಸಿತ್ತು.

ಅಳಿ ಬೊಮ್ಮಸಂದ್ರ-ಮುತ್ತಾನಲ್ಲೂರು ಅಮಾನಿಕೆರೆ ರಸ್ತೆ: ಬಲವಂತದ ಕ್ರಮ ಬೇಡ

ತೆರವು ಕಾರ್ಯಾಚರಣೆಗೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐವತ್ತು ವರ್ಷಗಳ ಹಿಂದೆ ಕಾಲುವೆ ಇತ್ತು ಎಂಬ ಕಾರಣಕ್ಕೆ ಆನೇಕಲ್ ತಾಲ್ಲೂಕು ಸರ್ಜಾಪುರ ಹೋಬಳಿಯ ಅಳಿ ಬೊಮ್ಮಸಂದ್ರ ಮತ್ತು ಮುತ್ತಾನಲ್ಲೂರು ಅಮಾನಿಕೆರೆ ಗ್ರಾಮದ ನಡುವೆ ಹಾದುಹೋಗುವ ರಸ್ತೆ ತೆರವಿಗೆ ಮುಂದಾಗಿದ್ದ ಬೆಂಗಳೂರು ನಗರ ಜಿಲ್ಲಾಧಿಕಾರಿ ಮತ್ತು ಆನೇಕಲ್ ತಹಶೀಲ್ದಾರ್ ಕ್ರಮಕ್ಕೆ ಹೈಕೋರ್ಟ್ ತಡೆ ನೀಡಿದೆ.

ಈ ಸಂಬಂಧ ಅಳಿ ಬೊಮ್ಮಸಂದ್ರ ಗ್ರಾಮದ ಆರ್.ಸುಜಾತ, ತಿಲೋತ್ತಮ ಹಾಗೂ ಎ.ಆರ್.ಅರುಣಿ ಸಲ್ಲಿಸಿರುವ ರಿಟ್ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ಎಂ.ಶ್ಯಾಮ್ ಪ್ರಸಾದ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಇದೇ 19ರಂದು ತುರ್ತು ವಿಚಾರಣೆ ನಡೆಸಿದ್ದು, ರಸ್ತೆ ತೆರವು ಕಾರ್ಯಾಚರಣೆ ಮುಂದುವರಿಸದಂತೆ ನಿರ್ದೇಶಿಸಿದ ನ್ಯಾಯಪೀಠ ಮಧ್ಯಂತರ ಆದೇಶ ನೀಡಿದೆ.

‘ಜಿಲ್ಲಾಧಿಕಾರಿ, ತಹಶೀಲ್ದಾರ್ ಅಥವಾ ಸಂಬಂಧಿಸಿದ ಪೊಲೀಸರು ಮುಂದಿನ ವಿಚಾರಣೆವರೆಗೆ ಈ ಪ್ರಕರಣದಲ್ಲಿ ಯಾವುದೇ ಬಲವಂತದ ಕ್ರಮಕ್ಕೆ ಮುಂದಾಗಬಾರದು. ಈ ರಸ್ತೆ ಸಂಚಾರ ಯೋಗ್ಯವಾಗಿದೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳಲು ತಹಶೀಲ್ದಾರ್ ಮುಕ್ತರಾಗಿದ್ದಾರೆ’ ಎಂದು ನಿರ್ದೇಶಿಸಿ ವಿಚಾರಣೆಯನ್ನು ಇದೇ 25ಕ್ಕೆ ಮುಂದೂಡಿತು.

ವಿಚಾರಣೆ ವೇಳೆ ಮೇಲ್ಮನವಿದಾರರ ಪರ ಹೈಕೋರ್ಟ್ ವಕೀಲ ಎ.ಮಧುಸೂದನ ರಾವ್, ‘ಅಧಿಕಾರಿಗಳು ರಸ್ತೆ ತೆರವು ಕಾರ್ಯಾಚರಣೆಗೆ ರಜಾ ದಿನಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಈಗಾಗಲೇ ರಸ್ತೆಯ ಡಾಂಬರು ಕಿತ್ತು ಹಾಕಲಾಗಿದೆ. ವಾಸ್ತವವಾಗಿ ರಸ್ತೆ ಜಾಗದಲ್ಲಿ ಕಾಲುವೆ ಇರಲಿಲ್ಲ. ರಸ್ತೆ ತೆರವುಗೊಳಿಸಿದರೆ ಸಾರ್ವಜನಿಕರ ಸಂಚಾರಕ್ಕೆ ಅಡ್ಡಿಯುಂಟಾಗುತ್ತದೆ. ಈಗಾಗಲೇ ಈ ಪ್ರದೇಶದಲ್ಲಿ ಸರ್ಕಾರದ ಅನುಮೋದನೆಯೊಂದಿಗೆ ಲೇ-ಔಟ್ ನಿರ್ಮಿಸಲಾಗಿದೆ’ ಎಂದು ವಿವರಿಸಿ ಈ ಕುರಿತಾದ ಫೋಟೊಗಳನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

ಇದಕ್ಕೆ ಪ್ರತಿಯಾಗಿ ಸರ್ಕಾರದ ಪರ ವಕೀಲರು, ‘ಸಂಬಂಧಿಸಿದ ಅಧಿಕಾರಿಗಳಿಂದ ಅಗತ್ಯ ಮಾಹಿತಿ ಪಡೆದು ನ್ಯಾಯಾಲಯಕ್ಕೆ ಸಲ್ಲಿಸಿದ ನಂತರವೇ ವಿಚಾರಣೆ ನಡೆಸಬೇಕು’ ಎಂದು ಕೋರಿದರು.

ಮೇಲ್ಮನವಿದಾರರು ಸಲ್ಲಿಸಿದ ಫೋಟೋಗಳನ್ನು ಪರಿಶೀಲಿಸಿದ ನ್ಯಾಯಪೀಠ, ‘ಏಕಸದಸ್ಯ ನ್ಯಾಯಪೀಠದ ಆದೇಶ ಪ್ರತಿ ಸಿಗುವತನಕ ಕಾಯದೆ ರಸ್ತೆ ತೆರವಿಗೆ ಮಾರ್ಚ್ 18 ಮತ್ತು 19ರ ದಿನಗಳನ್ನೇ ಏಕೆ ಆಯ್ಕೆ ಮಾಡಿಕೊಳ್ಳಲಾಯಿತು ಎಂಬ ಬಗ್ಗೆ ವಿವರಣೆ ನೀಡಿ ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸಬೇಕು’ ಎಂದು ತಹಶೀಲ್ದಾರ್‌ಗೆ ತಾಕೀತು ಮಾಡಿತು.

ಯುಗಾದಿ ಹಬ್ಬದ ಕಾರಣದಿಂದ ಹೈಕೋರ್ಟ್‌ಗೆ ರಜೆಯಿದ್ದರೂ ಮೇಲ್ಮನವಿದಾರರ ಮನವಿ ಮೇರೆಗೆ ನ್ಯಾಯಮೂರ್ತಿ ಬಿ.ಎಂ.ಶ್ಯಾಮ್ ಪ್ರಸಾದ್ ಮತ್ತು ನ್ಯಾಯಮೂರ್ತಿ ಅನಂತ ರಾಮನಾಥ ಹೆಗಡೆ ಅವರಿದ್ದ ವಿಭಾಗೀಯ ನ್ಯಾಯಪೀಠ ಇದೇ 19ರಂದು ಮಧ್ಯಾಹ್ನ 3.30ಕ್ಕೆ ತುರ್ತು ಕಲಾಪ ನಡೆಸಿ ಆದೇಶ ನೀಡಿತು.

‘ನಂದಿನಿ’ ಸಿಹಿಗೂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್‌ಪಿಜಿ ಸಿಲಿಂಡರ್ ಕೊರತೆಯ ಬಿಸಿ ಈಗ ಕರ್ನಾಟಕ ಹಾಲು ಮಹಾಮಂಡಳದ (ಕೆಎಂಎಫ್) ನಂದಿನಿ ಸಿಹಿ ಉತ್ಪನ್ನಗಳ ಉತ್ಪಾದನೆಗೂ ತಟ್ಟಿದೆ.

ಕೆಎಂಎಫ್‌ನ ನಂದಿನಿ ಹಾಲಿನ ಉತ್ಪನ್ನ ಘಟಕಕ್ಕೆ (ಎನ್‌ಎಂಪಿ) ನಿತ್ಯ ಸರಬರಾಜು ಆಗುವ ವಾಣಿಜ್ಯ ಸಿಲಿಂಡರ್‌ನ ಪ್ರಮಾಣ ಇಳಿಕೆಯಾಗಿದೆ. ಎಲ್‌ಪಿಜಿ ಸಿಲಿಂಡರ್ ಬಳಸಿಯೇ ಇಲ್ಲಿ 50ಕ್ಕೂ ಅಧಿಕ ಸಿಹಿ ಉತ್ಪನ್ನಗಳನ್ನು ತಯಾರು ಮಾಡಲಾಗುತ್ತದೆ.

ಸದ್ಯ ದಿನಕ್ಕೆ 5ರ ಬದಲು 3 ಸಿಲಿಂಡರ್ ಮಾತ್ರ ಸರಬರಾಜು ಆಗುತ್ತಿದೆ. ಮುಂದಿನ ದಿನಗಳಲ್ಲಿ ಇದು ಕಡಿಮೆಯಾದರೆ ಉತ್ಪಾದನೆ ಪ್ರಮಾಣ ತಗ್ಗಿಸುವ ಸಾಧ್ಯತೆಯಿದೆ. ಇದರಿಂದ ದರ ಏರಿಕೆ ಆತಂಕವೂ ಎದುರಾಗಿದೆ.

‘ಎನ್‌ಎಂಪಿನಲ್ಲಿ ಮೈಸೂರು ಪಾಕ್, ಪೇಡಾ, ಬರ್ಫಿ, ಕುಕೀಸ್ ಸಹಿತ 2 ರಿಂದ 3 ಟನ್‌ನಷ್ಟು ಸಿಹಿ ತಯಾರಿಸಲಾಗುತ್ತಿದೆ. ಕಳೆದ ವಾರ ನಮ್ಮಲ್ಲಿದ್ದ ಸಿಲಿಂಡರ್

ಕೊನೆಯ 2 ದಿನಗಳು
ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
UGADI SALE
UPTO 20% ಕ್ಯಾಶ್ ಬ್ಯಾಕ್ ಕ್ರೆಡಿಟ್ ಕಾರ್ಡ್ ಮೇಲೆ
1 EMI FREE
BAJAJ FINANCE IDFC FIRST Bank
UPTO ₹25,000 ಕಡಿತ ಎಕ್ಸ್ಚೇಂಜ್ ಮೇಲೆ*
FREE GIFTS
ಫೈನಾನ್ಸ್ ಬೊನಾಂಜಾ
Upto 15,000 CASH BACK*
LG ASSURED GIFTS ON ALL PRODUCTS*
BT SPEAKER INDUCTION COOKER STEAM IRON KETTLE DRY IRON
FREE HOLIDAY PACKAGE WITH FAMILY 2 NIGHTS 3 DAYS HOLIDAY PACKAGE WORTH ₹5000
STORE LOCATOR
ನಮ್ಮ ಮಳಿಗೆಗಳು 10.00AM - 10.00PM ತೆರೆದಿರುತ್ತದೆ
ALTERNATE TO LPG - GO ELECTRIC
LIMITED Stock!
V-GUARD KAFF Prestige Tefal Butterfly Preethi
Godrej 1.0 TON 3 STAR INVERTER SPLIT AIR CONDITIONER ಇ.ಎಮ್.ಐ ₹2,058 ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
Haier 1.0 TON 4 STAR INVERTER SPLIT AIR CONDITIONER ಇ.ಎಮ್.ಐ ₹2,654 ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
VOLTAS 1.0 TON 5 STAR INVERTER SPLIT AIR CONDITIONER ಇ.ಎಮ್.ಐ ₹2,679 ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
SAMSUNG 1.5TON 5STAR INVERTER SPLIT AIR CONDITIONER ಇ.ಎಮ್.ಐ ₹3,404
LG 1.5TON 3 STAR INVERTER SPLIT AIR CONDITIONER ಇ.ಎಮ್.ಐ ₹2,918 ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
DAIKIN AIR CONDITIONERS 1.5TON 5STAR INVERTER SPLIT AIR CONDITIONER ಇ.ಎಮ್.ಐ ₹3,508 ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
LLOYD 2.0 TON 3STAR INVERTER SPLIT AIR CONDITIONER ಇ.ಎಮ್.ಐ ₹3,567 ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
WIDEST RANGE OF AIRCOOLERS & FANS
Crompton orient USHA V-GUARD KENSTAR Symphony VOLTAS BAJAJ HAVELLS
ಕೆಟಲ್ ಕುದಿಯಲು LIMITED Stock!
ರೈಸ್ ಕುಕ್ಕರ್ ಅಡುಗೆಗಾಗಿ LIMITED Stock!
ಮೈಕ್ರೋವೇವ್ ಮತ್ತು ಒಟಿಜಿ ಬೇಕಿಂಗ್‌ಗಾಗಿ LIMITED Stock!
ಏರ್ ಫ್ರೈಯರ್ ಆರೋಗ್ಯಕರ ಅಡುಗೆಗಾಗಿ LIMITED Stock!
ಗೀಸರ್ ಗ್ಯಾಸ್ ಗೀಸರ್ ಬದಲಿಗೆ LIMITED Stock!
Panasonic 27ಲೀ ಕನ್ವೆಕ್ಷನ್ ಮೈಕ್ರೋವೇವ್ ಓವೆನ್ ಇ.ಎಮ್.ಐ ₹1,441
LG 650ಲೀ ಸೈಡ್ ಬೈ ಸೈಡ್ ರೆಫ್ರಿಜರೇಟರ್ GL-B257DBM3 ಇ.ಎಮ್.ಐ ₹4,999 ಉಚಿತ: ₹3,315 ಮೌಲ್ಯದ BUTTERFLY PRESSURE COOKER
SAMSUNG 653 ಲೀ CONVERTIBLE 5IN1 SIDE BY SIDE REFRIGERATOR RS76CG8103S9HL ಇ.ಎಮ್.ಐ ₹4,990
Godrej 600ಲೀ ಸೈಡ್ ಬೈ ಸೈಡ್ ರೆಫ್ರಿಜರೇಟರ್ ಇ.ಎಮ್.ಐ ₹5,653 ಉಚಿತ: ₹4,245 ಮೌಲ್ಯದ PREETHI MIXER GRINDER
BOSCH 334ಲೀ ಫ್ರಾಸ್ಟ್ ಫ್ರೀ ರೆಫ್ರಿಜರೇಟರ್ ಇ.ಎಮ್.ಐ ₹3,791 ಉಚಿತ: ₹3,315 ಮೌಲ್ಯದ BUTTERFLY PRESSURE COOKER
Whirlpool 308ಲೀ ಫ್ರಾಸ್ಟ್ ಫ್ರೀ ರೆಫ್ರಿಜರೇಟರ್ ಇ.ಎಮ್.ಐ ₹2,854 ಉಚಿತ: ₹4,470 ಮೌಲ್ಯದ PREETHI INDUCTION COOKTOP
Haier 190ಲೀ ಡೈರೆಕ್ಟ್ ಕೂಲ್ ಸಿಂಗಲ್ ಡೋರ್ ರೆಫ್ರಿಜರೇಟರ್ ಇ.ಎಮ್.ಐ ₹1,908 ಉಚಿತ: ₹1,895 ಮೌಲ್ಯದ PHILIPS TOASTER
iPhone 17 /17 PRO / 17 PRO MAX ₹4,000 CASH BACK STARTS FROM ₹81,500* EMI STARTS FROM ₹3,454
SAMSUNG S26/S26+/ S26 ULTRA EFFECTIVE PRICE ₹83,999* (AFTER CASH BACK) EMI STARTS FROM ₹3,667
OPPO F31 / OPPO F31/ OPPO F31+ 10% CASH BACK STARTS FROM ₹25,800* EMI STARTS FROM ₹2,150
Redmi NOTE 15/15 PRO/ 15 PRO ₹2,000* CASH BACK EMI STARTS FROM ₹1,999
Lenovo SLIM 3i 10% CASH BACK • i7 13620H • 16GB RAM • 512GB SSD • 15.6" FHD • WIN 11 MSO 24 ಇ.ಎಮ್.ಐ ₹6,333 OFFER PRICE ₹75,990 ಉಚಿತ: NAUTICA 25LTR TRAVEL BAG + COMPANY BAG PACK WORTH ₹6,999
hp 15 10% CASH BACK • CORE 5 • 16GB, 512 GB SSD • 15.6 FHD • WIN 11 MSO 24 ಇ.ಎಮ್.ಐ ₹5,916 OFFER PRICE ₹64,990 ಉಚಿತ: NAUTICA 25LTR TRAVEL BAG + COMPANY BAG PACK WORTH ₹6,999
LG 75 INCH ULTRA HD (4K) SMART ಎಲ್‌ಇಡಿ 75NANO83A6A ಇ.ಎಮ್.ಐ ₹6,999 ಉಚಿತ: ₹20000 ಮೌಲ್ಯದ FIREBOLTT SMART CALLING WATCH
SAMSUNG 65 4K QLED SMART ಎಲ್‌ಇಡಿ QN65Q7FAAFXZA ಇ.ಎಮ್.ಐ ₹6,990
SONY 55 4K ULTRA HD SMART ಎಲ್‌ಇಡಿ K-55S25M2 BRAVIA 2II ಇ.ಎಮ್.ಐ ₹5,500
IFB 8 ಕೆಜಿ ಫ್ರಂಟ್ ಲೋಡಿಂಗ್ ಇ.ಎಮ್.ಐ ₹3,249 ECO INVERTER ಉಚಿತ: ₹4,470 ಮೌಲ್ಯದ PREETHI INDUCTION COOKTOP
LG 9 ಕೆಜಿ ಟಾಪ್ ಲೋಡಿಂಗ್ ವಾಷಿಂಗ್ ಮಷೀನ್ ಇ.ಎಮ್.ಐ ₹1,897 ಉಚಿತ: ₹1,895 ಮೌಲ್ಯದ PHILIPS TOASTER
JBL SOUNDBAR SB180 2.1 CH, 220W. WIRELESS SUBWOOFER. OFFER PRICE ₹13,690 EMI ₹1,141 MRP ₹21,990
LG SAMSUNG SONY Haier Panasonic ONIDA IFB Godrej LLOYD Whirlpool BOSCH Electrolux PHILIPS TOSHIBA hp acer DELL Lenovo ASUS vivo OPPO ONEPLUS mi iPhone JBL
BLUE STAR HAFELE Symphony HAVELLS USHA DAIKIN GENERAL Prestige VOLTAS HITACHI VOLTAS beko Butterfly Preethi ULTRA EUREKA FORBES pureit Livpure FABER KENSTAR BAJAJ Crompton V-GUARD ZEBRONICS KAFF OZONE
*Terms & conditions apply. Finance at the sole discretion of the Finance company. Upto 20% Cashback & 1 EMI off on selected brands and models. Upto Rs.15000 Bajaj cash back / vouchers valid only in selected cities. Cash Back / vouchers will be credited to the customer bank account / BFL wallet fter clearing 3 EMI. EMI offers the above products based on 12,18,24 & fixed emi schemes .*Exchange offer valid on MRP and Product as to be in good working condition.Exchange value will differ based on the condition of the old product.Free Installation on AC's is valid on selected brands & models.
181 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA

The BIG Xperience
HARSHA
Happiness. Redefined.
ಸಂಭ್ರಮಿಸಿ.
ಸುಲಲಿತ ಸಾಧನಗಳು
ಮಾಡರ್ನ್ ಕಿಚನ್‌ಗಾಗಿ!
ONLY 02 DAYS LEFT!
dyson big ball
Dyson Big Ball Vacuum Cleaner
MRP ₹43,900
Now @ ₹25,900
5 Year Warranty + Free Servicing
BLDC Fans
Up to 40% Off
Air Coolers
Up to ₹6,000 Off
Prestige Chimney
25% Off
FREE 4-Burner Hob Top worth ₹20,495
Asha Grinder
MRP ₹10,990
Now @ ₹9,390
With Coconut Rice Pot worth ₹990
5 Year Warranty
Panasonic 3 Jar Mixie
MRP ₹8,095
Now @ ₹6,495
With Asha Non-stick Tawa 280mm worth ₹1,000
5 Year Warranty
Water Purifiers
Prestige Kettle Free worth ₹1,400
15% Cashback
Usha Slow Juicer
MRP ₹14,590
Now @ ₹12,790
Induction Cooktops
Up to 40% Off
Pressure Cookers
Up to 25% Off on Exchange
Kitchen Towel Free
V-Guard 750W 5-Jar Food Processor with Grind & Store
Now @ ₹8,649
With Asha 280mm Flat Tawa
Cookware | Non-stickware
Cutlery | Glassware
Up to 25% Off
Kettle, Toaster, Iron Box, OTG
Up to 30% Off
Portable Blender
Up to 45% Off
ಹರ್ಷೋತ್ಸವ
ವಾರ್ಷಿಕ ಸಂಭ್ರಮಾಚರಣೆ
18th - 22nd March 2026
BAJAJ FINSERV
ಇದೀಗ ಇವೆಲ್ಲವನ್ನೂ ಖರೀದಿಸಿ EMIನಲ್ಲಿ*
ಇನ್ಸ್ಟಂಟ್ ಲಕ್ಕಿ ಡ್ರಾನೊಂದಿಗೆ ಖಚಿತ ಉಡುಗೊರೆ
Microwave Ovens
Air Conditioners
LED TVs
Panasonic Electric Cookers
Air Fryers
Panasonic Mixier Grinders
Smartwatches
Redmi Smartphones
...ಜೊತೆಗೆ ಇನ್ನಷ್ಟು ಉಡುಗೊರೆಗಳು
ಇಎಮ್‌ಐ ಲಕ್ಕಿ ಡ್ರಾ
Chance to win 2 LED TVs, 2 refrigerators, 2 washing machines, 1 air-conditioner, 4 microwave ovens and 1 party speakers, all from LG
ನಿಮ್ಮ ಕಿಚನ್‌ನ ನಿರ್ವಹಣೆ ಇದೀಗ ಇನ್ನಷ್ಟು ಸುಲಭ ಸುಲಲಿತ ಸಾಧನಗಳೊಂದಿಗೆ. 'ಹರ್ಷೋತ್ಸವ'ಕ್ಕೆ ಭೇಟಿ ನೀಡಿ, ಹೊಸ ತಂತ್ರಜ್ಞಾನದ ಮಿಕ್ಸರ್, ಗ್ರೈಂಡರ್, ಪ್ರೆಶರ್ ಕುಕ್ಕರ್, ವ್ಯಾಕ್ಯೂಮ್ ಕ್ಲೀನರ್, ಕುಕ್‌ವೇರ್, ವಾಟರ್ ಹೀಟರ್, ವಾಟರ್ ಪ್ಯೂರಿಫೈಯರ್, ಗ್ಯಾಸ್ ಸ್ಟವ್, ಹಾಬ್, ಚಿಮ್ನಿ, ಫ್ಯಾನ್, ಕೂಲರ್, ಇಂಡಕ್ಷನ್ ಹೀಗೆ ಅಡುಗೆ ಮನೆಗೆ ಮಾಡರ್ನ್ ಲುಕ್ ನೀಡುವುದರೊಂದಿಗೆ, ಕೆಲಸಗಳನ್ನು ಸುಲಭಗೊಳಿಸುವ ವಿಶಾಲ ಶ್ರೇಣಿಯ ಉಪಕರಣಗಳು 'ಹರ್ಷೋತ್ಸವ'ದಲ್ಲಿದ್ದು, ವಿಶೇಷ ಬೆಲೆ, ಲಕ್ಕಿ ಡ್ರಾ, ಕಾಂಬಿ ಕೊಡುಗೆ, ಇಎಮ್‌ಐ, ಕ್ಯಾಶ್‌ಬ್ಯಾಕ್ ಸೇರಿದಂತೆ ಹತ್ತು ಹಲವು ಕೊಡುಗೆಗಳೊಂದಿಗೆ ಮನೆಗೊಯ್ಯಿರಿ. ಬನ್ನಿ, ಸಂಭ್ರಮಿಸಿ, ಇದು ನಿಮಗೆಂದೇ ರೂಪಿಸಿದ ಶಾಪಿಂಗ್ ಹಬ್ಬ 'ಹರ್ಷೋತ್ಸವ'.
Conditions apply. Offers applicable on select models and brands. Models shown are indicative. Offer valid till stocks last. Finance at the sole discretion of the financier.
Finance available only within city limits. Taxes applicable on Lucky Draw gifts.
Aquaguard asha BAJAJ BUTTERFLY Crompton dyson Faber GLEN Hawkins impex KENT Health Care morphy richards NIRLEP
ORIENT Panasonic Preethi Prestige Racold REMI santha Symphony ULTRA USHA pureit V-GUARD Vijayalakshmi
ಉಳ್ಳಾಲ್ ಮುಖ್ಯ ರಸ್ತೆ, ಜ್ಞಾನ ಗಂಗಾ ನಗರ, ಬೆಂಗಳೂರು - 56. • ಫೀಲ್ಡ್ ಮಾರ್ಷಲ್ ಜನರಲ್ ಕಾರ್ಯಪ್ಪ ಪಾರ್ಕ್ ಸಮೀಪ, ರಾಜರಾಜೇಶ್ವರಿ ನಗರ, ಬೆಂಗಳೂರು – 98.

The BIG Xperience
HARSHA
Happiness. Redefined.
ಸಂಭ್ರಮಿಸಿ.
ಕೊನೆಯ 2 ದಿನಗಳ
'ಹರ್ಷೋತ್ಸವ'!
ನಿಮಗೆಂದೇ ರೂಪಿಸಿದ ಶಾಪಿಂಗ್ ಹಬ್ಬ!
ರೆಫ್ರಿಜರೇಟರ್
• Side-by-Side Refrigerator - Starts from ₹62,990 with Gift*
• Upgrade Bonus up to ₹5,000*
• Cash Back up to ₹15,000*
• Fixed EMI of ₹2,994*
ವಾಶಿಂಗ್ ಮಶಿನ್
• Cash Back up to ₹7,500*
• Exchange Upgrade Bonus up to ₹3,000*
• Pay ₹1,499 and get Portable Blender worth of ₹3,999*
• 5 Years Warranty*
ಎಲ್ಇಡಿ ಟಿವಿ
• 55 LED starts from ₹34,990*
• 65 LED starts from ₹48,990*
• 75 LED starts from ₹67,990*
• 85 LED starts from ₹1,32,990*
• 100 LED starts from ₹2,72,999*
• With Bluetooth Speaker worth of ₹3,999*
ಡಿಶ್ ವಾಶರ್
• Cash Back up to ₹5,000*
• Fixed EMI of ₹1,950*
• Pay ₹1,999 & get Aristocrat Strolley Bag worth ₹6,600*
ಏರ್ ಕಂಡೀಷನರ್
• Upgrade Bonus up to ₹6,000*
• With standard Installation*
• Fixed EMI of ₹1,999*
• 5 Years Comprehensive Warranty*
ರೋಬೋ & ಥ್ರೀರೋ
ಬೆಂಡ್ ವ್ಯಾಕ್ಯೂಮ್ ಕ್ಲೀನರ್
• Cash Back up to 15%, Max ₹3,000*
• Forbes Fully Automatic Station now @ ₹69,990* & Get K22 Super Silent Vaccum Cleaner FREE worth ₹14,999*
ಮೈಕ್ರೋವೇವ್ ಓವನ್
• Cash Back up to ₹3,000*
• NEW ARRIVAL - Microwave with Airfryer*
• Lowest EMI Startng at ₹990*
• Portable Blender worth ₹3,999*
ಹರ್ಷೋತ್ಸವ
ವಾರ್ಷಿಕ ಸಂಭ್ರಮಾಚರಣೆ
18th - 22nd March 2026
ಉಲ್ಲಾಸಭರಿತ ಎಂಗೇಜಿಂಗ್ ಚಟುವಟಿಕೆ
ಆಕರ್ಷಕ ಹರ್ಷೋತ್ಸವ ಗಿಫ್ಟ್ ಹ್ಯಾಂಪರ್ಸ್
ಹೊಸ ವಸ್ತು-ವೈವಿಧ್ಯಗಳ ಲಾಂಚ್
ಇನ್ಸ್ಟಂಟ್ ಲಕ್ಕಿ ಡ್ರಾನೊಂದಿಗೆ ಖಚಿತ ಉಡುಗೊರೆ
ಮೆಗಾ ಇಎಮ್ಐ ಲಕ್ಕಿ ಡ್ರಾ
'ಹರ್ಷೋತ್ಸವ'ದ ಸಂಭ್ರಮಾಚರಣೆ ಕೊನೆಯ 2 ದಿನ ಮಾತ್ರ. ನಿಮಗಿಷ್ಟವಾದ ವಸ್ತು-ವೈವಿಧ್ಯಗಳನ್ನು ಹತ್ತು ಹಲವು ಆಕರ್ಷಕ ಕೊಡುಗೆಗಳೊಂದಿಗೆ ಖರೀದಿಸುವ ಅವಕಾಶವನ್ನು ಮಿಸ್ ಮಾಡದಿರಿ. ಬನ್ನಿ, ಪಾಲ್ಗೊಳ್ಳಿ, ಇದು ನಿಮಗೆಂದೇ ರೂಪಿಸಿದ ಶಾಪಿಂಗ್ ಹಬ್ಬ, 'ಹರ್ಷೋತ್ಸವ'.
Cashback up to ₹15,000 BAJAJ FINANCE
Cashback up to ₹31,000 HDB FINANCIAL SERVICES
Instant Discount up to ₹10,000 HDFC BANK
Instant Discount up to ₹3,000 ICICI Bank
Cashback up to ₹22,500 IDFC FIRST Bank
Instant Discount up to 7.5% Canara Bank
Instant Discount up to ₹10,000 Bank of Baroda Credit Card
AMERICAN EXPRESS
AXIS BANK
DBS
FEDERAL BANK
SBI card
IndusInd Bank
kotak Kotak Mahindra Bank
TVS CREDIT
YES BANK
ಇನ್ಸ್ಟಂಟ್ ಲಕ್ಕಿ ಡ್ರಾನೊಂದಿಗೆ ಖಚಿತ ಉಡುಗೊರೆ
Microwave Ovens
Air Conditioners
LED TVs
Panasonic Electric Cookers
Air Fryers
Panasonic Mixier Grinders
Smartwatches
Redmi Smartphones
...ಜೊತೆಗೆ ಇನ್ನಷ್ಟು ಉಡುಗೊರೆಗಳು
ಇಎಮ್ಐ ಲಕ್ಕಿ ಡ್ರಾ
Chance to win 2 LED TVs, 2 refrigerators, 2 washing machines, 1 air-conditioner, 4 microwave ovens and 1 party speakers, all from LG
BLUE STAR
BOSCH
Electrolux
Godrej
Haier
Hisense
IFB
LG
LIEBHERR
LLOYD
MITSUBISHI ELECTRIC
Panasonic
SAMSUNG
SONY
TCL
VOLTAS
Whirlpool
Conditions apply. Offers applicable on select models. Models shown are indicative. Offer valid till stocks last. Finance at the sole discretion of the financier.
Finance available only within city limits. Taxes applicable on Lucky Draw gifts.
Scan for Location
ಉಳ್ಳಾಲ್ ಮುಖ್ಯ ರಸ್ತೆ, ಜ್ಞಾನ ಗಂಗಾ ನಗರ, ಜ್ಞಾನಭಾರತಿ ಪೋಸ್ಟ್,
ಬೆಂಗಳೂರು - 560056. Ph: 080-29919904/5/6, 45032774
eHarsha.India
digital_harsha
www.harshaindia.com
ಜವಹರಲಾಲ್ ನೆಹರು ರಸ್ತೆ, ಫೀಲ್ಡ್ ಮಾರ್ಷಲ್ ಜನರಲ್ ಕಾರ್ಯಪ್ಪ ಪಾರ್ಕ್ ಸಮೀಪ,
ರಾಜರಾಜೇಶ್ವರಿ ನಗರ, ಬೆಂಗಳೂರು - 560098. Ph: 080-26983100, 35188342
Scan for Location

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	23,002
ಇಂದಿನ ಅಂತ್ಯ:	23,114
ದಿನದ ಗರಿಷ್ಠ:	23,345
	112

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹485
	12 ಕ್ಕೆ	₹72
ಮೈಸೂರು:	100 ಕ್ಕೆ	₹490

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹212
ಆರ್‌ಎಸ್‌ಎಸ್-5	₹206
ಗುಡ್ ಲಾಟ್	₹188

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹339-690
ದ್ವಿತಳಿ (ಬಿ.ವಿ)	₹213-838

ಮುದ್ರೆಮನೆ ಕಾಫಿ

ಎಪಿ	₹23400
ಎಸಿ	₹13440
ಆರ್‌ಪಿ	₹18650
ಆರ್‌ಸಿ	₹10100

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1760 (1760)
ಸೋಯಾ (ರಿಫೈನ್ಡ್)	₹1500 (1440)
ಸೂರ್ಯಕಾಂತಿ (ರಿಫೈನ್ಡ್)	₹1730 (1700)
ಪಾಮೋಲಿನ್	₹1440 (1425)

ಮುಂಬೈ ಧಾರಣೆ (ಶೇಂಗಾ)

20-03-2026

ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1770 (1770)
ಒಂದು ವಾರದ ಡೆಲಿವರಿ	1765 (1765)
ಪಾಮ್ ವಾರದ ಡೆಲಿವರಿ	1438 (1423)
ಸೂರ್ಯಕಾಂತಿ ಎಣ್ಣೆ ಕಚ್ಚಾ	1600 (1575)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,46,400 (1,53,000)
ಬೆಳ್ಳಿ ಕೆ.ಜಿಗೆ	2,32,000 (2,48,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹28500-28500
ದಾವಣಗೆರೆ	₹11400-11400
ತರೀಕೆರೆ	₹16900-16900

ಐ.ಟಿ ಕಾಯ್ದೆ: ಅಧಿಸೂಚನೆ ಪ್ರಕಟ

ಏಪ್ರಿಲ್ 1ರಿಂದ ಹೊಸ ಆದಾಯ ತೆರಿಗೆ ಕಾಯ್ದೆಯ ನಿಯಮಗಳು ಜಾರಿ

ನವದೆಹಲಿ (ಪಿಟಿಐ): ಆದಾಯ ತೆರಿಗೆ ಕಾಯ್ದೆ–2026ರ ಅನುಷ್ಠಾನಕ್ಕೆ ಅಗತ್ಯವಿರುವ ನಿಯಮಗಳ ಅಧಿಸೂಚನೆಯನ್ನು ಕೇಂದ್ರೀಯ ನೇರ ತೆರಿಗೆಗಳ ಮಂಡಳಿಯು (ಸಿಬಿಡಿಟಿ) ಶುಕ್ರವಾರ ಪ್ರಕಟಿಸಿದೆ.

ಈ ಹೊಸ ನಿಯಮಗಳು ಏಪ್ರಿಲ್ 1ರಿಂದ ಜಾರಿಗೆ ಬರಲಿವೆ ಎಂದು ಗೆಜೆಟ್ ಅಧಿಸೂಚನೆಯಲ್ಲಿ ತಿಳಿಸಿದೆ.

ಬ್ಯಾಂಕ್‌ಗಳಲ್ಲಿ ನಗದು ಠೇವಣಿ ಮಾಡುವುದು/ ಹಿಂಪಡೆಯುವಿಕೆ, ಮೋಟಾರು ವಾಹನಗಳು ಹಾಗೂ ಆಸ್ತಿ ಖರೀದಿ ಮತ್ತು ಹೋಟೆಲ್ ಬಿಲ್‌ಗಳ ಪಾವತಿಗಾಗಿ ಪ್ಯಾನ್ ಉಲ್ಲೇಖಿಸಿ ನಡೆಸಬಹುದಾದ ವಹಿವಾಟು ಮಿತಿಯನ್ನು ಹೊಸ ಕಾಯ್ದೆಯು ಹೆಚ್ಚಿಸಿದೆ.

ಆರು ದಶಕಗಳಷ್ಟು ಹಳೆಯದಾದ 1961ರ ಆದಾಯ ತೆರಿಗೆ (ಐ.ಟಿ) ಕಾಯ್ದೆಯನ್ನು ಬದಲಿಸಲು, ಸಂಸತ್ತು 2025ರ ಆಗಸ್ಟ್ 12ರಂದು ಹೊಸ ಆದಾಯ ತೆರಿಗೆ ಮಸೂದೆಗೆ ಅಂಗೀಕಾರ ನೀಡಿತ್ತು. ಆಗಸ್ಟ್ 21ರಂದು ರಾಷ್ಟ್ರಪತಿಯವರು ಈ ಮಸೂದೆಗೆ ಅಂಕಿತ ಹಾಕಿದ ಬಳಿಕ ಇದು ಕಾಯ್ದೆಯಾಯಿತು.

ಇದು ಯಾವುದೇ ಹೊಸ ತೆರಿಗೆ ದರವನ್ನು ವಿಧಿಸುವುದಿಲ್ಲ. ಸಂಕೀರ್ಣವಾಗಿರುವ ಹಳೆಯ ಆದಾಯ ತೆರಿಗೆ ಕಾಯ್ದೆಯ ಭಾಷೆಯು, ತೆರಿಗೆದಾರರಿಗೆ ಸರಳವಾಗಿ ಅರ್ಥಮಾಡಿಕೊಳ್ಳುವಂತೆ ಭಾಷೆಯನ್ನು ಸರಳೀಕರಿಸಲಾಗಿದೆ.

ಹಳೆಯ ಕಾಯ್ದೆಯಲ್ಲಿದ್ದ ಅನಗತ್ಯ ನಿಬಂಧನೆಗಳು ಮತ್ತು ಸಂಕೀರ್ಣ ಭಾಷೆಯನ್ನು ಹೊಸ ಕಾಯ್ದೆಯು ತೆಗೆದುಹಾಕಿದೆ. 1961ರ ಆದಾಯ ತೆರಿಗೆ ಕಾಯ್ದೆಯಲ್ಲಿ 819 ಸೆಕ್ಷನ್‌ಗಳಿದ್ದವು. ಅದು ಈಗ 536ಕ್ಕೆ ಇಳಿದಿದೆ. ಅಧ್ಯಾಯಗಳು ಸಹ 47ರಿಂದ 23ಕ್ಕೆ ಇಳಿದಿವೆ. ಹಳೆಯ ಕಾಯ್ದೆಯಲ್ಲಿ 5.12 ಲಕ್ಷ ಪದಗಳಿದ್ದವು. ಅವು ಈಗ 2.6 ಲಕ್ಷಕ್ಕೆ ಕಡಿಮೆ ಆಗಿವೆ. ಕಾಯ್ದೆ ಬಗ್ಗೆ ಹೆಚ್ಚಿನ ಸ್ಪಷ್ಟತೆ ಮೂಡಿಸಲು ಇದೇ ಮೊದಲ ಬಾರಿಗೆ 39 ಹೊಸ ಕೋಷ್ಟಕಗಳು ಮತ್ತು 40 ಹೊಸ ಸೂತ್ರಗಳನ್ನು ಪರಿಚಯಿಸಲಾಗಿದೆ.

ಹೊಸ ನಿಯಮಗಳು ಬಂಡವಾಳ ಗಳಿಕೆ, ಷೇರುಪೇಟೆ ವಿನಿಮಯ ವಹಿವಾಟುಗಳು ಮತ್ತು ಎನ್‌ಆರ್‌ಐಗಳ ತೆರಿಗೆಗೆ ಸಂಬಂಧಿಸಿದಂತೆ ಕಠಿಣ ನಿಯಮಗಳನ್ನು ಹೊಂದಿವೆ.

ಮನೆ ಬಾಡಿಗೆ ಭತ್ಯೆ (ಎಚ್‌ಆರ್‌ಎ) ವಿನಾಯಿತಿ ಲೆಕ್ಕ ಹಾಕುವಾಗ ಪ್ರಸ್ತುತ ಮುಂಬೈ, ದೆಹಲಿ, ಕೋಲ್ಕತ್ತ ಮತ್ತು ಚೆನ್ನೈನಲ್ಲಿ ವೇತನದಾರರು ತಮ್ಮ ಸಂಬಳದ ಶೇ 50ರಷ್ಟು ವಿನಾಯಿತಿ ಪಡೆಯಲು ಅವಕಾಶ ಇದೆ.

ಇದೀಗ ಹೊಸ ನಿಯಮಗಳಡಿ ಬೆಂಗಳೂರು, ಹೈದರಾಬಾದ್, ಪುಣೆ ಮತ್ತು ಅಹಮದಾಬಾದ್‌ನಲ್ಲಿನ ವೇತನ ಪಡೆಯುವ ಉದ್ಯೋಗಿಗಳಿಗೂ ಸಹ ಈ ಪ್ರಯೋಜನ ದೊರೆಯಲಿದೆ. ಉಳಿದ ಪ್ರದೇಶದಲ್ಲಿನ ವೇತನದಾರರು ಶೇ 40ರಷ್ಟು ಮಿತಿಗೆ ಅರ್ಹರಾಗಿದ್ದಾರೆ.

ಆದಾಯ ತೆರಿಗೆ ಕಡಿತದ ಪ್ರಯೋಜನ ಪಡೆಯಲು ಬಾಡಿಗೆದಾರ-ಭೂಮಾಲೀಕರ ಸಂಬಂಧವನ್ನು ಬಹಿರಂಗಪಡಿಸುವುದು ಕಡ್ಡಾಯವಾಗಿದೆ ಎಂದು ಅಧಿಸೂಚನೆಯಲ್ಲಿ ಹೇಳಲಾಗಿದೆ.

₹50 ಸಾವಿರ ಹಾಗೂ ಅದಕ್ಕಿಂತ ಹೆಚ್ಚಿನ ಮೊತ್ತ ಜಮೆ ಮಾಡುವಾಗಲೆಲ್ಲ ಪ್ಯಾನ್ ಸಂಖ್ಯೆ ಉಲ್ಲೇಖಿಸುವ ಬದಲು, ವ್ಯಕ್ತಿಯೊಬ್ಬನ ಕಡೆಯಿಂದ ಆಗುವ ವಾರ್ಷಿಕ ಒಟ್ಟು ಜಮೆ ಮೊತ್ತ ಅಥವಾ ಹಣ ಹಿಂಪಡೆಯುವ ಮೊತ್ತವು ₹10 ಲಕ್ಷ ಮೀರಿದ್ದರೆ ಮಾತ್ರ ಪ್ಯಾನ್ ಉಲ್ಲೇಖ ಕಡ್ಡಾಯ ಎಂದು ಹೇಳಲಾಗಿದೆ.

ಕ್ರಿಪ್ಟೊ ವಿನಿಮಯ ಕೇಂದ್ರಗಳು ತಮ್ಮಲ್ಲಿನ ಕೆಲವು ಮಾಹಿತಿಗಳನ್ನು ತೆರಿಗೆ ಇಲಾಖೆಯ ಜೊತೆ ಹಂಚಿಕೊಳ್ಳುವುದು ಕಡ್ಡಾಯ ಎಂದು ನಿಯಮಗಳಲ್ಲಿ ಹೇಳಲಾಗಿದೆ. ಅಲ್ಲದೆ, ಕೇಂದ್ರೀಯ ಬ್ಯಾಂಕ್‌ನ ಡಿಜಿಟಲ್ ಕರೆನ್ಸಿಯು (ಸಿಬಿಡಿಸಿ) ಒಪ್ಪಿತ ಎಲೆಕ್ಟ್ರಾನಿಕ್ ಪಾವತಿ ವಿಧಾನಗಳಲ್ಲಿ ಒಂದು ಎಂದು ಹೇಳಿದೆ.

ದ್ವಿಚಕ್ರ ವಾಹನ ಸೇರಿದಂತೆ ₹5 ಲಕ್ಷಕ್ಕಿಂತ ಹೆಚ್ಚಿನ ಬೆಲೆಯ ಯಾವುದೇ ಮೋಟಾರು ವಾಹನ ಖರೀದಿಸುವಾಗ ಪ್ಯಾನ್ ಉಲ್ಲೇಖಿಸುವುದು ಕಡ್ಡಾಯ ಆಗುತ್ತದೆ.

ಹೋಟೆಲ್ ಅಥವಾ ರೆಸ್ಟೋರೆಂಟ್ ಬಿಲ್ ಮೊತ್ತ, ಸಭಾಭವನಗಳಿಗೆ ಅಥವಾ ಬ್ಯಾಂಕ್ವೆಟ್ ಹಾಲ್‌ಗಳಿಗೆ ಅಥವಾ ಕಾರ್ಯಕ್ರಮ ನಿರ್ವಹಣೆ ಮಾಡುವ ವ್ಯಕ್ತಿಗೆ ಮಾಡುವ ಪಾವತಿ ಮೊತ್ತ ₹1 ಲಕ್ಷಕ್ಕಿಂತ ಹೆಚ್ಚಿದ್ದರೆ ಪ್ಯಾನ್ ಸಂಖ್ಯೆ ನಮೂದು ಕಡ್ಡಾಯ ಆಗಲಿದೆ.

ಈಗಿರುವ ನಿಯಮಗಳ ಪ್ರಕಾರ ಹೋಟೆಲ್ ಅಥವಾ ರೆಸ್ಟೋರೆಂಟ್ ಶುಲ್ಕವು ₹50 ಸಾವಿರಕ್ಕಿಂತ ಹೆಚ್ಚಿದ್ದರೆ ಪ್ಯಾನ್ ಸಂಖ್ಯೆ ಉಲ್ಲೇಖಿಸಬೇಕಾಗುತ್ತದೆ.

‘ತೆರಿಗೆ ವಂಚನೆ ಪತ್ತೆಗೆ ತಂತ್ರಜ್ಞಾನ ಬಳಸಿ’

ನವದೆಹಲಿ (ಪಿಟಿಐ): ಉದ್ದೇಶಪೂರ್ವಕವಾಗಿ ತೆರಿಗೆ ವಂಚಿಸುವವರನ್ನು ಪತ್ತೆ ಹಚ್ಚಲು ತಂತ್ರಜ್ಞಾನವನ್ನು ಬಳಸುವಂತೆ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳಿಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೂಚನೆ ನೀಡಿದ್ದಾರೆ.

ಆದಾಯ ತೆರಿಗೆ ಕಾಯ್ದೆಯ ರಾಷ್ಟ್ರವ್ಯಾಪಿ ಜಾಗೃತಿ ಅಭಿಯಾನ ಉದ್ದೇಶಿಸಿ ಮಾತನಾಡಿದ ಅವರು, ಏಪ್ರಿಲ್ 1ರಿಂದ ಹೊಸ ಆದಾಯ ತೆರಿಗೆ ಕಾಯ್ದೆ ಜಾರಿಗೆ ಬರಲಿದೆ. ಭಾರತವನ್ನು ಅತ್ಯಂತ ತೆರಿಗೆ ಸ್ನೇಹಿ ರಾಷ್ಟ್ರವಾಗಿ ಮಾಡಬೇಕಿದೆ ಎಂದು ಹೇಳಿದ್ದಾರೆ.

ಇಲಾಖೆಯು, ಪ್ರಾಮಾಣಿಕ ತೆರಿಗೆದಾರರಿಗೆ ಅನುಕೂಲ ಮಾಡಿಕೊಡಲಿದೆ. ಆದರೆ, ನೀವು ತೆರಿಗೆ ವಂಚನೆ ಮಾಡಿದರೆ, ವ್ಯವಸ್ಥೆಯು ನಿಮ್ಮನ್ನು ಪತ್ತೆ ಹಚ್ಚಲಿದೆ ಎಂದರು.

ಸ್ಥಳೀಯ ಭಾಷೆಗಳಲ್ಲಿ ಹೊಸ ತೆರಿಗೆ ಕಾಯ್ದೆಯ ಬಗ್ಗೆ ಜನರಿಗೆ ಅರಿವು ಮೂಡಿಸಲು ದೇಶದಾದ್ಯಂತ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುವಂತೆ ತೆರಿಗೆ ಅಧಿಕಾರಿಗಳಿಗೆ ಸಚಿವರು ಸೂಚಿಸಿದ್ದಾರೆ.

ಸುದ್ದಿ 2 ನಿಮಿಷ

ರೂಪಾಯಿ ಮೌಲ್ಯ 64 ಪೈಸೆ ಕುಸಿತ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 64 ಪೈಸೆಯಷ್ಟು ಕುಸಿದಿದೆ.

ವಹಿವಾಟಿನ ಅಂತ್ಯದ ವೇಳೆಗೆ ರೂಪಾಯಿ ಮೌಲ್ಯವು ₹93.53 ಆಗಿದೆ. ಇದು ರೂಪಾಯಿಯ ಈವರೆಗಿನ ಸಾರ್ವಕಾಲಿಕ ಕನಿಷ್ಠ ಮಟ್ಟವಾಗಿದೆ.

ವಹಿವಾಟಿನ ಆರಂಭದಲ್ಲಿ ರೂಪಾಯಿ ಮೌಲ್ಯವು ಡಾಲರ್ ಎದುರು ₹92.92ರಷ್ಟು ಇತ್ತು. ದಿನದ ನಡುವೆ ಅದು ₹93ರ ಗಡಿ ದಾಟಿ, ವಹಿವಾಟಿನ ಕೊನೆಯಲ್ಲಿ ಮೌಲ್ಯವು ₹93.53 ಆಗಿದೆ.

ಡಾಲರ್ ಮೌಲ್ಯದಲ್ಲಿನ ಏರಿಕೆ ಮತ್ತು ಪಶ್ಚಿಮ ಏಷ್ಯಾದ ಸಂಘರ್ಷದಿಂದ ವಿದೇಶಿ ಹೂಡಿಕೆದಾರರು ನಿರಂತರವಾಗಿ ದೇಶದ ಷೇರು ಮಾರುಕಟ್ಟೆಯಿಂದ ಬಂಡವಾಳವನ್ನು ವಾಪಸ್ ಪಡೆಯುತ್ತಿರುವುದು ರೂಪಾಯಿ ಮೌಲ್ಯದ ಇಳಿಕೆಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಪ್ರತಿ ಬ್ಯಾರಲ್‌ಗೆ 180 ಡಾಲರ್ ತಲುಪಬಹುದು ಎನ್ನಲಾಗಿದೆ. ಇದು ಸಹ ರೂಪಾಯಿ ಮೌಲ್ಯದ ಮೇಲೆ ಒತ್ತಡ ಬೀರಿದೆ ಎಂದು ವಿದೇಶಿ ವರ್ತಕರು ಹೇಳಿದ್ದಾರೆ.

ಗುರುವಾರದ ವಹಿವಾಟಿನಲ್ಲಿ ದೇಶದ ಷೇರುಪೇಟೆಯಿಂದ ವಿದೇಶಿ ಹೂಡಿಕೆದಾರರು ₹7,558 ಕೋಟಿ ಬಂಡವಾಳವನ್ನು ವಾಪಸ್ ಪಡೆದಿದ್ದಾರೆ.

ಸೆನ್ಸೆಕ್ಸ್ 325 ಅಂಶ ಏರಿಕೆ

ಮುಂಬೈ (ಪಿಟಿಐ): ಬ್ಯಾಂಕ್‌ಗಳು, ಮಾಹಿತಿ ತಂತ್ರಜ್ಞಾನ ಮತ್ತು ಲೋಹದ ಕಂಪನಿಗಳ ಷೇರುಗಳ ಖರೀದಿ ಹೆಚ್ಚಳದಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಶುಕ್ರವಾರ ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 325 ಅಂಶ ಏರಿಕೆಯಾಗಿ, 74,532ಕ್ಕೆ ವಹಿವಾಟು ಅಂತ್ಯಗೊಂಡಿದೆ. ವಹಿವಾಟಿನ ವೇಳೆ 1,079 ಅಂಶ ಜಿಗಿತ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 112 ಅಂಶ ಹೆಚ್ಚಳವಾಗಿ, 23,114ಕ್ಕೆ ಕೊನೆಗೊಂಡಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 1.88ರಷ್ಟು ಏರಿಕೆಯಾಗಿದೆ. ಪ್ರತಿ ಬ್ಯಾರಲ್ ದರವು 110.7 ಡಾಲರ್ ಆಗಿದೆ.

ಗುರುವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ 2,496 ಮತ್ತು ನಿಫ್ಟಿ 775 ಅಂಶ ಕುಸಿದಿತ್ತು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

6th YEAR ANNIVERSARY

In the ever-lasting memory of Late,
Shri. Sudheer Makki Subramanya
(20-05-1975 - 21-03-2020)
"We remember you each day. You always live in our hearts. Your dedication and hard work has become our benchmark to reach higher goals in times to come. Keep us blessed always".
Deeply remembered by:-
Family, Friends and Employees of
DHRUV COMPUSOFT CONSULTANCY PVT LTD

ಕೃಷ್ಣ ಕುಮಾರ್ ಠಾಕೂರ್ ಎನ್‌ಎಂಡಿಸಿ ನಿರ್ದೇಶಕ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಭಾರತೀಯ ರೈಲ್ವೆ ಸಿಬ್ಬಂದಿ ಸೇವೆಯ (ಐಆರ್‌ಪಿಎಸ್) 1998ನೇ ಬ್ಯಾಚ್‌ನ ಅಧಿಕಾರಿ ಕೃಷ್ಣ ಕುಮಾರ್ ಠಾಕೂರ್ ಅವರು ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮ ಲಿಮಿಟೆಡ್‌ನ (ಎನ್‌ಎಂಡಿಸಿ) ನಿರ್ದೇಶಕರಾಗಿ (ಸಿಬ್ಬಂದಿ) ಗುರುವಾರ ಅಧಿಕಾರ ಸ್ವೀಕರಿಸಿದರು.

ಕೃಷ್ಣ ಕುಮಾರ್ ಠಾಕೂರ್

ಭಾರತೀಯ ರೈಲ್ವೆಯಲ್ಲಿ ಎರಡೂವರೆ ದಶಕ ಸೇವೆ ಸಲ್ಲಿಸಿರುವ ಕೃಷ್ಣ ಕುಮಾರ್ ಅವರು, ಮಾನವ ಸಂಪನ್ಮೂಲಕ ನಿರ್ವಹಣೆ ಮತ್ತು ಆಡಳಿತ ವಿಭಾಗದಲ್ಲಿಯೂ ಅಗಾಧ ಅನುಭವವನ್ನು ಹೊಂದಿದ್ದಾರೆ.

ಕೃಷ್ಣ ಕುಮಾರ್ ಅವರು ಬಿಹಾರದ ಬಾಗಲಪುರದ ‘ತಿಲಕಾ ಮಾಂಝಿ ವಿಶ್ವವಿದ್ಯಾಲಯ’ದಲ್ಲಿ ಸಾಹಿತ್ಯ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ.

ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸ್‌ನಲ್ಲಿ ಮಾನವ ಸಂಪನ್ಮೂಲ ವಿಷಯದಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಮಾಡಿದ್ದಾರೆ.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಅಡಿಕೆ ಧಾರಣೆ

ಕುಮಟಾ		ಕುಮಟಾ (ಮುಂದು.)		ಯಲ್ಲಾಪುರ	
ಚಾಲಿ	43799-49499			ಆಪಿ	70115-98930
ಚಿಪ್ಪು	25289-37099			ಬಿಳಿಗೋಟು	16109-41099
ಕೋಕ	13177-34299			ಕೋಕ	12900-34899
ಹೊಸಚಾಲಿ	38610-47019			ಹಳೆ ಚಾಲಿ	49709-49709

ಶಿವಮೊಗ್ಗ		ಶಿರಸಿ			
ಸರಕು	54300-81740	ಬೆಟ್ಟೆ	40011-50699	ಹೊಸ ಚಾಲಿ	38809-48299
ರಾಶಿ	45199-56509	ಬಿಳಿಗೋಟು	26099-39700	ಕೆಂಪುಗೋಟು	16899-39399
ಗೊರಬಲು	22109-37089	ಚಾಲಿ	43699-48099	ರಾಶಿ	49821-57430
ಸಿದ್ದಾಪುರ		ಕೆಂಪುಗೋಟು	24199-36099	ತಟ್ಟಿಬೆಟ್ಟೆ	38969-51290
ಬಿಳಿಗೋಟು	27899-37699	ರಾಶಿ	48598-54099		

ಸಿದ್ದಾಪುರ (ಮುಂದು.)	
ಚಾಲಿ	40899-47899
ಕೋಕ	22939-32899
ಕೆಂಪುಗೋಟು	29699-34899
ರಾಶಿ	48309-52899
ತಟ್ಟಿಬೆಟ್ಟೆ	38089-46619

ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನ: ಡಿಜಿಸಿಎ ನಿರ್ದೇಶನ

ಪ್ರಜಾವಾಣಿ ವಾರ್ತೆ

ಮುಂಬೈ: ಇರಾನ್ ಮೇಲೆ ಅಮೆರಿಕ–ಇಸ್ರೇಲ್ ಜಂಟಿಯಾಗಿ ಯುದ್ಧ ಸಾರಿದ ಬಳಿಕ ಸೃಷ್ಟಿ ಯಾಗಿರುವ ಪಶ್ಚಿಮ ಏಷ್ಯಾ ಬಿಕ್ಕಟ್ಟಿನಿಂದ ವಿಮಾನ ಯಾನ ಸಂಸ್ಥೆಗಳು ಪಶ್ಚಿಮ ಏಷ್ಯಾ, ಕೊಲ್ಲಿ ರಾಷ್ಟ್ರಗಳ 9 ವಾಯುಪ್ರದೇಶಗಳಲ್ಲಿ ಹಾರಾಟ ನಡೆಸದಂತೆ ಭಾರತೀಯ ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ) ಸೂಚನೆ ನೀಡಿದೆ.

ಇತ್ತೀಚೆಗೆ ನಡೆಸಿದ ಸುರಕ್ಷತೆ– ಅಪಾಯಗಳ ಮೌಲ್ಯಮಾಪನದ ವರದಿಯನ್ನು ಐರೋಪ್ಯ ಒಕ್ಕೂಟ ವಿಮಾನ ಸುರಕ್ಷತಾ ಸಂಸ್ಥೆಯು ಬಿಡುಗಡೆಗೊಳಿಸಿದ ಬಳಿಕ ಡಿಜಿಸಿಎ ಈ ನಿರ್ದೇಶನ ನೀಡಿದೆ.

ಯುದ್ಧದ ಬಳಿಕ ವಿಮಾನಯಾನಕ್ಕೆ ಹೆಚ್ಚು ಆತಂಕದ ವಾತವರಣ ನಿರ್ಮಾಣವಾಗಿದೆ. ಈ ದಾಳಿಗೆ ಪ್ರತೀಕಾರವಾಗಿ ಇರಾನ್ ದಾಳಿಗಳನ್ನು ಮಾಡುವುದಾಗಿ ಘೋಷಿಸಿದೆ. ಹೆಚ್ಚಿನ ಅಪಾಯದ ವಲಯವು ಎಲ್ಲ ವಿಮಾನಗಳ ಹಾರಾಟದ ಎತ್ತರವನ್ನು ಒಳಗೊಂಡಿದ್ದು, ಬಹರೇನ್, ಇರಾನ್, ಇರಾಕ್, ಇಸ್ರೇಲ್, ಜೋರ್ಡನ್, ಕುವೈತ್, ಲೆಬನಾನ್, ಕತಾರ್, ಒಮಾನ್, ಯುನೈಟೆಡ್ ಅರಬ್ ಎಮಿರೇಟ್ಸ್ ಹಾಗೂ ಸೌದಿ ಅರೇಬಿಯಾದ ವಾಯುಪ್ರದೇಶಗಳಿಗೆ ಅನ್ವಯಿಸಲಿದೆ. ಕೆಲವು ನಿರ್ದಿಷ್ಟ ನಿಯಮಗಳಿಗೆ ಒಳಪಟ್ಟು ಭಾರತದ ವಿಮಾನಯಾನ ಸಂಸ್ಥೆಗಳು ಒಮಾನ್ ಹಾಗೂ ಸೌದಿ ಅರೇಬಿಯಾದ ವಾಯುಪ್ರದೇಶಗಳನ್ನು ಬಳಸಲು ಅವಕಾಶವಿದೆ ಎಂದು ಸ್ಪಷ್ಟಪಡಿಸಿದೆ.

ಮಾರ್ಚ್ 19ರಂದು ಈ ಸಲಹೆ ನೀಡಲಾಗಿದ್ದು, ಮಾರ್ಚ್ 28ರವರೆಗೂ ಜಾರಿಯಲ್ಲಿರಲಿದೆ.

ತೈಲ ಮಾರುಕಟ್ಟೆಯಲ್ಲಿ ವ್ಯತ್ಯಯ: ಐಇಎ ಸಲಹೆ

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷವು ತೈಲ ಮಾರುಕಟ್ಟೆಯ ಮೇಲೆ ಬೀರಿರುವ ಪರಿಣಾಮದಿಂದ ಪಾರಾಗಲು ಅಂತರರಾಷ್ಟ್ರೀಯ ಇಂಧನ ಏಜೆನ್ಸಿಯು (ಐಇಎ) ಕೆಲವು ಸಲಹೆಗಳನ್ನು ನೀಡಿದೆ.

ಹೆದ್ದಾರಿಯಲ್ಲಿ ವೇಗದ ಮಿತಿಯನ್ನು ಗಂಟೆಗೆ ಕನಿಷ್ಠ 10 ಕಿ.ಮೀಟರ್‌ನಷ್ಟು ತಗ್ಗಿಸಿ, ಅಡುಗೆ ಮಾಡಲು ವಿದ್ಯುತ್ ಬಳಕೆ ಮಾಡಿ, ವಿಮಾನ ಪ್ರಯಾಣವನ್ನು ಆದಷ್ಟು ಕಡಿಮೆ ಮಾಡಿ ಪರ್ಯಾಯ ಮಾರ್ಗದಲ್ಲಿ ಸಂಚರಿಸಿ, ಸಮೂಹ ಸಂಚಾರ ಸಾರಿಗೆಯನ್ನು ಬಳಕೆ ಮಾಡಿ, ಸಾಧ್ಯವಿರುವ ಕಡೆಗಳಲ್ಲಿ ವರ್ಕ್ ಫ್ರಂ ಹೋಂಗೆ ಅವಕಾಶ ನೀಡಿ ಎಂದು ಅದು ವರದಿಯಲ್ಲಿ ಹೇಳಿದೆ.

ಸಂಘರ್ಷದಿಂದಾಗಿ ಜಾಗತಿಕ ತೈಲ ಮಾರುಕಟ್ಟೆಯ ಇತಿಹಾಸದಲ್ಲಿಯೇ ಕಂಡುಕೇಳರಿಯದಷ್ಟು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ. ತುರ್ತು ಸಂದರ್ಭಕ್ಕಾಗಿ ಮೀಸಲಿಡಲಾಗಿದ್ದ 400 ಮಿಲಿಯನ್ ಬ್ಯಾರೆಲ್ ತೈಲವನ್ನು ಬಿಡುಗಡೆ ಮಾಡಲು ಐಇಎ ಸದಸ್ಯ ರಾಷ್ಟ್ರಗಳು ಮಾರ್ಚ್ 11ರಂದು ಒಪ್ಪಿಗೆ ನೀಡಿವೆ. ಆದರೆ ಇದು ಪೂರ್ಣಪ್ರಮಾಣದ ಅಗತ್ಯವನ್ನು ಪೂರೈಸುವುದಿಲ್ಲ. ಹೀಗಾಗಿ ಪರ್ಯಾಯ ಮಾರ್ಗಗಳ ಮೂಲಕ ಒತ್ತಡವನ್ನು ಕಡಿಮೆ ಮಾಡಲು ಈ ಸಲಹೆಗಳನ್ನು ನೀಡಿದೆ.

ಮೂರನೇ ವರ್ಷದ ಪುಣ್ಯಸ್ಮರಣೆ

“ಸವೆದಷ್ಟು ಸವೆಯದ ಶ್ರೀಗಂಧದ ಗುಣ”
ಶ್ರೀಮತಿ ಎಮ್.ಸುಭದ್ರ ಬಾಯಿ
(ದಿವಂಗತ ಕೆ.ಮೋಹನ ರಾವ್ ಇವರ ಧರ್ಮಪತ್ನಿ)
ನೀಲಗಿರಿಹಳ್ಳಿ, ಕೆ.ಜಿ.ಎಫ್
(ಜನನ: 02–05–1935 ನಿಧನ: 21–03–2023)
ನೀವು ನಮ್ಮನ್ನಗಲಿ ಮೂರು ವರ್ಷ ಕಳೆದರು, ನಿಮ್ಮ ನೆನಪು ನಮ್ಮೆಲ್ಲರ ಮನದಲ್ಲಿ ಸದಾ ಅಮರವಾಗಿದೆ.
ಇಂತಿ ದುಃಖತಪ್ತರು:
ಮಕ್ಕಳು, ಕುಟುಂಬ ವರ್ಗದವರು ಹಾಗೂ ಬಂಧು–ಮಿತ್ರರು

ಪಶ್ಚಿಮ ಏಷ್ಯಾ ಸಂಘರ್ಷ ಮತ್ತಷ್ಟು ಉಲ್ಬಣ

4ನೇ ವಾರಕ್ಕೆ ಕಾಲಿಟ್ಟ ಯುದ್ಧ; ಈದ್ ಉಲ್–ಫಿತ್ರ್, ನೌರುಜ್ ಮೇಲೆ ಕರಿನೆರಳು

ದುಬೈ / ನವದೆಹಲಿ (ಎಪಿ/ಪಿಟಿಐ): ಪಶ್ಚಿಮ ಏಷ್ಯಾದಲ್ಲಿ ಯುದ್ಧ ಶುಕ್ರವಾರ ತೀವ್ರಗೊಂಡಿದೆ. ಅಮೆರಿಕ– ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧವು ನಾಲ್ಕನೇ ವಾರಕ್ಕೆ ಕಾಲಿಟ್ಟಿದ್ದು, ಹೊಸದಾಗಿ ನಡೆದ ದಾಳಿಗಳಿಂದಾಗಿ ರಂಜಾನ್ ಮಾಸದ ಅಂತ್ಯ ಸೂಚಿಸುವ ಈದ್ ಉಲ್–ಫಿತ್ರ್ ಮತ್ತು ಪರ್ಷಿಯನ್ ಹೊಸ ವರ್ಷ ‘ನೌರುಜ್’ ಆಚರಣೆಗಳ ಮೇಲೆ ಕರಿಛಾಯೆ ಆವರಿಸಿದಂತಾಗಿದೆ.

ಕುವೈತ್, ಕತಾರ್, ಬಹರೇನ್ ಹಾಗೂ ಇಸ್ರೇಲ್‌ನ ತೈಲ ಸಂಸ್ಕರಣಾ ಘಟಕಗಳನ್ನು ಗುರಿಯಾಗಿಸಿ ಇರಾನ್ ವೈಮಾನಿಕ ದಾಳಿ ನಡೆಸಿದೆ.

ಕುವೈತ್‌ನ ‘ಮಿನಾ ಅಲ್– ಅಹ್ಮದಿ’ ತೈಲ ಸಂಸ್ಕರಣಾ ಘಟಕದ ಮೇಲೆ ಇರಾನ್ ದಾಳಿ ನಡೆಸಿದ್ದು, ಯಾವುದೇ ಪ್ರಾಣ ಹಾನಿಯಾಗಿಲ್ಲ. ಪ್ರತಿದಿನ ಸುಮಾರು 7.30 ಲಕ್ಷ ಬ್ಯಾರೆಲ್ ತೈಲ ಸಂಸ್ಕರಿಸುವ ಸಾಮರ್ಥ್ಯ ಹೊಂದಿರುವ ಈ ಘಟಕದ ಮೇಲೆ ಇರಾನ್ ಈ ಹಿಂದೆಯೂ ದಾಳಿ ನಡೆಸಿತ್ತು.

ದುಬೈ ನಗರದ ಮೇಲೆ ಇರಾನ್ ಗುಂಡಿನ ದಾಳಿ ನಡೆಸಿದ್ದು, ಇದನ್ನು ಅಲ್ಲಿನ ವಾಯುರಕ್ಷಣಾ ವ್ಯವಸ್ಥೆಯು ತಡೆದಿದೆ. ಬಹರೇನ್ ವಾಯುಪ್ರದೇಶ ಪ್ರವೇಶಿಸಿದ್ದ ಕ್ಷಿಪಣಿಯೊಂದನ್ನು ವಾಯುರಕ್ಷಣಾ ವ್ಯವಸ್ಥೆಯು ಹೊಡೆದುರುಳಿಸಿದೆ. ಈ ವೇಳೆ ಸಿಡಿದ ಚೂರುಗಳು ಗೋದಾಮಿನ ಮೇಲೆ ಬಿದ್ದಿದ್ದರಿಂದ ಬೆಂಕಿ ಕಾಣಿಸಿಕೊಂಡಿದೆ.

ತೈಲ ಸಮೃದ್ಧವಾದ ಪೂರ್ವ ಪ್ರಾಂತ್ಯವನ್ನು ಗುರಿಯಾಗಿಸಿ ಇರಾನ್ ಡ್ರೋನ್ ದಾಳಿ ನಡೆಸಿದ್ದು, ಅವುಗಳನ್ನು ಹೊಡೆದುರುಳಿಸಲಾಗಿದೆ ಎಂದು ಸೌದಿ ಅರೇಬಿಯಾ ತಿಳಿಸಿದೆ.

ಮೊಳಗಿದ ಸೈರನ್: ಇಸ್ರೇಲ್‌ನ ಜೆರುಸಲೇಂ ಮತ್ತು ಉತ್ತರ ಭಾಗದ ಮೇಲೆ ದಾಳಿ ನಡೆಯುವ ಬಗ್ಗೆ ಎಚ್ಚರಿಕೆ ನೀಡುವ ಸೈರನ್‌ಗಳು ಶುಕ್ರವಾರ ಮುಂಜಾನೆ ಮೊಳಗಿದವು. ಹೀಗಾಗಿ, ಜನರು ಮತ್ತೆ ಆಶ್ರಯ ತಾಣಗಳಿಗೆ ಹೋಗುವಂತಾಯಿತು. ಸಾವು–ನೋವುಗಳ ಬಗ್ಗೆ ವರದಿಯಾಗಿಲ್ಲ.

6 ಭಾರತೀಯರ ಸಾವು: ಪಶ್ಚಿಮ ಏಷ್ಯಾದಲ್ಲಿನ ಯುದ್ಧದಲ್ಲಿ ಸಂಭವಿಸಿದ ವಿವಿಧ ಘಟನೆಗಳಲ್ಲಿ ಆರು ಮಂದಿ ಭಾರತೀಯರು ಮೃತಪಟ್ಟಿದ್ದಾರೆ ಮತ್ತು ಒಬ್ಬರು ನಾಪತ್ತೆಯಾಗಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ಶುಕ್ರವಾರ ತಿಳಿಸಿದೆ.

ಇರಾನ್ ಕ್ಷಿಪಣಿ ದಾಳಿಯಿಂದ ಟೆಲ್ ಅವೀವ್‌ನ ಪ್ರದೇಶದ ಮನೆಗಳಿಗೆ ಆಗಿರುವ ಹಾನಿಯನ್ನು ರಕ್ಷಣಾ ಸಿಬ್ಬಂದಿ ಶುಕ್ರವಾರ ಪರಿಶೀಲಿಸಿದರು – ಎಎಫ್‌ಪಿ ಚಿತ್ರ

ಅಲಿ ಮೊಹಮ್ಮದ್ ನೈನಿ ಹತ್ಯೆ

ಇಸ್ರೇಲ್–ಅಮೆರಿಕ ನಡೆಸಿದ ವೈಮಾನಿಕ ದಾಳಿಯಲ್ಲಿ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ಸ್ ವಕ್ತಾರ ಅಲಿ ಮೊಹಮ್ಮದ್ ನೈನಿ ಮೃತಪಟ್ಟಿದ್ದಾರೆ ಎಂದು ಇರಾನ್‌ನ ಸರ್ಕಾರಿ ಸುದ್ದಿ ವಾಹಿನಿ ಶುಕ್ರವಾರ ವರದಿ ಮಾಡಿದೆ.

‘ಪ್ರವಾಸಿ ತಾಣಗಳೇ ಗುರಿ’

ಪ್ರಪಂಚದಾದ್ಯಂತ ಇರುವ ಪ್ರವಾಸಿ ಹಾಗೂ ಮನರಂಜನಾ ತಾಣಗಳನ್ನು ಗುರಿಯಾಗಿಸಿ ದಾಳಿ ನಡೆಸುವುದಾಗಿ ಇರಾನ್ ಶುಕ್ರವಾರ ಬೆದರಿಕೆ ಒಡ್ಡಿದೆ.

‘ಇರಾನ್‌ನ ಶತ್ರುಗಳಿಗೆ ವಿಶ್ವದೆಲ್ಲೆಡೆ ಇರುವ ಉದ್ಯಾನಗಳು, ಮನರಂಜನೆ ಪ್ರದೇಶಗಳು ಹಾಗೂ ಪ್ರವಾಸಿ ತಾಣಗಳು ಸುರಕ್ಷಿತವಾಗಿ ಇರುವುದಿಲ್ಲ. ಇದಕ್ಕಾಗಿ ಕ್ಷಿಪಣಿಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ’ ಎಂದು ಸೇನೆಯ ವಕ್ತಾರ ಜನರಲ್ ಅಬುಲ್‌ಫಜಲ್ ಶೇಕರ್ಚಿ ಎಚ್ಚರಿಸಿದ್ದಾರೆ.

ಸಹಜ ಸ್ಥಿತಿಗೆ ಎಲ್‌ಪಿಜಿ ಬುಕ್ಕಿಂಗ್

ನವದೆಹಲಿ (ಪಿಟಿಐ): ಎಲ್‌ಪಿಜಿ ಸಿಲಿಂಡರ್ ಪೂರೈಕೆ ಕೊರತೆ ಭಯದಿಂದ ಜನರು ಗಾಬರಿ ಬಿದ್ದು ಬುಕ್ಕಿಂಗ್ ಮಾಡುತ್ತಿದ್ದ ಪ್ರಮಾಣ ಸದ್ಯ ಸಹಜ ಸ್ಥಿತಿಗೆ ಮರಳಿದೆ.

ಮಾರ್ಚ್ 13ರಂದು ಒಂದೇ ದಿನದಲ್ಲಿ ದೇಶದಲ್ಲಿ 87.7 ಲಕ್ಷ ಮನೆ ಬಳಕೆ ಎಲ್‌ಪಿಜಿ ಸಿಲಿಂಡರ್ ಬುಕ್ಕಿಂಗ್ ಆಗಿತ್ತು. ಮಾರ್ಚ್ 18ರಂದು ಇದು 57 ಲಕ್ಷಕ್ಕೆ, ಮಾರ್ಚ್ 19ರಂದು 55 ಲಕ್ಷಕ್ಕೆ ಇಳಿಕೆಯಾಗಿದೆ ಎಂದು ಪೆಟ್ರೋಲಿಯಂ ಸಚಿವಾಲಯ ಹೇಳಿದೆ.

ಪಶ್ಚಿಮ ಏಷ್ಯಾ ಸಂಘರ್ಷದ ಪೂರ್ವದಲ್ಲಿ ದೇಶದಲ್ಲಿ ಪ್ರತಿದಿನ ಸರಾಸರಿ ಎಲ್‌ಪಿಜಿ ಬುಕ್ಕಿಂಗ್ 50 ರಿಂದ 55 ಲಕ್ಷದಷ್ಟಿತ್ತು.

‘ಮನೆ ಬಳಕೆಯ ಎಲ್‌ಪಿಜಿ ಪೂರೈಕೆಗೆ ಸರ್ಕಾರ ಆದ್ಯತೆ ನೀಡಿದೆ. ಪೂರೈಕೆ ಸಮಸ್ಯೆ ಸಂಪೂರ್ಣವಾಗಿ ಬಗೆಹರಿದಿಲ್ಲ, ಆದರೆ, ವಿತರಕರ ಬಳಿ ಸದ್ಯದ ಬೇಡಿಕೆ ಪೂರೈಸುವಷ್ಟು ದಾಸ್ತಾನು ಇದೆ. ಜನರು ಅನಗತ್ಯವಾಗಿ ಆತಂಕಪಡುವ ಅಗತ್ಯವಿಲ್ಲ’ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ಹೇಳಿದ್ದಾರೆ.

‘ಕಚ್ಚಾತೈಲ ದರ ಏರಿಕೆಯ ನಷ್ಟವನ್ನು ನಿಭಾಯಿಸುವ ಸಾಮರ್ಥ್ಯವನ್ನು ತೈಲ ಮಾರಾಟ ಕಂಪನಿಗಳು ಹೊಂದಿವೆ. ಹಾಗಾಗಿ ಚಿಲ್ಲರೆ ಮಾರುಕಟ್ಟೆಯಲ್ಲಿ ತಕ್ಷಣಕ್ಕೆ ಇಂಧನ ಬೆಲೆ ಏರಿಕೆ ಇಲ್ಲ. ಗ್ರಾಹಕರಿಗೂ ಅಗತ್ಯವಿರುವಷ್ಟು ಇಂಧನ ಪೂರೈಸುವುದು ನಮ್ಮ ಆದ್ಯತೆ’ ಎಂದು ಹೇಳಿದ್ದಾರೆ.

ವರ್ಗ: ಸಿ.ಎಂ ಹಸ್ತಕ್ಷೇಪ ಏಕೆ?

ಒಂದನೇ ಪುಟದಿಂದ...

‘ವರ್ಗಾವಣೆ ಮತ್ತು ನೇಮಕಾತಿಗೆ ಸಂಬಂಧಿಸಿದ ಯಾವುದೇ ವಿನಂತಿಯನ್ನು ಮುಖ್ಯಮಂತ್ರಿ ಕಚೇರಿ ನೇರವಾಗಿ ಸ್ವೀಕರಿಸಬಾರದು. ಇಂತಹ ವಿಷಯಗಳು ಇಲಾಖಾ ಮಟ್ಟದಲ್ಲೇ ಇತ್ಯರ್ಥವಾಗಬೇಕು. ಸರ್ಕಾರಿ ಮತ್ತು ಸಂಸ್ಥೆಗಳಲ್ಲಿನ ಅಧಿಕಾರಿಗಳ ವರ್ಗಾವಣೆ ಹಾಗೂ ಸ್ಥಳ ನಿಯುಕ್ತಿಗಿಂತ ಉತ್ತಮ ಮತ್ತು ಮಹತ್ವದ ಕೆಲಸಗಳನ್ನು ನಿರ್ವಹಿಸುವ ಗುರುತರ ಜವಾಬ್ದಾರಿ ಮುಖ್ಯಮಂತ್ರಿ ಮೇಲಿದೆ’ ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

‘ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ರೂಪಿಸಿರುವ ವೃಂದ–ನೇಮಕಾತಿ ನಿಯಮಗಳು ಮತ್ತು ಸಾಮಾನ್ಯ ವರ್ಗಾವಣೆ ಮಾರ್ಗಸೂಚಿಗಳನ್ನು ಆಧರಿಸಿ ಆಯಾ ಇಲಾಖೆಗಳು ಶಿಫಾರಸುಗಳನ್ನು ಪರಿಶೀಲಿಸಬೇಕು’ ಎಂದು ನ್ಯಾಯಪೀಠ ನಿರ್ದೇಶಿಸಿದೆ.

ಈ ಪ್ರಕರಣದಲ್ಲಿ 2026ರ ಫೆಬ್ರುವರಿ 24ರ ಹೈಕೋರ್ಟ್ ಆದೇಶಕ್ಕೆ ಪೂರಕವಾಗಿ 2026ರ ಮಾರ್ಚ್ 3ರಂದು ಮುಖ್ಯ ಕಾರ್ಯದರ್ಶಿ ಅನುಪಾಲನಾ ವರದಿ ಸಲ್ಲಿಸಿದ್ದಾರೆ. ಇದು ಮುಖ್ಯಮಂತ್ರಿ ಕಚೇರಿ ನೀಡಿರುವ ಟಿಪ್ಪಣಿಯಾಗಿದ್ದು ಶಿಫಾರಸಿನ ರೂಪದಲ್ಲಿದೆ. ಹಾಗಾಗಿ, ಇದು ವರ್ಗಾವಣೆ ಆದೇಶವೆಂದಾಗಲೀ ಅಥವಾ ವರ್ಗಾವಣೆಗೆ ಒಪ್ಪಿಗೆ ನೀಡಿದೆ ಎಂದಾಗಲೀ ಆಗುವುದಿಲ್ಲ’ ಎಂದು ಸ್ಪಷ್ಟಪಡಿಸಿದೆ.

ಸಿ.ಎಂ ಕಚೇರಿಯ ಯಾರೋ ಆದೇಶ ಹೊರಡಿಸುತ್ತಿದ್ದಾರೆ..!

‘ಮುಖ್ಯಮಂತ್ರಿ ಅನುಮೋದನೆ ನೀಡಿದ್ದರೂ ಬೆಸ್ಕಾಂ ನನ್ನನ್ನು ನಿರ್ದಿಷ್ಟ ಉಪವಿಭಾಗಕ್ಕೆ ನಿಯೋಜಿಸಿಲ್ಲ. ಆದ್ದರಿಂದ, ನನ್ನನ್ನು ಮುಖ್ಯಮಂತ್ರಿ ಸೂಚಿಸಿದಂತೆ ನಿಯೋಜನೆ ಮಾಡಬೇಕು’ ಎಂದು ಕೋರಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಈ ರಿಟ್ ಅರ್ಜಿ ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ, ‘ಮುಖ್ಯಮಂತ್ರಿ ಕಚೇರಿಯಿಂದ ಗ್ರೂಪ್ ‘ಬಿ’ ಹಾಗೂ ‘ಸಿ’ ವರ್ಗದ ನೌಕರರ ವರ್ಗಾವಣೆಗೆ ಹಲವು ಪತ್ರಗಳು ಬರುತ್ತಿರುವುದು ಹೈಕೋರ್ಟ್ ಗಮನಕ್ಕೆ ಬಂದಿದೆ. ಮುಖ್ಯಮಂತ್ರಿ ಕಚೇರಿಯಲ್ಲಿ ಕುಳಿತಿರುವ ಯಾರೋ ಒಬ್ಬರು ಯಾಂತ್ರಿಕವಾಗಿ ಇಂತಹ ಆದೇಶಗಳನ್ನು ಹೊರಡಿಸುತ್ತಿದ್ದಾರೆ. ಆದ್ದರಿಂದ, ನೌಕರರು ದಿಗಿಲಿಗೆ ಒಳಗಾಗಿ ಹೈಕೋರ್ಟ್ ಮೆಟ್ಟಿಲೇರುತ್ತಿದ್ದಾರೆ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿ 2024ರ ಸೆಪ್ಟೆಂಬರ್ 9ರಂದು ಅರ್ಜಿ ವಜಾಗೊಳಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಚೇತನ್ ಮೇಲ್ಮನವಿ ಸಲ್ಲಿಸಿದ್ದರು.

ವರ್ಗಾವಣೆ ದಂಧೆ: ಅಶೋಕ ಟೀಕೆ

‘ಮುಖ್ಯಮಂತ್ರಿಯಾದವರಿಗೆ ನೌಕರರ ವರ್ಗಾವಣೆಗಿಂತ ಮಾಡಬೇಕಾದ ಉತ್ತಮ ಕೆಲಸಗಳಿವೆ ಎಂದು ಹೈಕೋರ್ಟ್ ಚಾಟಿ ಬೀಸಿರುವುದು ರಾಜ್ಯದಲ್ಲಿ ದುರಾಡಳಿತ, ವರ್ಗಾವಣೆ ದಂಧೆ ಎಷ್ಟು ತಾಂಡವವಾಡುತ್ತಿದೆ ಎನ್ನುವುದಕ್ಕೆ ಹಿಡಿದ ಕೈಗನ್ನಡಿ’ ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

ಈ ಬಗ್ಗೆ ತಮ್ಮ ‘ಎಕ್ಸ್’ ಖಾತೆಯಲ್ಲಿ ಪೋಸ್ಟ್ ಮಾಡಿರುವ ಅವರು, ‘ಸರ್ಕಾರಕ್ಕೆ ಹೈಕೋರ್ಟ್ ಮತ್ತೊಮ್ಮೆ ಛೀಮಾರಿ ಹಾಕಿದೆ. ಒಂದು ಕಡೆ ಸಂಪೂರ್ಣವಾಗಿ ದಿವಾಳಿ ಆಗಿರುವ ಖಜಾನೆ, ಮತ್ತೊಂದು ಕಡೆ ಸದಾ ಅಲುಗಾಡುತ್ತಿರುವ ಕುರ್ಚಿ, ಇವೆರಡರ ಮಧ್ಯೆ ಸಿಲುಕಿಕೊಂಡು ದುರ್ಬಲರಾಗಿರುವ ‘ಹಲೋ ಅಪ್ಪ’ ಖ್ಯಾತಿಯ ಮುಖ್ಯಮಂತ್ರಿ ಸಿದ್ದರಾಮಯ್ಯ ವರ್ಗಾವಣೆ ದಂಧೆಯನ್ನೇ ಮುಖ್ಯ ಕಾಯಕ ಮಾಡಿಕೊಂಡಿದ್ದಾರೆ’ ಎಂದು ದೂರಿದ್ದಾರೆ.

‘ಸರ್ಕಾರಕ್ಕೆ ಕಿಂಚಿತ್ತಾದರೂ ನಾಚಿಕೆ, ಮಾನ, ಮಾರ್ಯದೆ ಇದ್ದರೆ, ಈ ಕೂಡಲೇ ವಿಧಾನಸಭೆ ವಿಸರ್ಜನೆ ಮಾಡಿ ಕನ್ನಡಿಗರ ಕ್ಷಮೆ ಯಾಚಿಸಬೇಕು’ ಎಂದು ಆಗ್ರಹಿಸಿದ್ದಾರೆ.

ಸಿದ್ದರಾಮಯ್ಯರಿಂದ ಬೆದರಿಕೆ: ಅರ್ಜಿ ಪರಿಗಣನೆಗೆ ‘ಸುಪ್ರೀಂ’ ನಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶದ ಮೇರೆಗೆ ತನ್ನ ಆಸ್ತಿ ಕಬಳಿಸುವ ಉದ್ದೇಶದಿಂದ ಬೆದರಿಕೆ ಹಾಕಲಾಗುತ್ತಿದೆ ಎಂದು ಆರೋಪಿಸಿ ಸುಷ್ಮಾ ಎಸ್.ಆರಾಧ್ಯ ಎಂಬವರು ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದೆ.

ಅರ್ಜಿಯನ್ನು ವಜಾಗೊಳಿಸಿದ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠವು ಅರ್ಜಿದಾರರು ಕರ್ನಾಟಕ ಹೈಕೋರ್ಟ್ ಅನ್ನು ಸಂಪರ್ಕಿಸಲು ಅವಕಾಶ ನೀಡಿದೆ.

ಅರ್ಜಿದಾರರು ರಾಜ್ಯಕ್ಕೆ ಪ್ರವೇಶಿಸುವಾಗ ಸುರಕ್ಷತೆ ಖಚಿತಪಡಿಸಿಕೊಳ್ಳಲು ನಿರ್ದೇಶನ ನೀಡಬೇಕು ಎಂದು ಅರ್ಜಿದಾರರು ಕೋರಿದರು. ‘ಅರ್ಜಿಯನ್ನು ಇ-ಫೈಲ್ ಮಾಡುವ ಆಯ್ಕೆ ಲಭ್ಯವಿದೆ’ ಎಂದು ನ್ಯಾಯಮೂರ್ತಿ ಮೆಹ್ತಾ ಗಮನಸೆಳೆದರು.

ವಿಚಾರಣೆ ಸಮಯದಲ್ಲಿ ಅರ್ಜಿದಾರರ ವಕೀಲರು, ‘ಮುಖ್ಯಮಂತ್ರಿ ಕಡೆಯವರ ನಿರಂತರ ಬೆದರಿಕೆಗಳಿಂದಾಗಿ ಅರ್ಜಿದಾರರು ಕರ್ನಾಟಕದಿಂದ ದೆಹಲಿಗೆ ಸ್ಥಳಾಂತರಗೊಳ್ಳಬೇಕಾಯಿತು’ ಎಂದು ಹೇಳಿಕೊಂಡರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ನಾಥ್, ‘ಕರ್ನಾಟಕದ ಮುಖ್ಯಮಂತ್ರಿಯವರು ದೆಹಲಿಯಲ್ಲಿ ನಿಮ್ಮ ಹಿಂದೆ ಜನರನ್ನು ಕಳುಹಿಸುತ್ತಿದ್ದಾರೆಯೇ’ ಎಂದು ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ವಕೀಲರು, ‘ದೆಹಲಿಯಲ್ಲಿ ಅಲ್ಲ, ಕರ್ನಾಟಕದಲ್ಲಿ. ನಾನು ರಾಜ್ಯಕ್ಕೆ ಮರಳಿ ನನ್ನ ಆಸ್ತಿಯಲ್ಲಿ ಉಳಿದುಕೊಳ್ಳಲು ಬಯಸುತ್ತಿದ್ದೇನೆ. ಬೆದರಿಕೆ ಬಗ್ಗೆ ಹಲವು ಸಲ ಪೊಲೀಸರಿಗೆ ದೂರು ನೀಡಿದ್ದೇನೆ. ನನ್ನ ಪರವಾಗಿ ನ್ಯಾಯಾಲಯ ಆದೇಶ ನೀಡಿದೆ. ಆದಾಗ್ಯೂ, ಬೆದರಿಕೆ ನಿರಂತರವಾಗಿ ಮುಂದುವರಿದಿದೆ. ಜನವರಿಯಲ್ಲಿ ದೌರ್ಜನ್ಯ ಮತ್ತಷ್ಟು ಹೆಚ್ಚಾಯಿತು. ಮನೆ ಮೇಲೆ ಕಲ್ಲು ತೂರಾಟ ನಡೆಸಿದರು. ಮನೆಯೊಳಗೆ ಗೂಂಡಾಗಳು ನುಗ್ಗಿ ದಾಂದಲೆ ನಡೆಸಿದರು. ನನ್ನ ಆಸ್ತಿ ಕಬಳಿಸುವ ಉದ್ದೇಶದಿಂದ ಈ ಕೃತ್ಯ ಎಸಗುತ್ತಿದ್ದಾರೆ’ ಎಂದು ದೂರಿದರು.

ಆದಾಗ್ಯೂ, ಅರ್ಜಿದಾರರು ಸ್ವತಃ ರಾಜಕೀಯ ಹಿನ್ನೆಲೆ ಹೊಂದಿದ್ದಾರೆ ಮತ್ತು ನ್ಯಾಯಾಲಯದೊಳಗೆ ರಾಜಕೀಯ ಹೋರಾಟ ನಡೆಸುತ್ತಿದ್ದಾರೆ ಎಂದು ಪೀಠ ಗಮನಿಸಿತು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ತಕ್ಷಣ ಬೇಕಾಗಿದ್ದಾರೆ ಕಂಪನಿಗಳಿಗೆ ಮನೆಯಿಂದಲೇ ಕೆಲಸ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ, ವಯಸ್ಕರಿಗೆ ಮೊದಲ ಆದ್ಯತೆ 19,000-25,000 ಸಂಪಾದಿಸಿ ಕೋರಿಯರ್ ಸೌಲಭ್ಯವಿದೆ. 9964322833.

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ರಿಯಲ್ ಎಸ್ಟೇಟ್ ಸೆಲ್ಲಿಂಗ್

Kengeri

LUXURY APARTMENT Booking Started Call Kirti 9341218992 By Landmark, Next To Kingeri Metro Station 4 Tower Of 69-798999 Floor, Payment In 36 Months 3 Bhk- 2,250 To 2,601 Sft 3.6 cr To 4.16 cr+

Farm House/ Land/ Resorts

General

23 ACRES 3kms from Khanapur busstand ample water suitable for Agriculture, Resort, College contact 9819084110

ವೈಯಕ್ತಿಕ

Lost

I, JAYARAM Bapat S/o Ganeshrao, Residing at Jalageramma temple, Near, No.4, Shri Vishnu Nilaya, Lottegollahalli, Bengaluru, Karnataka 94 Have lost original of my property (site no 64/65, kanshiram nagara, Lakshmipur, bangalore north, Bangalore 97. Sale Deed If any one find the same, pl contact 9449632334

ಪ್ರವಾಸ

Travel

ಹೆಸರಾಂತ ವಿಷ್ಣು ಟ್ರಾವೆಲ್ಸ್ ಏಜೆನ್ಸಿ ವತಿಯಿಂದ 24.03.2026 12.04.2026 ಕಾಶಿ,ಅಯೋಧ್ಯ,ಬುದ್ಧಗಯಾ 19.04.2026 03.05.2026 ಚಾರ್‌ಧಾಮ ಪ್ರವಾಸ. 20.04.2026, ಕಾಶ್ಮೀರ್ ವೈಷ್ಣೋದೇವಿ ಕುಲುಮನಾಲಿ ಜ್ವಾಲಾಮುಖಿ. 05.07.2026 ಅಮರನಾಥ್ ಹಿಮಲಿಂಗ ದರ್ಶನ. 19.06.2026 ನೇಪಾಳ,ಮುಕ್ತಿನಾಥ ಪೋಖ್ರಾ. ಸಂಪರ್ಕಿಸಿ. 84310888138 8317446683 9686708171

ನೇಪಾಳ ಮುಕ್ತಿನಾಥ ಯಾತ್ರಾ ಮೇನಲ್ಲಿ 8 ದಿನಗಳು. ಅಮರನಾಥಯಾತ್ರಾ ಜುಲೈನಲ್ಲಿ 11ದಿನಗಳು. ನವಶಕ್ತಿಪೀಠ ಯಾತ್ರಾ ಅಗಸ್ಟ್ ನಲ್ಲಿ 10ದಿನಗಳು.ಚಾರ್ ಧಾಮ್ ಮತ್ತು ದೋಧಾಮ್ ಯಾತ್ರಾಸಂಪರ್ಕಿಸಿ: ವಿಜಯ ಟ್ರಾವೆಲ್ಸ್ ಮಲ್ಲೇಶ್ವರಂ ಬೆಂಗಳೂರು-03, 9448294477

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸಾರ್ವಜನಿಕ ಪ್ರಕಟಣೆ

ಗೌರವಾನ್ವಿತ ಹಿರಿಯ ದಿವಾನಿ ನ್ಯಾಯಾಧೀಶರು, ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹೆಚ್. ಡಿ. ಕೋಟೆ
ಜಾರಿ ನಂ. 74 / 2023
ಅರ್ಜಿದಾರರು :
ಸಿ.ಕೆ. ನವೀನ್ ಬಿನ್ ಕಲ್ಲೇಶಚಾರ್ ಸುಮಾರು 45 ವರ್ಷ, ನಂ. 35, 1ನೇ ಮಹಡಿ, 8ನೇ ಮುಖ್ಯರಸ್ತೆ, ಕಾಳಪ್ಪ ಬ್ಲಾಕ್, ಬೆಂಗಳೂರು – 560050
ವಿರುದ್ಧ
ಎದುರುದಾರರು
ಅರುಣ್. ಎಂ. ಗೌಡ ಮತ್ತು ಇತರರು.
3ನೇ ಎದುರುದಾರರಾದ
ಅಲಿಹಸನ್ ಬಿನ್ ಲೇಟ್ ಸೈಯ್ಯದ್ ಇಬ್ರಾಹಿಂ, ವಯಸ್ಸು 78 ವರ್ಷ
4ನೇ ಎದುರುದಾರರಾದ
ಹಬಿಬುನ್ನಿಸ ಬಿನ್ ಶೇಕ್‌ಫಕ್ರುದ್ದೀನ್ ಕೋಂ ಅಲಿಹಸನ್ ವಯಸ್ಸು 63 ವರ್ಷ
5ನೇ ಎದುರುದಾರರಾದ
ಶ್ರೀಮತಿ ರಿಜ್ವಾನ ಬಿನ್ ಶೇಕ್ ಅಬ್ದುಲ್ ರೆಹಮಾನ್ ಕೋಂ ಅಲಿಹಸನ್ ವಯಸ್ಸು 59 ವರ್ಷ
ಎಲ್ಲರ ವಾಸ: ನಂ. 4923, ಎನ್.ಎಂ.ಎಸ್. ಲೂಹಿಸ್ ಚಿಕ್ಕಾಗೋ–64625.
ಇವರ ಪರವಾಗಿ ಜಿಪಿಎ ಹೋಲ್ಡರ್ ಆದ ಶ್ರೀ ಟಿ.ಸಿ. ಬಾಲಾಜಿ ಬಿನ್ ಲೇಟ್ ಟಿ.ಎಸ್. ಚಂದ್ರಗುಪ್ತ ವಯಸ್ಸು 55 ವರ್ಷ, ವಾಸ ನಂ. 10/1, 2ನೇ ಅಡ್ಡರಸ್ತೆ, ಮೊದಲನೇ ಹಂತ, ಎ.ಇ.ಸಿ.ಎಸ್. ಲೇಔಟ್, ಆರ್.ಎಂ.ವಿ. 2ನೇ ಹಂತ, ಬೆಂಗಳೂರು–560094.
ಸಾರ್ವಜನಿಕ ಪ್ರಕಟಣೆಗೆ
ಈ ಕೆಳಕಂಡ ಪ್ರಕರಣದಲ್ಲಿ ಅರ್ಜಿದಾರರು ಎದುರುದಾರರ ಅಸಲು ದಾವಾ ಸಂಖ್ಯೆ 34/2021 ಪ್ರಕರಣ ರೀತ್ಯಾ ದಾವ ಹೂಡಿದ್ದು, ಸದರಿ ದಾವೆಯು ವಾದಿಗಳ ಮತ್ತು ಪ್ರತಿವಾದಿಗಳ ನಡುವೆ ರಾಜಿ ಸಂಧಾನವಾಗಿರುತ್ತದೆ. ಅದರಂತೆ ಭಾಗಾಂಶ ಪಡೆಯಲು ಈ ಮೇಲ್ಕಂಡ ಜಾರಿ ಅರ್ಜಿಯನ್ನು ಅರ್ಜಿದಾರರು ಸಲ್ಲಿಸಿದ್ದು, ಆದರೆ 3 ರಿಂದ 5ನೇ ಎದುರುದಾರರು ಮತ್ತು ಅವರ ಜಿಪಿಎ ಹೋಲ್ಡರ್ ರವರು ಈ ಘನ ನ್ಯಾಯಾಲಯದಿಂದ ಜಾರಿಯಾದ ನೋಟೀಸ್‌ನ್ನು ಹಲವು ಬಾರಿ ಪಡೆಯದೇ ಇರುವುದರಿಂದ ಸದರಿ ಪಕ್ಷಗಾರರನ್ನು ಹೊರತು ಪಡಿಸಿ ಆದೇಶಿಸಲು ಅರ್ಜಿದಾರರು ಪ್ರಜಾವಾಣಿ ಪತ್ರಿಕಾ ಪ್ರಕಟಣೆಯನ್ನು ಘನ ನ್ಯಾಯಾಲಯವು ನಿಮ್ಮ ಹಾಜರಾತಿಗಾಗಿ ದಿನಾಂಕ:–29.04.2026 ರಂದು ಬೆಳಗ್ಗೆ 11.00 ಘಂಟೆಗೆ ನಿಗದಿಪಡಿಸಿದೆ.
ನ್ಯಾಯಾಲಯದ ಆದೇಶದ ಮೇರೆಗೆ ದಿನಾಂಕ : 13.03.2026 ರಂದು ಪತ್ರಿಕಾ ಪ್ರಕಟಣೆಗಾಗಿ ನೀಡಲಾಗಿದೆ.
ನ್ಯಾಯಾಲಯದ ಅಪ್ಪಣೆ ಮೇರೆಗೆ ಶಿರಸ್ತೇದಾರರು, ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಜೆ.ಎಂ.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ ಹೆಚ್.ಡಿ.ಕೋಟೆ
ಅರ್ಜಿದಾರರ ಪರ ವಕೀಲರು
ದಿನೇಶ, ಕೆ, ಬಿ.ಎ., ಎಲ್.ಎಲ್.ಬಿ.
ಕುಮಾರ್, ಬಿ.ಎ., ಎಲ್.ಎಲ್.ಬಿ
ನಂ. 2394, ಎಸ್.ಕೆ. ಕಾಂಪ್ಲೆಕ್ಸ್, 2ನೇ ಮಹಡಿ, ಕೆ.ಜಿ. ಕೊಪ್ಪಲು, ಮೈಸೂರು.
ದಿನಾಂಕ : 06–03–2026 ಸ್ಥಳ : ಹೆಚ್.ಡಿ.ಕೋಟೆ

PUBLIC NOTICE
To Place your Classified Ads Contact
9731810277

ತೆಂಕುತಿಟ್ಟು ಯಕ್ಷಗಾನದ ಮೇರುಪರ್ವತ

ಕೌರವನ ಪಾತ್ರದಲ್ಲಿ...
ಚಿತ್ರ: ಯಜ್ಞ ಆಚಾರ್ಯ

ಪ್ರಜಾವಾಣಿ ವಾರ್ತೆ

ಮಂಗಳೂರು: ಊಟಕ್ಕೆ ಹಣ ಇಲ್ಲದೇ ಅಲೆದಾಡುತ್ತಿದ್ದ ಕಾಲ. ಹೊಟ್ಟೆ ಹೊರೆಯುವುದಕ್ಕಾಗಿ ಹೊಟೇಲ್‌ನಲ್ಲಿ ಪ್ಲೇಟ್ ತೊಳೆಯುವ ಕೆಲಸ ಮಾಡುತ್ತಿದ್ದವರು ಸಂಬಳ ಸಿಗುತ್ತದೆ ಎಂದು ಯಕ್ಷಗಾನಕ್ಕೆ ಸೇರಿದರು. ಹಾಗೆ ಆಯ್ದುಕೊಂಡ ಯಕ್ಷಗಾನಕ್ಕೇ ಕೀರ್ತಿ ತಂದುಕೊಟ್ಟವರು ಸೂರಿಕುಮೇರು ಕೆ. ಗೋವಿಂದ ಭಟ್ಟರು.

ತೆಂಕುತಿಟ್ಟು ಯಕ್ಷಗಾನದ 'ದಶಾವತಾರಿ' ಎಂದೇ ಪ್ರಸಿದ್ಧರಾಗಿದ್ದ ಇವರು, ತೆಂಕುತಿಟ್ಟು ಯಕ್ಷಗಾನಕ್ಕೆ ಎರಡನೇ ರಾಷ್ಟ್ರ ಪ್ರಶಸ್ತಿ ತಂದು ಕೊಟ್ಟ ಸಾಧಕ. ದಾಖಲೆಯ 71 ವರ್ಷಗಳ ಕಾಲ ತಿರುಗಾಟದಲ್ಲಿ ಬದುಕನ್ನು ಸವೆಸಿದರು. ಹೊಸಹಿತ್ಲು ಮಹಾಲಿಂಗ ಭಟ್ಟರು, 'ಯಕ್ಷಗಾನ ಮೇಳದಲ್ಲಿ ನನಗೆ ಒಂದು ತಿರುಗಾಟಕ್ಕೆ 500 ರೂಪಾಯಿ ಕೊಡುತ್ತಾರೆ' ಎಂದು ಹೇಳಿದ್ದನ್ನು ಕೇಳಿ ಯಕ್ಷಗಾನದ ಕಡೆಗೆ ಹೊರಳಿದವನು ನಾನು ಎಂದು ಇವರು ತಮ್ಮ ಯಕ್ಷತಿರುಗಾಟದ ಅನುಭವ ಕಥನವನ್ನು 'ಎಪ್ಪತ್ತು ತಿರುಗಾಟಗಳು' ಎಂಬ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ.

ಮಿತ್ತನಡ್ಕದಲ್ಲಿ ವಿಠಲ ಶಾಸ್ತ್ರಿಗಳು ಆರಂಭಿಸಿದ್ದ ಯಕ್ಷಗಾನ ಶಿಬಿರದಲ್ಲಿ ಪಾಲ್ಗೊಂಡ ಇವರು ಯಕ್ಷನಾಟ್ಯದ ಜೊತೆಗೆ ಭರತನಾಟ್ಯ ಶಿಕ್ಷಣ ಪಡೆದರು. ಧರ್ಮಸ್ಥಳ ಮೇಳವೊಂದರಲ್ಲೇ 54 ವರ್ಷಗಳ ಸೇವೆ ಸಲ್ಲಿಸಿದ್ದಾರೆ.

ಸೂರಿಕುಮೇರು ಗೋವಿಂದ ಭಟ್ಟರ ತಂದೆ ಕಿನಿಲ ಶಂಕರನಾರಾಯಣ ಭಟ್ಟರು, ತಾಯಿ ಲಕ್ಷ್ಮೀ. ಕೋಡಪದವು, ವಿಟ್ಲದಲ್ಲಿ 7ನೇ ತರಗತಿವರೆಗೆ ಕಲಿತರು. ಗೋವಿಂದ ಭಟ್ಟರನ್ನು ಸಹಕಲಾವಿದರು 'ಗುರು ಗೋವಿಂದ ಭಟ್ಟರು' ಎಂದೇ ಕರೆಯುತ್ತಿದ್ದರು. ಆರಂಭದಲ್ಲಿ ಸ್ತ್ರೀ ಪಾತ್ರ ನಿರ್ವಹಿಸಿದರು, ನಂತರ ಯಾವುದೇ ಪಾತ್ರ ಕೊಟ್ಟರೂ ಅದಕ್ಕೆ ಜೀವ ತುಂಬುತ್ತಿದ್ದರು.

ಕುಮಾರಯ್ಯ ಹೆಗ್ಗಡೆ, ಋತುಪರ್ಣ, ಕೌರವ ಮುಂತಾದ ಪಾತ್ರಗಳು ಪ್ರಸಿದ್ಧ. ವಾಕ್ಯರೂಪದಲ್ಲಿ ಸ್ಪಷ್ಟವಾಗಿ ಅರ್ಥ ಹೇಳುವ ಭಟ್ಟರ ಕಂಠಸಿರಿಯೂ ಭಿನ್ನ. ಅವರ ಕೌರವ ಪಾತ್ರಕ್ಕೆ ತನ್ನದೇ ಆದ ವಿಶೇಷತೆಯಿದೆ. ಭಟ್ಟರ ಧರ್ಮಸ್ಥಳ ಕ್ಷೇತ್ರ ಮಹಾತ್ಮೆಯ ಹೆಗ್ಗಡೆ, ಗಣಮಣಿ, ಈಶ್ವರ, ಶ್ರೀದೇವಿ ಮಹಾತ್ಮೆಯ ರಕ್ತಬೀಜ, ಶ್ರೀದೇವಿ ಸಹಿತ ದೇವೇಂದ್ರ, ಕೌರವ, ಶತ್ರುಘ್ನ, ಕೀಚಕ, ದಕ್ಷ , ಮಾಗಧ, ಶಿಶುಪಾಲ ಮುಂತಾದ ಪಾತ್ರಗಳು ಅವಿಸ್ಮರಣೀಯ.

ಮಣಿಮೇಖಲೆ, ಕನಕರೇಖೆ, ಕಾವೇರಿ ಮಹಾತ್ಮೆ, ಮೂರುವರೆ ವಜ್ರಗಳು, ರಾಜಶೇಖರ ವಿಲಾಸ, ಮಹಾವೀರ ಸಾಮ್ರಾಟ ಅಶೋಕ, ನಹುಷೇಂದ್ರ ಮುಂತಾದ ಪ್ರಸಂಗಗಳನ್ನು ಇವರು ರಚಿಸಿದ್ದಾರೆ.

ಅನ್ನವನ್ನರಸುತ್ತಾ....

ಮನುಷ್ಯನಿಗೆ ಎಲ್ಲಕ್ಕಿಂತ ಮೊದಲು ಬೇಕಾದದ್ದು ಅನ್ನ. ಹೊಟ್ಟೆ ತುಂಬುವಲ್ಲಿಯವರೆಗೆ ಮನುಷ್ಯ ಪಶು, ಶುದ್ಧ ಪಶುವಾಗಿರುತ್ತಾನೆ. ಹೊಟ್ಟೆ ತುಂಬಿದ ಮೇಲೆ ಅವನಿಗೆ ಎಲ್ಲದರ ಅರಿವಾಗುವುದು. ಅಲ್ಲಿಂದ ಅವನು ಧಾರ್ಮಿಕನಾಗಲು, ನಾಗರಿಕನಾಗಲು, ಧರ್ಮಿಷ್ಠನಾಗಲು, ಒಟ್ಟಿನಲ್ಲಿ 'ಸುಭಗ'ನಾಗಲು ತೊಡಗುತ್ತಾನೆ. ಇಂದು ನನ್ನನ್ನು ಜನ 'ಯಕ್ಷ ಕಲಾವಿದ'ನೆಂದು ಗುರುತಿಸುತ್ತಿದ್ದಾರೆ. ಆದರೆ ಕಲೆಯ ಬಗ್ಗೆ ನನಗೆ ಅರಿವು ಮೂಡಿದ್ದೇ ಬಹಳ ತಡವಾಗಿ. ದೈಗೋಳಿ ಎಂಬಲ್ಲಿ ಹೊಟೇಲ್ ಕೆಲಸದಲ್ಲಿದ್ದರೂ ಯಾವುದೇ ಸಂಬಳ ಇಲ್ಲದೇ ಇದ್ದ ಕಾರಣಕ್ಕಾಗಿ ನನ್ನ ಮನಸ್ಸು ಸಂಬಳ ಸಿಗುವ ಯಕ್ಷಗಾನದ ಕಡೆಗೆ ವಾಲಿತ್ತು ಎಂದು 'ಎಪ್ಪತ್ತು ತಿರುಗಾಟಗಳು' ಎಂಬ ತಮ್ಮ ಕೃತಿಯಲ್ಲಿ ಅವರು ನೆನಪಿಸಿಕೊಂಡಿದ್ದರು.

ಸೂರಿಕುಮೇರು ಗೋವಿಂದ ಭಟ್ಟ ಇನ್ನಿಲ್ಲ



ಮಂಗಳೂರು: ತೆಂಕುತಿಟ್ಟು ಯಕ್ಷಗಾನದ ಅಗ್ರಗಣ್ಯ ಕಲಾವಿದ, ಯಕ್ಷಗುರು ಸೂರಿಕುಮೇರು ಗೋವಿಂದ ಭಟ್ಟ (88) ಶುಕ್ರವಾರ ರಾತ್ರಿ ಶಿವಮೊಗ್ಗದ ತೀರ್ಥಹಳ್ಳಿ ಹೆದ್ದೂರಿನಲ್ಲಿ ನಿಧನರಾದರು. ಅವರಿಗೆ ಮೂವರು ಪುತ್ರರು ಇದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲದ ಕನಿಲದಲ್ಲಿ ಜನಿಸಿದ ಗೋವಿಂದ ಭಟ್ಟ ನಂತರ ಕಲ್ಲಡ್ಕ ಸಮೀಪದ ಸೂರಿಕುಮೇರುವಿನಲ್ಲಿ ವಾಸವಾಗಿದ್ದರು. ಈಚೆಗೆ ಕೆಲವು ವರ್ಷಗಳಿಂದ ತೀರ್ಥಹಳ್ಳಿಯಲ್ಲಿದ್ದರು. ಪುತ್ರರಾದ ಪ್ರಸನ್ನ ಕುಮಾರ್ ಮತ್ತು ಶ್ಯಾಂ ಪ್ರಸಾದ್ ತೀರ್ಥಹಳ್ಳಿಯಲ್ಲಿದ್ದು ಸೂರ್ಯ ಭಟ್ಟ ಸೂರಿಕುಮೇರುವಿನಲ್ಲಿ ನೆಲಸಿದ್ದಾರೆ. ಪತ್ನಿ ಆರು ವರ್ಷಗಳ ಹಿಂದೆ ಮಾರ್ಚ್ 20ರಂದೇ ತೀರಿಕೊಂಡಿದ್ದರು ಎಂದು ಸೂರ್ಯ ಭಟ್ಟ ತಿಳಿಸಿದರು.

7ನೇ ತರಗತಿ ವರೆಗೆ ಓದಿದ್ದ ಗೋವಿಂದ ಭಟ್ಟ 1951ರಲ್ಲಿ ಮೇಳಕ್ಕೆ ಸೇರಿ ಕುರಿಯ ವಿಠಲ ಶಾಸ್ತ್ರಿ, ಪರಮಶಿವನ್, ಮಾಧವ ಮೆನನ್, ರಾಜನ್ ಅಯ್ಯರ್ ಅವರಲ್ಲಿ ನಾಟ್ಯ ಕಲಿತು ಧರ್ಮಸ್ಥಳ, ಮೂಲ್ಕಿ, ಕೂಡ್ಲು, ಸುರತ್ಕಲ್ ಮತ್ತು ಇರಾ ಸೋಮನಾಥೇಶ್ವರ ಮೇಳಗಳಲ್ಲಿ ತಿರುಗಾಟ ನಡೆಸಿರುತ್ತಾರೆ. ಕೌರವ, ರಕ್ತಬೀಜ, ಇಂದ್ರಜಿತು ಮಾಗಧ, ಕರ್ಣ, ಅತಿಕಾಯ ನರಕಾಸುರ, ತಾಂಮ್ರಾಕ್ಷ ಕನಕಕಶಿಪು, ದೇವೇಂದ್ರ ಅರ್ಜುನ ಹನುಮಂತ, ಭೀಷ್ಮ ಬಾಹುಬಲಿ, ವಿಶ್ವಾಮಿತ್ರ ಅವರಿಗೆ ಹೆಸರು ತಂದು ಕೊಟ್ಟ ಪಾತ್ರಗಳು.

ನಿರಂತರ 71 ತಿರುಗಾಟಗಳನ್ನು ಮಾಡಿದ್ದ ಅವರು ಬಾಲವೇಷದಿಂದ ಹಿಡಿದು ಸ್ತ್ರೀ ವೇಷ, ಪುಂಡುವೇಷ ಮುಂತಾಗಿ ಎಲ್ಲ ವೇಷಗಳನ್ನು ನಿರ್ವಹಿಸಿದ್ದಾರೆ. ಅರ್ಥಧಾರಿಯಾಗಿಯೂ ಹೆಸರು ಗಳಿಸಿದ್ದ ಅವರನ್ನು ಯಕ್ಷಗಾನದ ಸರ್ವಾಂಗ ಕಲಾವಿದ ಎಂದೇ ಕರೆಯಲಾಗುತ್ತದೆ. ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪುರಸ್ಕಾರ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತು ಪುರಸ್ಕಾರ, ಕರ್ನಾಟಕ ಜಾನಪದ ಅಕಾಡೆಮಿ ಸಾಧನಾ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

ಮಹಿಳಾ ಕ್ರಿಕೆಟ್: ವರ್ಷಾಂತ್ಯದಲ್ಲಿ ಭಾರತ ತಂಡ ದಕ್ಷಿಣ ಆಫ್ರಿಕಾ ಪ್ರವಾಸ

ಜೋಹಾನೆಸ್‌ಬರ್ಗ್ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡವು ವರ್ಷಾಂತ್ಯದಲ್ಲಿ ದಕ್ಷಿಣ ಆಫ್ರಿಕಾ ಪ್ರವಾಸ ಕೈಗೊಳ್ಳಲಿದ್ದು, ಅಲ್ಲಿ 1 ಟೆಸ್ಟ್ ಮತ್ತು 3 ಪಂದ್ಯಗಳ ಏಕದಿನ ಸರಣಿಯನ್ನು ಆಡಲಿದೆ.

ಭಾರತದ ವೇಳಾಪಟ್ಟಿ (ದಕ್ಷಿಣ ಆಫ್ರಿಕಾ ಪ್ರವಾಸ)

ಪಂದ್ಯ	ತಾಣ	ದಿನಾಂಕ
ಮೊದಲ ಏಕದಿನ	ಪೊಚೆಫ್‌ಸ್ಟ್ರೂಮ್	ಡಿ.9
ಎರಡನೇ ಏಕದಿನ	ಬ್ಲೋಮ್‌ಫಾಂಟೈನ್	ಡಿ.12
ಮೂರನೇ ಏಕದಿನ	ಕೇಪ್‌ಟೌನ್	ಡಿ.15
ಟೆಸ್ಟ್ ಪಂದ್ಯ	ಗೆಬೆರ್ಹಾ	ಡಿ.20–23

ಡಿ.9ರಿಂದ 15ರವರೆಗೆ ಮೂರು ಏಕದಿನ ಪಂದ್ಯಗಳು ಕ್ರಮವಾಗಿ ಪೊಚೆಫ್‌ಸ್ಟ್ರೂಮ್, ಬ್ಲೋಮ್‌ಫಾಂಟೈನ್ ಮತ್ತು ಕೇಪ್‌ಟೌನ್‌ನಲ್ಲಿ ನಡೆಯಲಿವೆ.

ಟೆಸ್ಟ್ ಪಂದ್ಯವು ಡಿ.20ರಿಂದ 23ರವರೆಗೆ ಗೆಬೆರ್ಹಾದಲ್ಲಿ ಆಯೋಜಿಸಲಾಗಿದೆ ಎಂದು ಕ್ರಿಕೆಟ್ ದಕ್ಷಿಣ ಆಫ್ರಿಕಾ (ಸಿಎಸ್‌ಎ) ಶುಕ್ರವಾರ ತಿಳಿಸಿದೆ.

ಉಭಯ ರಾಷ್ಟ್ರಗಳ ನಡುವೆ ನಾಲ್ಕನೇ ಟೆಸ್ಟ್ ಪಂದ್ಯ ಇದಾಗಿದೆ. 'ಫ್ರೆಂಡ್ಲಿ ಸಿಟಿ'ಯಲ್ಲಿ ನಡೆಯುತ್ತಿರುವ ಎರಡನೇ ಮಹಿಳಾ ಟೆಸ್ಟ್ ಪಂದ್ಯವಾಗಿದೆ. ಗೆಬೆರ್ಹಾದಲ್ಲಿ ಮೊದಲ ಪಂದ್ಯವು 1960ರ ಡಿಸೆಂಬರ್‌ನಲ್ಲಿ ದಕ್ಷಿಣ ಆಫ್ರಿಕಾ ಮತ್ತು ಇಂಗ್ಲೆಂಡ್ ನಡುವೆ ನಡೆದಿತ್ತು.

ಆಸ್ಟ್ರೇಲಿಯಾ ಮಹಿಳಾ ತಂಡವು 2027ರ ಮಾರ್ಚ್ 18ರಿಂದ ಏಪ್ರಿಲ್ 11ರವರೆಗೆ ಮೂರು ಟಿ20, ಅಷ್ಟೇ ಏಕದಿನ ಪಂದ್ಯಗಳಿಗೆ ಮತ್ತು ಒಂದು ಟೆಸ್ಟ್ ಪಂದ್ಯಕ್ಕಾಗಿ ದಕ್ಷಿಣ ಆಫ್ರಿಕಾ ಪ್ರವಾಸ ಕೈಗೊಳ್ಳಲಿದೆ.

ಮಾರ್ಚ್ 18ರಿಂದ 23ರವರೆಗೆ ಕ್ರಮವಾಗಿ ಕಿಂಬರ್ಲಿ, ಬೆನೋನಿ ಮತ್ತು ಕುಗೊಂಪೊ ಸಿಟಿಯಲ್ಲಿ ಟಿ20 ಪಂದ್ಯಗಳು ನಡೆಯಲಿವೆ. ನಂತರ ಮಾರ್ಚ್ 27, ಮಾರ್ಚ್ 31 ಮತ್ತು ಏಪ್ರಿಲ್ 3ರಂದು ಕ್ರಮವಾಗಿ ಗ್ಕೆಬೆರ್ಹಾ, ಪರ್ಲ್ ಮತ್ತು ಡರ್ಬನ್‌ನಲ್ಲಿ ಏಕದಿನ ಪಂದ್ಯಗಳು ಆಯೋಜನೆಗೊಂಡಿವೆ.

ಏಪ್ರಿಲ್ 8ರಿಂದ 11ರವರೆಗೆ ಜೆ.ಬಿ. ಮಾರ್ಕ್ಸ್ ಓವಲ್‌ನಲ್ಲಿ ನಡೆಯುವ ಟೆಸ್ಟ್ ಪಂದ್ಯದೊಂದಿಗೆ ಪ್ರವಾಸ ಮುಕ್ತಾಯಗೊಳ್ಳಲಿದೆ.

ನಾಲ್ಕರ ಘಟ್ಟಕ್ಕೆ ಅನಾಹತ್

ಮುಂಬೈ (ಪಿಟಿಐ): ಭಾರತದ, ಅಗ್ರ ಶ್ರೇಯಾಂಕದ ಆಟಗಾರ್ತಿ ಅನಾಹತ್ ಸಿಂಗ್ ಹಾಗೂ ಶ್ರೇಯಾಂಕ ರಹಿತ ಆಟಗಾರ್ತಿ ತನ್ವಿ ಖನ್ನಾ ಅವರು ಜೆಎಸ್‌ಡಬ್ಲ್ಯು ಇಂಡಿಯನ್ ಓಪನ್ ಸ್ಕ್ವಾಷ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಶುಕ್ರವಾರ ಸೆಮಿಫೈನಲ್ ಪ್ರವೇಶಿಸಿದರು. ಆದರೆ, ಅನುಭವಿ ಆಟಗಾರ್ತಿ ಜೋಷ್ನಾ ಚಿನ್ನಪ್ಪ ಅವರು 1–3ರಿಂದ ಈಜಿಪ್ಟ್‌ನ ನಡೀನ್ ಎಲ್ ಹಮ್ಮನಿ ವಿರುದ್ಧ ಪರಾಭವಗೊಂಡರು.

ಅನಾಹತ್ 3–0ಯಿಂದ ಮಲೇಷ್ಯಾದ ಸಹ್ವೀತ್ರಾ ಕುಮಾರ್ ವಿರುದ್ಧ ಮತ್ತು ತನ್ವಿ 3–1ರಿಂದ ಐನಾ ಅಮೇನಿ ವಿರುದ್ಧ ಸುಲಭ ಜಯ ಸಾಧಿಸಿದರು.

ಎರಡನೇ ಶ್ರೇಯಾಂಕದ ಆಟಗಾರ್ತಿ, ಈಜಿಪ್ಟ್‌ನ ಹನಾ ಮೋತಾಜ್ ಅವರು ಮತ್ತೊಂದು ಕ್ವಾರ್ಟರ್‌ಫೈನಲ್‌ನಲ್ಲಿ 3–2ರಿಂದ ಮಲೇಷ್ಯಾದ ಯಾಸ್ಮಿತಾ ಜಡೀಶ್‌ಕುಮಾರ್ ವಿರುದ್ಧ ರೋಚಕ ಗೆಲುವು ಸಾಧಿಸಿದರು.

ಶನಿವಾರ ನಡೆಯುವ ಸೆಮಿಫೈನಲ್‌ನಲ್ಲಿ ಅನಾಹತ್ ಅವರು ತನ್ವಿ ವಿರುದ್ಧ ಹಾಗೂ ಮೋತಾಜ್ ಅವರು ಹಮ್ಮನಿ ವಿರುದ್ಧ ಸೆಣಸಲಿದ್ದಾರೆ.

ಪುರುಷರ ಸಿಂಗಲ್ಸ್‌ನಲ್ಲಿ ಎರಡನೇ ಶ್ರೇಯಾಂಕದ ಅಭಯ್ ಸಿಂಗ್ ಹಾಗೂ ನಾಲ್ಕನೇ ಶ್ರೇಯಾಂಕದ ವೀರ್ ಚೊತ್ರಾನಿ ಅವರು ನಾಲ್ಕರ ಘಟ್ಟಕ್ಕೆ ಮುನ್ನಡೆದರು.

ಸೆಮಿಫೈನಲ್‌ಗೆ ಇಶಾರಾಣಿ, ತನ್ವಿ

ಆರ್ಲೀನ್ಸ್ ಮಾಸ್ಟರ್ಸ್ ಬ್ಯಾಡ್ಮಿಂಟನ್: ಹರಿಹರನ್–ಅರ್ಜುನ್ ಜೋಡಿಗೆ ನಿರಾಸೆ

ಭಾರತದ ತನ್ವಿ ಶರ್ಮಾ

ಆರ್ಲೀನ್ಸ್ (ಫ್ರಾನ್ಸ್), (ಪಿಟಿಐ): ಭಾರತದ ತನ್ವಿ ಶರ್ಮಾ ಹಾಗೂ ಇಶಾರಾಣಿ ಬರುವಾ ಅವರು ಶುಕ್ರವಾರ ಆರ್ಲೀನ್ಸ್ ಮಾಸ್ಟರ್ಸ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದರು.

17 ವರ್ಷ ವಯಸ್ಸಿನ ಉದಯೋನ್ಮುಖ ಆಟಗಾರ್ತಿ ತನ್ವಿ, ಕ್ವಾರ್ಟರ್ ಫೈನಲ್‌ನಲ್ಲಿ 21–14, 21–14ರಿಂದ ಆರನೇ ಶ್ರೇಯಾಂಕದ ಆಟಗಾರ್ತಿ ನತ್ಸುಕಿ ನಿದ್ರೈರಾ (ಜಪಾನ್) ಅವರಿಗೆ ನೇರ ಗೇಮ್‌ಗಳಲ್ಲಿ ಆಘಾತ ನೀಡಿದರು.

ಮತ್ತೊಂದು ಕ್ವಾರ್ಟರ್ ಫೈನಲ್ ಹಣಾಹಣಿಯಲ್ಲಿ ಇಶಾರಾಣಿ ಅವರು 21–9, 15–7ರಲ್ಲಿ ಮುನ್ನಡೆಯಲ್ಲಿದ್ದಾಗ ಸ್ವದೇಶದ ಮಾಳವಿಕಾ ಬನ್ಸೋಡ್ ಅವರು ಹಿಂದೆಸರಿದರು. ಒಡಿಶಾ ಮಾಸ್ಟರ್ಸ್ ಸೂಪರ್ 100 ಟೂರ್ನಿಯ ರನ್ನರ್ಸ್‌ಅಪ್ ಇಶಾರಾಣಿ, ಸೆಮಿಫೈನಲ್‌ನಲ್ಲಿ ಥಾಯ್ಲೆಂಡ್‌ನ ಪಿಚಮನ್ ಒಪತ್ನಿಪತ್ ಅವರನ್ನು ಎದುರಿಸಲಿದ್ದಾರೆ.

ತನ್ವಿ ಅವರು ನಾಲ್ಕರ ಘಟ್ಟದಲ್ಲಿ ಮಾಜಿ ವಿಶ್ವ ಚಾಂಪಿಯನ್ ನೊಜೊಮಿ ಒಕುಹರಾ ಅವರನ್ನು ಎದುರಿಸಲಿದ್ದಾರೆ. ಜಪಾನ್‌ನ ಒಕುಹರಾ ಅವರು ಎಂಟರ ಘಟ್ಟದಲ್ಲಿ 21–18, 21–8ರಿಂದ ವಿಯೆಟ್ನಾಂನ ನ್ಗುಯೆನ್ ಥುಯ್ ಲಿನ್ ಅವರನ್ನು ಮಣಿಸಿದರು.

ಪಂಜಾಬ್‌ನ ತನ್ವಿ ಅವರು ಪ್ರಿಕ್ವಾರ್ಟರ್ ಫೈನಲ್‌ನಲ್ಲಿ 21–14, 21–17ರಿಂದ ಸ್ವದೇಶದ ಅನ್ಮೋಲ್ ಖಾರ್ಬ್ ಅವರನ್ನು ಮಣಿಸಿದ್ದರು. ಆರಂಭಿಕ ಸುತ್ತಿನಲ್ಲಿ ಅವರು ಎರಡನೇ ಶ್ರೇಯಾಂಕದ ಸುಪಾನಿಡಾ ಕಟೆಥಾಂಗ್ (ಥಾಯ್ಲೆಂಡ್) ಅವರಿಗೆ ಆಘಾತ ನೀಡಿದ್ದರು.

ಕಳೆದ ವರ್ಷ ಯುಎಸ್ ಓಪನ್ ಸೂಪರ್ 300 ಟೂರ್ನಿ ಮೂಲಕ ಬಿಡಬ್ಲ್ಯುಎಫ್ ವಿಶ್ವ ಟೂರ್ ಫೈನಲ್ ತಲುಪಿದ ಭಾರತದ ಅತ್ಯಂತ ಕಿರಿಯ ವಯಸ್ಸಿನ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ತನ್ವಿ ಪಾತ್ರರಾಗಿದ್ದರು.

ಹರಿಹರನ್ ಅಂಶಕರುಣನ್ ಮತ್ತು ಎಂ.ಆರ್. ಅರ್ಜುನ್ ಅವರು ಪುರುಷರ ಡಬಲ್ಸ್ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಹೊರಬಿದ್ದರು. ಇಂಡೊನೇಷ್ಯಾದ ಲಿಯೊ ಕಾರ್ನಾಂಡೊ ಮತ್ತು ಬಾಗಾಸ್ ಮೌಲಾನಾ ಜೋಡಿಯು 21–12, 22–20ರಿಂದ ಭಾರತದ ಆಟಗಾರರನ್ನು ಮಣಿಸಿತು.

ಚೆಂಡಿಗಾಗಿ ಸೆಣಸಾಟ

ಐಎಸ್‌ಎಲ್ ಚಿತ್ರ

ಕೋಲ್ಕತ್ತದ ಸಾಲ್ಟ್ ಲೇಕ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಇಂಡಿಯನ್ ಸೂಪರ್ ಲೀಗ್‌ನ ಪಂದ್ಯದಲ್ಲಿ ಮುಂಬೈ ಸಿಟಿ (ಬಲ) ಮತ್ತು ಹಾಲಿ ಚಾಂಪಿಯನ್ ಮೋಹನ್ ಬಾಗನ್ ಸೂಪರ್ ಜೈಂಟ್ಸ್ ತಂಡಗಳ ಆಟಗಾರರು ಚೆಂಡಿನ ಮೇಲೆ ನಿಯಂತ್ರಣ ಸಾಧಿಸಲು ಪೈಪೋಟಿ ನಡೆಸಿದರು. ಈ ಪಂದ್ಯವನ್ನು 1–0ಯಿಂದ ಗೆದ್ದ ಮುಂಬೈ ತಂಡವು ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು

ಮುಂಬೈ ರೇಸ್

ಸ್ಕಾರಮೌಷ್ ಗೆಲ್ಲುವ ನಿರೀಕ್ಷೆ

ಫ್ರೀ ಪ್ರೆಸ್ ಜರ್ನಲ್ ಟ್ರೋಫಿ ಶನಿವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸ್ಕಾರಮೌಷ್ ಗೆಲ್ಲುವ ನಿರೀಕ್ಷೆಯಿದೆ. ಸಂಜೆ 5:00ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಮನ್ವರ್ 3, ಹರ್ ಚಾರ್ಚ್ 7, ಮಾರಿಯಸ್ 2
2ನೇ ರೇಸ್: ಬೀಸ್ಟ್ ಮೋಡ್ 1, ರಿಮಾರ್ಕಬಲ್ 4, ರೆಡ್ ರೋಸ್ 7
3ನೇ ರೇಸ್: ಫನ್ನಿ ಬನ್ನಿ 7, ಆರ್ಗನೈಸ್ಡ್ ಕೆಯಾಸ್ 3, ಪಲೋಮ 10
4ನೇ ರೇಸ್: ಜ್ಯಾಗರ್ 1, ಕೀ ವೆಸ್ಟ್ 2, ಹೋಲ ಅಮಿಗೊ 6
5ನೇ ರೇಸ್: ವೇಗಥ 1, ವಿನ್ಸೆರೊ 8, ಮ್ಯಾಟಿಸ್ಸಿ 4
6ನೇ ರೇಸ್: ಸ್ಕಾರಮೌಷ್ 4, ಬಿಗ್ ಬೇ 3, ಸನ್ ಆಫ್ ಎ ಗನ್ 1
7ನೇ ರೇಸ್: ಕೋಯಿನಿಗ್‌ಸೆಗ್ 1, ಡೆಸರ್ಟ್ ಕ್ಲಾಸಿಕ್ 2, ಹೌಸ್ ಆಫ್ ಲಾರ್ಡ್ಸ್ 3

ಉತ್ತಮ ಬೆಟ್: ಬೀಸ್ಟ್ ಮೋಡ್

ಜಾಕ್‌ಪಾಟ್‌ಗೆ	ಟ್ರಿಬಲ್
3,4,5,6,7	4,5,6

ಒಡಿಶಾದಲ್ಲಿ 2028ರ ವಿಶ್ವ ಒಳಾಂಗಣ ಅಥ್ಲೆಟಿಕ್ಸ್

ಭುವನೇಶ್ವರ (ಪಿಟಿಐ): ಭಾರತವು 2028ರ ವಿಶ್ವ ಅಥ್ಲೆಟಿಕ್ಸ್ ಒಳಾಂಗಣ ಚಾಂಪಿಯನ್‌ಷಿಪ್‌ಗೆ ಆತಿಥ್ಯ ವಹಿಸಲಿದೆ. ಭುವನೇಶ್ವರದಲ್ಲಿ ಈ ಪ್ರತಿಷ್ಠಿತ ಕೂಟ ನಡೆಯಲಿದೆ ಎಂದು ಒಡಿಶಾ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ತಿಳಿಸಿದ್ದಾರೆ.

'2028ರ ವಿಶ್ವ ಅಥ್ಲೆಟಿಕ್ಸ್ ಒಳಾಂಗಣ ಚಾಂಪಿಯನ್‌ಷಿಪ್ ಅನ್ನು ಒಡಿಶಾ ಆಯೋಜಿಸುತ್ತಿದೆ ಎಂದು ಹೇಳಲು ಹೆಮ್ಮೆಯಾಗುತ್ತದೆ. ಈ ಕೂಟದ ಮೂಲಕ ಒಡಿಶಾ ರಾಜ್ಯದ ಕ್ರೀಡಾಪ್ರೇಮವನ್ನು ಜಗತ್ತು ವೀಕ್ಷಿಸಲಿದೆ' ಎಂದು ಮಾಝಿ 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.

'ವಿಶ್ವದಾದ್ಯಂತ ಇರುವ ಕ್ರೀಡಾಪಟುಗಳು ಮತ್ತು ಅಭಿಮಾನಿಗಳನ್ನು ಸ್ವಾಗತಿಸಲು ಹಾಗೂ ಆತಿಥ್ಯ ನೀಡಲು ಒಡಿಶಾ ರಾಜ್ಯವು ಎದುರು ನೋಡುತ್ತಿದೆ' ಎಂದ ಅವರು, ದೇಶದಲ್ಲಿ ಕ್ರೀಡಾ ವ್ಯವಸ್ಥೆಯನ್ನು ಬಲಪಡಿಸುವಲ್ಲಿ ನಿರಂತರ ಮಾರ್ಗದರ್ಶನ ಮತ್ತು ಬೆಂಬಲ ನೀಡುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದ್ದಾರೆ.

ಭಾರತದಲ್ಲಿ ಮೊದಲ ಸಲ ಚಾಂಪಿಯನ್‌ಷಿಪ್‌ನ ಟ್ರ್ಯಾಕ್ ಮತ್ತು ಫೀಲ್ಡ್ ಸ್ಪರ್ಧೆಗಳು 2028ರ ಮಾರ್ಚ್ 3ರಿಂದ 5ರವರೆಗೆ ಆಯೋಜನೆಯಾಗಲಿವೆ. ಮೂರು ದಿನಗಳಲ್ಲಿ ಪುರುಷರು ಮತ್ತು ಮಹಿಳೆಯರಿಗೆ ತಲಾ 13ರಂತೆ ಒಟ್ಟು 26 ಸ್ಪರ್ಧೆಗಳನ್ನು ಒಳಗೊಂಡಿರುತ್ತವೆ.

60 ಮೀ, 400 ಮೀ, 800 ಮೀ, 1500 ಮೀ, 3000 ಮೀ ಓಟ, 60 ಮೀ ಹರ್ಡಲ್ಸ್, 4x400 ಮೀ ರಿಲೆ, ಹೈಜಂಪ್, ಪೋಲ್ ವಾಲ್ಟ್, ಲಾಂಗ್ ಜಂಪ್, ಟ್ರಿಪಲ್ ಜಂಪ್, ಶಾಟ್‌ಪಟ್, ಹೆಪ್ಟಾಥ್ಲಾನ್ (ಮಹಿಳೆಯರಿಗೆ ಪೆಂಟಾಥ್ಲಾನ್) ಇವು ಕೂಟದಲ್ಲಿರುವ 13 ಸ್ಪರ್ಧೆಗಳು. ಈ ವರ್ಷ ಪೋಲೆಂಡ್ ಆವೃತ್ತಿಯಲ್ಲಿ 4x400 ಮೀ. ಮಿಶ್ರ ರಿಲೆ ಸ್ಪರ್ಧೆಯನ್ನು ಪರಿಚಯಿಸಲಾಗಿದೆ.

ತವರಿನಲ್ಲಿ ಆರ್‌ಸಿಬಿ ಅಭ್ಯಾಸ

ನಾಯಕ ರಜತ್, ವೆಂಕಟೇಶ ಅಯ್ಯರ್, ದೇವದತ್ತ ಪಡಿಕ್ಕಲ್ ಬ್ಯಾಟಿಂಗ್ ತಾಲೀಮು

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಲ್‌ರೌಂಡರ್ ವೆಂಕಟೇಶ್ ಅಯ್ಯರ್ (ಎಡ) ಹಾಗೂ ವೇಗಿ ಭುವನೇಶ್ವರ್ ಕುಮಾರ್ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ಅಭ್ಯಾಸ ನಡೆಸಿದರು ಚಿತ್ರಗಳು: ಆರ್‌ಸಿಬಿ 'ಎಕ್ಸ್' ಖಾತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ 'ಹಾಲಿ ಚಾಂಪಿಯನ್' ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಮತ್ತೆ ತನ್ನ ತವರಿನ ಅಂಗಳಕ್ಕೆ ಮರಳಿದೆ.

ಯುಗಾದಿಯಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಭ್ಯಾಸ ಆರಂಭಿಸಿದ್ದ ಆಟಗಾರರು ಶುಕ್ರವಾರ ಸಂಜೆಯೂ ತಾಲೀಮು ನಡೆಸಿದರು. ಸುಮಾರು ಮೂರು ತಾಸು ನೆಟ್ಸ್‌ನಲ್ಲಿ ಬೆವರಿಳಿಸಿದರು. ಆದರೆ ತಂಡದ 'ತಾರೆ' ವಿರಾಟ್ ಕೊಹ್ಲಿ ಅವರು ಅಭ್ಯಾಸಕ್ಕೆ ಬಂದಿರಲಿಲ್ಲ.

ಮುಖ್ಯ ಕೋಚ್ ಆ್ಯಂಡಿ ಫ್ಲವರ್ ಅವರ ಮಾರ್ಗದರ್ಶನದಲ್ಲಿ ನಾಯಕ ರಜತ್ ಪಾಟೀದಾರ್, ದೇವದತ್ತ ಪಡಿಕ್ಕಲ್ ಮತ್ತು ವೆಂಕಟೇಶ್ ಅಯ್ಯರ್ ಅವರು ಅಭ್ಯಾಸ ನಡೆಸಿದರು.

ರಜತ್ ಅವರು ನೆಟ್ಸ್‌ನಲ್ಲಿ ಥ್ರೋ ಡೌನ್ ಪರಿಣತರಿಂದ ಎಸೆತಗಳನ್ನು ಎದುರಿಸಿದರು. ಇಬ್ಬರು ಪರಿಣತರ ಭಿನ್ನ ವೇಗದ ಎಸೆತಗಳನ್ನು ಬೌಂಡರಿಗೆರೆ ಯಾಚೆ ದಾಟಿಸುವ ಅಭ್ಯಾಸ ನಡೆಸಿದರು. ನಂತರ ಮೇನ್ ನೆಟ್ಸ್‌ನಲ್ಲಿಯೂ ಬ್ಯಾಟಿಂಗ್ ಮಾಡಿದರು. ಫುಲ್ ಲೆಂಗ್ತ್ ಎಸೆತಗಳನ್ನು ಮಿಡ್ ವಿಕೆಟ್ ದಾಟಿಸುವತ್ತ ಚಿತ್ತ ನೆಟ್ಟರು. ಈ ಸಂದರ್ಭದಲ್ಲಿ ನೆಟ್ ಬೌಲರ್‌ಗಳ ಎಸೆತಗಳನ್ನು ಎದುರಿಸಿದರು. ಖಾಲಿ ಕ್ರೀಡಾಂಗಣದಲ್ಲಿ ರಜತ್ ಬ್ಯಾಟ್‌ಗೆ ಚೆಂಡು ಅಪ್ಪಳಿಸಿದ ಶಬ್ದ ಪ್ರತಿಧ್ವನಿಸಿತು.

ಆದರೆ ಈ ಸಲ ಆರ್‌ಸಿಬಿ ಬಳಗಕ್ಕೆ ಸೇರ್ಪಡೆಯಾಗಿರುವ ವೆಂಕಟೇಶ್ ಅಯ್ಯರ್ ಮಾತ್ರ ನಿಖರವಾದ ಹೊಡೆತಗಳನ್ನು ಆಡಲು ವಿಫಲರಾದರು. ಎಸೆತಗಳನ್ನು ಟೈಮಿಂಗ್ ಮಾಡುವಲ್ಲಿ ಎಡವಿದರು. ಬ್ಯಾಟಿಂಗ್ ಕೋಚ್ ದಿನೇಶ್ ಕಾರ್ತಿಕ್ ಅವರೊಂದಿಗೆ ಕೆಲ ನಿಮಿಷ ಸಮಾಲೋಚನೆ ನಡೆಸಿದ ಅವರು ನೆಟ್ಸ್‌ಗೆ ಮರಳಿದರು. ಆತ್ಮವಿಶ್ವಾಸದೊಂದಿಗೆ ಬ್ಯಾಟ್ ಬೀಸಿದ ಅವರು ಕೆಲವು ಎಸೆತಗಳನ್ನು ಹೊಡೆಯುವಲ್ಲಿ ಸಫಲರಾದರು. ಇನ್ನೊಂದು ನೆಟ್ಸ್‌ಗೆ ಹೋಗಿ ಮತ್ತಷ್ಟು ಹೊತ್ತು ಬ್ಯಾಟಿಂಗ್ ಮಾಡಿದರು.

'ಸ್ಥಳೀಯ ಹೀರೊ' ದೇವದತ್ತ ಅವರು ನೆಟ್ಸ್‌ನಲ್ಲಿ 20 ನಿಮಿಷ ಆಡಿದರು. ಪೂರ್ಣ ಸಾಮರ್ಥ್ಯವನ್ನು ಪಣಕ್ಕೊಡ್ಡಿದರು. ಎಡಗೈ ಬ್ಯಾಟರ್ ಉತ್ತಮ ಲಯದಲ್ಲಿದ್ದಂತೆ ಕಂಡರು. ಅವರಿಗೆ ಇಂಗ್ಲೆಂಡ್‌ನ ಜೋರ್ಡನ್ ಕಾಕ್ಸ್ ಅವರು ಜೊತೆಯಾಗಿದ್ದರು.

ಗುರುವಾರವೂ ತಂಡವು ಇಲ್ಲಿ ಅಭ್ಯಾಸ ನಡೆಸಿತ್ತು. ಕೃಣಾಲ್ ಪಾಂಡ್ಯ, ವಿರಾಟ್ ಕೊಹ್ಲಿ, ಜಿತೇಶ್ ಶರ್ಮಾ ಮತ್ತಿತರರು ಹಾಜರಿದ್ದರು.

'ಬೌಲಿಂಗ್ ವಿಭಾಗಕ್ಕೆ ಬಲ ತುಂಬಿದ ಅರುಣ್'

ರಿಷಭ್ ಪಂತ್

ಲಖನೌ (ಪಿಟಿಐ): 'ಐಪಿಎಲ್‌ನ ಕಳೆದ ಆವೃತ್ತಿಯಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡದ ಬೌಲಿಂಗ್ ವಿಭಾಗ ದುರ್ಬಲವಾಗಿತ್ತು. ಆದರೆ, ಕೋಚಿಂಗ್ ಸಿಬ್ಬಂದಿ ತಂಡಕ್ಕೆ ಭರತ್ ಅರುಣ್ ಅವರ ಸೇರ್ಪಡೆಯ ಬಳಿಕ ತಂಡದ ಆ ವಿಭಾಗವನ್ನು ಬಲಪಡಿಸಲು ನೆರವಾಗಿದೆ' ಎಂದು ನಾಯಕ ರಿಷಭ್ ಪಂತ್ ಹೇಳಿದ್ದಾರೆ.

ಕಳೆದ ವರ್ಷದ ನಿರಾಶಾದಾಯಕ ಋತುವಿನ ನಂತರ ಪಂತ್ ಅವರು ಮುಂಬರುವ ಆವೃತ್ತಿಯಲ್ಲಿ ಸುಧಾರಿತ ಪ್ರದರ್ಶನದ ಮೇಲೆ ಕಣ್ಣಿಟ್ಟಿದ್ದಾರೆ. ಜಿಯೊಸ್ಟಾರ್‌ನಲ್ಲಿ ಮಾತನಾಡಿದ ಪಂತ್, ಚೆನ್ನೈನಲ್ಲಿ ನಡೆಯುತ್ತಿರುವ ತಂಡದ ಪೂರ್ವ ಋತುವಿನ ಶಿಬಿರದ ಬಗ್ಗೆ ತಮ್ಮ ಚಿಂತನೆಗಳನ್ನು ಹಂಚಿಕೊಂಡರು. ಭಾರತದ ಮಾಜಿ ಬೌಲಿಂಗ್ ಕೋಚ್ ಅರುಣ್ ಅವರು ತಂಡಕ್ಕೆ ಬಂದ ಬಳಿಕ ಯುವ ವೇಗಿಗಳಿಗೆ ಹೆಚ್ಚಿನ ಪ್ರಯೋಜನವಾಗಿದೆ ಎಂದು ಅಭಿಪ್ರಾಯಪಟ್ಟರು.

ಐಪಿಎಲ್‌ನಿಂದ ವೇಗಿ ಹರ್ಷಿತ್ ರಾಣಾ ಔಟ್; ಕೆಕೆಆರ್‌ಗೆ ಆಘಾತ

ಕೋಲ್ಕತ್ತ/ಜೈಪುರ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಆರಂಭಕ್ಕೆ ಇನ್ನು ಕೆಲವು ದಿನಗಳು ಮಾತ್ರ ಬಾಕಿ ಇವೆ. ಆದರೆ ಕೋಲ್ಕತ್ತ ನೈಟ್ ರೈಡರ್ಸ್ ತಂಡಕ್ಕೆ ಈಗ ದೊಡ್ಡ ಆಘಾತವಾಗಿದೆ. ವೇಗದ ಬೌಲಿಂಗ್ ಆಲ್‌ರೌಂಡರ್ ಹರ್ಷಿತ್ ರಾಣಾ ಅವರು ತಂಡದಿಂದ ಹೊರಬಿದ್ದಿದ್ದಾರೆ.

ಸ್ನಾಯುರಜ್ಜುವಿನ ಶಸ್ತ್ರಚಿಕಿತ್ಸೆಗೊಳಗಾಗಿರುವ ಅವರು ಐಪಿಎಲ್ ಟೂರ್ನಿಯಲ್ಲಿ ಆಡುವುದಿಲ್ಲ. ಈಚೆಗೆ ಟಿ20 ವಿಶ್ವಕಪ್ ಟೂರ್ನಿಯಲ್ಲಿ ನಡೆದಿದ್ದ ದಕ್ಷಿಣ ಆಫ್ರಿಕಾ ಎದುರಿನ ಅಭ್ಯಾಸ ಪಂದ್ಯದ ಸಂದರ್ಭದಲ್ಲಿ ಅವರು ಗಾಯಗೊಂಡಿದ್ದರು.

'ಹರ್ಷಿತ್ ನಮ್ಮ ತಂಡದ ಮುಖ್ಯ ಸದಸ್ಯ. ಅವರ ಅನುಪಸ್ಥಿತಿಯು ನಮಗೆ ದೊಡ್ಡ ಹೊಡೆತವಾಗಿದೆ. ಇಡೀ ಋತುವಿಗೆ ಅವರು ಅಲಭ್ಯರಾಗಿದ್ದಾರೆ' ಎಂದು ಕೆಕೆಆರ್ ಮೂಲಗಳು ತಿಳಿಸಿವೆ.

ಸ್ಯಾಮ್ ಅಲಭ್ಯ: ರಾಜಸ್ಥಾನ ರಾಯಲ್ಸ್ ತಂಡದ ಪ್ರಮುಖ ಆಲ್‌ರೌಂಡರ್ ಸ್ಯಾಮ್ ಕರನ್ ಅವರೂ ಈ ಬಾರಿಯ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ. ತೊಡೆಸಂಧು ಗಾಯದಿಂದಾಗಿ ಇಂಗ್ಲೆಂಡ್ ಆಟಗಾರ ಸ್ಯಾಮ್ ಕಣಕ್ಕಿಳಿಯುತ್ತಿಲ್ಲ. ಇದರಿಂದಾಗಿ ರಾಜಸ್ಥಾನ ತಂಡವು ಬೇರೆ ಆಲ್‌ರೌಂಡರ್‌ಗೆ ಸ್ಥಾನ ನೀಡುವ ಹುಡುಕಾಟದಲ್ಲಿದೆ. ಈ ಸಲ ರಾಜಸ್ಥಾನ ತಂಡದ ವಿಕೆಟ್‌ಕೀಪರ್ ಸಂಜು ಸ್ಯಾಮ್ಸನ್ ಅವರು ಚೆನ್ನೈ ಸೂಪರ್ ಕಿಂಗ್ಸ್‌ಗೆ ಹೋಗಿದ್ದಾರೆ. ಚೆನ್ನೈ ತಂಡದಿಂದ ರವೀಂದ್ರ ಜಡೇಜ ರಾಜಸ್ಥಾನಕ್ಕೆ ಬಂದಿದ್ದಾರೆ.

ಕಮಿನ್ಸ್, ಸ್ಟಾರ್ಕ್ ವಿಳಂಬ

ಆಸ್ಟ್ರೇಲಿಯಾದ ಮೂವರು ವೇಗದ ಬೌಲರ್‌ಗಳು ಈ ಸಲದ ಐಪಿಎಲ್‌ನಲ್ಲಿ ವಿಳಂಬವಾಗಿ ಕಣಕ್ಕಿಳಿಯಲಿದ್ದಾರೆ. ಪ್ಯಾಟ್ ಕಮಿನ್ಸ್, ಮಿಚೆಲ್ ಸ್ಟಾರ್ಕ್ ಮತ್ತು ಜೋಷ್ ಹೇಜಲ್‌ವುಡ್ ಅವರು ಆರಂಭಿಕ ಹಂತದ ಪಂದ್ಯಗಳನ್ನು ತಪ್ಪಿಸಿಕೊಳ್ಳಲಿದ್ದಾರೆ. ಕಮಿನ್ಸ್ ಮತ್ತು ಜೋಷ್ ಅವರು ಈಚೆಗೆ ಟಿ20 ವಿಶ್ವಕಪ್ ಟೂರ್ನಿಯಲ್ಲಿಯೂ ಆಡಿರಲಿಲ್ಲ. ಗಾಯದ ಶಸ್ತ್ರಚಿಕಿತ್ಸೆಯ ನಂತರ ಅವರು ಪುನಶ್ಚೇತನದಲ್ಲಿದ್ದಾರೆ. ಸ್ಟಾರ್ಕ್ ಕೂಡ ಚೇತರಿಸಿಕೊಳ್ಳುತ್ತಿದ್ದಾರೆ. ಆಲ್‌ರೌಂಡರ್ ನೇಥನ್ ಎಲಿಸ್ ಕೂಡ ಅಲಭ್ಯರಾಗಲಿದ್ದಾರೆ.

'ವರ್ಣ ತಾರತಮ್ಯ': ಕಾಮೆಂಟ್ರಿಗೆ ಶಿವರಾಮಕೃಷ್ಣನ್ ವಿದಾಯ

ಲಕ್ಷ್ಮಣ್ ಶಿವರಾಮಕೃಷ್ಣನ್

ನವದೆಹಲಿ (ಪಿಟಿಐ): ತಮ್ಮನ್ನು 'ವರ್ಣ ತಾರತಮ್ಯ'ಕ್ಕೆ ಗುರಿಪಡಿಸಲಾಗಿದೆ. ಆದ್ದರಿಂದ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ವೀಕ್ಷಕ ವಿವರಣೆಗಾರ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿರುವುದಾಗಿ ಮಾಜಿ ಲೆಗ್ ಸ್ಪಿನ್ನರ್ ಲಕ್ಷ್ಮಣ್ ಶಿವರಾಮಕೃಷ್ಣನ್ ಹೇಳಿದ್ದಾರೆ.

ಶುಕ್ರವಾರ 'ಎಕ್ಸ್'ನಲ್ಲಿ ಸರಣಿ ಸಂದೇಶಗಳನ್ನು ಹಾಕಿರುವ ಅವರು 'ಟಾಸ್ ಮಾಡುವಾಗ ಮತ್ತು ಪಂದ್ಯದ ಪ್ರಶಸ್ತಿ ಪ್ರದಾನ ಸಮಾರಂಭದ ಸಂದರ್ಭಗಳಲ್ಲಿ ನಿರೂಪಣೆಗೆ ಅವಕಾಶ ನೀಡುತ್ತಿಲ್ಲ. ಆದ್ದರಿಂದ ವೀಕ್ಷಕ ವಿವರಣೆಗಾರ ವೃತ್ತಿಗೆ ತೆರೆ ಎಳೆಯುತ್ತಿದ್ದೇನೆ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

'ಬಿಸಿಸಿಐನ ಪ್ರಸಾರ ಹಕ್ಕುಗಳನ್ನು ಪಡೆದಿರುವ ಕಂಪನಿಯೊಂದು ಇಂತಹ ಧೋರಣೆ ತೋರುತ್ತಿರುವುದು ಯಾಕೆಂದು ಊಹಿಸಬಲ್ಲಿರಾ' ಎಂದೂ ಅವರು ಇನ್ನೊಂದು ಸಂದೇಶದಲ್ಲಿ ಪ್ರಶ್ನಿಸಿದ್ದಾರೆ.

ಅವರ ಸಂದೇಶಕ್ಕೆ ಪ್ರತಿಕ್ರಿಯಿಸಿರುವ ವ್ಯಕ್ತಿಯೊಬ್ಬರು, 'ನಿಮ್ಮ ತ್ವಚೆಯ ಬಣ್ಣದ ಕಾರಣಕ್ಕೆ ಇರಬೇಕು' ಎಂದಿದ್ದಾರೆ.

ಅದಕ್ಕೆ ಪ್ರತ್ಯುತ್ತರ ನೀಡಿರುವ ಶಿವರಾಮಕೃಷ್ಣನ್, 'ನೀವು ಹೇಳಿದ್ದು ಸರಿ. ವರ್ಣ ತಾರತಮ್ಯ' ಎಂದಿದ್ದಾರೆ.

ಶಿವರಾಮಕೃಷ್ಣ ಅವರು ತಮ್ಮ 17ನೇ ವಯಸ್ಸಿನಲ್ಲಿಯೇ ದೇಶಿ ಕ್ರಿಕೆಟ್‌ನಲ್ಲಿ ಸಂಚಲನ ಮೂಡಿಸಿದ್ದ ಲೆಗ್‌ಸ್ಪಿನ್ನರ್. ಮೋನಚಾದ ಲೆಗ್‌ಸ್ಪಿನ್, ಟಾಪ್ ಸ್ಪಿನ್ ಮತ್ತು ನಿಖರವಾದ ಗೂಗ್ಲಿಗಳ ಮೂಲಕ ಬ್ಯಾಟರ್‌ಗಳನ್ನು ಕಂಗೆಡಿಸುತ್ತಿದ್ದರು.

'23 ವರ್ಷಗಳಿಂದ ನಾನು ಕಾಮೆಂಟ್ರಿ ಮಾಡುತ್ತಿರುವೆ. ಆದರೆ ಟಾಸ್ ಹಾಕುವಾಗ ಮತ್ತು ಪ್ರಶಸ್ತಿ ಪ್ರದಾನ ಮಾಡುವ ಸಂದರ್ಭಗಳಲ್ಲಿ ನನಗೆ ನಿರೂಪಣೆಗೆ ಅವಕಾಶ ಕೊಡುತ್ತಿಲ್ಲ. ಹೊಸದಾಗಿ ಬರುತ್ತಿರುವ ವೀಕ್ಷಕ ವಿವರಣೆಗಾರರೂ ಪಂದ್ಯಕ್ಕೂ ಮುನ್ನ ಪಿಚ್ ವರದಿ ನೀಡುತ್ತಿದ್ದಾರೆ. ಟಾಸ್ ಮತ್ತು ಪ್ರೆಸೆಂಟೇಷನ್ ನಿರೂಪಣೆ ಮಾಡುತ್ತಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ನನ್ನ ನಿವೃತ್ತಿಯ ಸುದ್ದಿ ಅಷ್ಟೇನೂ ದೊಡ್ಡದಲ್ಲ. ಆದರೆ ಟಿ.ವಿ. ಪ್ರೊಡಕ್ಷನ್ ಹಿಂದಿರುವ ಕತೆ ಬಿಚ್ಚಿಕೊಳ್ಳಲು ಕಾರಣವಾಗಲಿದೆ. ಶೀಘ್ರದಲ್ಲಿಯೇ ನೀವೆಲ್ಲರೂ ಅದನ್ನು ಬೃಹತ್ ಪರದೆ ಮೇಲೆ ನೋಡುವಿರಿ' ಎಂದೂ ಅವರು ಉಲ್ಲೇಖಿಸಿದ್ದಾರೆ.

60 ವರ್ಷದ ಶಿವರಾಮಕೃಷ್ಣನ್ ಅವರು ತಮ್ಮ ನೇರನುಡಿಗೆ ಹೆಸರಾದವರು. ಅವರು 1983 ರಿಂದ 86ರ ಅವಧಿಯಲ್ಲಿ 9 ಟೆಸ್ಟ್ ಮತ್ತು 16 ಅಂತರರಾಷ್ಟ್ರೀಯ ಏಕದಿನ ಪಂದ್ಯಗಳಲ್ಲಿ ಆಡಿದ್ದಾರೆ. 1984ರಲ್ಲಿ ಇಂಗ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಒಟ್ಟು 12 ವಿಕೆಟ್ ಗಳಿಸಿ ಗೆಲುವಿನ ರೂವಾರಿಯಾಗಿದ್ದರು.

ನ್ಯೂಜಿಲೆಂಡ್‌ಗೆ 8 ವಿಕೆಟ್‌ಗಳ ಜಯ

ದಕ್ಷಿಣ ಆಫ್ರಿಕಾ ಎದುರಿನ ಟಿ20 ಸರಣಿಯಲ್ಲಿ 2–1 ಮುನ್ನಡೆ

ಅರ್ಧಶತಕ ಗಳಿಸಿದ ನ್ಯೂಜಿಲೆಂಡ್ ತಂಡದ ಟಾಮ್ ಲೇಥಮ್ ಎಎಫ್‌ಪಿ ಚಿತ್ರ

ಆಕ್ಲೆಂಡ್ (ಎಎಫ್‌ಪಿ): ಬೌಲರ್‌ಗಳ ಪರಿಣಾಮಕಾರಿ ದಾಳಿಯ ನೆರವಿನಿಂದ ನ್ಯೂಜಿಲೆಂಡ್ ತಂಡವು ಶುಕ್ರವಾರ ಮೂರನೇ ಟಿ20 ಪಂದ್ಯದಲ್ಲಿ 8 ವಿಕೆಟ್‌ಗಳಿಂದ ದಕ್ಷಿಣ ಆಫ್ರಿಕಾ ತಂಡವನ್ನು ಸುಲಭವಾಗಿ ಮಣಿಸಿತು. ಇದರೊಂದಿಗೆ ಐದು ಪಂದ್ಯಗಳ ಸರಣಿಯಲ್ಲಿ 2–1 ಮುನ್ನಡೆ ಸಾಧಿಸಿತು.

ವೇಗಿ ಲಾಕಿ ಫರ್ಗ್ಯುಸನ್ ನಾಲ್ಕು ಓವರ್‌ಗಳಲ್ಲಿ ಕೇವಲ 9 ರನ್ ಬಿಟ್ಟುಕೊಟ್ಟು ಅತ್ಯಂತ ಪರಿಣಾಮಕಾರಿ ದಾಳಿ ಸಂಘಟಿಸಿದರು. ಕೈಲ್ ಜೇಮಿಸನ್, ಮಿಚೆಲ್ ಸ್ಯಾಂಟ್ನರ್ ಮತ್ತು ಬೆನ್ ಸಿಯರ್ಸ್ ತಲಾ ಎರಡು ವಿಕೆಟ್ ಕಬಳಿಸಿದರು. ಇದರಿಂದಾಗಿ ಬ್ಯಾಟಿಂಗ್ ಸ್ನೇಹಿ ಈಡನ್ ಪಾರ್ಕ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡವು ನಿಗದಿತ ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 136 ರನ್ ಗಳಿಸಲಷ್ಟೇ ಶಕ್ತವಾಯಿತು.

ಹತ್ತನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ನಡೆಸಿದ ನ್ಕೊಬಾನಿ ಮೊಕೊಯೆನಾ (ಔಟಾಗದೇ 26) ತಂಡದ ಗರಿಷ್ಠ ಸ್ಕೋರರ್ ಎನಿಸಿಕೊಂಡರು. ಅಗ್ರ ಕ್ರಮಾಂಕದ ಬ್ಯಾಟರ್‌ಗಳಾದ ಟೋನಿ ಡಿ ಝೋರ್ಜಿ (15), ವಿಯಾನ್ ಮುಲ್ಡರ್, ಕಾನರ್ ಎಸ್ಟರ್‌ಹುಯಿಜೆನ್ (15), ಜೇಸನ್ ಸ್ಮಿತ್ (10) ವೈಫಲ್ಯ ಅನುಭವಿಸಿದರು.

ಗುರಿ ಬೆನ್ನಟ್ಟಿದ ನ್ಯೂಜಿಲೆಂಡ್ ತಂಡವು ಟಾಮ್ ಲೇಥಮ್ (ಔಟಾಗದೇ 63;55ಎ, 4x7, 6x2) ಅವರ ಬ್ಯಾಟಿಂಗ್ ಬಲದಿಂದ ಇನ್ನೂ 22 ಎಸೆತ ಬಾಕಿ ಇರುವಂತೆ 2 ವಿಕೆಟ್‌ಗೆ 137 ರನ್ ಗಳಿಸಿ ಸಂಭ್ರಮಿಸಿತು. ಡೆವೊನ್ ಕಾನ್ವೆ (39;26ಎ) ಮತ್ತು ಲೇಥಮ್ ಅವರು ಮೊದಲ ವಿಕೆಟ್‌ಗೆ 96 ರನ್ ಪೇರಿಸಿ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು.

ಸರಣಿಯ ಮೊದಲ ಪಂದ್ಯವನ್ನು ದಕ್ಷಿಣ ಆಫ್ರಿಕಾ ಗೆದ್ದರೆ, ನಂತರದ ಎರಡು ಪಂದ್ಯಗಳಲ್ಲಿ ನ್ಯೂಜಿಲೆಂಡ್ ಜಯಸಾಧಿಸಿದೆ. ಭಾನುವಾರ ವೆಲ್ಲಿಂಗ್ಟನ್‌ನಲ್ಲಿ ನಾಲ್ಕನೇ ಪಂದ್ಯ ನಡೆಯಲಿದೆ.

ಸಂಕ್ಷಿಪ್ತ ಸ್ಕೋರ್: ದಕ್ಷಿಣ ಆಫ್ರಿಕಾ: 20 ಓವರ್‌ಗಳಲ್ಲಿ 9 ವಿಕೆಟ್‌ಗೆ 136 (ನ್ಕೊಬಾನಿ ಮೊಕೊಯೆನಾ ಔಟಾಗದೇ 26; ಕೈಲ್ ಜೇಮಿಸನ್ 42ಕ್ಕೆ 2, ಲಾಕಿ ಫರ್ಗ್ಯುಸನ್ 9ಕ್ಕೆ 1, ಮಿಚೆಲ್ ಸ್ಯಾಂಟ್ನರ್ 21ಕ್ಕೆ 2, ಬೆನ್ ಸಿಯರ್ಸ್ 27ಕ್ಕೆ 2). ನ್ಯೂಜಿಲೆಂಡ್: 16.2 ಓವರ್‌ಗಳಲ್ಲಿ 2 ವಿಕೆಟ್‌ಗೆ 137 (ಡೆವೊನ್ ಕಾನ್ವೆ 39, ಟಾಮ್ ಲೇಥಮ್ ಔಟಾಗದೇ 63). ಫಲಿತಾಂಶ: ನ್ಯೂಜಿಲೆಂಡ್‌ಗೆ 8 ವಿಕೆಟ್‌ಗಳ ಗೆಲುವು. **ಪಂದ್ಯದ ಆಟಗಾರ:** ಲಾಕಿ ಫರ್ಗ್ಯುಸನ್

ವಿಶ್ವಕಪ್ ಸಂಭವನೀಯ ತಂಡ ಆಯ್ಕೆ ಐಪಿಎಲ್ ಮೇಲೆ ಆಯ್ಕೆ ಸಮಿತಿ ಕಣ್ಣು

ಅಜಿತ್ ಅಗರ್ಕರ್

ನವದೆಹಲಿ (ಪಿಟಿಐ): ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯು ಆರಂಭವಾಗಲು ಇನ್ನೂ ಒಂದು ವರ್ಷ ಬಾಕಿ ಇದೆ. ಆ ಟೂರ್ನಿಯಲ್ಲಿ ಆಡುವ ಭಾರತ ತಂಡವನ್ನು ಆಯ್ಕೆ ಮಾಡುವ ಪ್ರಕ್ರಿಯೆಗೆ ಮುಂದಿನ ವಾರ ಶುರುವಾಗಲಿರುವ ಐಪಿಎಲ್‌ನಿಂದಲೇ ಆರಂಭಿಸಲು ಬಿಸಿಸಿಐ ಆಯ್ಕೆ ಸಮಿತಿ ಯೋಜಿಸಿದೆ.

ಏಕದಿನ ವಿಶ್ವಕಪ್ ಟೂರ್ನಿಗಾಗಿ 20ಕ್ಕೂ ಹೆಚ್ಚು ಆಟಗಾರರ ಸಂಭವನೀಯರ ತಂಡಕ್ಕೆ ಆಯ್ಕೆ ನಡೆಸಲು ಅಜಿತ್ ಅಗರ್ಕರ್ ನೇತೃತ್ವದ ಸಮಿತಿಯು ಐಪಿಎಲ್ ಪಂದ್ಯಗಳನ್ನು ವೀಕ್ಷಿಸಲಿದೆ.

ಅಜಿತ್ ಅವರ ಸಮಿತಿಯಲ್ಲಿ ಎಸ್.ಎಸ್. ದಾಸ್, ಆರ್.ಪಿ. ಸಿಂಗ್, ಅಜಯ್ ರಾತ್ರಾ ಮತ್ತು ಪ್ರಗ್ಯಾನ್ ಓಜಾ ಅವರಿದ್ದಾರೆ. ಮುಂದಿನ ವರ್ಷ ಅಕ್ಟೋಬರ್–ನವೆಂಬರ್‌ನಲ್ಲಿ ದಕ್ಷಿಣ ಆಫ್ರಿಕಾ, ಜಿಂಬಾಬ್ವೆ ಮತ್ತು ನಮೀಬಿಯಾ ಜಂಟಿ ಆತಿಥ್ಯದಲ್ಲಿ ಟೂರ್ನಿ ನಡೆಯಲಿದೆ.

ಆಯ್ಕೆ ಸಮಿತಿ ಸದಸ್ಯರು ತಮ್ಮ ತಮ್ಮ ವಲಯಗಳ ತಾಣಗಳಲ್ಲಿ ನಡೆಯುವ ಪಂದ್ಯಗಳನ್ನು ಮೈದಾನಗಳಲ್ಲಿ ಖುದ್ದಾಗಿ ಹಾಜರಿದ್ದು ವೀಕ್ಷಿಸುವರು. ಇನ್ನುಳಿದ ಪಂದ್ಯಗಳನ್ನು ಟಿ.ವಿ ಮೂಲಕ ವೀಕ್ಷಿಸುವರು ಎಂದು ಮೂಲಗಳು ತಿಳಿಸಿವೆ. ಬೆಂಗಳೂರಿನಲ್ಲಿ ಇದೇ 28ರಂದು ನಡೆಯುವ ಆರ್‌ಸಿಬಿ ಮತ್ತು ಸನ್‌ರೈಸರ್ಸ್ ಹೈದರಾಬಾದ್ ನಡುವಣ ಪಂದ್ಯದಿಂದಲೇ ಆಯ್ಕೆ ಸಮಿತಿಯು ಕಾರ್ಯಾರಂಭ ಮಾಡಲಿದೆ.

ಅಜಿತ್ ಅಗರ್ಕರ್ ಅವರ ಕಾರ್ಯಾವಧಿಯು ಇದೇ ಸೆಪ್ಟೆಂಬರ್‌ನಲ್ಲಿ ಮುಗಿಯಲಿದೆ. ಆದರೆ ಅವರನ್ನು 2027ರ ಏಕದಿನ ವಿಶ್ವಕಪ್ ಟೂರ್ನಿಯ ಅಂತ್ಯದವರೆಗೂ ಮುಂದುವರಿಸುವ ಪ್ರಸ್ತಾವ ಇದೆ ಎಂಬ ಮಾತುಗಳೂ ಕೇಳಿಬಂದಿವೆ.

'ಆಯ್ಕೆ ಸಮಿತಿಯು ಬಿಸಿಸಿಐನ ಉಪಸಮಿತಿಯಾಗಿದೆ. ಸಮಿತಿಯ ಸದಸ್ಯರ ಕಾರ್ಯಾವಧಿಯು ಸೆಪ್ಟೆಂಬರ್‌ವರೆಗೆ ಇದೆ. ಬಿಸಿಸಿಐ ಕಾರ್ಯದರ್ಶಿಗಳು ಅಜಿತ್ ಅವರ ಅವಧಿ ವಿಸ್ತರಣೆ ಕುರಿತು ನಿರ್ಧರಿಸಬೇಕಿದೆ. ಸೀನಿಯರ್ ತಂಡದ ಆಯ್ಕೆಗಾರರು ಗರಿಷ್ಠ ನಾಲ್ಕು ವರ್ಷ ಕಾರ್ಯನಿರ್ವಹಿಸಲು ನಿಯಮಾವಳಿಯ ಪ್ರಕಾರ ಅವಕಾಶವಿದೆ' ಎಂದು ಮೂಲಗಳು ತಿಳಿಸಿವೆ.

ಫೈನಲ್‌ಗೆ ರಾಜ್ಯ ವನಿತೆಯರು

ಬೆಂಗಳೂರು: ಪಿ. ಸಲೋನಿ (20ಕ್ಕೆ 4) ಮತ್ತು ಬಿ.ಜಿ.ತೇಜಸ್ವಿನಿ (30ಕ್ಕೆ 3) ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ನೆರವಿನಿಂದ ಕರ್ನಾಟಕ ತಂಡವು ಬಿಸಿಸಿಐ 23 ವರ್ಷದೊಳಗಿನ ಮಹಿಳೆಯರ ಏಕದಿನ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಮುಂಬೈ ತಂಡವನ್ನು ಏಳು ವಿಕೆಟ್‌ಗಳಿಂದ ಮಣಿಸಿ ಫೈನಲ್‌ಗೆ ಲಗ್ಗೆ ಹಾಕಿತು.

ರಾಂಚಿಯ ಜೆಎಸ್‌ಸಿಎ ಜೆಎಸ್‌ಸಿಎ ಅಂತರರಾಷ್ಟ್ರೀಯ ಕ್ರೀಡಾಂಗಣ ಸಂಕೀರ್ಣದಲ್ಲಿ ಶುಕ್ರವಾರ ನಡೆದ ಸೆಮಿಫೈನಲ್‌ನಲ್ಲಿ ಟಾಸ್ ಗೆದ್ದ ಕರ್ನಾಟಕ ಫೀಲ್ಡಿಂಗ್ ಆಯ್ದುಕೊಂಡಿತು. ಮೊದಲು ಬ್ಯಾಟಿಂಗ್‌ಗೆ ಇಳಿದ ಮುಂಬೈ ತಂಡವನ್ನು ಸಲೋನಿ ಮತ್ತು ತೇಜಸ್ವಿನಿ ಅವರು ಅಲ್ಪಮೊತ್ತಕ್ಕೆ ಕಟ್ಟಿಹಾಕುವಲ್ಲಿ ಯಶಸ್ವಿಯಾದರು. ತಂಡವು 41.3 ಓವರ್‌ಗಳಲ್ಲಿ 134 ರನ್‌ಗಳಿಗೆ ಕುಸಿಯಿತು.

ಗುರಿಯನ್ನು ಬೆನ್ನಟ್ಟಿದ ಕರ್ನಾಟಕ ತಂಡವು ನಿಕಿ ಪ್ರಸಾದ್ (ಔಟಾಗದೇ 49;50ಎ) ಮತ್ತು ಸೌಮ್ಯಾ ವರ್ಮಾ (ಔಟಾಗದೇ 45;34ಎ) ಅವರ ಬ್ಯಾಟಿಂಗ್ ಬಲದಿಂದ 25.5 ಓವರ್‌ಗಳಲ್ಲಿ 3 ವಿಕೆಟ್‌ಗೆ 135 ರನ್ ಗಳಿಸಿ ಸಂಭ್ರಮಿಸಿತು.

ಭಾನುವಾರ ನಡೆಯುವ ಫೈನಲ್‌ನಲ್ಲಿ ಕರ್ನಾಟಕ ತಂಡವು ಮಹಾರಾಷ್ಟ್ರ ತಂಡವನ್ನು ಎದುರಿಸಲಿದೆ. ಕರ್ನಾಟಕ ತಂಡವು ಕ್ವಾರ್ಟರ್ ಫೈನಲ್‌ನಲ್ಲಿ ಉತ್ತರಾಖಂಡ ತಂಡವನ್ನು 42 ರನ್‌ಗಳಿಂದ ಮಣಿಸಿತ್ತು.

ಸಂಕ್ಷಿಪ್ತ ಸ್ಕೋರು: ಮುಂಬೈ: 41.3 ಓವರ್‌ಗಳಲ್ಲಿ 134 (ಯಯಾತಿ 31; ಬಿ.ಜಿ.ತೇಜಸ್ವಿನಿ 30ಕ್ಕೆ 3, ಪಿ. ಸಲೋನಿ 20ಕ್ಕೆ 4). ಕರ್ನಾಟಕ: 25.5 ಓವರ್‌ಗಳಲ್ಲಿ 3 ವಿಕೆಟ್‌ಗೆ 135 (ರಚಿತಾ ಹತ್ವಾರ್ 36, ನಿಕಿ ಪ್ರಸಾದ್ ಔಟಾಗದೇ 49, ಸೌಮ್ಯಾ ವರ್ಮಾ ಔಟಾಗದೇ 45; ಝೀಲ್ ಡಿಮೆಲ್ಲೊ 24ಕ್ಕೆ 2). ಫಲಿತಾಂಶ: ಕರ್ನಾಟಕಕ್ಕೆ 7 ವಿಕೆಟ್ ಗೆಲುವು, ಫೈನಲ್ ಪ್ರವೇಶ.

ಜೂನಿಯರ್ ನೆಟ್‌ಬಾಲ್: ರಾಜ್ಯ ತಂಡಕ್ಕೆ ಮನೋಜ್ ನಾಯಕ

ಬೆಂಗಳೂರು: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬಿ. ಮನೋಜ್ ಗೌಡ ಅವರು ಉತ್ತರಪ್ರದೇಶದ ಮೀರಟ್‌ನಲ್ಲಿ ಇದೇ 24ರಂದು ಆರಂಭವಾಗಲಿರುವ 38ನೇ ಜೂನಿಯರ್ ರಾಷ್ಟ್ರೀಯ ನೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ಬಾಲಕರ ತಂಡವನ್ನು ಮುನ್ನಡೆಸಲಿದ್ದಾರೆ.

ಕರ್ನಾಟಕ ಅಮೆಚೂರ್ ನೆಟ್‌ಬಾಲ್ ಅಸೋಸಿಯೇಷನ್ ಶುಕ್ರವಾರ ರಾಜ್ಯ ತಂಡಗಳನ್ನು ಪ್ರಕಟಿಸಿದ್ದು, ಹಾಸನದ ತನುಷಾ ಬಾಲಕಿಯರ ತಂಡವನ್ನು ಮುನ್ನಡೆಸಲಿದ್ದಾರೆ.

ತಂಡಗಳು: ಬಾಲಕರು: ಬಿ. ಮನೋಜ್ ಗೌಡ (ನಾಯಕ), ಭವಿಷ್ (ಉಪನಾಯಕ), ಹಣಮಂತ ಎಸ್., ಮಹಾದೇವ್ ಎಂ., ನೂತನ್, ರಾಜು, ಪ್ರೀತಂ ಗೌಡ, ಸಂತೋಷ್, ದಿಗಂತ್ ಸೂರ್ಯ ಎಸ್., ಪ್ರಣವ್ ಬಾಲಾಜಿ ಬಿ.ಆರ್., ಚಿರಾಗ್, ಅನಘ್ ಎ., ರಾಮಕೃಷ್ಣಯ್ಯ ಎನ್. (ಕೋಚ್).

ಬಾಲಕಿಯರು: ತನುಷಾ (ನಾಯಕಿ), ಮಾನಸಾ (ಉಪನಾಯಕಿ), ಶಮಾ ಡ್ಯಾನಿಷ್, ಭವ್ಯತಾ ಎಂ., ಸಾನಿಕಾ, ಸಿಂಚನಾ, ಜನನಿ, ಹೊನ್ನಶ್ರೀ, ಶ್ರೇಯಾ ಲೋಕೇಶ್, ರಕ್ಷಿತಾ ಎಲ್., ಜನನಿ ಎನ್., ಲಕ್ಷ್ಮಿ, ಪೂಜಾ (ಕೋಚ್).

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Commerical

Basaveshwaranagar

BASAVESHWAR NAGAR 100 Feet Road Commercial 40X60 BDA Property For Sale Call: 9341260828

Mysore Road

GODOWN SALE G+1 Space on Railway Parallel Road, BCC Layout, near Mysore Road, Bangalore Contact: 9620401011 9738111312

Mysore

For outright SALE / LEASE / RENT

Two acres Industrially converted Land with First Class Industrial Building and Infrastructure Vacant Possession for Immediate use

- Main Shed 22500 sq.ft. with built in RCC Roofed Store & Lab
- Fully Panelled and partitioned, Office Block on 1st Floor
- Separate Power Room / Workshop / Security Room
- HT Power of 200 KVA with full infrastructure

Located at Nagavala, Yelwal Taluk
17 kms from Mysore on Hunsur Road.
Contact during working hours:
Mr. Feroz Asger Ali : 094480-64156
or Mail us at ferozasgerali@yahoo.co.in.

FOR RENT / SALE
FULLY FURNISHED OFFICE 3rd Floor
ON OLD AIRPORT ROAD
VDB TOUCHDOWN
Next to HAL Museum
7447 Sqft
96 Workstations
3 Meeting Rooms
1 MD Cabin || 5 Cabins
1 Board || 1 Cafeteria
6 Car Parks
NO PHONE CALLS
WHATSAPP MESSAGE ONLY TO 98450 31550

Sites

Anjanapura

ANJANAPURA 2ND Block 30x40 Site for Sale West Facing Good_Location Developed area Owner Meeting Ph:9880812364.

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BANASHANKARI 6TH Stage 1st Block. 30x40 Site For Sale Near NPS School. Brokers Excuse. 9686026739.

Hennur

HENNUR 30X45 West Facing B ekatha Site sale HIREMATH LAYOUT, KOTHANUR Rs. 6000/-. Contact: 9945033366

HSR Layout

RELIABLE LAKE DEW Haraluru BDA khata 40×70 South East Corner plot for sale. Owner: 9845067070

J P Nagar

JP-NAGAR 7TH PHASE 30X50 EF Old House, Jagruthi Colony, Puttenahalli Good Location Contact: 9448045601/ 9535811626

Kempegowda Layout

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar 9945119449

Multiple Locations

BANASHANKARI 6TH Stage, Nadaprabhu Kempegowda Layout, Vishweshwariah, BDA Site, Houses are available. Contact: 9900999919.

Sanjaynagar

SANJAYNAGAR KEB LAYOUT BDA 1050 sft North West corner 40 feet Road E-Khatha, Call: 7829203369

Vishweshwariah Layout

BDA SITE SALE VISHWESHWARAIAH LAYOUT 2nd Block 40X60 NORTH FACE NEAR 100FT ROAD GOOD LOCATION CONTACT: 8892901567

BDA SITE For Sale @ Vishweshwaraiah Layout 30x40, 40x60, 50x80 Contact: 6363496142 9845555666

40X60, EAST, BDA, Vishweshwaraiah Layout 8th Block FE, Near Bindu Amulya Apartments, Contact Owner 7795368515

Vidyaranyapura

SAMBRAM COLLEGE Near Amba Bhavani Temple Back Side 30x40, 37.5x40, 40x60 WF, BBMP B/E Katha: 8296895858

Nagasandra

SITE FOR Sale A-katha 40x60, East facing Madanayakanahalli Near highway (just 200 meter) Contact. 9886912345

House

Kanakapura Road

"FOR RENT 2BHK close to Forum South Mall, Konanakunte Metro Station, Kumaran School. 9845286505"

Mysore Road

30X50 EAST 3 Floor Railway Layout Near Christ College Mysore Road With All Amenities 9448081380

Rajajinagar

HOUSE FOR sale size 30x30, Rs: 27000/- psft west Facing at Rajajinagar No. 1763, 6th main Road D Block contact: 9845603348

Flat

Nagarabhavi

FLATS FOR-SALE @ Nagarabhavi Chandra Layout 2 & 3 BHK Ready to Move In Good Location Call:9538472420 9845066608

Whitefield

SALE: PRESTIGE Park View, Whitefield, 3BHK, 1839 SBUA, Semi-Furnished, 15th Floor, West Facing, Price- 2.75 CR, Call- 9108253029, 9108045702

Agricultural Land

Out-Station

HIGHWAY PROPERTY (Nagamangala-Magadi Road) 5acre Land Suitable for Multiple Development only 2,75000 Per Guntas 9535151616

ಅದ್ದೂರಿ ಉದ್ಘಾಟನೆ
ನಮ್ಮ 3ನೇ ಮಳಿಗೆ

Opening Offer 60% off
ON PURE MYSORE CREPE SILK SAREE

ಸೀರೆ ಉತ್ಸವ-3 ನಮ್ಮೊಂದಿಗೆ ಸೇರಿ ಆಚರಿಸಿ
ನಮ್ಮ ಹೊಸ ಮಳಿಗೆಯಲ್ಲಿ 16 ರಿಂದ 31ನೇ ಮಾರ್ಚ್ 2026 ರ ವರೆಗೆ

SULAKSHMI SILKS
ಕರ್ನಾಟಕದ ಅತಿದೊಡ್ಡ ಸೀರೆ ಉತ್ಸವ
ಸಂಪರ್ಕಿಸಿ: 99727 18898 | 93531 38343 | 9886306643 | 96631 27606
ಸ್ಥಳ: ನಂ.119/1, ಶ್ರೀನಿಧಿ ಕಾಂಪ್ಲೆಕ್ಸ್, 11ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003

11KM FROM Bangalore. 30000sft only 1350/- and 8acre Land Sale Suitable for Multiple Development 9535151616

Farm House/ Land/ Resorts

General

23 ACRES 3kms from Khanapur busstand ample water suitable for Agriculture, Resort, College contact 9819084110

REAL ESTATE BUYING

Industrial & Factory

Multiple Locations

WANTED FOR Purchase: Industrial Shed/ Land (3500-5000 SQFT) in Bommasandra Industrial_Area, Jigani Link_Road or Electronic_City. Direct owners only Call: 9481773963/ 9945111099.

Sites

Banashankari

BDA SITES WANTED ARKAVATI, ANJANAPURA, BANASHANKARI 6TH STAGE, VISHWESHWARAIAH KEMPEGOWDA ANY BDA LAYOUT: 9845062822/ 8660751654

Multiple Locations

WANTED BDA Sites Arkavathi, Nadaprabhu Kempegowda & BDA other Layouts. Contact: SAPTHAGIRI (Opposite BDA Head Office):: 9036360366

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th- stage. Contact: 9844533371/ 9341733480

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

RENTAL PROPERTIES

Accommodation Available

Commercial

HSR LAYOUT, 2000 sqft. Each 3 Floors 40x60 Furnished/ Twenty Single Bedroom Apartments 50x80. 98453-76147.

COMMERCIAL OFFICE Space for Rent 1000sqft, 3rd Floor, HBR layout, opposite to HBR BDA Complex. Contact: 9845753489

RENTAL AVAILABLE Commercial Storage Jayanagar 3rd Block Indoor space 1400 sft Outdoor space 650 sft Contact: 9591243838

4000SFT TOTAL, 1-3 floors, Furnished Office, A/C, DG backup, For Rent up to 1.5L, Negotiable, BTM near Silk Board Metro, Contact: 8050813008

Industrial And Factory

AVAILABLE INDUSTRIAL Warehouse 160000 sqft Vijipura, Hoskote. Contact: 9341234288/ 9663224353/ 9845417487.

TOURS & TRAVEL

Travel Agencies

BHUTAN GROUP TOUR, MAY 10th, 8 DAYS, 69000/- ALL INCLUSIVE PACKAGE. SARAKKI TOURS: 9663676464

JOB OPPORTUNITIES

Cook

SOUTH INDIAN COOK/ HOUSEKEEPER (Females) WANTED VIDYARANYAPURA Near BEL Factory, BANGALORE. Accommodation, Food Provided 15000 PM. 8884488887/ 9035813667

General

HIRING OFFICE ASSISTANTS & CLERKS (Textile Export Company) Bommanahalli, Bangalore. Mail: starsilks@gmail.com

BHARATH EDUCATION SOCIETY ®
BES DEGREE COLLEGE
Recognised by UGC. Approved by AICTE.
Affiliated to Dr. MMS BCU, Re-accredited B++ Grade by NAAC.
27, Sahakara Rathna B.L. Lakke Gowda Road, 16th Main, Jayanagar 4th Block, Bengaluru-560011
080 - 2663 7295 / 94488 48416
Email: besddcol@yahoo.co.in
besdegreecol@gmail.com
Website: www.besinstitutions.com

Sahakara Rathna
B.L. Lakke Gowda
Founder
B.E.S Institutions

SHAPE YOUR CAREER WITH INTEGRATED SKILL ENHANCEMENT PROGRAMMES

Sri S.T. Somashekhar
Hon. President, Bharath Education Society
MLA, Yeshwanthpura Constituency,
Former Minister, Govt of Karnataka

PROGRAMMES OFFERED FOR : 2026-27
B.Com | BBA | BCA
BA | HEP | HES | HEK

Languages Offered: English, Kannada, Hindi & Sanskrit
As per Dr. MMS BCU Syllabus

BES EVENING DEGREE COLLEGE
Re-accredited B Grade by NAAC.
080-26638415 / 99455 46840 E-mail: besedceve@gmail.com
PROGRAMMES OFFERED FOR : 2026-27
B.Com | BA | HEP | HES | HEK

Sri..Nirmal Kumar K.R.
President
Bharath Education Society

Prof N.S. Vijaya
Secretary
Bharath Education Society

Dr. N. Ashok Kumar
Principal
BES Degree College

Dr. Rekha Kowshik P.R.
Principal
BES Evening Degree College

HOSTEL FACILITY AVAILABLE FOR GIRLS
BES-25613

General

BANGALORE CLUB
Applications are invited from eligible candidates for the following positions

1. MANAGER (HR)
Qualification: Graduate / Postgraduate in Management, preferably with specialization in Human Resource Management.
Experience: Minimum 15 years in a managerial HR position.
Age: 40 to 50 years.
Salary: 70,000 - 75,000 per month plus benefits.

2. ASSISTANT MANAGER-ACCOUNTS
Qualification: B. Com
Experience: Minimum 10 years in reputed organization / hotel industry. Should handle GST, TDS, other taxes & finalization of accounts.
Age: 35 to 45 years.
Salary: 60,000 - 70,000 per month plus benefits.

Eligible candidates may send their detailed application along with CV to
Secretary, Bangalore Club,
No.10, Residency Road, Bangalore-560 025.
E-Mail hr@bangaloreclub.com
Last Date: 30th March 2026..

PERSONAL

Lost

DOCUMENT LOST
I, **Maulya Reddy M,** R/at Kenkere, Kachamachenahalli, Kenkere, Chickballapura Dist. **have lost my Original Marks Card of ICSE (Class-X) Year 2022, Bearing Unique ID 7608015, from Vivekananda School, Bengaluru.** While travelling. **Finders Contact: 96112 75666**

Change of Name

CHANGE OF NAME
I, **R KUMAR,** residing at No. 38, New Binmangala 100 Feet Road, Indiranagar, Bengaluru-560038, have changed our minor Son's name from **LEO STEVEN K** to **SAMRUDH K** vide affidavit dated 20-03-2026 before notary Udaya Kumar K, Bengaluru

I, CHIPPADA VEERA VENKATA SUBBARAO S/O SATYAM, aged 60 years residing at B602 Keya Around The Life Seegehalli Bangalore 560067 have changed my name as CHIPPAADA V V SUBBARAO as per affidavit dated 17.03.2026 issued by Notary Ranjana S M.

CHANGE OF NAME
I, **DIVYA REDDIGARI** and **DIVYA R REDDY,** residing at No. A-412, VRR Heritage Apart., Doddanekundi, Marathahalli, Bengaluru- 560037, declare that the above name pertain to me only. Henceforth I shall be known as **DIVYA R REDDY**, vide affidavit dated 19-03-2026 before notary K.V. Jagannath Reddy, Bengaluru.

I LJÓMA Beauty (OPC) Private Limited located at No. S05, Kastle Grace Apartment, 15th Cross, Eshwara Layout, Indiranagar, Hal 2nd Stage, Bangalore- 560038 have changed the registered office address to B- 51, Campton Estate, Kamyana, Shimla, 1710006 with effect from 10/03/2026.

PUBLIC NOTICE

PUBLIC NOTICE
Number of suits are pending against **'Prestige Southern Star'** apartment project at Begur. In order of O.S. 2150/2007 by Bangalore Rural District Court, the co-developer H.R.Ravichandra is declared as NOT a Bonafide Purchaser; even then apartment is getting constructed on our land at Sy No. 352/5, Begur village. R.F.A. No. 2119/2025 is pending in High Court of Karnataka.

On 05.03.2026, the High Court of Karnataka has ordered a criminal investigation into the illegal demolition of our temple, house etc.. on the said lands in FIR No. 0122/2025 against a Director of Prestige company and co-promoter, H.R.Ravichandra.

Prospective purchasers can purchase at their own risk and cost.

Sd/- Muniswamy,
No. 1115, near Anjaneya Swamy Temple, Begur, B'lore-68.

DH Classifieds
DECCAN HERALD More value, more impact
ಪ್ರಜಾವಾಣಿ
REAL ESTATE
BOOK YOUR REAL ESTATE ADS IN
DH ALL KARNATAKA + PRAJAVANI BENGALURU CITY
ON SATURDAY + SUNDAY
@ 2481/-*
FOR 15 WORDS
www.dhclassifieds.com
BOOK NOW
*Conditions apply
Book your ad with us now! For more details contact:
+91 9845114560 | +91 9886213331
+91 9731810277 | +91 9900428036 | 080-45557163/164

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

ಡಿಎಸ್ ಮ್ಯಾಕ್ಸ್ ಪ್ರಾಪರ್ಟೀಸ್ | www.dsmaxproperties.com

JOY OF LIVING

PRM/KA/RERA/1251/310/PR/150223/005721

DS MAX SAMYAK

SUPER-LUXURIOUS 2 & 3-BHK APARTMENTS

MYSORE ROAD

NEAR CHALLAGHATTA METRO STATION

2-BHK STARTS @ ₹75.00L*

3-BHK STARTS @ ₹ 92.95 L*

BDA APPROVED | G + 14 FLOORS

Visit our website or talk to our advisors for the complete portfolio

8880 461 461

2, 3 & 4-BHK APARTMENTS FOR SALE IN VARIOUS LOCATIONS

PRM/KA/RERA/1251/308/PR/291225/008366 G+22 HOSUR ROAD 10 MINS. ELECTRONIC CITY ₹ 62.71 L - 1.01 Cr* 8880 003 003	PRM/KA/RERA/1250/304/PR/251024/007179 G+14 WHITEFIELD 10 MINS. HOPE FARM METRO STN. ₹ 72.86 L - 1.32 Cr* 8880 461 461	PRM/KA/RERA/1251/472/PR/250225/007524 G+14 AIRPORT ROAD NEAR PRESTIGE TECH IT PARK ₹ 87.89 L - 1.21 Cr* 8880 465 465	PRM/KA/RERA/1251/310/PR/210324/006724 G+14 SILK BOARD NEAR SINGASANDRA METRO STN. ₹ 91.27 L - 1.47 Cr* 8880 013 310	PRM/KA/RERA/1251/308/PR/281125/008287 G+14 JIGANI 5 MINS. APC CIRCLE ₹ 60.78 - 95.35 Lakhs* 8880 003 003	PRM/KA/RERA/1251/310/PR/151223/006489 G+3 BANASHANKARI OPP. NPS SCHOOL (3 & 4-BHK) ₹ 1.45 - 2.17 Cr* 8880 461 461
PRM/KA/RERA/1250/301/PR/251024/007178 G+14 YELAHANKA 5 MINS. RAJANUKUNTE ₹ 54.85 - 97.21 Lakhs* 8880 465 465	PRM/KA/RERA/1251/308/PR/160824/006973 G+14 BANNERGHATTA RD. NEAR KOPPA GATE ₹ 62.42 - 85.23 Lakhs* 8880 013 310	PRM/KA/RERA/1251/308/PR/230126/008427 G+4 SARJAPURA SARJAPUR - ATTIBELE ROAD ₹ 60.01 - 83.25 Lakhs* 8880 003 003	PRM/KA/RERA/1251/308/PR/160824/006972 G+4 HOSA ROAD METRO NEAR ELECTRONIC CITY ₹ 73.58 L - 1.44 Cr* 8880 013 310	PRM/KA/RERA/1251/446/PR/190301/002464 G+4 WHITEFIELD 5 MINS - KADUGODI METRO ₹ 59.20 - 88.00 Lakhs* 8880 461 461	PRM/KA/RERA/1251/309/PR/030524/006841 G+4 HENNUR NEAR HENNUR DECATHLON ₹ 69.42 - 1.21 Cr* 8880 465 465

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in

*T & C Apply

CREDAI BENGALURU

FACILITY MANAGEMENT SERVICES

We Manage and Maintain Your Apartment

9164 022 000

INTERIORS

We design and style your home.

9164 056 000

REFER A DS MAX HOME

Refer a buyer to earn big

9164 043 000

REFER A LAND TO DS MAX

Offer a Land, Get a Home.

8880 463 463

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ADDRESS MAKER

RERA REGISTRATION : PRM/KA/RERA/1251/310/PR/250822/005190

THE AKSHARA VALLEY ADDRESS

PREMIUM PLOTS NEAR KENGERI METRO STATION

BDA APPROVED | OC RECEIVED

Actual shot of Main Entrance

Actual shot : Multi-Court

Actual shot : Miyawaki Forest

Actual shot : Pickelball Court

Aerial View

AVAIL ZERO STAMP DUTY & REGISTRATION*.

OFFER VALID TILL 31.03.26

NEW INVENTORY, NOW UNVEILED.

With the release of new inventory at "The Akshara Valley Address", you can now claim your space in a community where nature takes center stage. Nestled close to Kengeri Metro Station and NICE Road, it offers the perfect escape from city congestion while keeping every convenience within reach.

Step in today and build the villa you've always imagined.

ADD-ON SERVICES : Villa Design | Design Approvals | Villa Execution

30 ACRES | 378 PLOTS | 08 GARDENS

20000+ TREES

₹1.15 Cr* onwards

ADDRESS MAKER

VILLAS, VILLA PLOTS, APARTMENTS & COMMERCIAL

9.8 Million SQFT
6.7Mn Delivered+3.1Mn In Progress

Disclaimer : The images and impressions contained herein are artist's impression indicative of the actual design for information purpose only. This information and the contents herein mentioned are subject to change and is being updated by us in the light of enactment and commencement of the Real Estate (Regulation and Development) Act, 2016. The Company reserves the right to change by adding, deleting or altering the information/material including designs, plans, specifications, facilities, images, features, amenities such as clubhouse, parks etc without any prior notice. Any interested party should verify all the information including designs, plans, specifications, facilities, features etc. independently with the Company prior to concluding any decision for buying in the project. For RERA registration information, visit www.rera.karnataka.gov.in

*T& C Apply | Add-on services offered at additional charges.

88847 44244
www.addressmaker.in